ಶುಕ್ರವಾರ, ಅಕ್ಟೋಬರ್ 29, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಕಾಶಬುಟ್ಟಿ
ದೀಪಾವಳಿಯ ನಿಮಿತ್ತ ಕಲಬುರಗಿಯಲ್ಲಿ ಗುರುವಾರ ಯುವತಿಯರು ಬಣ್ಣ ಬಣ್ಣದ ಆಕಾಶಬುಟ್ಟಗಳ ಖರೀದಿಯಲ್ಲಿ ತೊಡಗಿದ್ದ ಕ್ಷಣ

ಶುಕ್ರವಾರ, ಅಕ್ಟೋಬರ್ 29, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 300 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಅಪ್ಪನಷ್ಟು ರೊಮ್ಯಾನ್ಸ್ ಮಾಡುವುದಿಲ್ಲ ಅನ್ನುತ್ತಿದ್ದಾರೆ ಕ್ರೇಜಿಸ್ಟಾರ್ ಪುತ್ರ ಮನು ರವಿಚಂದ್ರನ್

ಸಂಖ್ಯೆ-ಸುದ್ದಿ
ಪೋಷಣೆ: ಏಕರೂಪದ ಅನುಷ್ಠಾನದ ಕೊರತೆ

ಉಪಚುನಾವಣೆ: ಮತದಾನಕ್ಕೆ ಸಕಲ ಸಿದ್ಧತೆ 6

ಸಚಿವರ ಕಾರ್ಯಕ್ರಮಕ್ಕೆ ನುಗ್ಗಲು ಯತ್ನ: ಬಂಧನ 5

ಸೆನ್ಸೆಕ್ಸ್	ನಿಫ್ಟಿ	₹/$
59,984 ▼	17,857 ▼	74.92 ▲

'ಬಿಟ್ ಕಾಯಿನ್' ಹಗರಣ • ಶ್ರೀಕೃಷ್ಣ ವಿರುದ್ಧದ ದೋಷಾರೋಪ ಪಟ್ಟಿ

2 ಹ್ಯಾಕ್: ₹ 2,283 ಕೋಟಿ ಗಳಿಕೆ!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ರೂಪಾಯಿ ಲೆಕ್ಕದಲ್ಲಿ ಸಾವಿರಾರು ಕೋಟಿ ಮೌಲ್ಯದ ಹಣ ಅದಲು ಬದಲಾಗಿರುವ 'ಬಿಟ್ ಕಾಯಿನ್' ಹಗರಣ ರಾಜ್ಯದಲ್ಲಿ ಕೋಲಾಹಲ ಎಬ್ಬಿಸಿದೆ. ಇದರಲ್ಲಿ ಕೆಲವು ಪ್ರಭಾವಿ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಕೈಜೋಡಿಸಿದ್ದಾರೆ ಎಂಬ ವದಂತಿ ದಟ್ಟವಾಗಿದ್ದು, ರಾಜಕೀಯ ಬಿರುಗಾಳಿಗೆ ಕಾರಣವಾಗುವ ಸಾಧ್ಯತೆಯೂ ಇದೆ ಎಂದು ಹೇಳಲಾಗುತ್ತಿದೆ.

ಶ್ರೀಕೃಷ್ಣ

ಹಗರಣದ ಸೂತ್ರಧಾರ ಎನ್ನಲಾದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಬಗ್ಗೆ ವಿದೇಶದ ಹಾಗೂ ಕೇಂದ್ರ ತನಿಖಾ ತಂಡಗಳು ಮಾಹಿತಿ ಕಲೆ ಹಾಕುತ್ತಿವೆ ಎಂದು ಮೂಲಗಳು ಹೇಳುತ್ತಿವೆ.

ಹಣ ವಿನಿಮಯ ಏಜೆನ್ಸಿಗಳ ಎರಡೇ ಜಾಲತಾಣಗಳನ್ನು ಒಂದೇ ಪ್ರಯತ್ನದಲ್ಲಿ ಹ್ಯಾಕ್ ಮಾಡಿದ್ದ ಕೃಷ್ಣ, 5,000 ಬಿಟ್ ಕಾಯಿನ್ ದೋಚಿದ್ದ. ಗುರುವಾರದ (ಅ.28) ಮಾರುಕಟ್ಟೆ ಮೌಲ್ಯದ ಪ್ರಕಾರ ಒಂದು ಬಿಟ್‌ಕಾಯಿನ್‌ಗೆ ₹45.71 ಲಕ್ಷ ಇದ್ದು, ಅದರಂತೆ 5 ಸಾವಿರ ಬಿಟ್‌ಕಾಯಿನ್‌ಗಳು ₹2,283 ಕೋಟಿ ಬೆಲೆ ಬಾಳುತ್ತವೆ. ಇಷ್ಟು ಬೃಹತ್ ಮೊತ್ತವನ್ನು ಎರಡೇ ಹ್ಯಾಕ್‌ಗಳಲ್ಲಿ ಶ್ರೀಕೃಷ್ಣ ಲಪಟಾಯಿಸಿದ ಸಂಗತಿ ಹಗರಣದ ಅಗಾಧತೆಯನ್ನು ಬಿಚ್ಚಿಟ್ಟಿದೆ.

ಬೆಂಗಳೂರಿನ ಜಯನಗರ ನಿವಾಸಿ ಶ್ರೀಕೃಷ್ಣನನ್ನು ಡ್ರಗ್ಸ್ ಪ್ರಕರಣದಲ್ಲಿ 2020ರ ನವೆಂಬರ್ 17ರಂದು ಬಂಧಿಸಿದ್ದ ಸಿಸಿಬಿ ಪೊಲೀಸರು, ಆತನ ಸೈಬರ್ ಅಪರಾಧ ಹಾಗೂ ಬಿಟ್ ಕಾಯಿನ್ ಅಕ್ರಮವನ್ನು ಪತ್ತೆ ಮಾಡಿದ್ದರು. ಆತನ ವಿರುದ್ಧ 1ನೇ ಎಸಿಎಂಎಂ ನ್ಯಾಯಾಲಯಕ್ಕೆ 2021ರ ಫೆಬ್ರವರಿ 22ರಂದು 757 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಆತನ ಹಿನ್ನೆಲೆ ಹಾಗೂ ಕೋಟಿಗಟ್ಟಲೇ ಮೌಲ್ಯದ ಬಿಟ್ ಕಾಯಿನ್ ಸಂಪಾದನೆ ಬಗ್ಗೆ ಇಂಚಿಂಚು ಮಾಹಿತಿಯನ್ನು ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ. ಈ ಆರೋಪ ಪಟ್ಟಿಯ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಅಮೆರಿಕದ ಹಣ ವಿನಿಮಯ ಏಜೆನ್ಸಿ 'ಬಿಟಿಸಿ ಇ ಡಾಟ್ ಕಾಮ್' ಜಾಲತಾಣ ಹ್ಯಾಕ್ ಮಾಡಿದ್ದ ಆರೋಪಿ, ಅದರಿಂದ 3,000 ಬಿಟಿಸಿ (₹1,370 ಕೋಟಿ) ಗಳಿಸಿದ್ದ.

ಹ್ಯಾಕಿಂಗ್‌ನಿಂದ ಗಳಿಸಿದ್ದ ಅತೀ ದೊಡ್ಡ ಮೊತ್ತವಿದು. ಇದಾದ ನಂತರ, 'ಬಿಟ್ ಫಿನಿಕ್ಸ್' ಜಾಲತಾಣ ಹ್ಯಾಕ್ ಮಾಡಿ ಸರ್ವರ್ ತನ್ನದಾಗಿಸಿ-ಕೊಂಡಿದ್ದ. ಇದಕ್ಕೆ ಇಬ್ಬರು ಇಸ್ರೇಲ್ ಹ್ಯಾಕರ್ಸ್‌ಗಳ ಸಹಾಯ ಪಡೆದಿದ್ದ. ಇದರಿಂದ 2,000 ಬಿಟಿಸಿ (₹ 913.33 ಕೋಟಿ) ಕಾಯಿನ್ ಸಂಪಾದಿಸಿದ್ದ' ಎಂಬ ಮಾಹಿತಿ ಆರೋಪ ಪಟ್ಟಿಯಲ್ಲಿದೆ.

ಪ್ರಜಾವಾಣಿ ವಿಶೇಷ

6ನೇ ಪುಟ ನೋಡಿ

ಅಮೆರಿಕದ ತನಿಖಾ ಸಂಸ್ಥೆ ಫೆಡರಲ್ ಬ್ಯುರೊ ಆಫ್ ಇನ್‌ವೆಸ್ಟಿಗೇಷನ್ (ಎಫ್‌ಬಿಐ) ತಂಡ ಬೆಂಗಳೂರಿಗೆ ಬಂದೇ ಇಲ್ಲ. ಅಂತಹ ಸುದ್ದಿಗಳೆಲ್ಲ ಊಹಾಪೋಹ

ಆರಗ ಜ್ಞಾನೇಂದ್ರ, ಗೃಹ ಸಚಿವ

ಪ್ರಭಾವಿಗಳು ಭಾಗಿಯಾಗಿದ್ದರೆ ಹೆಸರು ಹೇಳಿ: ಸಿ.ಎಂ ಸವಾಲು

ಹುಬ್ಬಳ್ಳಿ: 'ಬಿಟ್ ಕಾಯಿನ್ ಹಾಗೂ ಡ್ರಗ್ಸ್ ಪ್ರಕರಣದಲ್ಲಿ ಪ್ರಭಾವಿ ರಾಜಕಾರಣಿಗಳು ಭಾಗಿಯಾಗಿದ್ದರೆ ಹೆಸರು ಹೇಳಲಿ. ತನಿಖೆಗೆ ಒಳಪಡಿಸುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸವಾಲು ಹಾಕಿದರು.

ಪ್ರಕರಣ ಕುರಿತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾಡಿರುವ ಆರೋಪಕ್ಕೆ ಗುರುವಾರ ಪ್ರತಿಕ್ರಿಯಿಸಿ, 'ರಾಜ್ಯದ ತನಿಖಾ ಸಂಸ್ಥೆಗಳು ಸಮಗ್ರ ತನಿಖೆ ನಡೆಸಿವೆ. ಹೆಚ್ಚಿನ ತನಿಖೆಗೆ ನಾವೇ ಜಾರಿ ನಿರ್ದೇಶನಾಲಯ ಹಾಗೂ ಸಿಬಿಐಗೆ ವಹಿಸಿದ್ದೇವೆ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ' ಎಂದರು.

ಯಾಕೆ ಮುಚ್ಚಿಟ್ಟದ್ದರು?

ಮುಖ್ಯಮಂತ್ರಿ ಮಾತಿಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಪ್ರಕರಣವನ್ನು ಇ.ಡಿ.ಗೆ ವಹಿಸಿದ್ದನ್ನು ಸರ್ಕಾರ ಇಷ್ಟು ದಿನ ಏಕೆ ಮುಚ್ಚಿಟ್ಟಿತ್ತು? ಪ್ರಕರಣದಲ್ಲಿ ಯಾರನ್ನೋ ರಕ್ಷಿಸುವ ಕೆಲಸ ನಡೆಯುತ್ತಿದೆ. ಕೇಂದ್ರ ತನಿಖಾ ಸಂಸ್ಥೆಗಳು ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

'ಪಟಾಕಿ ನಿಷೇಧ ಯಾವುದೇ ಸಮುದಾಯಕ್ಕೆ ವಿರುದ್ಧವಲ್ಲ'

ನವದೆಹಲಿ (ಪಿಟಿಐ): 'ಪಟಾಕಿಗಳನ್ನು ನಿಷೇಧಿಸುವ ಕ್ರಮವು ಯಾವುದೋ ಒಂದು ಸಮುದಾಯದ ವಿರುದ್ಧದ ಕ್ರಮವಲ್ಲ' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ. ಒಂದು ಸಮುದಾಯವನ್ನು ಗುರಿ ಮಾಡಿಕೊಂಡು ಪಟಾಕಿಯನ್ನು ನಿಷೇಧಿಸಲಾಗಿದೆ ಎಂಬ ವದಂತಿಯನ್ನು ಈ ಮೂಲಕ ಸುಪ್ರೀಂ ಕೋರ್ಟ್ ತಿಳಿಗೊಳಿಸಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಎ.ಎಸ್.ಬೋಪಣ್ಣ ಅವರಿದ್ದ ಪೀಠವು, 'ಪಟಾಕಿ ನಿಷೇಧ ಆದೇಶವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು' ಎಂದು ಹೇಳಿದೆ.

'ಪಟಾಕಿ ತಯಾರಕರು ಮನೋರಂಜನೆಯ ನೆಪದಲ್ಲಿ ದೇಶದ ನಾಗರಿಕರ ಜೀವದ ಜತೆ ಆಟವಾಡು-ವಂತಿಲ್ಲ. ನಾವು ಯಾವುದೋ ಒಂದು ಸಮುದಾಯದ ವಿರುದ್ಧ ಇಲ್ಲ. ಬದಲಿಗೆ ಜನರ ಜೀವಿಸುವ ಮತ್ತು ಆರೋಗ್ಯದ ಹಕ್ಕಿನ ರಕ್ಷಣೆಗಾಗಿ ಇದ್ದೇವೆ ಎಂಬ ಸಂದೇಶವನ್ನು ರವಾನಿಸಬೇಕಿದೆ' ಎಂದು ಪೀಠವು ಹೇಳಿದೆ.

13ನೇ ಪುಟ ನೋಡಿ

'ಶಿಕ್ಷಕರು ಒಪ್ಪಿದರೆ ಶನಿವಾರ ಪೂರ್ಣ ತರಗತಿ'

ದಾವಣಗೆರೆ: 'ಕೋವಿಡ್ ಕಾರಣಕ್ಕೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 35 ದಿನಗಳು ಕಡಿಮೆಯಾಗಿವೆ. ದಸರಾ ರಜೆ ಸಂದರ್ಭದಲ್ಲಿ ಐದು ದಿನ ಸರಿದೂ-ಗಿಸಲಾಗಿದೆ. ಶಿಕ್ಷಕರು ಒಪ್ಪಿಕೊಂಡರೆ ಶನಿವಾರವು ಪೂರ್ಣ ಅವಧಿ ತರಗತಿ ನಡೆಸುತ್ತೇವೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು. 6

ಡ್ರಗ್ಸ್ ಪ್ರಕರಣ: ಆರ್ಯನ್‌ಗೆ ಜಾಮೀನು

ಮುಂಬೈ: ಬಾಲಿವುಡ್ ಸೂಪರ್ ಸ್ಟಾರ್ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್‌ಗೆ ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಸೇವನೆ ಪ್ರಕರಣದಲ್ಲಿ ಬಾಂಬೆ ಹೈಕೋರ್ಟ್ ಗುರುವಾರ ಜಾಮೀನು ಮಂಜೂರು ಮಾಡಿದೆ. 13

ದಶದಿಕ್ಕಿನಲ್ಲೂ ಅನುರಣಿಸಿದ ಕನ್ನಡ ಗಾಯನ

ಬೆಂಗಳೂರು: 'ಕನ್ನಡಕ್ಕಾಗಿ ನಾವು' ಅಭಿಯಾನದ ಅಂಗವಾಗಿ ಗುರುವಾರ ಏರ್ಪಡಿಸಿದ್ದ ಕನ್ನಡ ಗೀತಗಾಯನ ಕಾರ್ಯಕ್ರಮ ರಾಜ್ಯದ ಮೂಲೆ ಮೂಲೆಗಳಲ್ಲೂ ಅನುರಣಿಸಿತು. 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸ್ವಾತಂತ್ರ್ಯದ ಅಮೃತಮಹೋತ್ಸವ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಮಾತಾಡ್ ಮಾತಾಡ್ ಕನ್ನಡ


ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

೬೬ನೇ ಕರ್ನಾಟಕ ರಾಜ್ಯೋತ್ಸವ ಅಭಿಯಾನ ಕನ್ನಡಕ್ಕಾಗಿ ನಾವು
ಬೆಂಗಳೂರಿನಲ್ಲಿ ಕರ್ನಾಟಕ ಸಾಂಸ್ಕೃತಿಕ ಉತ್ಸವ
ದಿನಾಂಕ: ೨೯-೧೦-೨೦೨೧ರ ಸಂಜೆ: ೪:೦೦ ಗಂಟೆಗೆ ವಿಶೇಷ ಅಂಚೆ ಲಕೋಟೆ ಬಿಡುಗಡೆ
ಮಾನ್ಯ ಶ್ರೀ ವಿ ಸುನಿಲ್ ಕುಮಾರ್, ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಂದ
ದಿನಾಂಕ: ೨೯, ೩೦ ಮತ್ತು ೩೧ ಅಕ್ಟೋಬರ್ ೨೦೨೧
ಬೆಳಿಗ್ಗೆ ೯:೦೦ ಗಂಟೆಯಿಂದ ರಾತ್ರಿ ೯:೦೦ ಗಂಟೆವರೆಗೆ
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

ದಿನಾಂಕ: ೨೯-೧೦-೨೦೨೧
ಬೆಳಗ್ಗೆ : ೯.೦೦ ರಿಂದ ವಚನ ದಾಸರ ಪದಗಳು
: ೧೦:೦೦ ರಿಂದ ಕನ್ನಡ ಗೀತೆಗಳ ಗಾಯನ
: ೧೧:೩೦ ರಿಂದ ಕ್ಲಾರಿಯೋನೆಟ್ ವಾದನ
ಮಧ್ಯಾಹ್ನ : ೧೨:೩೦ ರಿಂದ ಜನಪದ ಗೀತೆಗಳ ಗಾಯನ
: ೨:೩೦ ರಿಂದ ವಾದ್ಯ ಸಂಗೀತ ವೈಭವ
: ೩:೩೦ ರಿಂದ ಹಾಸ್ಯ ಗೋಷ್ಠಿ
ಶ್ರೀ ಗಂಗಾವತಿ ಪ್ರಾಣೇಶ್ ತಂಡದಿಂದ
ಸಂಜೆ : ೪:೩೦ ರಿಂದ ಕವಿ ಕಾವ್ಯ-ಗಾಯನ
: ೬:೦೦ ರಿಂದ ಕರ್ನಾಟಕ ವೈಭವ ನೃತ್ಯರೂಪಕ
: ೭:೦೦ ರಿಂದ ಗಮಕ
: ೭:೩೦ ನಾಟಕ – ಮೈಸೂರು ಮಲ್ಲಿಗೆ

ದಿನಾಂಕ: ೩೦-೧೦-೨೦೨೧
ಬೆಳಗ್ಗೆ : ೯.೦೦ ರಿಂದ ಭಕ್ತಿ ಸಂಗೀತ
: ೧೦:೦೦ ರಿಂದ ದಾಸರ ಪದಗಳು
: ೧೦:೩೦ ರಿಂದ ಹಿಂದೂಸ್ಥಾನಿ ಸಂಗೀತ
: ೧೧:೩೦ ರಿಂದ ನೃತ್ಯರೂಪಕ
ಮಧ್ಯಾಹ್ನ : ೧೨:೦೦ ರಿಂದ ಗಮಕ, ೧೨:೩೦ ರಿಂದ ಬಯಲಾಟ
: ೨:೩೦ ರಿಂದ ಜನಪದ ತತ್ವ ಪದಗಳ ಗಾಯನ
: ೩:೩೦ ರಿಂದ ಶಿವರಾಮ ಕಾರಂತರ ಯಕ್ಷಗಾನ ಬ್ಯಾಲೆ
ಸಂಜೆ : ೪:೩೦ ರಿಂದ ಕಾವ್ಯ-ಗೀತ-ಚಿತ್ರ
: ೬:೦೦ ರಿಂದ ಸುಗಮ ಸಂಗೀತ
: ೭:೦೦ ರಿಂದ ನೃತ್ಯ ರೂಪಕ ಚಿಂತನ ರಾಮಾಯಣ
: ೮:೦೦ ರಿಂದ ನಾಟಕ – ಸತ್ತವರ ನೆರಳು
ರಾತ್ರಿ : ೧೦:೩೦ಕ್ಕೆ ಅಹೋ ರಾತ್ರಿ ಯಕ್ಷಗಾನ

ದಿನಾಂಕ: ೩೧-೧೦-೨೦೨೧
ಬೆಳಗ್ಗೆ : ೯.೦೦ ರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ
: ೯:೩೦ ರಿಂದ ಡ್ರಮ್ಸ್ ಫ್ಯೂಷನ್
: ೧೦:೦೦ ರಿಂದ ವಚನ ಗಾಯನ
: ೧೦:೩೦ ರಿಂದ ಕಥಾಕೀರ್ತನ
: ೧೧:೦೦ ರಿಂದ ಜನಪದ ಕಲೆಗಳ ಪ್ರದರ್ಶನ
ಮಧ್ಯಾಹ್ನ : ೧೨:೦೦ ನೃತ್ಯ ವೈಭವ
: ೧:೦೦ ರಿಂದ ಕೊಳಲು ವಾದನ
: ೨:೩೦ ರಿಂದ ಜನಪದ ಗಾಯನ
: ೩:೩೦ ರಿಂದ ಮೂಡಲಪಾಯ
ಸಂಜೆ : ೪:೦೦ ರಿಂದ ಹಿಂದೂಸ್ತಾನಿ ಸಂಗೀತ
: ೪:೩೦ ರಿಂದ ಸುಗಮ ಸಂಗೀತ

ಕನ್ನಡಕ್ಕಾಗಿ ನಾವು ಅಭಿಯಾನದ ಉದ್ಘಾಟನೆ ಕಾರ್ಯಕ್ರಮದಲ್ಲಿ ಶ್ರೀ ವಿ ಸುನಿಲ್ ಕುಮಾರ್ ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಭಾಗವಹಿಸಿರುವುದು.

ಕನ್ನಡ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಕನ್ನಡ ಸಂಸ್ಕೃತಿ ಪರಂಪರೆಯನ್ನು ಬಿಂಬಿಸುವ ಉಡುಗೆ, ತೊಡುಗೆಗಳು ಮತ್ತು ದೇಸೀ ಆಹಾರ ತಿನಿಸುಗಳು ಹಾಗೂ ಚಿತ್ರ-ಶಿಲ್ಪಕಲಾಕೃತಿಗಳ ಪ್ರದರ್ಶನ ಮೇಳ.

ಸಾಮಾನ್ಯ ಕನ್ನಡಿಗನ ಉತ್ಸವವಾದ 'ಲಕ್ಷ ಕಂಠ ಗೀತ ಗಾಯನ' • ಆಟೊ, ಬಸ್, ರೈಲು, ವಿಮಾನ ನಿಲ್ದಾಣ, ಮೆಟ್ರೊ ನಿಲ್ದಾಣಗಳಲ್ಲೂ ಮಾರ್ದನಿ

ಕನ್ನಡದ ಗಾನ ಗಂಗೆಯಲ್ಲಿ ತೇಲಿದ ಉದ್ಯಾನ ನಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಟ್ಟ ಮೋಡವನ್ನು ಪಕ್ಕಕ್ಕೆ ಸರಿಸಿ, ನೇಸರ ಬಿರು ಬಿಸಿಲನ್ನು ಸೂಸುವ ವೇಳೆಯಲ್ಲಿ ಮಾರ್ದನಿಸಿದ 'ಜೋಗದ ಸಿರಿ ಬೆಳಕಿನಲ್ಲಿ... ತುಂಗೆಯ ಸಿರಿ ಬಳುಕಿನಲ್ಲಿ... 'ಬಾರಿಸು ಕನ್ನಡ ಡಿಂಡಿಮವಾ..' ಗೀತೆಗಳು ಉದ್ಯಾನ ನಗರಿಯಲ್ಲಿ ಅಸಂಖ್ಯಾತ ಮಂದಿಯ ಕಿವಿ ನೆಟ್ಟಗಾಗುವಂತೆ ಮಾಡಿದವು.

ಇಂಪಾದ ಕನ್ನಡ ಗೀತೆಗಳು ಬೀದಿ ಬೀದಿಗಳಲ್ಲಿ, ವೃತ್ತಗಳಲ್ಲಿ, ಸರ್ಕಾರಿ ಕಚೇರಿಗಳು, ಶಾಲಾ-ಕಾಲೇಜು, ವಿಶ್ವ ವಿದ್ಯಾಲಯಗಳ ಆವರಣ, ಬಸ್ ನಿಲ್ದಾಣಗಳು, ಮೆಟ್ರೊ ರೈಲಿನಲ್ಲಿ ಮೊಳಗಿದವು. ಹಾದಿ ಹೋಕ ಸಾಮಾನ್ಯ ಕನ್ನಡಿಗ ಗೀತೆಗಳನ್ನು ಕೇಳಿ, ಒಂದು ಕ್ಷಣ ನಿಂತು ಭಾವುಕರಾದರು. ಇಂತಹ ಅಸಂಖ್ಯಾತ ನಿದರ್ಶನಗಳಿಗೆ 'ಸಿಲಿಕಾನ್ ಸಿಟಿ' ಬೆಂಗಳೂರು ಗುರುವಾರ ಸಾಕ್ಷಿಯಾಯಿತು.

'ಕಾಸ್ಮೊಪಾಲಿಟನ್' ನಗರ ಎಂಬ ಬಿರುದು ಪಡೆದ ನಂತರ ಕನ್ನಡದ ವಾತಾವರಣ ಕರಗುತ್ತಿದೆಯೇನೋ ಎಂಬ ಆತಂಕ ಕನ್ನಡಿಗರದಾಗಿತ್ತು. ಆದರೆ, ಲಕ್ಷ ಕಂಠ ಗೀತ ಗಾಯನದಲ್ಲಿ ಸ್ವಯಂಪ್ರೇರಣೆಯಿಂದ ಸಾರ್ವಜನಿಕರು ಭಾಗವಹಿಸಿದ್ದು ಕಾರ್ಮೋಡದ ನಡುವಿನ ಮಿಂಚಿನಂತೆ ಗೋಚರಿಸಿತು. ಗಣ್ಯರು,ಅತಿ ಗಣ್ಯರು ಅಥವಾ ತಾರೆಯರಿಗಿಂತ ಸಾಮಾನ್ಯ ಕನ್ನಡಿಗರೇ ಆದ್ಯತೆ ಪಡೆದಿದ್ದು ವಿಶೇಷವಾಗಿತ್ತು.

ಈ ಅಭಿಯಾನಕ್ಕೆ ಆಟೋ ಚಾಲಕರ ಸಂಘ, ಗಾರ್ಮೆಂಟ್ಸ್ ಕಾರ್ಮಿಕರು, ಐಟಿ- ಬಿಟಿ ಉದ್ಯೋಗಿಗಳು ಕೈಜೋಡಿಸಿದ್ದು, ಕನ್ನಡದ ಕಲರವವನ್ನು ಹಬ್ಬಿಸುವಲ್ಲಿ ತಮ್ಮದೇ ಆದ ರೀತಿಯಲ್ಲಿ ಬೆಂಗಳೂರು ನಗರದಲ್ಲಿ ಪ್ರಯತ್ನ ಆರಂಭಿಸಿದ್ದಾರೆ. ಐಎಎಸ್ ಅಧಿಕಾರಿಗಳೂ ಹುಮ್ಮಸ್ಸಿನಿಂದ ಭಾಗವಹಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಿರಿಯ ಸಾಹಿತಿಗಳಾದ ಡಾ.ಬಿ.ಟಿ. ಲಲಿತಾ ನಾಯಕ್, ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಬೈರಮಂಗಲ ರಾಮೇಗೌಡ, ಅಬ್ದುಲ್ ಬಷೀರ್, ನೊಣವಿನಕೆರೆ ರಾಮಕೃಷ್ಣಯ್ಯ, ವೇದಾವತಿ ಪ್ರಸನ್ನ, ಟಿ.ತಿಮ್ಮೇಶ್, ಕ.ಸಾ.ಪ ಗೌರವ ಸಲಹೆಗಾರ ಪದ್ಮರಾಜ ದಂಡಾವತಿ ಸಾಮೂಹಿಕ ಗಾಯನದಲ್ಲಿ ಪಾಲ್ಗೊಂಡರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುವೆಂಪು ಸಭಾಂಗಣದಲ್ಲಿ ಗೀತ ಗಾಯನ ಕಾರ್ಯಕ್ರಮದ ಜತೆಗೆ ಸಂಕಲ್ಪವನ್ನು ತೆಗೆದುಕೊಳ್ಳಲಾಯಿತು.

ಹೇರೋಹಳ್ಳಿ ವಾರ್ಡ್ ಕಚೇರಿ ಮುಂಭಾಗ ಸಹಕಾರ ಸಚಿವ ಎಸ್. ಟಿ.ಸೋಮಶೇಖರ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಕನ್ನಡಕ್ಕಾಗಿ ನಾವು ಅಭಿಯಾನಕ್ಕೆ ಚಾಲನೆ ನೀಡಿದರು. ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ, 150 ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಪೌರಕಾರ್ಮಿಕರು ಮೂರು ಗೀತೆಗಳನ್ನು ಹಾಡಿದರು.

ಬಿಬಿಎಂಪಿ ಕೇಂದ್ರ ಕಚೇರಿ: ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸಾವಿರಕ್ಕೂ ಹೆಚ್ಚು ಅಧಿಕಾರಿ ಮತ್ತು ಸಿಬ್ಬಂದಿ ಗಾಯನದಲ್ಲಿ ಭಾಗವಹಿಸಿದ್ದರು. ಕನ್ನಡದಲ್ಲಿ ಮಾತನಾಡುವ, ಬರೆಯುವ, ವ್ಯವಹರಿಸುವ ಬಗ್ಗೆ ಸಂಕಲ್ಪ ದೀಕ್ಷೆ ತೊಟ್ಟರು. ಬಿಬಿಎಂಪಿಯ ಎಲ್ಲಾ ವಲಯ ಕಚೇರಿಗಳಲ್ಲಿಯೂ 'ಮಾತಾಡ್ ಮಾತಾಡ್ ಕನ್ನಡ' ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕೆಎಸ್‌ಆರ್‌ಟಿಸಿಯಲ್ಲಿ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಎಲ್ಲಾ ವಿಭಾಗೀಯ ಕಚೇರಿಗಳು, ವಿಭಾಗೀಯ ಕಾರ್ಯಾಗಾರ, ಕೇಂದ್ರ ಕಚೇರಿ ಮತ್ತು ಬಸ್ ನಿಲ್ದಾಣಗಳಲ್ಲಿ 'ಕನ್ನಡಕ್ಕಾಗಿ ನಾವು' ಅಭಿಯಾನದ ಅಂಗವಾಗಿ ಗೀತ ಗಾಯನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ, ನಿರ್ದೇಶಕ (ಸಿಬ್ಬಂದಿ ಮತ್ತು ಪರಿಸರ) ಟಿ.ವೆಂಕಟೇಶ್ ಮತ್ತು ಅಧಿಕಾರಿ ಸಿಬ್ಬಂದಿ ಹಾಜರಿದ್ದರು.

ಕಾಲೇಜುಗಳಲ್ಲಿ ಗೀತಗಾಯನ: ವಿವಿಧ ಶಾಲಾ ಕಾಲೇಜುಗಳಲ್ಲೂ ಕನ್ನಡ ಗೀತೆಗಳನ್ನು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸೇರಿ ಹಾಡಿದರು. ಮಲ್ಲೇಶ್ವರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪ್ರಾಂಶುಪಾಲ ರವಿ ಎ.ಎಸ್ ಅವರ ನೇತೃತ್ವದಲ್ಲಿ ಗೀತಗಾಯನದಲ್ಲಿ ಭಾಗಿಯಾದರು.

ವಿಧಾನಸೌಧ ಮುಂದೆ ನಡೆದ ಕಾರ್ಯಕ್ರಮದಲ್ಲಿ ಕನ್ನಡತನ ಕಾಪಾಡುವ ಪ್ರತಿಜ್ಞೆ ಸ್ವೀಕಾರ – ಪ್ರಜಾವಾಣಿ ಚಿತ್ರಗಳು

ಜಯನಗರ 5ನೇ ಬ್ಲಾಕ್ ನ ಚಂದ್ರಗುಪ್ತ ಮೌರ್ಯ (ಶಾಲಿನಿ) ಕ್ರೀಡಾಂಗಣದಲ್ಲಿ ಕನ್ನಡಕ್ಕಾಗಿ ನಾವು ಅಭಿಯಾನ ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳು 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಗೀತೆಗೆ ಕುಣಿದು ಕುಪ್ಪಳಿಸಿದರು

ನಮ್ಮ ಮೆಟ್ರೊದಲ್ಲಿ ಕನ್ನಡದ ಕಂಪು

ಬಿಎಂಆರ್‌ಸಿಎಲ್ 'ಕನ್ನಡ ಗೀತ ಗಾಯನ'ವನ್ನು ವಿಶಿಷ್ಟವಾಗಿ ಆಯೋಜಿಸಿತ್ತು. ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು. 'ನಮ್ಮ ಮೆಟ್ರೊ' ನಿಲ್ದಾಣಗಳಲ್ಲಿ ಕನ್ನಡಮಯ ವಾತಾವರಣ ನಿರ್ಮಾಣವಾಗಿತ್ತು. ಎಲ್ಲ ನಿಲ್ದಾಣಗಳಲ್ಲೂ 'ಜೋಗದ ಸಿರಿ ಬೆಳಕಿನಲ್ಲಿ... ತುಂಗೆಯ ಸಿರಿ ಬಳುಕಿನಲ್ಲಿ... 'ಬಾರಿಸು ಕನ್ನಡ ಡಿಂಡಿಮವಾ..' ಮತ್ತು 'ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು' ಎಂಬ ಗೀತೆಗಳು ಮೊಳಗಿದವು. ಹಲವು ನಿಲ್ದಾಣಗಳಲ್ಲಿ ಸಿಬ್ಬಂದಿ ಮತ್ತು ಕನ್ನಡಾಭಿಮಾನಿಗಳು ಗೀತೆಯ ಧಾಟಿಗೆ ದನಿಗೂಡಿಸಿದರು. ಮೆಟ್ರೊ ರೈಲಿನಲ್ಲೂ ಕನ್ನಡ ಗೀತೆಗಳು ಕೇಳಿ ಬಂದವು.

'ಲಕ್ಷ ಕಂಠ ಗೀತ ಗಾಯನ ಇತ್ತೀಚಿನ ದಿನಗಳಲ್ಲಿ ಆಯೋಜಿಸಿದ ಕನ್ನಡದ ಅತ್ಯುತ್ತಮ ಕಾರ್ಯಕ್ರಮ. ಕನ್ನಡಿಗರ ವ್ಯಕ್ತಿತ್ವ ವಿಕಸನ, ನಡವಳಿಕೆ, ಸಂಸ್ಕೃತಿ, ಭಾಷೆ ಎಲ್ಲವನ್ನೂ ಮೇಳೈಸುವ ಅತ್ಯದ್ಭುತ ಕಾರ್ಯಕ್ರಮ. ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎನ್ನುವ ಕನ್ನಡಿಗರಾದ ನಮ್ಮೆಲ್ಲರ ಅಭಿಮಾನದ ಅಭಿವ್ಯಕ್ತಿಗೆ ಸರ್ಕಾರ ವೇದಿಕೆ ಕಲ್ಪಿಸಿದೆ' ಎಂದು ಬಿಎಂಆರ್‌ಸಿಎಲ್‌ನ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗದ ಕಾರ್ಯಕಾರಿ ನಿರ್ದೇಶಕ ಎಸ್.ಎನ್. ಶಂಕರ್ ತಿಳಿಸಿದರು.

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ರೈಲ್ವೇ ನಿಲ್ದಾಣಗಳು, ಆಟೋನಿಲ್ದಾಣಗಳಲ್ಲಿ ಕನ್ನಡ ಗೀತ ಗಾಯನ ನಡೆಯಿತು.

ಸಾಮಾನ್ಯರ ಉತ್ಸಾಹ; ತಾರೆಯರ ನಿರಾಸಕ್ತಿ

'ಕನ್ನಡಕ್ಕಾಗಿ ನಾನು' ವಿಶೇಷ ಅಭಿಯಾನಕ್ಕೆ ಆಟೋ ಚಾಲಕರ ಸಂಘ, ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರು, ಐಟಿ–ಬಿಟಿ ಉದ್ಯೋಗಿಗಳು, ಕಾಲೇಜು ವಿದ್ಯಾರ್ಥಿಗಳಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಆದರೆ, ಕನ್ನಡ ಚಲನಚಿತ್ರ ನಟ– ನಟಿಯರು ಈ ಅಭಿಯಾನದಿಂದ ದೂರ ಉಳಿದಿರುವುದು ಚರ್ಚೆಗೆ ಕಾರಣವಾಗಿದೆ.

ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ರಾಜ್ಯ ಸರ್ಕಾರ ನಟ– ನಟಿಯರಿಗೆ ಮನವಿ ಮಾಡಿತ್ತು. ಆದರೆ, ಚಿತ್ರೋದ್ಯಮದಿಂದ ಯಾರೂ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಗಳು ತಿಳಿಸಿವೆ.

ಗುರುವಾರ ನಡೆದ ಗೀತ ಗಾಯನದಲ್ಲಿ ಚಿತ್ರನಟ ಜಗ್ಗೇಶ್, ನಿರ್ಮಾಪಕ ಸಾ.ರಾ.ಗೋವಿಂದು ಬೆಂಗಳೂರಿನಲ್ಲೂ, ಶ್ರುತಿ ಹುಬ್ಬಳ್ಳಿಯಲ್ಲಿ ಭಾಗವಹಿಸಿದ್ದರು.

ಇತ್ತೀಚಿನ ವರ್ಷಗಳಲ್ಲಿ ಪ್ರಶಸ್ತಿ ಪ್ರದಾನ, ಮಾಸಾಶನ ವಿತರಣೆ ಮತ್ತು ವಿವಿಧ ಸಂಘಟನೆಗಳಿಗೆ ಅನುದಾನ ಒದಗಿಸುವುದಕ್ಕೆ ಸೀಮಿತವಾಗಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಲವು ವರ್ಷಗಳ ಬಳಿಕ ಮೊದಲ ಬಾರಿಗೆ ರಾಜ್ಯವ್ಯಾಪಿ ಹಾಗೂ ವಾರವಿಡೀ ಕನ್ನಡದ ಸಂಸ್ಕೃತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಚಿವ ಸುನಿಲ್ ಕುಮಾರ್ ಒತ್ತಾಸೆಯಿಂದ ಅಧಿಕಾರಿಗಳು ಈಗ ರಾತ್ರಿ 10.30 ರವರೆಗೆ ಕಾರ್ಯನಿರ್ವಹಿಸಬೇಕಾಗಿದೆ. ಅಲ್ಲದೆ, ಪ್ರತಿ ದಿನ ಸಂಜೆ 7 ರ ವೇಳೆಗೆ ಆ ದಿನದ ವರದಿಯನ್ನೂ ಒಪ್ಪಿಸಬೇಕಾಗಿದೆ ಎಂದು ಇಲಾಖೆಯ ಮೂಲಗಳು ಹೇಳಿವೆ.

'ಇಲಾಖೆಯಲ್ಲಿ ಹಣವಿಲ್ಲ, ಸಿಬ್ಬಂದಿ ಇಲ್ಲ ಎಂಬ ಮಾತು ಆರಂಭದಲ್ಲಿ ಕೇಳಿ ಬಂದಿತ್ತು. ಈ ಸಮಸ್ಯೆಯನ್ನು ನೀಗಿಸಲು ಸಚಿವರು ಉನ್ನತ ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಬಿಬಿಎಂಪಿ ಜತೆ ಮಾತುಕತೆ ನಡೆಸಿ ಅವರ ಸಿಬ್ಬಂದಿ ಮತ್ತು ಸಂಪನ್ಮೂಲ ಬಳಸಿಕೊಳ್ಳಲಾಗುತ್ತಿದೆ. ಸಾಮಾಜಿಕ ಹೊಣೆಗಾರಿಕೆ ನಿಧಿಯೂ ಸಿಕ್ಕಿದೆ. ಹೀಗಾಗಿ ಹಣದ ಕೊರತೆ ನೀಗಿದೆ' ಎಂದು ಮೂಲಗಳು ತಿಳಿಸಿವೆ.

'ಐಟಿ ಮತ್ತು ಬಿಟಿ ಕಂಪನಿಗಳಲ್ಲಿ ಕನ್ನಡದ ವಾತಾವರಣವನ್ನು ವೃದ್ಧಿಗೊಳಿಸುವ ಉದ್ದೇಶದಿಂದ ಸಚಿವರು ಉಪಚುನಾವಣೆ ಬಳಿಕ ಒಂದೆರಡು ಐಟಿ ಕಂಪನಿಗಳಿಗೆ ಭೇಟಿ ನೀಡಿ ಕನ್ನಡೇತರರಿಗೆ ಕನ್ನಡ ಕಲಿಯುವ ಕೈಪಿಡಿ ವಿತರಿಸಲಿದ್ದಾರೆ' ಎಂದು ಮೂಲಗಳು ಹೇಳಿವೆ.

ಶ್ರೀ ಸಾಯಿ ಮಹಾಗಣಪತಿ ಜ್ಯೋತಿಷ್ಯ ಕೇಂದ್ರ

ಕೇರಳದ ಸರ್ವ ಮಾಂತ್ರಿಕ ಸಿದ್ಧಿಸಾಧಕರು,
ಶ್ರೀ ಭದ್ರಕಾಳಿ ಉಪಾಸಕರು
Famous Astrologer
ದೈವಜ್ಞ ಗುರುಪ್ರಸಾದ ಜೋಶಿ

9449850111
ಫೋನಿನ ಮೂಲಕ ಅಥವಾ ನೇರವಾಗಿ ನಮ್ಮನ್ನು ಭೇಟಿ ಮಾಡಿ ಉತ್ತಮ ಸಲಹೆ ಶಾಶ್ವತ ಪರಿಹಾರ ಶತಃಸಿದ್ಧ
ವಿದ್ಯೆ, ಸಿದ್ಧಿ ಸಾಧಕ, ನುಡಿದಂತೆ ನಡೆಯುತ್ತಾರೆ.
ಕೇರಳ ಪದ್ಧತಿಯಲ್ಲಿ ತಾಳಗ್ರಂಥದ ಮೂಲಕ ಪುರಾತನ ಋಷಿ ಮುನಿಗಳಿಂದ ಪರಿಹಾರ ತಿಳಿಸುತ್ತಾರೆ.
ವಾಸ್ತುಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಸಂಖ್ಯಾ ಶಾಸ್ತ್ರ, ಜಾತಕ, ಭಾವಚಿತ್ರದ ಆಧಾರಿತವಾಗಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ.
ಮನೆಯಲ್ಲಿ ಅಶಾಂತಿ, ಮಾನಸಿಕ ಜಿಗುಪ್ಸೆ, ಸ್ತ್ರೀ-ಪುರುಷ ವಶೀಕರಣ, ಪ್ರೇಮ ವಿಚಾರ, ದಾಂಪತ್ಯ ಕಲಹ, ಮದುವೆ, ಸಂತಾನ, ಆರೋಗ್ಯ, ಲೈಂಗಿಕ ತೊಂದರೆ, ಹಣಕಾಸಿನ ಸಮಸ್ಯೆ, ವಿದ್ಯೆ, ಉದ್ಯೋಗ, ವ್ಯಾಪಾರ ನಷ್ಟ, ಶತ್ರುಕಾಟ, ಮಾಟ ಮಂತ್ರ, ಅತ್ತೆ-ಸೊಸೆ ಕಲಹ, ಕೋರ್ಟ್ ಕೇಸ್, ಆಸ್ತಿ ವಿಚಾರ, ಇನ್ನೂ ಯಾವುದೇ ಸಮಸ್ಯೆಗಳಿಂದ ಜೀವನದಲ್ಲಿ ಮಾನಸಿಕವಾಗಿ ನೊಂದಿದ್ದರೆ ಇನ್ನೊಬ್ಬರಲ್ಲಿ ಹೇಳಲಾಗದೆ ಕೊರಗುತ್ತಿದ್ದೀರಾ? ಚಿಂತಿಸಬೇಡಿ,
Any Problems 100% Solutions
ಸ್ಥಳ: ಕಲಾನಿಕೇತನ ಹಿಂದೆ, ಟ್ರೇಂಡ್ಸ್ ಪಕ್ಕದಲ್ಲಿ, ಜಯನಗರ, 4th ಬ್ಲಾಕ್, ಬೆಂಗಳೂರು

ನಗರಸಭಾ ಕಾರ್ಯಾಲಯ,
ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ
ದೂರವಾಣಿ:08158–254404 ಫ್ಯಾಕ್ಸ್:08158–254405
ಇ–ಮೇಲ್: itstaff_ulb_sidlaghatta@yahoo.co.in
ವೆಬ್‌ಸೈಟ್: www.Shidlghattacity.mrc.gov.in
ಸಂಖ್ಯೆ:ನಕಾಶಿ/ಕಿಅ/ಸಿಆರ್/ಟೆಂಡರ್–09/2021–22 ದಿನಾಂಕ:22.10.2021

ಮರು ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಶಿಡ್ಲಘಟ್ಟ ನಗರಸಭೆಗೆ ಬಿಡುಗಡೆಯಾಗಿರುವ ಸ್ವಚ್ಛ ಭಾರತ್ ಮಿಷನ್‌ನ ಅನುದಾನದಲ್ಲಿ ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಿರುವ ಕ್ರಿಯಾಯೋಜನೆ ಅನುಮೋದಿತ ಕಾರ್ಯಕ್ರಮಗಳಿಗೆ ಅರ್ಹ ಸಂಸ್ಥೆಗಳಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಗಳನ್ವಯ ನಿಗಧಿತ ನಮೂನೆಯಲ್ಲಿ ಟೆಂಡರ್‌ಗಳನ್ನು ಏಕ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿದೆ. **TENDER INDENT NUMBER DMA/2021-22/OW/WORK_INDENT-119658/CALL-2** ಅಂದಾಜು **ಮೊತ್ತ 9.10** (ಲಕ್ಷಗಳಲ್ಲಿ) ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **(www.eproc.karnataka.gov.in)** ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:15.11.2021ರ 17.30 ಗಂಟೆಯೊಳಗೆ** ಹಾಗೂ ಟೆಂಡರ್ ತೆರೆಯುವ **ದಿನಾಂಕ:17.11.2021 ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳನ್ನು ನಗರಸಭೆ ವೆಬ್‌ಸೈಟ್: **www.shidlaghattacity.mrc.gov.in** ನಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ಸೂಚಿಸಿರುವ ದಿನಗಳನ್ನು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ, ಮುಂದಿನ ದಿನಗಳನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.
ಸಹಿ/– ಪೌರಾಯುಕ್ತರು, ನಗರಸಭೆ, ಶಿಡ್ಲಘಟ್ಟ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ226/ಎಂ.ಸಿ.ಎ/2021–22

ಕೋವಿಡ್-19, ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರವೀಂದ್ರ ಕಲಾಕ್ಷೇತ್ರದ ಮುಂದೆ ಗಾಯನ (ಎಡ ಚಿತ್ರ) ಬೆಂಗಳೂರಿನ ಜಯನಗರ 5ನೇ ಬ್ಲಾಕ್ ನ ಚಂದ್ರಗುಪ್ತ ಮೌರ್ಯ (ಶಾಲಿನಿ) ಕ್ರೀಡಾಂಗಣದಲ್ಲಿ ಕನ್ನಡ ಗೀತ ಗಾಯನ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಸಂಸದ ತೇಜಸ್ವಿ ಸೂರ್ಯ ಹಾಗೂ ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ ಕಲಾವಿದರು 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಗೀತೆ ಹಾಡಿ ಹೆಜ್ಜೆ ಹಾಕಿದರು

ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದ ವಿವಿಧೆಡೆ ನೆಲದಡಿಯಲ್ಲಿ ಕೇಬಲ್ ಅಳವಡಿಕೆ ಕಾಮಗಾರಿ ಮತ್ತು ನಿರ್ವಹಣಾ ಕಾರ್ಯಗಳಿಂದಾಗಿ ಅ.29 ಮತ್ತು 30ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅ.29: ಅನ್ನಪೂರ್ಣೇಶ್ವರಿ ಲೇಔಟ್, ಬಿಇಎಲ್ ಲೇಔಟ್, ಕೃಷ್ಣ ಗಾರ್ಡನ್, ದುಬಾಸಿಪಾಳ್ಯ, ಮೆಡ್‌ಸೋಲ್ ಹಾಸ್ಪಿಟಲ್ ರಸ್ತೆ, ಭುವನೇಶ್ವರಿ ನಗರ, ದೊಡ್ಡಬಸ್ತಿ ಮುಖ್ಯ ರಸ್ತೆ, ಕಲ್ಯಾಣಿ ಲೇಔಟ್, ಆರ್.ಆರ್. ಲೇಔಟ್, ಉಪಾಧ್ಯಾಯ ಲೇಔಟ್, ಮಲ್ಲತ್ತಹಳ್ಳಿ ಲೇಔಟ್, ವಿಜಯನಗರ, ಹೊಸಹಳ್ಳಿ, ಹಂಪಿನಗರ, ಮಾರೇನಹಳ್ಳಿ, ಎಂ.ಸಿ. ಲೇಔಟ್, ಗೋವಿಂದರಾಜನಗರ, ಚಂದ್ರಾ ಲೇಔಟ್, ಗಂಗೊಂಡನಹಳ್ಳಿ, ಕಾಮಾಕ್ಷಿಪಾಳ್ಯ, ಕೆ.ಜಿ.ಎಚ್.ಎಸ್. ಲೇಔಟ್, ಪಾಪರೆಡ್ಡಿಪಾಳ್ಯ, ಜಯಲಕ್ಷ್ಮಮ್ಮ ಲೇಔಟ್.

ಅ.30: ನಶಾ ಸ್ಕ್ವೇರ್, ಅಂಫಿನೋಲ್, ಟೆಕ್ನಿಕ್, ಕೆಎಸ್‌ಎಸ್‌ಐಡಿಸಿ ಕಾಂಪ್ಲೆಕ್ಸ್ ಎದುರು, ಸೈಬರ್ ಪಾರ್ಕ್, ಎಲ್ಸಿಯಾ ಆಫೀಸ್, ಐಕಲ್ ಇ-ಸಿಟಿ ಫೇಸ್-1, ಐಎಫ್‌ಐಎಂ ಕಾಲೇಜ್, ಯೋಕೊಗವಾ, ಇನ್ಫೊಸಿಸ್ ಕಾರ್ ಪಾರ್ಕಿಂಗ್, ರಾಮಕೃಷ್ಣ ಆಸ್ಪತ್ರೆ, ವಿಪ್ರೊ ಇ-ಸಿಟಿ ಫೇಸ್-2, ಇನ್‌ಟರ್ ಫ್ಲೆಕ್ಸ್, ಆರ್‌ಎಸ್‌ಎಸ್ ಎಲೆಕ್ಟ್ರಾನಿಕ್ಸ್, ಮುಗ್ ಕಂಟ್ರೋಲ್ಸ್, ಭಾರತ್ ಪೆಟ್ರೋಲ್ ಬಂಕ್, ಎನ್‌ಟಿಟಿಎಫ್, ಜಿ-ಫುನಾಕ್, ಸಿ-ಡಾಟ್, ನೀಲಾದ್ರಿ ರಸ್ತೆ, ರಾಧ ರಿಜೆಂಟ್ ಹೋಟೆಲ್, ಪಂಜಾಬ್ ಬ್ಯಾಂಕ್, ಪ್ರದೂತ್, ಸೆಲೆಬ್ರಿಟಿ ಕ್ಲಾಸಿಕ್, ಸೆಲೆಬ್ರಿಟಿ ಸಿಗ್ನೆಚರ್, ಇನ್ಫೊಟೆಕ್.

ಕೆ.ಆರ್.ಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೈದಾನದಲ್ಲಿ ಬಿಬಿಎಂಪಿ ಮಹದೇವಪುರ ವಲಯದ ವತಿಯಿಂದ 'ಕನ್ನಡಕ್ಕಾಗಿ ನಾವು' ಅಭಿಯಾನದ ಅಂಗವಾಗಿ ನಡೆದ ಕನ್ನಡ ಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ಬಿಬಿಎಂಪಿ ಮಹದೇವಪುರ ವಲಯ ಜಂಟಿ ಆಯುಕ್ತ ವೆಂಕಟಾಚಲಪತಿ, ಮುಖಂಡರಾದ ಅಂತೋಣಿಸ್ವಾಮಿ, ಶಿವಪ್ಪ, ರವಿಕುಮಾರ್ ಕೆ.ಪಿ.ಕೃಷ್ಣ ಪಾಲ್ಗೊಂಡಿದ್ದರು.

ಭಾರತ್ ಗ್ಯಾಸ್‌ನಿಂದ ಕ್ವಿಡ್ ಕಾರು ಬಹುಮಾನ

ಬೆಂಗಳೂರು: ಭಾರತ್ ಗ್ಯಾಸ್ ಕಂಪನಿಯು ಹೊಸಕೋಟೆಯ ಕೂಲಿ ಕಾರ್ಮಿಕ ಚಿಕ್ಕರಾಜಪ್ಪ ಅವರಿಗೆ ರೆನೊ ಕ್ವಿಡ್ ಕಾರನ್ನು ಬಹುಮಾನವಾಗಿ ನೀಡಿದೆ.

ಭಾರತ್ ಗ್ಯಾಸ್ ಕಂಪನಿಯ ಬೆಂಗಳೂರು ವಿಭಾಗವು ಒಂದು ಎಲ್‌ಪಿಜಿ ಸಂಪರ್ಕ ಪಡೆದವರು ಇನ್ನೊಂದು ಎಲ್‌ಪಿಜಿ ಸಂಪರ್ಕ ಪಡೆಯುವುದನ್ನು ಪ್ರೋತ್ಸಾಹಿಸಲು ಮೂರು ತಿಂಗಳ ಕಾಲ ಅಭಿಯಾನ ಹಮ್ಮಿಕೊಂಡಿತ್ತು. ಈ ಅಭಿಯಾನದಲ್ಲಿ ಒಟ್ಟು 30 ಸಾವಿರ ಗ್ರಾಹಕರು ಪಾಲ್ಗೊಂಡಿದ್ದರು.

ಎಲ್‌ಪಿಜಿ ಸಿಲಿಂಡರ್ ಬಳಸುವ ಬಡ ಗ್ರಾಹಕರಿಗೆ ಅಭಿಯಾನದ ಸಂದರ್ಭದಲ್ಲಿ ಕೂಪನ್ ವಿತರಿಸಲಾಗಿತ್ತು. ಲಕ್ಕಿ ಡ್ರಾನಲ್ಲಿ ವಿಜೇತರಾದವರಿಗೆ ಈಚೆಗೆ ಬಹುಮಾನ ವಿತರಿಸಲಾಯಿತು. ವಿಜೇತರಾದ ಒಟ್ಟು 75 ಕುಟುಂಬಗಳಿಗೆ ಕಾರು, ಸ್ಕೂಟರ್ ಸೇರಿ ಒಟ್ಟು ₹ 10 ಲಕ್ಷ ಮೌಲ್ಯದ ಬಹುಮಾನ ನೀಡಲಾಯಿತು ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಈ ವರ್ಷದ ಜನವರಿಯಿಂದ ಏಪ್ರಿಲ್ 20ರವರೆಗೆ ಅಭಿಯಾನ ನಡೆದಿತ್ತು. ಭಾರತ್ ಗ್ಯಾಸ್‌ನ ದಕ್ಷಿಣ ಭಾರತದ ಪ್ರಾದೇಶಿಕ ವಿಭಾಗದ ಎಲ್‌ಪಿಜಿ ವ್ಯವಸ್ಥಾಪಕ ಎಸ್. ಧನಪಾಲ್, ಕರ್ನಾಟಕ ವಿಭಾಗದ ಮುಖ್ಯಸ್ಥ ಮನೋಜ್ ಕುಮಾರ್ ಗುಪ್ತಾ, ಪ್ರಾದೇಶಿಕ ವ್ಯವಸ್ಥಾಪಕ ಭರತ್ ಕುಮಾರ್ ರಾಯಗರ್ ಅವರು ಬಹುಮಾನಗಳನ್ನು ನೀಡಿದರು.

ನಗರದ ಬಿಇಎಲ್ ಬಡಾವಣೆಯ ಶಾಸಕರ ಕಚೇರಿಯಲ್ಲಿ ಗುರುವಾರ 'ಕನ್ನಡಕ್ಕಾಗಿ ನಾವು' ಅಭಿಯಾನದ ಅಂಗವಾಗಿ ಹೇರೋಹಳ್ಳಿ ಬಿಬಿಎಂಪಿ ಶಾಲಾಕಾಲೇಜಿನ 80 ವಿದ್ಯಾರ್ಥಿಗಳಿಂದ ಕನ್ನಡ ಗೀತ ಗಾಯನ ಕಾರ್ಯಕ್ರಮ ನಡೆಯಿತು. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಬಿಡಿಎ ಆಯುಕ್ತ ಎಂ.ಬಿ.ರಾಜೇಶ್ ಗೌಡ, ವಿಶೇಷ ಆಯುಕ್ತ ರೆಡ್ಡಿ ಶಂಕರ್ ಬಾಬು, ಜಂಟಿ ಆಯುಕ್ತ ಡಾ.ನಾಗರಾಜ್, ಪಾಲಿಕೆ ಮಾಜಿ ಸದಸ್ಯ ರಾಜಣ್ಣ ಇದ್ದರು

ನಗರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಕನ್ನಡಕ್ಕಾಗಿ ನಾವು' ಕಾರ್ಯಕ್ರಮದ ಅಂಗವಾಗಿ ನಡೆದ ನಾಟಕೋತ್ಸವದಲ್ಲಿ 'ಸ್ವಾತಂತ್ರ್ಯ ಸಮರ ಕರುನಾಡು ಅಮರ' ನಾಟಕವನ್ನು ರಂಗ ವಿಜಯ ತಂಡದ ಕಲಾವಿದರು ಪ್ರದರ್ಶಿಸಿದರು

ಬಿಜೆಪಿ ಸರ್ಕಾರಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಪ್ರಶ್ನೆ

ಗುಂಡಿಗಳು ಅಸಂಖ್ಯ, ಅನುದಾನ ನೀಡಿದ್ದೆಷ್ಟು?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆಗಳಲ್ಲಿನ ಗುಂಡಿಗಳು ಲೆಕ್ಕಕ್ಕೆ ಸಿಗದಷ್ಟು ದು:ಸ್ಥಿತಿಗೆ ನಗರ ತಲುಪಿವೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ನಗರದ ಅಭಿವೃದ್ಧಿಗೆ ಎಷ್ಟು ಅನುದಾನ ನೀಡಿದ್ದಾರೆ ಎಂದು ಮಾಹಿತಿ ನೀಡಲಿ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, '2008ರಿಂದ 2013ರವರೆಗೆ ಅಧಿಕಾರ ಮಾಡಿದ್ದ ಬಿಜೆಪಿ, ನಗರದ ಪ್ರಮುಖ ರಸ್ತೆಗಳಲ್ಲಿ ಗುಂಡಿ ನಿರ್ಮಾಣವಾಗುವಂತೆ ಮಾಡಿತ್ತು. 2013ರಲ್ಲಿ ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ನಾನು ಬೆಂಗಳೂರು ಉಸ್ತುವಾರಿಯಾದ ಬಳಿಕ ಎಲ್ಲ ರಸ್ತೆ ಗುಂಡಿಗಳನ್ನು ಮುಚ್ಚಿಸಿದ್ದೆ' ಎಂದರು.

'ಬಿಜೆಪಿ ಅಧಿಕಾರಕ್ಕೆ ಬಂದು 2 ವರ್ಷ 5 ತಿಂಗಳಾಗಿವೆ. ಈ ಅವಧಿಯಲ್ಲಿ ಅಭಿವೃದ್ಧಿಯನ್ನೇ ಸರ್ಕಾರ ನಿರ್ಲಕ್ಷಿಸಿದೆ. ನಗರದ ರಸ್ತೆ ಸ್ಥಿತಿ ಕಂಡು ಹೈಕೋರ್ಟ್ ಛೀಮಾರಿ ಹಾಕುವಂತಾಗಿದೆ. ನಮ್ಮ ಸರ್ಕಾರ ಇದ್ದಾಗಲೂ ರಸ್ತೆಗುಂಡಿಗಳು ಇದ್ದವು. ಆದರೆ, ಹೈಕೋರ್ಟ್‌ನಿಂದ ಈ ರೀತಿ ಛೀಮಾರಿ ಹಾಕಿಸಿಕೊಳ್ಳುವಷ್ಟು ದುಸ್ಥಿತಿಗೆ ತಲುಪಿರಲಿಲ್ಲ' ಎಂದರು.

'ಸಚಿವ ಆರ್. ಅಶೋಕ, ಪಾಲಿಕೆ ಆಯುಕ್ತರು, ಸೇರಿದಂತೆ ಹಲವರು ಗುಂಡಿ ಮುಚ್ಚಲು ಗಡುವು ಕೊಟ್ಟರೂ ಇದುವರೆಗೂ ಗುಂಡಿಗಳು ಮುಚ್ಚಿಲ್ಲ. ಬೆಂಗಳೂರಿನಲ್ಲಿ 7 ಸಚಿವರಿದ್ದಾರೆ. ಅವರ ಕೈಯಲ್ಲಿ ಈ ನಗರದ ನಿರ್ವಹಣೆ ಸಾಧ್ಯವಿಲ್ಲ ಎಂಬ ಕಾರಣಕ್ಕೆ ಮುಖ್ಯಮಂತ್ರಿಗಳೇ ಬೆಂಗಳೂರು ಉಸ್ತುವಾರಿಯನ್ನು ತಮ್ಮ ಬಳಿ ಇಟ್ಟುಕೊಂಡಿದ್ದಾರೆ. ಈ ಜವಾಬ್ದಾರಿ ತಾವೇ ಇಟ್ಟುಕೊಂಡ ಮೇಲೆ ಅವರು ನಗರ ಸಂಚಾರ ಕೈಗೊಳ್ಳಬೇಕು. ಎಲ್ಲಿ ಏನೇನು ಸಮಸ್ಯೆ ಇದೆ ಎಂದು ಪರಿಶೀಲಿಸಬೇಕು' ಎಂದು ಒತ್ತಾಯಿಸಿದರು.

'ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬೆಂಗಳೂರು ಅಭಿವೃದ್ಧಿಗೆ ₹6 ಸಾವಿರ ಕೋಟಿ ಹಾಗೂ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸರ್ಕಾರ ₹1 ಸಾವಿರ ಕೋಟಿ ಕೊಟ್ಟಿದೆ. 2019-20 ಸಾಲಿನಲ್ಲಿ ಬಿಬಿಎಂಪಿಯ 198 ವಾರ್ಡ್‌ಗಳಿಗೆ ಒಂದು ರೂಪಾಯಿ ಅನುದಾನವನ್ನೂ ಕೊಟ್ಟಿಲ್ಲ. 2020-21ರಲ್ಲಿ ಬಿಬಿಎಂಪಿಯಿಂದ ಪ್ರತಿ ವಾರ್ಡ್‌ಗೆ ₹60 ಲಕ್ಷ ಘೋಷಿಸಿದ್ದು, ಇದುವರೆಗೂ ಹಣ ಬಿಡುಗಡೆ ಮಾಡಿಲ್ಲ. ಅನುದಾನ ನೀಡದೇ ರಸ್ತೆ ಗುಂಡಿ ಮುಚ್ಚಿ ಎಂದರೆ ಹೇಗೆ ಮುಚ್ಚಲು ಸಾಧ್ಯ' ಎಂದೂ ಪ್ರಶ್ನಿಸಿದರು.

ಹೆದ್ದಾರಿ ಪಕ್ಕದಲ್ಲಿದ್ದ ಚಿಪ್ಪು ಹಂದಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಚೆಪಾಳ್ಯದಿಂದ ತುಮಕೂರಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದ ಚಿಪ್ಪುಹಂದಿಯೊಂದನ್ನು ಬಿಬಿಎಂಪಿ ವನ್ಯಜೀವಿ ರಕ್ಷಕರು ಮಂಗಳವಾರ ತಡರಾತ್ರಿ ರಕ್ಷಣೆ ಮಾಡಿದ್ದಾರೆ.

'ಹೆದ್ದಾರಿ ಪಕ್ಕದಲ್ಲಿ ವಿಚಿತ್ರ ಜೀವಿ ಕಂಡು ಬಂದಿದೆ ಎಂದು ಅಂಚೆಪಾಳ್ಯದಿಂದ ಬಿಬಿಎಂಪಿ ಸಹಾಯವಾಣಿಗೆ ಯಾರೋ ಮಂಗಳವಾರ ರಾತ್ರಿ ಕರೆ ಮಾಡಿದ್ದರು. ರಾತ್ರಿ 12.30ರ ಸುಮಾರಿಗೆ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಈ ಚಿಪ್ಪುಹಂದಿ ಪತ್ತೆಯಾಯಿತು. ಅದಕ್ಕೆ ಸುಮಾರು ಎರಡೂ ವರ್ಷವಾಗಿರಬಹುದು. ಅದು ಸುಮಾರು 6 ಕೆ.ಜಿ. ತೂಗುತ್ತಿತ್ತು. ಅದು ಆರೋಗ್ಯವಾಗಿಯೇ ಇತ್ತು. ಹಾಗಾಗಿ ಅದನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಬಿಟ್ಟಿದ್ದೇವೆ' ಎಂದು ಜಿಲ್ಲೆಯ ಗೌರವ ವನ್ಯಜೀವಿ ಪರಿಪಾಲಕ ಪ್ರಸನ್ನ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಚಿಪ್ಪುಹಂದಿಗಳು ಗೆದ್ದಲುಗಳನ್ನು ತಿಂದು ಬದುಕುವ ಜೀವಿಗಳು. ಕಾಂಕ್ರೀಟ್ ಕಟ್ಟಡಗಳ ಸಂಖ್ಯೆ ಹೆಚ್ಚಿದಂತೆ ನಗರದಲ್ಲಿ ಹುತ್ತಗಳು ನಶಿಸಿವೆ. ಕಾಂಕ್ರೀಟ್ ಕಾಡಿನಿಂದಲೇ ತುಂಬಿರುವ ಬೆಂಗಳೂರಿನಲ್ಲಿ ಈ ಜೀವಿಗಳು ಬದುಕುವುದು ಕಷ್ಟ' ಎಂದು ಅವರು ಅಭಿಪ್ರಾಯಪಟ್ಟರು.

'ಚಿಪ್ಪುಗಳಿಗಾಗಿ ಈ ಜೀವಿಗಳ ಕಳ್ಳಸಾಗಣೆ ಜಾಸ್ತಿ ಆಗಿದೆ. ನಗರದ ಪೊಲೀಸರೂ ಇತ್ತೀಚೆಗೆ ಭಾರಿ ಪ್ರಮಾಣದಲ್ಲಿ ಚಿಪ್ಪುಹಂದಿ ಚಿಪ್ಪುಗಳನ್ನು ವಶಪಡಿಸಿಕೊಂಡಿದ್ದರು. ಹೆದ್ದಾರಿ ಪಕ್ಕದಲ್ಲಿ ಪತ್ತೆಯಾಗಿದ್ದು ನೋಡಿದರೆ, ಈ ಚಿಪ್ಪುಹಂದಿಯೂ ಕಳ್ಳಸಾಗಣೆಯಾಗಿರುವ ಸಾಧ್ಯತೆ ಇದೆ' ಎಂದರು.

ಸ್ತನ ಕ್ಯಾನ್ಸರ್ ಜಾಗೃತಿ ವೆಬಿನಾರ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ತನ ಕ್ಯಾನ್ಸರ್ ಜಾಗೃತಿ ಮಾಸದ ಅಂಗವಾಗಿ ಮಣಿಪಾಲ್ ಆಸ್ಪತ್ರೆಗಳ ಸಮೂಹವು 'ಯುವಜನರಲ್ಲಿ ಸ್ತನ ಕ್ಯಾನ್ಸರ್' ಎಂಬ ವಿಷಯದ ಮೇಲೆ ಶುಕ್ರವಾರ ಸಂಜೆ 5.30ಕ್ಕೆ ವೆಬಿನಾರ್ ಆಯೋಜಿಸಿದೆ.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಮಣಿಪಾಲ್ ಆಸ್ಪತ್ರೆಯ ಕ್ಯಾನ್ಸರ್ ತಜ್ಞರಾದ ಡಾ.ಸೋಮಶೇಖರ್ ಎಸ್.ಪಿ., ಡಾ.ಪೂನಂ ಪಾಟೀಲ್, ಡಾ. ಅಶೋಕ್ ಬಿ.ಸಿ. ಹಾಗೂ ಡಾ. ರೂಪಾ ಅನಂತಶಿವನ್ ಭಾಗವಹಿಸಲಿದ್ದಾರೆ.

ದೇಶದಲ್ಲಿ ಪ್ರತಿವರ್ಷ 1.7 ಲಕ್ಷ ಸ್ತನ ಕ್ಯಾನ್ಸರ್ ಪ್ರಕರಣಗಳು ಹೊಸದಾಗಿ ವರದಿಯಾಗುತ್ತಿವೆ. ರೋಗದ ಲಕ್ಷಣವನ್ನು ಬೇಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಗುಣಪಡಿಸಲು ಸಾಧ್ಯ. ತಡವಾಗಿ ಆಸ್ಪತ್ರೆಗಳಿಗೆ ತೆರಳಿದಲ್ಲಿ ಸಮಸ್ಯೆ ಉಲ್ಬಣವಾಗಿ, ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ವೆಬಿನಾರ್ ಲಿಂಕ್: https://bit.ly/3nrX3ci

ನಗರದಲ್ಲಿ ಇಂದು

ಹೀಟ್-2021: ಮೊದಲ ದ್ವೈವಾರ್ಷಿಕ ಅಂತರರಾಷ್ಟ್ರೀಯ ಸಮ್ಮೇಳನ: ಹೈಬ್ರಿಡ್ ಆ್ಯಂಡ್ ಆಟೋಮೋಟಿವ್ ಟೆಕ್ನಾಲಜಿಸ್, ಮುಖ್ಯ ಅತಿಥಿಗಳು: ಡಾ. ಕೌಶಿಕ್ ಬಸು, ಡಾ.ಎಂ.ಆರ್. ದೊರೆಸ್ವಾಮಿ, ಆಯೋಜನೆ: ಪಿ.ಇ.ಎಸ್. ವಿಶ್ವವಿದ್ಯಾಲಯ, ಗ್ಯಾರೆಟ್, ಸ್ಥಳ: ಸಮ್ಮೇಳನ ಸಭಾಂಗಣ, ಪಿ.ಇ.ಎಸ್ ವಿಶ್ವವಿದ್ಯಾಲಯ, ರಾಜರಾಜೇಶ್ವರಿ ನಗರ, ಬೆಳಿಗ್ಗೆ 9

ವಿಕಸನ: ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ವೆಬಿನಾರ್ ಸರಣಿ: ಉದ್ಘಾಟನೆ: ಪ್ರೊ.ಕೆ.ಆರ್. ವೇಣುಗೋಪಾಲ್, ಮುಖ್ಯ ಉಪನ್ಯಾಸ: ಗುರುರಾಜ ಕರಜಗಿ, ಭಾಗವಹಿಸುವವರು: ಪ್ರೊ. ಗೋಪಾಲಕೃಷ್ಣ ಜೋಶಿ, ಡಾ. ಸುಷ್ಮಾ ಬಿ., ಡಾ.ಬಿ. ಮಹದೇವನ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ; ದಿಶಾ ಭಾರತಿ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು, ಬೆಳಿಗ್ಗೆ 10



ಡಾ. ಗುರುರಾಜ ಕರಜಗಿ

'ಕನ್ನಡಕ್ಕಾಗಿ ನಾವು' ಕರ್ನಾಟಕ ರಾಜ್ಯೋತ್ಸವ ಅಭಿಯಾನ: ಉದ್ಘಾಟನೆ: ಎಸ್. ಸುರೇಶ್ ಕುಮಾರ್, ಮುಖ್ಯ ಅತಿಥಿ: ಅ. ದೇವೇಗೌಡ, ಉಪಸ್ಥಿತಿ: ಪ್ರೇಮಾ ಸಿದ್ಧರಾಜು, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಲಲಿತಮ್ಮ ಮತ್ತು ಚನ್ನಬಸಪ್ಪ ಸಭಾಂಗಣ, ಜಗದ್ಗುರು ರೇಣುಕಾಚಾರ್ಯ ಮಹಿಳಾ ಪದವಿ ಕಾಲೇಜು, ರಾಜಾಜಿನಗರ, ಬೆಳಿಗ್ಗೆ 10.30

ಪಟಾಕಿ ಶಬ್ದ ಮಾಲಿನ್ಯದ ಬಗ್ಗೆ ಜಾಗೃತಿ: ಮುಖ್ಯ ಅತಿಥಿ: ಶ್ರೀನಿವಾಸಲು, ಡಾ.ಸಿ. ಸೋಮಶೇಖರ್, ಡಾ.ಕೆ. ಆರ್. ವೇಣುಗೋಪಾಲ್, ಡಾ.ರಿತಿಕಾ ಮಂಜುಳಾ, ಎಲ್. ಭೈರಪ್ಪ, ಪಿ. ಪಳನಿ, ಎಸ್.ಆರ್. ನಟೇಶ್, ಎಂ. ಗೋಪಾಲರೆಡ್ಡಿ, ಡಾ.ಬಿ. ಆರ್. ರವಿಕಾಂತೇಗೌಡ, ಎಸ್.ಸಿ. ಗೋವಿಂದರಾಜು, ಆಯೋಜನೆ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಜ್ಯ ಯುವಚೇತನ ಯುವಜನ ಕೇಂದ್ರ, ಸ್ಥಳ: ಕಬ್ಬನ್ ಉದ್ಯಾನ, ಎನ್.ಜಿ.ಓ. ಸಭಾಂಗಣ, ಬೆಳಿಗ್ಗೆ 11.30

'ಕನ್ನಡಕ್ಕಾಗಿ ನಾವು' ವಿಶೇಷ ಅಭಿಯಾನ: ಕರ್ನಾಟಕ ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ ಹಾಗೂ ವಿಶೇಷ ಅಂಚೆ ಲಕೋಟೆ ಬಿಡುಗಡೆ: ವಿ. ಸುನಿಲ್ ಕುಮಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 4

ಜನಸ್ನೇಹಿ ವಿದ್ಯುತ್ ಸೇವೆಗಳ ಲೋಕಾರ್ಪಣೆ: ಬಸವರಾಜ ಬೊಮ್ಮಾಯಿ, ವಿ. ಸುನಿಲ್ ಕುಮಾರ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ರೇಸ್‌ಕೋರ್ಸ್ ರಸ್ತೆ, ಆನಂದರಾವ್ ವೃತ್ತ, ಸಂಜೆ 5

ಹಿರಿಯ ಲೇಖಕಿಯರ ಸಾಹಿತ್ಯ ಮಂಥನ: ದಮಯಂತಿ ನರೇಗಲ್ ಅವರ ಕೃತಿಗಳ ವಿಚಾರ ಸಂಕಿರಣ: ಪ್ರಬಂಧ ಮಂಡನೆ: ಪ್ರಜ್ಞಾ ಮತ್ತಿಹಳ್ಳಿ, ವಿಭಾ ಪುರೋಹಿತ, ಅಧ್ಯಕ್ಷತೆ: ವನಮಾಲಾ ಸಂಪನ್ನಕುಮಾರ್, ಉಪಸ್ಥಿತಿ: ದಮಯಂತಿ ನರೇಗಲ್ (ಆನ್‌ಲೈನ್ ಕಾರ್ಯಕ್ರಮ) ಸಂಜೆ 5

ಪಾರ್ಶ್ವವಾಯು ಜಾಗೃತಿ ವಾಕಥಾನ್: ವಿಶ್ವ ಪಾರ್ಶ್ವವಾಯು ದಿನದ ಪ್ರಯುಕ್ತ ಜಾಗೃತಿ, ಆಯೋಜನೆ ಹಾಗೂ ಸ್ಥಳ: ಸಾಗರ್ ಆಸ್ಪತ್ರೆ, ತಿಲಕನಗರ, ಸಂಜೆ: 6.30

ಕರ್ನಾಟಕ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೇವಾ ಕವಾಯಿತು: ಪ್ರವೀಣ್ ಸೂದ್, ಆಯೋಜನೆ: ಕೆ.ಎಸ್. ಆರ್.ಪಿ, ಸ್ಥಳ: ಕೆ.ಎಸ್.ಆರ್.ಪಿ ಕವಾಯಿತು ಮೈದಾನ, ಕೋರಮಂಗಲ, ಬೆಳಿಗ್ಗೆ 8

ಪ್ರವೀಣ್ ಸೂದ್

ಚೆಕ್ 'ಮೌಲ್ಯರಹಿತ ಕಾಗದ'ವಲ್ಲ: 'ಸುಪ್ರೀಂ'

ನವದೆಹಲಿ (ಪಿಟಿಐ): ಹಣಕಾಸು ವಹಿವಾಟಿನ ವೇಳೆ ಭದ್ರತೆಯಾಗಿ ನೀಡಲಾದ ಚೆಕ್ ಅನ್ನು ಯಾವುದೇ ಸಂದರ್ಭದಲ್ಲಿ 'ಮೌಲ್ಯರಹಿತ ಕಾಗದ' ಎಂದು ಪರಿಗಣಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಭದ್ರತೆ ಎಂಬುದು ನಿಜವಾದ ಅರ್ಥದಲ್ಲಿ ಸುರಕ್ಷತೆಯೇ. ಸಾಲಕ್ಕಾಗಿ ನೀಡಿದ ಭದ್ರತೆಯು ಪಾವತಿಗೆ ಪ್ರತಿಯಾಗಿ ಮಾಡಲಾದ ವಾಗ್ದಾನ. ಚೆಕ್ ತಿರಸ್ಕೃತಗೊಂಡಿದೆ ಎಂಬುದನ್ನು ಉದ್ದೇಶಪೂರ್ವಕವಾಗಿ ವಂಚನೆ ಮಾಡುವುದರ ಉದ್ದೇಶ ಎಂದು ಅರ್ಥೈಸಲಾಗದು ಎಂದೂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್.ಶಾ, ಎ.ಎಸ್.ಬೋಪಣ್ಣ ಅವರಿದ್ದ ನ್ಯಾಯಪೀಠವು, 'ನೀಡಲಾಗಿರುವ, ಠೇವಣಿ ಇರಿಸಲಾದ ಅಥವಾ ಖಾತರಿಯಾಗಿ ನೀಡಲಾದ ಚೆಕ್ ಕೆಲ ಉದ್ದೇಶಗಳನ್ನು ಈಡೇರಿಸಲಿದೆ. ಇದಕ್ಕೆ ವಹಿವಾಟಿನಲ್ಲಿ ಭಾಗಿಯಾದ ಉಭಯತ್ರರು ಬದ್ಧರಾಗಿರಬೇಕು' ಎಂದು ಹೇಳಿತು.

ಒಂದು ವೇಳೆ ಹೀಗೇ ನೀಡಲಾದ ಚೆಕ್ ತಿರಸ್ಕೃತಗೊಂಡಲ್ಲಿ ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆಯ ಸೆಕ್ಷನ್ 138ರ ಅನುಸಾರ ಅಗತ್ಯ ಕ್ರಮಗಳು ಮುಂದುವರಿಯಲಿವೆ ಎಂದು ಹೇಳಿತು.

ಈ ಸಂಬಂಧ ಜಾರ್ಖಂಡ್ ಹೈಕೋರ್ಟ್‌ನ ಡಿ.17, 2019ರ ಆದೇಶವನ್ನು ಅನೂರ್ಜಿತಗೊಳಿಸಿದ ಸುಪ್ರೀಂ ಕೋರ್ಟ್, ಅದಕ್ಕೆ ಮುನ್ನ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನ ಆದೇಶವನ್ನು ಮರುಸ್ಥಾಪಿಸಿತು.

ದಾಲ್‌ತೊಂಗಾನಿ ನಿವಾಸಿ ಶ್ರೀಪತಿ ಸಿಂಗ್ (ನಿಧನರಾಗಿದ್ದಾರೆ) ಅವರು ಹಿತೇಶ್ ಕುಮಾರ್ ಜೈನ್ ಎಂಬವರಿಗೆ ₹ 2 ಕೋಟಿ ಸಾಲ ನೀಡಿದ್ದ ಪ್ರಕರಣಕ್ಕೆ ಸಂಬಂಧಿಸಿದ್ದಾಗಿತ್ತು. ಶ್ರೀಪತಿ ಸಿಂಗ್ ಬದಲಾಗಿ ಅವರ ಪುತ್ರ ಗೌರವ್ ಸಿಂಗ್ ಪ್ರಕರಣವನ್ನು ಪ್ರತಿನಿಧಿಸುತ್ತಿದ್ದಾರೆ.

ಪಡೆದ ಸಾಲವವನ್ನು ಜೂನ್/ಜುಲೈ 2015ರಲ್ಲಿ ಪಾವತಿಸಲಾಗುವುದು ಎಂದು ಹೇಳಿದ್ದ ಜೈನ್ ಖಾತರಿಯಾಗಿ ₹ 1 ಕೋಟಿಗೆ ಖಾತರಿಯಾಗಿ ಮೂರು ಚೆಕ್ ನೀಡಿದ್ದರು. ಬಳಿಕ ಮತ್ತೆ ಮೂರು ಚೆಕ್ ನೀಡಿದ್ದರು. ನೀಡಿದ್ದ ಸಮಯಕ್ಕೆ ಸರಿಯಾಗಿ ಸಿಂಗ್ ಅವರು ಚೆಕ್ ಅನ್ನು ಬ್ಯಾಂಕ್‌ಗೆ ನೀಡಿದ್ದರು. ಆದರೆ, ಅದು ತಿರಸ್ಕೃತಗೊಂಡಿತ್ತು.

ಹಣ ನೀಡದಿದ್ದಾಗ ಸಿಂಗ್, ಜೈನ್ ವಿರುದ್ಧ ಸ್ಥಳೀಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಮ್ಯಾಜಿಸ್ಟ್ರೇಟ್ ಕೋರ್ಟ್ ಸಮನ್ಸ್ ನೀಡಿದ್ದನ್ನು ಪ್ರಶ್ನಿಸಿ ಜೈನ್ ಹೈಕೋರ್ಟ್ ಮೊರೆ ಹೋಗಿದ್ದರು.

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 CIN: L85110KA1924PLC001128 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com



ದಿನಾಂಕ 30ನೇ ಸೆಪ್ಟೆಂಬರ್ 2021 ಕ್ಕೆ ಅಂತ್ಯಗೊಂಡ ಸ್ವತಂತ್ರ ಅಪರಿಶೋಧಿತ ತ್ರೈಮಾಸಿಕ / ಅರ್ಧವಾರ್ಷಿಕ ಹಣಕಾಸು ಫಲಿತಾಂಶಗಳು (₹ ಕೋಟಿಗಳಲ್ಲಿ)

ವಿವರಗಳು	30.09.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	30.09.2020 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	30.09.2021 ಕ್ಕೆ ಅಂತ್ಯಗೊಂಡ ಅರ್ಧವಾರ್ಷಿಕ (ಅಪರಿಶೋಧಿತ)	30.09.2020 ಕ್ಕೆ ಅಂತ್ಯಗೊಂಡ ಅರ್ಧವಾರ್ಷಿಕ (ಅಪರಿಶೋಧಿತ)	31.03.2021 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)
ಒಟ್ಟು ನಿರ್ವಹಣಾ ಆದಾಯ (ನಿವ್ವಳ)	1725.15	1880.35	3455.17	3993.57	7465.06
ನಿವ್ವಳ ಲಾಭ / (ನಷ್ಟ) ಪ್ರಸಕ್ತ ಸಾಲಿನಲ್ಲಿ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ಮೊದಲು)	146.39	178.30	192.53	346.27	611.93
ನಿವ್ವಳ ಲಾಭ /(ನಷ್ಟ) ತೆರಿಗೆಗೂ ಮುನ್ನ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	146.39	178.30	192.53	346.27	611.93
ನಿವ್ವಳ ಲಾಭ /(ನಷ್ಟ) ಪ್ರಸಕ್ತ ಸಾಲಿನಲ್ಲಿ ತೆರಿಗೆಯ ನಂತರ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	125.61	119.44	231.69	315.82	482.57
ಪಾವತಿಸಲಾದ ಈಕ್ವಿಟಿ ಷೇರು ಬಂಡವಾಳ	310.88	310.88	310.88	310.88	310.88
ಮೀಸಲುಗಳು (ಮರು ಮೌಲ್ಯಾಂಕನ ಮೀಸಲುಗಳನ್ನು ಹೊರತುಪಡಿಸಿ)	5812.59	5381.21	5812.59	5381.21	5866.14
ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ	1255.01	1255.04	1255.01	1255.04	1255.01
ನಿವ್ವಳ ಸಂಪತ್ತು	6123.47	5692.09	6123.47	5692.09	6177.02
ಪಾವತಿಯಾದ ಸಾಲ ಬಂಡವಾಳ / ಬಾಕಿ ಇರುವ ಸಾಲ	970.00	970.00	970.00	970.00	970.00
ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ / ಡಿಬೆಂಚರ್ ರಿಡೆಂಪ್ಷನ್ ರಿಸರ್ವ್	Nil	Nil	Nil	Nil	Nil
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)	0.16	0.23	0.16	0.23	0.19
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)					
ಮೂಲಭೂತ (ಬೇಸಿಕ್)	4.04*	3.84*	7.45*	10.16*	15.52
ಡೈಲ್ಯೂಟೆಡ್	4.02*	3.84*	7.42*	10.16*	15.48

ದಿನಾಂಕ 30ನೇ ಸೆಪ್ಟೆಂಬರ್ 2021 ಕ್ಕೆ ಅಂತ್ಯಗೊಂಡ ಕ್ರೋಢೀಕರಿಸಿದ ಅಪರಿಶೋಧಿತ ತ್ರೈಮಾಸಿಕ / ಅರ್ಧವಾರ್ಷಿಕ ಹಣಕಾಸು ಫಲಿತಾಂಶಗಳು (₹ ಕೋಟಿಗಳಲ್ಲಿ)

ವಿವರಗಳು	30.09.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	30.09.2020 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	30.09.2021 ಕ್ಕೆ ಅಂತ್ಯಗೊಂಡ ಅರ್ಧವಾರ್ಷಿಕ (ಅಪರಿಶೋಧಿತ)	30.09.2020 ಕ್ಕೆ ಅಂತ್ಯಗೊಂಡ ಅರ್ಧವಾರ್ಷಿಕ (ಅಪರಿಶೋಧಿತ)	31.03.2021 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)
ಒಟ್ಟು ನಿರ್ವಹಣಾ ಆದಾಯ (ನಿವ್ವಳ)	1725.09	1880.35	3455.11	3993.57	7465.06
ನಿವ್ವಳ ಲಾಭ / (ನಷ್ಟ) ಪ್ರಸಕ್ತ ಸಾಲಿನಲ್ಲಿ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ಮೊದಲು)	146.24	178.21	192.20	346.18	611.82
ನಿವ್ವಳ ಲಾಭ /(ನಷ್ಟ) ತೆರಿಗೆಗೂ ಮುನ್ನ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	146.24	178.21	192.20	346.18	611.82
ನಿವ್ವಳ ಲಾಭ /(ನಷ್ಟ) ಪ್ರಸಕ್ತ ಸಾಲಿನಲ್ಲಿ ತೆರಿಗೆಯ ನಂತರ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	125.45	119.35	231.36	315.73	482.46
ಪಾವತಿಸಲಾದ ಈಕ್ವಿಟಿ ಷೇರು ಬಂಡವಾಳ	310.88	310.88	310.88	310.88	310.88
ಮೀಸಲುಗಳು (ಮರು ಮೌಲ್ಯಾಂಕನ ಮೀಸಲುಗಳನ್ನು ಹೊರತುಪಡಿಸಿ)	5812.48	5381.21	5812.48	5381.21	5866.03
ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ	1255.01	1255.04	1255.01	1255.04	1255.01
ನಿವ್ವಳ ಸಂಪತ್ತು	6123.35	5692.09	6123.35	5692.09	6176.91
ಪಾವತಿಯಾದ ಸಾಲ ಬಂಡವಾಳ / ಬಾಕಿ ಇರುವ ಸಾಲ	970.00	970.00	970.00	970.00	970.00
ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ / ಡಿಬೆಂಚರ್ ರಿಡೆಂಪ್ಷನ್ ರಿಸರ್ವ್	Nil	Nil	Nil	Nil	Nil
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)	0.16	0.23	0.16	0.23	0.19
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)					
ಮೂಲಭೂತ (ಬೇಸಿಕ್)	4.04*	3.84*	7.44*	10.16*	15.52
ಡೈಲ್ಯೂಟೆಡ್	4.02*	3.84*	7.41*	10.16*	15.48

* ವಾರ್ಷಿಕವಲ್ಲ.

ಮೇಲಿನ ವಿವರಗಳು SEBI (ಸೆಬಿ) (ಲಿಸ್ಟಿಂಗ್ ಮತ್ತು ಇತರ ಪ್ರಕಟಣೆ ಅಗತ್ಯತೆಗಳು) ನಿಯಮಾವಳಿ 2015 ರ ನಿಯಮ 33 ರ ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ಸೆಪ್ಟೆಂಬರ್ 30, 2021 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ಸೆಪ್ಟೆಂಬರ್ 30, 2021ಕ್ಕೆ ಅಂತ್ಯಗೊಂಡ ಫಲಿತಾಂಶಗಳ ಎಲ್ಲಾ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ BSE: http://www.bseindia.com, NSE: http://www.nseindia.com, ಮತ್ತು ಬ್ಯಾಂಕಿನ ವೆಬ್‌ಸೈಟ್ https://www.karnatakaBank.com/index.jsp. ನಲ್ಲಿ ಲಭ್ಯವಿದೆ.

ಸ್ಥಳ : ಮಂಗಳೂರು
ದಿನಾಂಕ : 28.10.2021

ಆಡಳಿತ ಮಂಡಳಿಯ ನಿರ್ದೇಶಕರುಗಳ ಪರವಾಗಿ
ಸಹಿ/-
ಮಹಾಬಲೇಶ್ವರ ಎಂ.ಎಸ್.
ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ

ದತ್ತು ಪಡೆದು ಮೂಕಜೀವಿಗೊಂದು ಆಶ್ರಯ ನೀಡಿ
ಮೂಕಜೀವಿ ಹಿಂಸೆ ವಿರುದ್ಧ ನಿಮ್ಮ ಧ್ವನಿ ಎತ್ತಿ
ಕ್ಯೂಪದೊಂದಿಗೆ ಸ್ವಯಂಸೇವೆಗೆ ಸೇರಿ ಮೂಕಜೀವಿಗಳ ಸಂರಕ್ಷಣೆಗೆ ನೆರವಾಗಿ

ಹೆಚ್ಚಿನ ಮಾಹಿತಿಗಾಗಿ bit.ly/PVCUPAಗೆ ಭೇಟಿ ಕೊಡಿ ಅಥವಾ QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ಪ್ರಜಾವಾಣಿ Compassion Unlimited Plus Action CUPA ಮೂಕ ಕಥೆಗಳು
ಕಾಯುವ ಕೈ ಎಂದೆಂದಿಗೂ ಮೇಲು

ಸಚಿವರ ಕಾರ್ಯಕ್ರಮಕ್ಕೆ ನುಗ್ಗಲು ಯತ್ನ: ಬಂಧನ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಹೊಸ ಶಿಕ್ಷಣ ನೀತಿ (ಎನ್‌ಇಪಿ) ವಿರುದ್ಧ ಪ್ರತಿಭಟಿಸಿ ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ್ ಭಾಗವಹಿಸಿದ್ದ ಕಾರ್ಯಕ್ರಮಕ್ಕೆ ನುಗ್ಗಲು ಯತ್ನಿಸಿದ 'ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ' (ಸಿಎಫ್‌ಐ) ವಿದ್ಯಾರ್ಥಿ ಸಂಘಟನೆ ಕಾರ್ಯಕರ್ತರನ್ನು ಪೊಲೀಸರು ಹರಸಾಹಸ ಮಾಡಿ ಬಂಧಿಸಿದರು.

ಹೊಸ ಶಿಕ್ಷಣ ನೀತಿ ಕುರಿತು ಬಳ್ಳಾರಿ ತಾಂತ್ರಿಕ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ (ಬಿಐಟಿಎಂ) ಗುರುವಾರ ಏರ್ಪಡಿಸಿದ್ದ ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವರು ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ ನುಗ್ಗಲು ವಿದ್ಯಾರ್ಥಿಗಳು ಯತ್ನಿಸಿದಾಗ ಪೊಲೀಸರು ಬಂಧಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಬಂಧಿಸಲು ಪೊಲೀಸರು ಹರಸಾಹಸ ಮಾಡಿದರು. ಬಂಧನದಿಂದ ತಪ್ಪಿಸಿಕೊಳ್ಳಲು ನೆಲದ ಮೇಲೆ ಹೊರಳಾಡಿದ ಪ್ರತಿಭಟನಾಕಾರರನ್ನು ಹಿಡಿದು ದರದರನೆ ಎಳೆದೊಯ್ದರು.

ಬಿಐಟಿಎಂ ಕಾಲೇಜಿಗೆ ಪ್ರತಿಭಟನಾಕಾರರು ಮೆರವಣಿಗೆಯಲ್ಲಿ ಬಂದರು. ಆರಂಭದಲ್ಲಿ ಬೆರಳೆಣಿಕೆಯಷ್ಟು ಪೊಲೀಸರು ಇದ್ದುದ್ದರಿಂದ ವಿದ್ಯಾರ್ಥಿಗಳನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಬಳಿಕ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ಕರೆಸಲಾಯಿತು. ಕುಡುತಿನಿ ಮತ್ತು ಕುರುಗೋಡುಗಳಿಂದಲೂ ಅಧಿಕಾರಿಗಳು ಧಾವಿಸಿದರು.

ಬಳ್ಳಾರಿ ಬಿಐಟಿಎಂ ಕಾಲೇಜು ಮುಂದೆ ಗುರುವಾರ ಹೊಸ ಶಿಕ್ಷಣ ನೀತಿ ವಿರುದ್ಧ ಪ್ರತಿಭಟಿಸಿದ ಸಿಎಫ್‌ಐ ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿ ದರದರನೆ ಎಳೆದೊಯ್ದರು ಪ್ರಜಾವಾಣಿ ಚಿತ್ರ

'ಬಂಧನದ ಸಮಯದಲ್ಲಿ ತಮ್ಮ ಮೇಲೆ ಪೊಲೀಸರು ಹಲ್ಲೆ ಮಾಡಿದರು. ಶಾಂತಿಯುತ ಪ್ರತಿಭಟನೆಗೆ ಅವಕಾಶ ನೀಡಲಿಲ್ಲ' ಎಂದು ವಿದ್ಯಾರ್ಥಿ ಮುಖಂಡ ಹಬೀಬ್ 'ಪ್ರಜಾವಾಣಿ'ಗೆ ತಿಳಿಸಿದರು. ಮಂಗಳೂರು ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ವಿದ್ಯಾರ್ಥಿಗಳು ಪ್ರತಿಭಟನೆಗೆ ಬಂದಿದ್ದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಎಫ್‌ಐ ರಾಜ್ಯ ಸಮಿತಿ ಸದಸ್ಯ ಸಿರಾಜ್, 'ಎನ್‌ಇಪಿ' ಮನುವಾದಿ ನಿಲುವನ್ನು ಪ್ರತಿಪಾದಿಸುತ್ತಿದೆ. ಇದರಿಂದ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಹಾಗೂ ಸಾಮಾನ್ಯ ವಿದ್ಯಾರ್ಥಿಗಳಿಗೆ ತೊಂದರೆ ಆಗಲಿದೆ' ಎಂದು ಎಚ್ಚರಿಕೆ ನೀಡಿದರು.

'ಎನ್‌ಇಪಿಯಲ್ಲಿ ಇತಿಹಾಸ ತಿರುಚಲಾಗಿದೆ. ಮಧ್ಯಕಾಲೀನ ಇತಿಹಾಸದಲ್ಲಿ ಮುಸ್ಲಿಮರು, ಬೌದ್ಧ ಮತ್ತು ಜೈನ ರಾಜರು ಹೆಚ್ಚಿದ್ದಾರೆ. ಈ ಕಾರಣಕ್ಕೆ ಮಧ್ಯಕಾಲೀನ ಇತಿಹಾಸ ತೆಗೆದುಹಾಕಲಾಗಿದೆ. ' ಎಂದು ಅವರು ಟೀಕಿಸಿದರು.

'ಎನ್‌ಇಪಿ ಮೌಢ್ಯ ಬೋಧಿಸುತ್ತದೆ. ಮೌಲ್ಯಯುತ ಶಿಕ್ಷಣಕ್ಕೆ ಇಲ್ಲಿ ಅವಕಾಶವಿಲ್ಲ. ಕೂಡಲೇ ಇದನ್ನು ಹಿಂಪಡೆಯಬೇಕು. ' ಎಂದು ಆಗ್ರಹಿಸಿದರು. ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ಜಿಲ್ಲಾ ಸಮಿತಿ ಅಧ್ಯಕ್ಷ ಸೊಹೇಲ್ ಪ್ರತಿಭಟನೆ ನೇತೃತ್ವ ವಹಿಸಿದ್ದರು.

'ವಿದೇಶಿ ಮಿಷನರಿಗಳಿಂದ ಹಿಂದೂಗಳ ಮತಾಂತರ'

ಪ್ರಜಾವಾಣಿ ವಾರ್ತೆ

ಯಾದಗಿರಿ: 'ಹಿಂದೂ ಸಂಸ್ಕೃತಿ, ದೇವಾಲಯಗಳ ಮೇಲೆ ದೌರ್ಜನ್ಯ ನಡೆದಿರುವುದು ನೋವಿನ ಸಂಗತಿ. ಹಿಂದೂಗಳನ್ನು ಮತಾಂತರಗೊಳಿಸಲು ಕೆಲ ವಿದೇಶಿ ಮಿಷನರಿಗಳು ಪ್ರಯತ್ನಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ' ಎಂದು ಬಾಳೆಹೊನ್ನೂರಿನ ರಂಭಾಪುರಿ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜಾತಿ ಆಧಾರಿತ ಮೀಸಲಾತಿಯಿಂದ ಕಡು ಬಡವರಿಗೆ ಅನ್ಯಾಯ ವಾಗುತ್ತದೆ. ಕೇವಲ ವೋಟ್ ಬ್ಯಾಂಕ್‌ಗಾಗಿ ಜಾತಿಗಳನ್ನು ಓಲೈಸಬಾರದು. ಜಾತಿ, ಮತ ಎನ್ನದೇ ಆರ್ಥಿಕ ಮಾನದಂಡ ಅನುಸರಿಸಿ ಎಲ್ಲರನ್ನೂ ಮೇಲ್ಮಟ್ಟಕ್ಕೆ ಒಯ್ಯಲು ರಾಜಕಾರಣಿಗಳು ಯತ್ನಿಸಬೇಕು' ಎಂದರು.

'ಹಿಂದೂಗಳಿಗೆ ಗೋವು ಅತ್ಯಂತ ಪವಿತ್ರ. ದೀಪಾವಳಿ ಪಾಡ್ಯಮಿ ದಿನ ರಾಜ್ಯ ಸರ್ಕಾರ ಗೋಪೂಜೆ ಮಾಡುವಂತೆ ನಿರ್ದೇಶನ ನೀಡಿದ್ದನ್ನು ತುಂಬು ಹೃದಯದಿಂದ ಸ್ವಾಗತಿಸುವೆ' ಎಂದರು.

ಮತಾಂತರ: 25 ವರ್ಷಗಳ ಮಾಹಿತಿಗೆ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರವಾಗಿರುವವರ ಕುರಿತು 25 ವರ್ಷಗಳ ಮಾಹಿತಿ ನೀಡಬೇಕು ಎಂದು ಕರ್ನಾಟಕ ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ವಿವಿಧ ಇಲಾಖೆಗಳಿಗೆ ಸೂಚಿಸಿದೆ.

ಸಮಾಜ ಕಲ್ಯಾಣ ಇಲಾಖೆ, ಪೊಲೀಸ್, ಕಂದಾಯ ಇಲಾಖೆಗಳು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಿಂದ ಈ ಮಾಹಿತಿಯನ್ನು ಸಂಗ್ರಹಿಸಿ, ವರದಿ ತಯಾರಿಸಿ ಸಮಿತಿಗೆ ಒಪ್ಪಿಸಬೇಕು ಎಂದೂ ಹೇಳಿದೆ.

ರಾಜ್ಯದಲ್ಲಿ 2016 ರಿಂದ 2021 ರ ಅವಧಿಯಲ್ಲಿ ದಾಖಲಾದ ಒಟ್ಟು 36 ಪ್ರಕರಣಗಳ ಪ್ರಗತಿ ಹಾಗೂ ಕಾನೂನು ವಿಚಾರಣೆ ಹಂತದಲ್ಲಿ ಶಿಕ್ಷೆಯಾಗಿರುವ ಪ್ರಕರಣಗಳ ಮಾಹಿತಿ ನೀಡಬೇಕು. 2019 ರಲ್ಲಿ ಉಡುಪಿಯಲ್ಲಿ ನಡೆದ ಮತಾಂತರಕ್ಕೆ ಸಂಬಂಧಿಸಿದಂತೆ ದೂರನ್ನು ರದ್ದು ಮಾಡುವಂತೆ ಹೈಕೋರ್ಟ್ ಆದೇಶ ನೀಡಿದೆ. ಇವೆಲ್ಲದರ ಮಾಹಿತಿಯನ್ನು ಗೃಹ ಇಲಾಖೆಯಿಂದ ಸಂಗ್ರಹಿಸಿ ಕೊಡುವಂತೆಯೂ ಸೂಚಿಸಲಾಗಿದೆ.

ಬಲವಂತವಾಗಿ ಬೇರೆ ಧರ್ಮಕ್ಕೆ ಮತಾಂತರ ಮಾಡಿರುವ ವಿಚಾರವಾಗಿ ಬಂದಿರುವ ದೂರುಗಳ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡು ಕ್ರಮ ಕೈಗೊಂಡಿರುವ ಬಗ್ಗೆ ಗೃಹ ಇಲಾಖೆಯಿಂದ ಮಾಹಿತಿ ಸಂಗ್ರಹಿಸಬೇಕು. ಚಿತ್ರದುರ್ಗ ಜಿಲ್ಲೆಯ ಬೆಥೆಲ್ ಬ್ಯಾಪ್ಟಿಸ್ಟ್ ಚರ್ಚಿನ ವಿವರವಾದ ಮಾಹಿತಿ ಒದಗಿಸಿ ನೀಡಬೇಕು.

ಅಧಿಕೃತ ಮತ್ತು ಕಾನೂನಾತ್ಮಕವಾಗಿ ನಡೆಸುತ್ತಿರುವಂತಹ ಚರ್ಚ್‌ಗಳಿಗೆ ಯಾವುದೇ ತೊಂದರೆ ಆಗದಂತೆ ಮೇಲ್ಕಂಡ ಹೆಚ್ಚುವರಿ ಮಾಹಿತಿಯನ್ನು ವಿವಿಧ ಇಲಾಖೆಗಳಿಂದ ಸಂಗ್ರಹಿಸಿ 30 ದಿನಗಳ ಒಳಗೆ ವರದಿ ಸಲ್ಲಿಸಬೇಕು ಎಂದು ಸಮಿತಿಯ ಸೂಚನೆಯ ಅನ್ವಯ ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

Council of Scientific and Industrial Research
CSIR Fourth Paradigm Institute (CSIR- 4PI)
NAL Belur Campus, Wind Tunnel Road, Bengaluru - 560 037, Karnataka, INDIA.

RECRUITMENT NOTIFICATION

Advt. No.1/2021 Dated 29.10.2021

CSIR-Fourth Paradigm Institute (CSIR-4PI) is a premier research Institute under the Council of Scientific and Industrial Research (CSIR) which is an Autonomous Body under Ministry of Science & Technology, Government of India. CSIR-4PI invites Online applications from Indian Nationals for filling up the following Administrative positions:

Post Code	Post	No. of posts & Reservation	Scale of Pay in PB-1
AD-01	Junior Secretariat Assistant (Gen. Admin. and Stores & Purchase)	04 posts (Gen. Admin - 03 UR S&P - 01 UR	Pay in the level matrix 2 of 7th CPC (₹19900 - ₹63200)
AD-02	Junior Secretariat Assistant (F&A)	01 Post - UR	Pay in the level matrix 2 of 7th CPC (₹19900 - ₹63200)
AD-03	Junior Stenographer (English)	02 Posts - UR	Pay in the level matrix 4 of 7th CPC (₹25500 - ₹81100)

For applying online and for complete details of advertisement including qualification, selection procedure, etc., please visit our website: **www.csir4pi.in** Last date for receipt of online applications : **27.11.2021**

Sd/-
Controller of Administration

ಏಷ್ಯಾದ ಅತಿ ದೊಡ್ಡ ಟೆಕ್ ಸಮ್ಮಿಟ್‌ಗೆ ಸಿದ್ಧರಾಗಿ

ಕರ್ನಾಟಕ ಸರ್ಕಾರ
ಎಲೆಕ್ಟ್ರಾನಿಕ್ಸ್, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

Azadi Ka Amrit Mahotsav | K-tech | STPI





ಶ್ರೀ ಬಸವರಾಜ ಎಸ್ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

BTS2021
BENGALURU TECH SUMMIT
17 ರಿಂದ 19ನೇ • ನವೆಂಬರ್ 2021

DRIVING THE NEXT

ಕರ್ನಾಟಕ ಸರ್ಕಾರದ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಆಯೋಜಿಸಿರುವ ಏಷ್ಯಾದ ಅತೀ ದೊಡ್ಡ ಟೆಕ್ ಸಮ್ಮಿಟ್ ಆದ 24 ನೇ ಆವೃತ್ತಿಯ **ಬೆಂಗಳೂರು ಟೆಕ್ ಸಮ್ಮಿಟ್** [ಬಿಟಿಎಸ್] ನವೆಂಬರ್ 17 ರಿಂದ 19 ರ ವರೆಗೆ ನಡೆಯಲಿದ್ದು, ದೇಶ – ವಿದೇಶಗಳಿಂದ ವಿಶ್ವ ನಾಯಕರು ಈ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. 30 ಕ್ಕೂ ಹೆಚ್ಚು ದೇಶಗಳು ತಮ್ಮ ನಿಯೋಗಗಳೊಂದಿಗೆ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ಬಿಟಿಎಸ್:2021 ಸಮ್ಮೇಳನದಲ್ಲಿ ಪ್ರಮುಖ ತಂತ್ರಜ್ಞಾನಗಳಾದ ಎಲೆಕ್ಟ್ರಾನಿಕ್, ಮಾಹಿತಿ ತಂತ್ರಜ್ಞಾನ, ಡೀಪ್ ಟೆಕ್, ಮತ್ತು ಜೈವಿಕ ತಂತ್ರಜ್ಞಾನದ ವಿಚಾರಗಳ ಬಗ್ಗೆ "**ಡ್ರೈವಿಂಗ್ ದಿ ನೆಕ್ಸ್ಟ್** " ಎಂಬ ಥೀಮ್‌ರೊಂದಿಗೆ ಚರ್ಚೆಗಳು ನಡೆಯಲಿವೆ. ಕೋವಿಡ್ ಸಾಂಕ್ರಾಮಿಕದ ದೃಷ್ಟಿಯಿಂದ ಈ ಸಮ್ಮೇಳನವನ್ನು ವರ್ಚುವಲ್ ಆಗಿ ಆಯೋಜಿಸಲಾಗುತ್ತಿದೆ.

ಈ ಸಮ್ಮೇಳನದಲ್ಲಿ ಭಾಗವಹಿಸಿ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಿ.

ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖಾ ಸಚಿವರಾದ **ಡಾ. ಸಿ.ಎನ್. ಅಶ್ವತ್ಥನಾರಾಯಣ್** ರವರು **ಶ್ರೀ ಕ್ರಿಸ್ ಗೋಪಾಲಕೃಷ್ಣನ್**, ಅಧ್ಯಕ್ಷರು ವಿಷನ್ ಗ್ರೂಪ್, ಐಟಿ ಮತ್ತು **ಡಾ.ಕಿರಣ್ ಮಜುಂದಾರ್ ಷಾ**, ಅಧ್ಯಕ್ಷರು ವಿಷನ್ ಗ್ರೂಪ್, ಬಿಟಿ ರವರ ಜೊತೆ.

ಬಿಟಿಎಸ್ 2021 - ಕಾರ್ಯಕ್ರಮ ವಿಷಯಗಳು

ಮಲ್ಟಿ-ಟ್ರ್ಯಾಕ್ ಕಾನ್ಫರೆನ್ಸ್	ಇಂಟರ್‌ನ್ಯಾಷನಲ್ ಎಕ್ಸಿಬಿಷನ್	ಗ್ಲೋಬಲ್ ಇನ್ನೋವೇಷನ್ ಅಲೈಯನ್ಸ್
ಇಂಡಿಯಾ-ಯುಎಸ್ ಟೆಕ್ ಕಾನ್‌ಕ್ಲೇವ್	ಆರ್&ಡಿ (ಲ್ಯಾಬ್ ಟು ಮಾರ್ಕೆಟ್)	ಇಂಡಿಯಾ ಇನ್ನೋವೇಷನ್ ಅಲೈಯನ್ಸ್
ಎಸ್‌ಟಿಪಿಐ ಐಟಿ ಎಕ್ಸ್‌ಪೋರ್ಟ್ ಅವಾರ್ಡ್ಸ್	ಸ್ಟಾರ್ಟ್‌ಅಪ್ ಯೂನಿಕಾರ್ನ್ - ಫೆಲಿಸಿಟೇಷನ್	ಸ್ಮಾರ್ಟ್ ಬಯೋ ಅವಾರ್ಡ್ಸ್ & ಬಯೋ ಪೋಸ್ಟರ್
ರೂರಲ್ ಐಟಿ ಕ್ವಿಜ್ ಮತ್ತು ಬಯೋ ಕ್ವಿಜ್	ಸೈನ್ಸ್ ಗ್ಯಾಲರಿ	ಬಿ2ಬಿ ಮೀಟಿಂಗ್ಸ್

ವರ್ಚುವಲ್ ಈವೆಂಟ್

30+	75+	300+	300+	5000+	20000+	500000+
ದೇಶಗಳು	ಗೋಷ್ಠಿಗಳು	ಭಾಷಣಕಾರರು	ಪ್ರದರ್ಶಕರು	ನವೋದ್ಯಮಿಗಳು	ಪ್ರತಿನಿಧಿಗಳು	ಪ್ರೇಕ್ಷಕರು

ಹೆಚ್ಚಿನ ಮಾಹಿತಿಗಾಗಿ : ಭವ್ಯ • +91 97392 11804 | ನಿಮ್ಮ ಬೂತ್ ಬುಕ್ ಮಾಡಲು : ಅಂಬಿಕಾ • +91 95359 99435

enquiry@bengalurutechsummit.com | www.bengalurutechsummit.com

#DrivingTheNext #BTS2021

Honda Motorcycle & Scooter India Pvt. Ltd., Registered Office: Commercial Complex II, Sector – 49-50, Golf Course Extension Road, Gurugram – 122018 (Haryana), India; **Website:** www.honda2wheelersindia.com; **Customer Care:** customercare@honda2wheelersindia.com

Finance Scheme offers are available through select preferred finance partners on select models for select profile of customers at their sole discretion and is subject to Finance Company Policy. No two offers can be clubbed together. Cashback offer mentioned is 5% Cashback up to Rs.5000 per card on Minimum Transaction of Rs.50000, applicable only on EMI transaction via select SBI Credit Cards, once per month during the offer period. Scheme validity from 1st September to 30th November 2021. Schemes & offers available at select Dealerships only & can be withdrawn at any time without prior notice. ##Rs.5 Lakh Personal Accident Cover applicable on purchase of Honda Joy Club Loyalty membership. All Claims will settle as per policy & guidelines of insurance company. For more details, please call on HJC helpdesk 18005322555. *Terms & Conditions apply. Product shown in the picture may vary from the actual product available in the market. Accessories shown in the product are not part of the standard equipment.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSUR ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 25320623, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397; Haiku Honda - **DOMLUR:** 49656565, 9342432156; **INDIRANAGAR:** 9343796289, 080 - 41133737; Dhruvdesh Honda - **MEKHRI CIRCLE:** 40500700, 9972237311; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 26574467/68, 9844502222; **BANSHANKARI:** 9844502444, 8722279009; **R.R. NAGAR:** 9964388333, 9071174800; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BANNERAGHATTA RD:** 08068818881; **KANAKAPURA RD:** 08068818881; **PUTTENAHALLI:** 08068818881; **GOTTIGERE:** 08068818881; VFM Honda - **KR PURAM:** 49499299, 9071858885; **HENNUR ROAD:** 9108989817, 9108989818; Tansi Honda - **HOODI:** 080-45510000, 7259030091; **MARTHAHALLI:** 080-67166600, 7259030093; **VARTHUR RD:** 08042620600, 9686573013; **GUNJUR:** 9606450642, 9606450641; Turbo Honda - **DODDABALLAPURA:** 7022038682; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 08153-266606, 9900092115; **MULBAGAL:** 9008941044; **SRINIVASAPUR:** 8495956515; Namma Honda - **CHIKKABALLAPUR:** 9606060610, 9900071211; **CHINTAMANI:** 9606060620, 9606060690; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; SLN Honda - **SHIDLAGATTA:** 9986160961; Century Honda - **TUMKUR:** 962026388, 0816-2261939; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 0816-2279979, 9449334359; **KUNIGAL:** 7022276603; **KUNIGAL ROAD:** 9844351599, 9844351399; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030; **KANAKAPURA:** 9606036053; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579.

For Bulk/Institutional enquiries, please write us at: institutionalsales@honda2wheelersindia.com

PUBLIC NOTICE

ICICI Bank
ICICI Bank Limited

Registered office: Landmark, Race Course Circle, Vadodara 390 007.
Corporate office: ICICI Bank Towers, Bandra-Kurla Complex, Mumbai 400 051.

ಚಿನ್ನ ಹರಾಜು ಕಂ ಆಹ್ವಾನ ಪ್ರಕಟಣೆ

ಈ ಕೆಳಗಿನ ಸಾಲಗಾರರಿಗೆ, ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ("ಐಸಿಐಸಿಐ ಬ್ಯಾಂಕ್") ಇವರಿಂದ ಪಡೆದಿದ್ದ ಚಿನ್ನಾಭರಣಗಳ ಮೇಲಿನ ಸಾಲ ಸೌಲಭ್ಯಕ್ಕೆ ("ಫೆಸಿಲಿಟಿ") ಸಂಬಂಧಿತ ಸಂಪೂರ್ಣ ಬಾಕಿಮೊತ್ತವನ್ನು ಮರುಪಾವತಿಸಬೇಕೆಂದು ಸೂಚನೆ ನೀಡಲಾಗಿತ್ತು. ಅದಾಗ್ಯೂ ಸಾಲಗಾರರು ವಿಫಲರಾಗಿದ್ದರಿಂದ, ಸದರಿ ಅಡಮಾನ ಚಿನ್ನಾಭರಣಗಳನ್ನು **08-11-2021**ರಂದು ಹರಾಜು ಹಾಕುವುದು ಅನಿವಾರ್ಯವಾಗಿದೆ. ಯಾವುದೇ ಪೂರ್ವ ಸೂಚನೆ ನೀಡದೆಯೆ ಖಾತೆಯನ್ನು ಕೈಬಿಡುವ/ಹರಾಜು ದಿನಾಂಕ ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ. ಸದರಿ ಹರಾಜನ್ನು **https://gold.samil.in** ಮೂಲಕ ಆನ್‌ಲೈನ್‌ನಲ್ಲಿ **12:30 ರಿಂದ 3:30** ಗಂಟೆಯೊಳಗೆ ಕೈಗೊಳ್ಳಲಾಗುತ್ತದೆ. ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು ವೆಬ್‌ಸೈಟ್‌ಗೆ ಲಾಗಿನ್ ಮಾಡಿರಿ. ಒಂದು ವೇಳೆ ಸಾಲಗಾರರು ಮೃತರಾಗಿದ್ದಲ್ಲಿ, ಅವರ ಉತರಾಧಿಕಾರಿಗಳಿಗೆ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ, ಯಾವುದೇ ಪೂರ್ವ ಸೂಚನೆ ನೀಡದೆಯೆ ಸದರಿ ಹರಾಜು ದಿನಾಂಕವನ್ನು ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
ಶಾಖೆ ಹೆಸರು: ಬೆಂಗಳೂರು – 8ನೇ ಮೈಲು, ಟಿ ದಾಸರಹಳ್ಳಿ	
344005000527	ವಿನಯ್ ಯಲಿಗಾರ್
ಶಾಖೆ ಹೆಸರು: ಬೆಂಗಳೂರು – ಅಬ್ಬಿಗೆರೆ	
736405000075	ರವಿ ರಂಜನ್ ಕುಮಾರ್
ಶಾಖೆ ಹೆಸರು: ಬೆಂಗಳೂರು – ಎಇಸಿಎಸ್ ಲೇಔಟ್	
233805000665	ಸತೀಶಬಾಬು ಎಂ
ಶಾಖೆ ಹೆಸರು: ಬೆಂಗಳೂರು – ಬಟ್ಟರಹಳ್ಳಿ	
369805001055	ಪಿ ತುಳಸಿ ಕುಮಾರ್
369805001050	ಸಂತೋಷ ವಿ ತೆಂಬತರ್
369805001162	ಸುಬ್ರಮಣಿ ಜಿ
369805001172	ಈ ಆದಿನಾರಾಯಣ
369805001204	ರಾಜೇಂದ್ರ ಸಿ
369805001209	ಸಂತೋಷ ಬಿ ಆರ್
ಶಾಖೆ ಹೆಸರು: ಬೆಂಗಳೂರು – ಚಿಕ್ಕಪೇಟೆ	
656005601084	ಭಗವತ್ ಸಿಂಗ್ ರಾಜಪುರೋಹಿತ್
656005600863	ಇಮ್ರಾನ್ ಖಾನ್
ಶಾಖೆ ಹೆಸರು: ಬೆಂಗಳೂರು – ದೊಮ್ಮಲೂರು	
234005001312	ಸಂತೋಷ ಕುಮಾರ್
ಶಾಖೆ ಹೆಸರು: ಬೆಂಗಳೂರು – ಹೆಣ್ಣೂರ ರಸ್ತೆ	
233105001621	ಸುಮನ ಕುಮಾರ್ ಎ
ಶಾಖೆ ಹೆಸರು: ಬೆಂಗಳೂರು – ಇಂದಿರಾನಗರ 100 ಅಡಿ ರಸ್ತೆ	
755005000048	ರಾಜೇಶ್ ಎಂ
ಶಾಖೆ ಹೆಸರು: ಬೆಂಗಳೂರು – ಜಯನಗರ 8ನೇ ಬ್ಲಾಕ್	
233205000271	ದಿನೇಶ್ ಆರ್ ವಿ
ಶಾಖೆ ಹೆಸರು: ಬೆಂಗಳೂರು – ಕಗ್ಗದಾಸಪುರ ಮುಖ್ಯರಸ್ತೆ	
414005000289	ಜಿ ಎಸ್ ನವೀನ ಕುಮಾರ್
414005000302	ನನ್ನಿಗೊಸಾಯಿ ಸೋಮೇಶ್ವರ ರಾವ್
ಶಾಖೆ ಹೆಸರು: ಬೆಂಗಳೂರು – ಕಸನವನಹಳ್ಳಿ	
317105000366	ಕೆ ಎಸ್ ಪವನ್
ಶಾಖೆ ಹೆಸರು: ಬೆಂಗಳೂರು – ಕೆಂಗೇರಿ	
233505000586	ಹೇಮಂತ ರಾಜು
ಶಾಖೆ ಹೆಸರು: ಬೆಂಗಳೂರು – ಮಾಗಡಿ ಮುಖ್ಯರಸ್ತೆ	
233405000712	ಚಂದ್ರಶೇಖರ ಬಿ ಎಸ್
233405000923	ದೀಪಕ್ ಗೋಪಾಲ್ ಪಟೇಲ್
ಶಾಖೆ ಹೆಸರು: ಬೆಂಗಳೂರು – ನಂದಿದುರ್ಗ ರಸ್ತೆ	
343805000650	ಅಲೀನಾ ಎ
343805000773	ಎಸ್ ಜಾನ್ ಸೊಲೊಮನ್
ಶಾಖೆ ಹೆಸರು: ಬೆಂಗಳೂರು – ಪ್ರಶಾಂತನಗರ	
736305000127	ಆರ್ ಜ್ಯೋತಿ ಲಕ್ಷ್ಮಿ
ಶಾಖೆ ಹೆಸರು: ಬೆಂಗಳೂರು – ರಾಜಾಜಿನಗರ 3ನೇ ಬ್ಲಾಕ್	
232305000663	ಚೈತ್ರಾ ಜಿ
232305000942	ಚೈತ್ರಾ ಜಿ
ಶಾಖೆ ಹೆಸರು: ಬೆಂಗಳೂರು – ರಾಮಮೂರ್ತಿ ನಗರ ಮುಖ್ಯರಸ್ತೆ	
431905000674	ರವಿಶಂಕರ್ ವಿ
ಶಾಖೆ ಹೆಸರು: ಬೆಂಗಳೂರು – ಸಂಪಿಗೆ ರಸ್ತೆ	
413905000444	ಅಗ್ನೀಶ್ವರ ಚಟರ್ಜಿ
413905000555	ಸೆಲ್ವ ಕುಮಾರ್ ಬಿ
413905000576	ಉಮಾ ಉಮಾ
413905000577	ಮೋಹನ ಕುಮಾರ್ ಎಂಜೆ
413905000578	ಶಿವರಾಜ್ ಮುತ್ತುಸ್ವಾಮಿ
413905000585	ರಂಗನಾಥನ್ ಕೆ
413905000663	ಡೇನಿಯಲ್ ಜಿ
413905000766	ಎಂ ಶ್ರೀನಿವಾಸಾಚಾರಿ
ಶಾಖೆ ಹೆಸರು: ಬೆಂಗಳೂರು – ಟಿ ಸಿ ಪಾಳ್ಯ	
233005000966	ಶ್ರೀನು ವಾಸ ರಾವ್ ಪಲ್ಲಿ
ಶಾಖೆ ಹೆಸರು: ಬೆಂಗಳೂರು – ಯಲಹಂಕ 2	
754305000174	ದೊರಾಬಾಬು ನೆಕ್ಕಂತಿ
ಶಾಖೆ ಹೆಸರು: ಬೆಂಗಳೂರು – ಅಮೃತಹಳ್ಳಿ	
317205000090	ಕಾಜಾ ಸೀತಾರಾಮಾಂಜನೆಯುಲು
ಶಾಖೆ ಹೆಸರು: ಬೆಂಗಳೂರು – ಅನ್ನಪೂರ್ಣೇಶ್ವರಿ ನಗರ	
315705000610	ಅಕ್ಷಯ್ ಎನ್

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
ಶಾಖೆ ಹೆಸರು: ಬೆಂಗಳೂರು – ಬಂಗಾರಪೇಟ್	
047805013284	ಸಂತೋಷ ಎಂ
047805009418	ದಾಮು ಎಸ್
047805009437	ದಾಮು ಎಸ್
047805013371	ಪ್ರಸನ್ನಕುಮಾರ್ ಎಂ
047805013332	ಸುಧಾಕರ್ ಸಿ
047805012736	ವಾಸಂತಿ ಜಿ
047805013365	ರಾಜೇಶ್ ಡಿ ಜಿ
047805012944	ಸುಧಾಕರ್ ಸಿ
047805013364	ನಾರಾಯಣಸ್ವಾಮಿ ಬಿ ವಿ
ಶಾಖೆ ಹೆಸರು: ಬೆಂಗಳೂರು – ಬನಶಂಕರಿ 2ನೇ ಹಂತ	
233705000684	ನರೇಶ್ ಪಿ ಎಸ್ ದಿಕ್ಷಿತ್
ಶಾಖೆ ಹೆಸರು: ಬೆಂಗಳೂರು – ಬಸವೇಶ್ವರನಗರ	
230105000115	ಮನದಯಾಳ್ ಜಮಾತಿಯಾ
230105002116	ಇಂದ್ರಾಣಿ ಜಿ
230105002118	ಮಧುಸೂಧನ್ ಎಸ್
230105002129	ನಾಗೇಶ್ ಆಚಾರಿ
230105002157	ಕೃಷ್ಣಮೂರ್ತಿ ಎಸ್ ಆರ್
230105002178	ನಂದೀಶ್ ಯು
230105002183	ಭೋಜರಾಜು ಎಂ
230105002187	ಮಾದೇಶ್ ಆರ್
230105002197	ಪ್ರದೀಪಕುಮಾರ್ ಬಿ ಎಂ
230105002200	ಶರತ್‌ಕುಮಾರ್ ಎಲ್
230105002206	ರವಿ ಕುಂಜಲ್
230105002209	ಪ್ರವೀಣಕುಮಾರ್ ಸಿ
ಶಾಖೆ ಹೆಸರು: ಬೆಂಗಳೂರು – ಬಿಡದಿ ಟೌನ್	
141405003856	ಮಂಜುನಾಥ ಜಿ ಎಲ್
141405002970	ರಾಮು ಬಿ ಪಿ
141405003910	ಸೋಮಲಕ್ಷ್ಮೀಬಾಯಿ ಸೋಮಲಕ್ಷ್ಮೀಬಾಯಿ
141405004212	ರವೀಶ ಎಸ್ ಕೆ
141405004217	ನೇತ್ರಾವತಿ ಕೆ ಎಸ್
141405004214	ಸತ್ಯನಾರಾಯಣ ಡಿ ಜೆ
141405004208	ಹೆಚ್ ಕೆ ಸವಿತಾ
141405004216	ಹೆಚ್ ಕೆ ಸವಿತಾ
141405004224	ಮಹದೇವಯ್ಯ ಹೆಚ್ ಡಿ
ಶಾಖೆ ಹೆಸರು: ಬೆಂಗಳೂರು – ಬಿಟಿಎಂ 2ನೇ ಹಂತ	
029705004616	ದಿನೇಶ್ ಆರ್ ವಿ
029705006152	ಅಜ್ಮಲ್‌ಖಾನ್ ಟಿ
ಶಾಖೆ ಹೆಸರು: ಬೆಂಗಳೂರು – ಕಂಟೋನ್ಮೆಂಟ್	
625205021038	ಮೊಹಮ್ಮದ್ ನಿಹಾರ್
ಶಾಖೆ ಹೆಸರು: ಬೆಂಗಳೂರು – ಕಾಕ್ಸ್‌ಟೌನ್	
025205006880	ಅಮತಿ ಎಲ್
025205006737	ಸತೀಶ್ ಬಿ
025205006689	ಬರ್ನಾರ್ಡ್ ಜಾರ್ಜ್ ಲಿಯಾನ್
025205006739	ಬರ್ನಾರ್ಡ್ ಜಾರ್ಜ್ ಲಿಯಾನ್
ಶಾಖೆ ಹೆಸರು: ಬೆಂಗಳೂರು – ಕನ್ನಿಂಗ್‌ಹ್ಯಾಮ್ ರೋಡ್	
142105001586	ಹೊನ್ನೇಗೌಡ ಹೆಚ್ ಕೆ
142105001644	ಹೊನ್ನೇಗೌಡ ಹೆಚ್ ಕೆ
ಶಾಖೆ ಹೆಸರು: ಬೆಂಗಳೂರು – ಹನುಮಂತನಗರ	
232505001085	ಶಾಂತಕುಮಾರ್ ಎಂ
232505001096	ಶಾಂತಕುಮಾರ್ ಎಂ
232505001175	ಮಂಜುಳಾ ಕೆ ವೈ
ಜಲಮಂಡಳಿ ಮುಖ್ಯ ಎಂಜಿನಿಯರ್ ಎಸ್‌.ವಿ.ರಮೇಶ್, 'ತಿಪ್ಪಗೊಂಡನಹಳ್ಳಿ ಜಲಾಶಯದಿಂದ 10 ಲಕ್ಷ ಜನರಿಗೆ ಕುಡಿಯುವ ನೀರು ಪೂರೈಸಲು ಕಾಮಗಾರಿ ನಡೆಯುತ್ತಿದ್ದು, ಮುಂದಿನ ವರ್ಷದ ಒಳಗೆ ಪೂರ್ಣಗೊಳ್ಳಲಿದೆ' ಎಂದರು.

ಬಿಡಿಎ ಆಯುಕ್ತ ಎಂ.ಬಿ.ರಾಜೇಶ್ ಗೌಡ, ಬಿಬಿಎಂಪಿಯ ವಿಶೇಷ ಆಯುಕ್ತ ರೆಡ್ಡಿ ಶಂಕರ್ ಬಾಬು, ಜಂಟಿ ಆಯುಕ್ತ ಡಾ.ನಾಗರಾಜ್ ಇದ್ದರು.

ಸಂಶೋಧಕ ಡಾ.ಕೃಷ್ಣಮೂರ್ತಿ ಎಲ್ಲಗೆ ಗೌರವ ಡಾಕ್ಟರೇಟ್

ಡಾ.ಕೃಷ್ಣಮೂರ್ತಿ

ಶಿವಮೊಗ್ಗ: ಕೋವ್ಯಾಕ್ಸಿನ್ ಸಂಶೋಧಕ ಕೃಷ್ಣಮೂರ್ತಿ ಎಲ್ಲ ಅವರಿಗೆ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಲು ನಿರ್ಧರಿಸಿದೆ. ನವುಲೆಯ ವಿಶ್ವವಿದ್ಯಾಲಯದ ಆವರಣದಲ್ಲಿ ನ.15ರಂದು ನಡೆಯುವ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುತ್ತಿದೆ. ಡಾ.ಎಲ್ಲ ಅವರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿ. ಪ್ರಸ್ತುತ ಅಮೆರಿಕದಲ್ಲಿರುವ ಅವರು, ಹೈದರಾಬಾದ್‌ನಲ್ಲಿ ಭಾರತ್ ಬಯೊಟೆಕ್ ಸ್ಥಾಪಿಸಿದ್ದಾರೆ.

ಹೆಪಟೈಟಿಸ್ ಬಿ, ಜೀಕಾ ವೈರಸ್, ಚಿಕೂನ್‌ಗುನ್ಯ, ಕೊರೊನಾ ವೈರಸ್ ರೋಗಗಳ ಕುರಿತು ಅಧ್ಯಯನ ನಡೆಸಿದ್ದಾರೆ.

'ಸದ್ದಿಲ್ಲದೆ ಹರಡುತ್ತಿದೆ ಮಾದಕ ವಸ್ತುಗಳ ಜಾಲ'

ವ್ಯಸನಮುಕ್ತಕ್ಕೆ ಸಂಬಂಧಿಸಿದ ಕೈಪಿಡಿಯನ್ನು ಹರೀಶ್ ಪಾಂಡೆ ಲೋಕಾರ್ಪಣೆ ಮಾಡಿದರು.ಫೋರ್ಟಿಸ್ ಹೆಲ್ತ್‌ಕೇರ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ಆಶೀಶ್ ಭಟಿಯಾ, ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮದ ನಿರ್ದೇಶಕ ಡಾ. ಸಮೀರ್ ಪರೀಕ್, ಫೋರ್ಟಿಸ್ ಆಸ್ಪತ್ರೆ ಉಪಾಧ್ಯಕ್ಷ ಡಾ. ಮನೀಶ್ ಮಟ್ಟು ಹಾಗೂ ಮನೋರೋಗ ತಜ್ಞ ಡಾ. ವೆಂಕಟೇಶ್ ಬಾಬು ಇದ್ದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚಿನ ದಿನಗಳಲ್ಲಿ ಮಾದಕ ವಸ್ತುಗಳ ಮಾರಾಟದ ಜಾಲ ಸದ್ದಿಲ್ಲದೇ ಹರಡುತ್ತಿದೆ. ಡ್ರಗ್ಸ್ ವ್ಯಸನಕ್ಕೆ ಸಿಲುಕಿರುವ ಯುವಜನರನ್ನು ರಕ್ಷಿಸಲು ನಗರದ ಎಲ್ಲ ಆಸ್ಪತ್ರೆಗಳು ಪ್ರತ್ಯೇಕ ವ್ಯಸನಮುಕ್ತ ಕೇಂದ್ರವನ್ನು ತೆರೆಯಬೇಕು' ಎಂದು ಬೆಂಗಳೂರು ನಗರ ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ಹೇಳಿದರು.

ನಗರದಲ್ಲಿ ಗುರುವಾರ ಫೋರ್ಟಿಸ್ ಆಸ್ಪತ್ರೆಯ ವ್ಯಸನಮುಕ್ತ ಕೇಂದ್ರವನ್ನು ಉದ್ಘಾಟಿಸಿದ ಅವರು, 'ವಿದೇಶಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ವ್ಯಸನಮುಕ್ತಿ ಕಾರ್ಯಕ್ರಮಗಳು ಕಡಿಮೆ. ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾದವರು ಅವುಗಳ ಸಂಕೋಲೆಯಿಂದ ಹೊರಬರುತ್ತಿಲ್ಲ. ಮಾದಕ ವಸ್ತುಗಳ ಜಾಲದ ಬೇರನ್ನು ಬುಡ ಸಮೇತ ಕೀಳುವ ಪ್ರಯತ್ನವನ್ನು ನಮ್ಮ ಇಲಾಖೆ ಮಾಡುತ್ತಿದೆ' ಎಂದು ಹೇಳಿದರು.

'ಬೆಂಗಳೂರು ದಕ್ಷಿಣ ವಿಭಾಗದಲ್ಲಿಯೇ 450ಕ್ಕೂ ಹೆಚ್ಚು ಡ್ರಗ್ ವ್ಯಸನಿಗಳನ್ನು ಪತ್ತೆ ಹಚ್ಚಿ, ದೂರು ದಾಖಲಿಸಿದ್ದೇವೆ. ಇವರನ್ನು ತಲುಪುವ ಪೆಡ್ಲರ್‌ಗಳ ಜಾಲವನ್ನೂ ಪತ್ತೆ ಹಚ್ಚಬೇಕಿದೆ. ಡ್ರಗ್ ಜಾಲವನ್ನು ಮಟ್ಟ ಹಾಕಲು ಪ್ರತಿಯೊಬ್ಬ ಪೋಷಕರೂ ತಮ್ಮ ಮಕ್ಕಳ ನಡವಳಿಕೆ ಮೇಲೆ ಗಮನಹರಿಸಬೇಕು. ಇಲ್ಲವಾದರೆ ಈ ಜಾಲವನ್ನು ತಡೆಯಲು ಸಾಧ್ಯವಿಲ್ಲ. ಬಹುತೇಕ ಪೋಷಕರಿಗೆ ತಮ್ಮ ಮಕ್ಕಳು ಡ್ರಗ್ ಸೇವನೆ ಮಾಡುತ್ತಿರುವ ಬಗ್ಗೆ ಮಾಹಿತಿಯೇ ಇಲ್ಲ' ಎಂದು ಕಳವಳ ವ್ಯಕ್ತಪಡಿಸಿದರು.

ಕೇಂದ್ರದಲ್ಲಿ ಚಿಕಿತ್ಸೆ: 'ರಾಷ್ಟ್ರೀಯ ವ್ಯಸನ ಮುಕ್ತ ಚಿಕಿತ್ಸಾ ಕೇಂದ್ರದ (ಎಐಐಎಂಎಸ್) ಪ್ರಕಾರ ದೇಶದಲ್ಲಿ 10 ವರ್ಷದಿಂದ 75 ವರ್ಷದೊಳಗಿನವರಲ್ಲಿ ಶೇ 2.8 ರಷ್ಟು (3.1 ಕೋಟಿ) ಜನರು ಗಾಂಜಾ ಸೇವಿಸುತ್ತಿದ್ದಾರೆ. 72 ಲಕ್ಷ ಜನರು ಇತರೆ ಮಾದಕ ವಸ್ತುಗಳನ್ನು ಸೇವಿಸುತ್ತಿದ್ದಾರೆ. ಹಾಗಾಗಿ, ವ್ಯಸನಮುಕ್ತಗೊಳಿಸಲು ಪ್ರತ್ಯೇಕ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಯಾವುದೇ ರೀತಿಯ ಡ್ರಗ್ ಸೇವನೆ ಚಟ ಹೊಂದಿದವರಿಗೆ ಇಲ್ಲಿ ಚಿಕಿತ್ಸೆ ನೀಡಲಾಗುತ್ತದೆ' ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದರು.

ಸಿಂದಗಿ–ಹಾನಗಲ್ ವಿಧಾನಸಭಾ ಮತಕ್ಷೇತ್ರ: ನಾಳೆ ಬೆಳಿಗ್ಗೆ 7 ರಿಂದ ಸಂಜೆ 7ರವರೆಗೆ ಮತದಾನ

ಉಪಚುನಾವಣೆ: ಮತದಾನಕ್ಕೆ ಸಕಲ ಸಿದ್ಧತೆ

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ 2021

ವಿಜಯಪುರ: ರಾಜ್ಯ ರಾಜಕೀಯದಲ್ಲಿ ಕುತೂಹಲ ಕೆರಳಿಸಿರುವ ಸಿಂದಗಿ ವಿಧಾನಸಭಾ ಕ್ಷೇತ್ರಕ್ಕೆ ಅ.30ರಂದು ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ಮತದಾನ ನಡೆಯಲಿದೆ.

ಮುಕ್ತ ನ್ಯಾಯಸಮ್ಮತ ಚುನಾವಣೆ ನಡೆಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಮತದಾನಕ್ಕೆ ಸಂಬಂಧಿಸಿದಂತೆ ಒಟ್ಟು 297 ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಮತದಾನ ಕಾರ್ಯಕ್ಕೆ 1,308 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಒಟ್ಟು 2,34,584 ಮತದಾರರಿದ್ದಾರೆ ಎಂದರು.

307 ಲೀಟರ್ ಮದ್ಯ ವಶ: ಉಪ ಚುನಾವಣೆಗೆ ಸಂಬಂಧಿಸಿದಂತೆ ಇದುವರೆಗೆ ₹ 1.57 ಲಕ್ಷ ಬೆಲೆ ಬಾಳುವ 307 ಲೀಟರ್ ಮದ್ಯ, 4 ಕೆ.ಜಿ ಗಾಂಜಾ, 7 ದ್ವಿಚಕ್ರವಾಹನ, ಒಂದು ಕಾರನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ನ.2ರಂದು ಮತ ಎಣಿಕೆ: ವಿಜಯಪುರ ನಗರದ ಸೈನಿಕ ಶಾಲೆಯಲ್ಲಿ ನ.2 ರಂದು ಬೆಳಿಗ್ಗೆ 8 ರಿಂದ ಮತ ಎಣಿಕೆ ನಡೆಯಲಿದೆ. ಸಿಂದಗಿ ಆರ್.ಡಿ.ಪಾಟೀಲ್ ಕಾಲೇಜಿನಲ್ಲಿ ಮಸ್ಟರಿಂಗ್, ಡಿ–ಮಸ್ಟರಿಂಗ್ ಕೇಂದ್ರ ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಮತಯಾಚನೆ: ಸಿಂದಗಿ ಉಪಚುನಾವಣೆ ಕಣದಲ್ಲಿರುವ ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ, ಬಿಜೆಪಿ ಅಭ್ಯರ್ಥಿ ರಮೇಶ ಭೂಸನೂರ, ಜೆಡಿಎಸ್ ಅಭ್ಯರ್ಥಿ ನಾಜಿಯಾ ಅಂಗಡಿ ಅವರು ಗುರುವಾರ ಮನೆಮನೆಗೆ ತೆರಳಿ ಮತಯಾಚಿಸಿದರು.

ಹಾನಗಲ್ ವಿಧಾನಸಭಾ ಕ್ಷೇತ್ರದ ಹೀರೂರ ಮತಗಟ್ಟೆಗೆ ಗುರುವಾರ ಚುನಾವಣಾ ವೀಕ್ಷಕಿ ಮಾಧುರಿ ಖೋಡೆ ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು

263 ಮತಗಟ್ಟೆಗಳ ಸ್ಥಾಪನೆ

ಹಾವೇರಿ: ಬಿಜೆಪಿ-ಕಾಂಗ್ರೆಸ್ ನಡುವಿನ ಜಿದ್ದಾಜಿದ್ದಿ ಕಣವಾದ ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ತೀವ್ರ ಕುತೂಹಲ ಕೆರಳಿಸಿದೆ. ಅ.30ರಂದು ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ಮತದಾನ ನಡೆಯಲಿದೆ.

ವ್ಯವಸ್ಥಿತ ಮತದಾನಕ್ಕಾಗಿ ಹಾನಗಲ್ ಕ್ಷೇತ್ರ ವ್ಯಾಪ್ತಿಯಲ್ಲಿ 263 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. 1,155 ಸಿಬ್ಬಂದಿಯನ್ನು ನಿಯೋಜಿಸಿ ತರಬೇತಿ ನೀಡಲಾಗಿದೆ. ಒಟ್ಟು 2,04,481 ಮತದಾರರಿದ್ದಾರೆ. ಒಂದು 'ಅಂಗವಿಕಲ ಸ್ನೇಹಿ' ಮತಗಟ್ಟೆ ಹಾಗೂ ಎರಡು 'ಸಖಿ' ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. 121 ಮತಗಟ್ಟೆಗಳಲ್ಲಿ 'ವೆಬ್ ಕಾಸ್ಟಿಂಗ್' ಸೌಲಭ್ಯ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣವರ ಅವರು ತಿಳಿಸಿದ್ದಾರೆ.

ನ.2ರಂದು ಮತ ಎಣಿಕೆ: ಹಾವೇರಿ ನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನ.2ರಂದು ಬೆಳಿಗ್ಗೆ 8ರಿಂದ ಮತ ಎಣಿಕೆ ನಡೆಯಲಿದೆ. ಹಾನಗಲ್ ಪಟ್ಟಣದ ಕುಮಾರೇಶ್ವರ ಕಾಲೇಜಿನಲ್ಲಿ ಮಸ್ಟರಿಂಗ್ ಮತ್ತು ಡಿ ಮಸ್ಟರಿಂಗ್ ಕೇಂದ್ರ ಸ್ಥಾಪಿಸಲಾಗಿದೆ.

ಮನೆ–ಮನೆ ಪ್ರಚಾರ: ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ, ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಹಾಗೂ ಜೆಡಿಎಸ್ ಅಭ್ಯರ್ಥಿ ನಿಯಾಜ್ ಶೇಖ್ ಹಾಗೂ ಪಕ್ಷೇತರ ಅಭ್ಯರ್ಥಿಗಳು ಮನೆ–ಮನೆಗೆ ತೆರಳಿ ಮತ ಯಾಚಿಸಿದರು.

ಕರ್ತವ್ಯ ಲೋಪ: ಉಪನ್ಯಾಸಕ ಅಮಾನತು

ಹಾವೇರಿ: ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಕರ್ತವ್ಯಕ್ಕೆ ನಿಯೋಜಿತರಾಗಿದ್ದ ಚಿಕ್ಕಾಂಶಿ ಹೊಸೂರ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ವಸಂತರಾಜ ಸಿ.ಎಸ್. ಅವರನ್ನು ಕರ್ತವ್ಯ ಲೋಪದ ಆರೋಪದಡಿ ಚುನಾವಣಾಧಿಕಾರಿ ಸಂಜಯ ಶೆಟ್ಟೆಣ್ಣನವರ ಅಮಾನತು ಮಾಡಿದ್ದಾರೆ.

ಹಾನಗಲ್ ತಾಲ್ಲೂಕಿನ ಗೊಂದಿ ಚೆಕ್‌ಪೋಸ್ಟ್‌ಗೆ ಚುನಾವಣಾ ಸಾಮಾನ್ಯ ವೀಕ್ಷಕರು ಗುರುವಾರ ಭೇಟಿ ನೀಡಿದ್ದ ಸಂದರ್ಭ, ಎಸ್.ಎಸ್.ಟಿ. ತಂಡದ ಮುಖ್ಯಸ್ಥರಾಗಿದ್ದ ವಸಂತರಾಜ ಸಮರ್ಪಕವಾಗಿ ಉತ್ತರಿಸದೇ ಕರ್ತವ್ಯ ನಿರ್ಲಕ್ಷ್ಯತನ ತೋರಿದ್ದಾರೆ ಎಂದು ವರದಿ ಸಲ್ಲಿಕೆಯಾಗಿತ್ತು ಎಂದು ಪ್ರಕಟಣೆ ತಿಳಿಸಿದೆ.

ಕೆಆರ್‌ಎಸ್ ಅಭ್ಯರ್ಥಿ ವಿರುದ್ಧ ಪ್ರಕರಣ ದಾಖಲು: ಚುನಾವಣಾ ಅಧಿಕಾರಿಗಳಿಂದ ಅನುಮತಿ ಪಡೆಯದೆ ವಾಹನಗಳಲ್ಲಿ ಚುನಾವಣಾ ಪ್ರಚಾರ ಕೈಗೊಂಡಿದ್ದ ಆರೋಪದ ಮೇಲೆ ಕರ್ನಾಟಕ ರಾಷ್ಟ್ರೀಯ ಪಕ್ಷದ (ಕೆಆರ್‌ಎಸ್) ಅಭ್ಯರ್ಥಿ ಉಡಚಪ್ಪ ಉದ್ದನಕಾಲ ಮತ್ತು ಪಕ್ಷದ ಏಜೆಂಟ್ ಲಕ್ಕಪ್ಪ ದೂದಿಹಳ್ಳಿ ವಿರುದ್ಧ ಹಾನಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

'ಮೀಸಲಾತಿ ನೀಡದಿದ್ದರೆ ಬೊಮ್ಮಾಯಿ ಸರ್ಕಾರಕ್ಕೂ ಶಾಕ್'

ನಾಲತವಾಡ (ವಿಜಯಪುರ): 'ಮೀಸಲಾತಿ ಕೊಡುವುದಾಗಿ ಮಾತು ಕೊಟ್ಟು ತಪ್ಪಿದ್ದಕ್ಕೆ ಯಡಿಯೂರಪ್ಪ ಅಧಿಕಾರ ಕಳೆದುಕೊಂಡ. ಇನ್ನು ನಮಗೆ 2ಎ ಮೀಸಲಾತಿ ನೀಡದಿದ್ದರೆ ಬೊಮ್ಮಾಯಿ ಸರ್ಕಾರಕ್ಕೂ ಶಾಕ್ ಗ್ಯಾರಂಟಿ' ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಕಿತ್ತೂರ ಚನ್ನಮ್ಮ ಸಾಮಾಜಿಕ ಸೇವಾ ಸಂಘದಡಿ ಗುರುವಾರ ಹಮ್ಮಿಕೊಂಡಿದ್ದ ಕಿತ್ತೂರ ಚನ್ನಮ್ಮನ 243ನೇ ಜಯಂತಿ ಹಾಗೂ 198ನೇ ವಿಜಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಬೇಡಿಕೆಗೆ ಅನುಗುಣವಾಗಿ ಮೀಸಲಾತಿ ನೀಡದವರು ಮಣ್ಣು ಮುಕ್ಕಿದ್ದಾರೆ. ಬೊಮ್ಮಾಯಿ ಸಹ 3 ತಿಂಗಳಲ್ಲಿ ಮೀಸಲಾತಿ ಘೋಷಿಸುವ ಭರವಸೆ ನೀಡಿದ್ದಾರೆ. ಕಾದು ನೋಡೋಣ' ಎಂದು ಹೇಳಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಮಾತನಾಡಿ, 'ಮುಖ್ಯಮಂತ್ರಿ ಬೊಮ್ಮಾಯಿ ನಮ್ಮ ಸಮಾಜಕ್ಕೆ ಯಾವ ಕೊಡುಗೆ ಕೊಡುತ್ತಾರೋ ನೋಡೋಣ. ಇವರೂ ಭರವಸೆಯಲ್ಲೇ ಕಾಲ ಕಳೆದರೆ ಅಧಿಕಾರದಿಂದ ಕೆಳಗೆ ಇಳಿಸಿ ಬಿಡೋಣ' ಎಂದರು.

ಕೂಡಲಸಂಗಮ ಬಸವಜಯ ಮೃತ್ಯುಂಜಯ ಶ್ರೀಗಳು ಆಶೀರ್ವಚನ ನೀಡಿ, 'ಮೀಸಲಾತಿ ಸಿಗುವವರೆಗೂ ಹೋರಾಟ ಕೈ ಬಿಡುವ ಪ್ರಶ್ನೆಯೇ ಇಲ್ಲ. ಈ ಬಾರೀ ಸುಮಾರು 20 ಲಕ್ಷ ಮಂದಿಯನ್ನು ಸೇರಿಸಿ ಹೋರಾಟ ಮಾಡುತ್ತೇವೆ' ಎಂದರು.

ನಾಳೆ ಹಿಂದುಳಿದ ವರ್ಗಗಳ ಸತ್ಯಾಗ್ರಹ: ಸಿದ್ದರಾಮಯ್ಯ ಭಾಗಿ

ಶಿವಮೊಗ್ಗ: ನಗರದ ಈದ್ಗಾ ಮೈದಾನದಲ್ಲಿ ಅ.30ರಂದು ಬೆಳಿಗ್ಗೆ 11ಕ್ಕೆ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಹಮ್ಮಿಕೊಂಡಿರುವ ಧರಣಿ ಸತ್ಯಾಗ್ರಹದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಭಾಗವಹಿಸುವರು.

'ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿವಾರು ಸಮೀಕ್ಷೆಯ ವರದಿ ಕೂಡಲೇ ಜಾರಿಗೊಳಿಸಬೇಕು. 2 'ಎ' ಮೀಸಲಾತಿ ಪಟ್ಟಿಗೆ ಆರ್ಥಿಕವಾಗಿ, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಮುಂದುವರಿದ ಪ್ರಬಲವಾಗಿರುವ ಜಾತಿಗಳನ್ನು ಸೇರಿಸಬಾರದು ಎಂದು ಆಗ್ರಹಿಸಿ ಧರಣಿ ನಡೆಸಲಾಗುತ್ತಿದೆ. ಸುಮಾರು 10 ಸಾವಿರ ಜನರು ಧರಣಿಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ' ಎಂದು ರಾಜ್ಯ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಮಾಹಿತಿ ನೀಡಿದರು.

ಪ್ರವರ್ಗ 1 ಮತ್ತು 2 'ಎ'ನಲ್ಲಿ ಸುಮಾರು 2 ಕೋಟಿ ಜನಸಂಖ್ಯೆ ಇದೆ. ಅವುಗಳ ಅಭಿವೃದ್ಧಿಗೆ ₹ 80 ಕೋಟಿ ಮೀಸಲಿಡಲಾಗಿದೆ. ₹ 20 ಕೋಟಿ ಬಿಡುಗಡೆ ಮಾಡಲಾಗಿದೆ. ಈ ವರ್ಗಗಳ ಅಭಿವೃದ್ಧಿಗಾಗಿ ದೇವರಾಜು ಅರಸು ಅಭಿವೃದ್ಧಿ ನಿಗಮಕ್ಕೆ ₹ 2 ಸಾವಿರ ಕೋಟಿ ನೀಡಬೇಕು ಎಂದು ಸರ್ಕಾರವನ್ನು ಆಗ್ರಹಿಸಲಾಗುತ್ತಿದೆ ಎಂದರು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿಕೆ

ಶಿಕ್ಷಕರು ಒಪ್ಪಿದರೆ ಶನಿವಾರ ಪೂರ್ಣ ತರಗತಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಕೋವಿಡ್ ಕಾರಣಕ್ಕೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 35 ದಿನಗಳು ಕಡಿಮೆಯಾಗಿವೆ. ದಸರಾ ರಜೆ ಸಂದರ್ಭದಲ್ಲಿ ಐದು ದಿನ ಸರಿದೂಗಿಸಲಾಗಿದೆ. ಶಿಕ್ಷಕರು ಒಪ್ಪಿಕೊಂಡರೆ ಶನಿವಾರವು ಪೂರ್ಣ ಅವಧಿ ತರಗತಿ ನಡೆಸುತ್ತೇವೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಬಿ.ಸಿ.ನಾಗೇಶ್

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಷ್ಟೇ ಕಷ್ಟವಾದರೂ ಪಠ್ಯಬೋಧನೆ ಪೂರ್ಣಗೊಳಿಸುವುದಾಗಿ ಹಲವು ಶಿಕ್ಷಕರು ಉತ್ಸಾಹದಿಂದ ಹೇಳುತ್ತಿದ್ದಾರೆ. ಸದ್ಯ, ಪಠ್ಯವನ್ನು ಕಡಿತಗೊಳಿಸುವುದಿಲ್ಲ' ಎಂದು ಪ್ರತಿಕ್ರಿಯಿಸಿದರು.

ಎನ್‌ಇಪಿ ಜಾರಿಗೆ ಸಿದ್ಧತೆ: 'ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾಥಮಿಕ ಶಿಕ್ಷಣದಲ್ಲೂ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವ ಇಚ್ಛೆ ಇದ್ದು, ತಯಾರಿ ಶುರುಮಾಡಿದ್ದೇವೆ. ಈಗಾಗಲೇ ಮದನ್‌ಗೋಪಾಲ್ ನೇತೃತ್ವದಲ್ಲಿ ಕಾರ್ಯಪಡೆ ರಚಿಸಿದ್ದೇವೆ' ಎಂದರು.

'ಶಿಕ್ಷಣ ತಜ್ಞರು, ಎನ್‌ಜಿಒಗಳ ಜೊತೆಗೂಡಿ ಶಿಕ್ಷಣದ ರೀತಿ–ನೀತಿ ಹೇಗಿರಬೇಕು ಎಂಬ ಬಗ್ಗೆ ಯೋಚಿಸಲಾಗುವುದು. ಪಠ್ಯ ಚಟುವಟಿಕೆಗಳು ಸಿದ್ಧಗೊಂಡು, ಶಿಕ್ಷಕರಿಗೆ ತರಬೇತಿ ಕೊಡಲು ಸಾಧ್ಯವಾದರೆ ಮುಂದಿನ ವರ್ಷ '0', '–1', '3' ಹಾಗೂ '9'ನೇ ತರಗತಿಗಳಲ್ಲಿ ಜಾರಿಗೊಳಿಸಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸದ್ಯಕ್ಕಿಲ್ಲ ಶಾಲೆ ಬಂದ್: 'ರಾಜ್ಯದಲ್ಲಿ 48 ಸಾವಿರ ಶಾಲೆಗಳಿವೆ. ಮಡಿಕೇರಿ ಸಮೀಪದ ಗಾಳಿಬೀಡು ನವೋದಯ ಶಾಲೆಯಲ್ಲಿ 31 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಉಳಿದ ವಿದ್ಯಾರ್ಥಿಗಳಿಗೂ ಪರೀಕ್ಷೆ ನಡೆಸಲಾಗಿದೆ. ಇಬ್ಬರನ್ನು ಹೊರತುಪಡಿಸಿ ಉಳಿದವರಲ್ಲಿ ರೋಗ ಲಕ್ಷಣಗಳಿಲ್ಲ. ಕೋವಿಡ್ ಶಾಲೆಯಿಂದ ಹಬ್ಬಿರುವುದಲ್ಲ' ಎಂದರು.

'ರಾಜ್ಯದಲ್ಲಿ ಕೋವಿಡ್ ಪಾಸಿಟಿವಿಟಿ ರೇಟ್ ಶೂನ್ಯಕ್ಕೆ ಇಳಿದಿದೆ. ಮಕ್ಕಳನ್ನು ನಾವು ಪಾನಿಪೂರಿ ತಿನ್ನಲು, ಮದುವೆ ಸಮಾರಂಭಗಳಿಗೆ ಕಳುಹಿಸುತ್ತೇವೆ. ಹೀಗಿರುವಾಗ ಶಾಲೆಗೆ ಕಳುಹಿಸಲು ಭಯಪಡುವ ಅಗತ್ಯವಿಲ್ಲ' ಎಂದು ಹೇಳಿದರು.

'ಶಿಕ್ಷಕರನ್ನು ನೇಮಿಸಿದ್ದು ಸಂಸಾರ ನೋಡಿಕೊಳ್ಳಲು ಅಲ್ಲ'

'ನಾವು ಶಿಕ್ಷಕರನ್ನು ನೇಮಿಸಿದ್ದು ಪಾಠ ಮಾಡಲಿ ಎಂದೇ ಹೊರತು ಅವರ ಸಂಸಾರವನ್ನು ನೋಡಿಕೊಳ್ಳಲಿ ಎಂದಲ್ಲ. ಶಿಕ್ಷಕರ ಸಮಸ್ಯೆಗಳು ನಮಗೆ ಅರ್ಥವಾಗುತ್ತದೆ. ಮೊದಲು ಮಕ್ಕಳ ಸಮಸ್ಯೆ ಬಗೆಹರಿಸಿ, ಆ ಬಳಿಕ ಶಿಕ್ಷಕರ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ತಿಳಿಹೇಳಿದ್ದೇವೆ' ಎಂದು ಸಚಿವ ನಾಗೇಶ್ ಅವರು ಶಿಕ್ಷಕರ ವರ್ಗಾವಣೆ ಕುರಿತ ಪ್ರಶ್ನೆಗೆ ಖಾರವಾಗಿ ಪ್ರತಿಕ್ರಿಯಿಸಿದರು.

'ಕೆಲ ಶಿಕ್ಷಕರ ವೈಯಕ್ತಿಕ ಸಮಸ್ಯೆಗಳನ್ನು ಸಾಮೂಹಿಕ ಸಮಸ್ಯೆ ಎಂದು ಬಿಂಬಿಸಬಾರದು. ಜಿಲ್ಲಾವಾರು ಶಿಕ್ಷಕರನ್ನು ನೇಮಕ ಮಾಡಲಾಗುತ್ತಿದೆ ಎಂದು ಆಗ ಗೊತ್ತಿರಲಿಲ್ಲವೇ, ರಾಯಚೂರು ದೂರವಾಗಲಿದೆ ಎಂಬುದು ತಿಳಿದಿರಲಿಲ್ಲವೇ' ಎಂದು ಪ್ರಶ್ನಿಸಿದ ಸಚಿವರು, 'ಮೂರು ವರ್ಷಗಳ ಬಳಿಕ ಇದೀಗ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಆರಂಭಗೊಂಡಿದ್ದು, ಸುಗಮವಾಗಿ ನಡೆಯುತ್ತಿದೆ' ಎಂದರು.

'ಕಾಂಗ್ರೆಸ್‌ನವರು ಹುಟ್ಟು ಕುಡುಕರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್‌ನವರು ಹುಟ್ಟು ಕುಡುಕರು. ಅವರಿಗೆ ಕುಡಿಯಲಿಲ್ಲ ಅಂದ್ರೆ ರಾತ್ರಿ ನಿದ್ದೆಯೇ ಬರುವುದಿಲ್ಲ' ಎಂದು ಬಿಜೆಪಿ ಎಸ್‌ಸಿ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಆಂತರಿಕ ನಿಯಮದ ಪ್ರಕಾರ ಯಾರೂ ಮದ್ಯಪಾನ ಮಾಡಬಾರದು. ಖಾದಿ ಬಟ್ಟೆ ತೊಡಬೇಕು. ಆದರೆ ಆ ಪಕ್ಷದಲ್ಲಿ ಯಾರು ಮದ್ಯ ಸೇವನೆ ಮಾಡುವುದಿಲ್ಲ ಎಂಬುದನ್ನು ತೋರಿಸಿ. ಕುಡಿಯದಿದ್ದರೆ ನಿದ್ದೆಯೇ ಬರುವುದಿಲ್ಲ ಎಂದು ವ್ಯಂಗ್ಯವಾಡಿದರು.

ಕುಡುಕರಿಗೆ ಟಿಕೆಟ್ ಕೊಡುವುದಿಲ್ಲ ಎಂದು ಒಂದು ವೇಳೆ ಕಾಂಗ್ರೆಸ್ ಹೇಳಿದರೆ, 224 ಕ್ಷೇತ್ರಗಳಿಗೆ ಅವರಿಗೆ ಅಭ್ಯರ್ಥಿಯೇ ಸಿಗುವುದಿಲ್ಲ ಎಂದು ಅವರು ಹೇಳಿದರು.

ಕಾಂಗ್ರೆಸ್ ಬಗೆಗಿನ ಭಯದಿಂದ ಮುಸ್ಲಿಮರು ಬಿಜೆಪಿಗೆ ಬರುತ್ತಿಲ್ಲ. ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಮುಸ್ಲಿಮರು ಸಂತುಷ್ಟರಾಗಿರುತ್ತಾರೆ. ಕಾಂಗ್ರೆಸ್ ಬಂಡವಾಳ ಈಗ ಮುಸ್ಲಿಮರಿಗೂ ಅರ್ಥವಾಗಿದೆ. ಮುಸ್ಲಿಮರ ಅಭ್ಯುದಯಕ್ಕಾಗಿ ಕಾಂಗ್ರೆಸ್ ಏನು ಮಾಡಿದೆ ಎಂದು ಅವರು ಪ್ರಶ್ನಿಸಿದರು.

ದಲಿತರ ತುಳಿದ ಸಿದ್ದರಾಮಯ್ಯ:

ಕಾಂಗ್ರೆಸ್‌ನಲ್ಲಿ ಹಲವು ದಶಕಗಳ ಕಾಲ ದುಡಿದ ದಲಿತರು ಮುಖ್ಯಮಂತ್ರಿ ಆಗಬೇಕು ಎಂಬ ಸಹಜವಾದ ಕೂಗು ಇತ್ತು. ಹೊರಗಡೆಯಿಂದ ಬಂದ ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷವನ್ನೇ ಬ್ಲ್ಯಾಕ್‌ಮೇಲ್ ಮಾಡಿ, ದಲಿತ ಮುಖಂಡರನ್ನು ತುಳಿದು ಮುಖ್ಯಮಂತ್ರಿ ಪಟ್ಟ ಏರಿದರು. ಅವರೊಬ್ಬ ಕಪಟ ರಾಜಕಾರಣಿ. ಅವರಿಗೆ ಇನ್ನೊಬ್ಬರನ್ನು ತುಳಿಯುವುದಷ್ಟೇ ಗೊತ್ತು ಎಂದರು.

ಧಾರವಾಡ ಸಮೀಪದ ಗರಗದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಗುರುವಾರದಿಂದ ಆರಂಭವಾದ ಆರ್‌ಎಸ್‌ಎಸ್ ಅಖಿಲ ಭಾರತೀಯ ಕಾರ್ಯಕಾರಿ ಮಂಡಳಿ ಬೈಠಕ್‌ನಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ, ಸರಸಂಘ ಚಾಲಕ ಮೋಹನ್ ಭಾಗವತ ಹಾಗೂ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಪಾಲ್ಗೊಂಡರು

ಆರ್‌ಎಸ್‌ಎಸ್ : ಕಾರ್ಯಕಾರಿ ಮಂಡಳಿ ಬೈಠಕ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಧಾರವಾಡ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತ ಕಾರ್ಯಕಾರಿ ಮಂಡಳಿಯ ಮೂರುದಿನಗಳ ಸಭೆಗೆ ಗುರುವಾರ ಇಲ್ಲಿ ಚಾಲನೆ ದೊರೆಯಿತು.

ಇಲ್ಲಿನ ಗರಗದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಬೈಠಕ್‌ಗೆ ಆರ್‌ಎಸ್‌ಎಸ್ ಮುಖ್ಯಸ್ಥ, ಸರಸಂಘ ಚಾಲಕ ಮೋಹನ ಭಾಗವತ್ ಹಾಗೂ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಭಾರತಮಾತೆಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಚಾಲನೆ ನೀಡಿದರು.

ಸಭೆ ಆರಂಭದಲ್ಲಿ, ಇತ್ತೀಚೆಗೆ ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಇದರಲ್ಲಿ ಪ್ರಮುಖವಾಗಿ ಸಂಸ್ಕಾರ ಭಾರತಿಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಅಮೀರ್ ಚಂದ್, ಕನ್ನಡ ನಿಘಂಟು ತಜ್ಞ ಜಿ.ವೆಂಕಟಸುಬ್ಬಯ್ಯ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಪತ್ರಕರ್ತ ಎಚ್.ಎಸ್.ದೊರೆಸ್ವಾಮಿ, ಕವಿ ಸಿದ್ದಲಿಂಗಯ್ಯ, ಕಾಂಗ್ರೆಸ್ ಮುಖಂಡ ಆಸ್ಕರ್ ಫರ್ನಾಂಡಿಸ್, ಸ್ವಾಮಿ ಅಧ್ಯಾತ್ಮಾನಂದ, ಸ್ವಾಮಿ ಓಂಕಾರಾನಂದ, ಸ್ವಾಮಿ ಅರುಣಗಿರಿ, ಹಿರಿಯ ಪತ್ರಕರ್ತ ಶ್ಯಾಮ್ ಖೋಸ್ಲಾ, ದೈನಿಕ್ ಜಾಗರಣ್ ಮಾಲೀಕ ಯೋಗೇಂದ್ರ ಮೋಹನ್ ಗುಪ್ತಾ, ಗೀತಾ ಪ್ರೆಸ್ ಗೋರಖಪುರ ಅಧ್ಯಕ್ಷ ರಾಧೇಶ್ಯಾಮ್ ಖೆಮ್ಕಾ, ಲೇಖಕರು ನರೇಂದ್ರ ಕೊಹ್ಲಿ, ರಾಜೇಶ್ ಸತವ್, ರಾಜ್ಯಸಭಾ ಸದಸ್ಯ ಸೋಲಿ ಸೊರಾಬ್ಜಿ, ಮಾಜಿ ರಾಜ್ಯಪಾಲ ಜಗಮೋಹನ್, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್, ಪತ್ರಕರ್ತ ರೋಹಿತ್ ಸರ್ದಾನ, ಚಿಪ್ಕೋ ಚಳವಳಿಯ ಸುಂದರ್ ಲಾಲ್ ಬಹುಗುಣ, ಅಖಾಡಾ ಪರಿಷತ್ ಅಧ್ಯಕ್ಷ ಮಹಂತ್ ನರೇಂದ್ರ ಗಿರಿ ಮಹಾರಾಜ್, ಹಿಮಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಭೆಯಲ್ಲಿ, ಸಂಘದ ಕಾರ್ಯದ ಪ್ರಸ್ತುತ ಸ್ಥಿತಿಗತಿ, ಕಾರ್ಯ ವಿಸ್ತಾರ ಹಾಗೂ ಕಾರ್ಯಕರ್ತರ ವಿಕಾಸದ ಯೋಜನೆಗಳ ಕುರಿತು ಚರ್ಚೆ ನಡೆಯಿತು. ಬಾಂಗ್ಲಾದೇಶದಲ್ಲಿ ಇತ್ತೀಚಿಗೆ ನಡೆದ ಹಿಂದೂಗಳ ಮೇಲಿನ ಹಿಂಸಾಚಾರದ ಬಗ್ಗೆ ನಿರ್ಣಯವನ್ನು ಅಂಗೀಕರಿಸುವ ಕುರಿತು ಚರ್ಚೆ ನಡೆಯಿತು.

ದೇಶದ ವಿವಿಧ ರಾಜ್ಯಗಳಿಂದ ಬಂದ ಸಂಘದ 350 ಕಾರ್ಯಕರ್ತರು ಈ ಬೈಠಕ್‌ನಲ್ಲಿ ಪಾಲ್ಗೊಂಡಿದ್ದಾರೆ. ಅ.30ರವರೆಗೆ ಸಭೆ ನಡೆಯಲಿದೆ.

'ಬಿಟ್ ಕಾಯಿನ್: ಯಾರೇ ಇದ್ದರೂ ಶಿಕ್ಷೆ'

ಬೆಂಗಳೂರು: ಬಿಟ್ ಕಾಯಿನ್ ವಿಚಾರ ಅತ್ಯಂತ ಗಂಭೀರವಾಗಿದ್ದು, ಇದರಲ್ಲಿ ರಾಜಕಾರಣಿಗಳು, ಪೊಲೀಸ್ ಅಧಿಕಾರಿಗಳು ಸೇರಿ ಯಾರೇ ಭಾಗಿಯಾಗಿದ್ದರೂ ಪತ್ತೆ ಮಾಡಿ ಶಿಕ್ಷೆಗೊಳಪಡಿಸಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಈ ವಿಚಾರವಾಗಿ ಸಿಐಡಿ ತನಿಖೆ ನಡೆಸುತ್ತಿದ್ದು, ಈ ಹಂತದಲ್ಲಿ ನಾನು ಯಾವುದೇ ಹೇಳಿಕೆ ನೀಡಿದರೂ ತನಿಖೆಗೆ ತೊಂದರೆ ಆಗುತ್ತದೆ. ನಮ್ಮ ಪೊಲೀಸರು ಆಳಕ್ಕೆ ಹೋಗಿ ಮಾಹಿತಿ ತೆಗೆಯುತ್ತಾರೆ' ಎಂದೂ ಅವರು ತಿಳಿಸಿದರು.

ವಿರೋಧಪಕ್ಷದ ನಾಯಕರು ಚುನಾವಣೆ ಸಂದರ್ಭದಲ್ಲಿ ಯಾರದ್ದೋ ಮುಖಕ್ಕೆ ಮಸಿ ಹಚ್ಚಲು ಹೋಗಬಾರದು. ಅವರು ಹಿಂದೆ ಮುಖ್ಯಮಂತ್ರಿ ಆಗಿದ್ದರು. ಇಂತಹ ವಿಚಾರಗಳನ್ನು ಪಕ್ಷಾತೀತವಾಗಿ ಯೋಚಿಸಬೇಕು. ಅಸ್ಪಷ್ಟವಾಗಿ ಹೇಳಿಕೆ ನೀಡುವುದು ಸರಿಯಲ್ಲ, ರಾಜಕಾರಣಿಗಳು ಕಾಂಗ್ರೆಸ್‌ನವರೇ ಇರಬಹುದು, ಬಿಜೆಪಿಯವರೇ ಆಗಿರಬಹುದು. ಅಪರಾಧಿಗಳನ್ನು ಕಾನೂನಿನ ಸೂತ್ರದಡಿ ತರಲಾಗುತ್ತದೆ. ತಪ್ಪು ಮಾಡಿದ್ದರೆ ಶಿಕ್ಷೆ ಆಗುತ್ತದೆ ಎಂದು ಆರಗ ಹೇಳಿದರು.

ಈ ಪ್ರಕರಣದ ತನಿಖೆಯನ್ನು ಪರಿಣತಿ ಹೊಂದಿರುವ ಪೊಲೀಸರೇ ನಡೆಸುತ್ತಿದ್ದಾರೆ. ಆದ್ದರಿಂದ ಬಿಟ್ ಕಾಯಿನ್ ವಿಚಾರವಾಗಿ ಅಂತೆ–ಕಂತೆಗಳನ್ನು ಕೇಳಿಕೊಂಡು ಮಾತನಾಡುವುದು ಸರಿಯಲ್ಲ ಎಂದರು.

ಹೆಸರುಗಳ ಕೇಳಿ ಆಘಾತ: ಡಿಕೆಶಿ

ಬೆಂಗಳೂರು: ಬಿಟ್ ಕಾಯಿನ್ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳು, ರಾಜಕಾರಣಿಗಳು, ವ್ಯವಹಾರಸ್ಥರ ಹೆಸರುಗಳು ಕೇಳಿ ಬರುತ್ತಿದ್ದು, ಆ ಹೆಸರುಗಳನ್ನು ಕೇಳಿದರೆ ಆಘಾತವಾಗುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಶಿವಕುಮಾರ್

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಬಿಟ್ ಕಾಯಿನ್ ವ್ಯವಹಾರದ ದೊಡ್ಡದಾಗಿ ನಡೆಯುತ್ತಿದೆ. ಯಾರ್ಯಾರ ಖಾತೆಗೆ ಏನೇನೋ ಬಂದಿದೆ ಎಂಬ ಮಾಹಿತಿಯೂ ಇದೆ. ಅಷ್ಟು ದೊಡ್ಡ ಮಟ್ಟದಲ್ಲಿ ಖಾತೆ ಹ್ಯಾಕ್ ಮಾಡಿ, ಎಲ್ಲೆಲ್ಲಿಗೆ ಹೇಗೆ ಹಣ ಹೋಗಿದೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಮಾಹಿತಿಯನ್ನು ಕಲೆ ಹಾಕಲು ಯತ್ನಿಸುತ್ತಿದ್ದೇನೆ' ಎಂದು ಅವರು ಹೇಳಿದರು.

ಈ ಪ್ರಕರಣವನ್ನು ಮುಚ್ಚಿ ಹಾಕುವ ಯತ್ನ ನಡೆಯುತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಪ್ರಕರಣವನ್ನು ಮುಚ್ಚಿ ಹಾಕುವುದೇ ಅವರ ದೊಡ್ಡ ಕೆಲಸ. ಅದನ್ನೇ ಅವರು ಮಾಡುವುದು, ಮಾಡುತ್ತಾರೆ' ಎಂದು ಪ್ರತಿಕ್ರಿಯಿಸಿದರು.

2 ಹ್ಯಾಕ್: ₹ 2,283 ಕೋಟಿ ಗಳಿಕೆ !

ಒಂದನೇ ಪುಟದಿಂದ

ಎಫ್‌ಐಆರ್ ಮಾಹಿತಿ ಕೇಳಿದ್ದ ಇ.ಡಿ:

ಬಿಟ್ ಕಾಯಿನ್ ಅಕ್ರಮದ ಬಗ್ಗೆ ಸಿಸಿಬಿ ತನಿಖೆ ನಡೆಸುತ್ತಿರುವಾಗಲೇ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಎಚ್ಚೆತ್ತುಕೊಂಡಿದ್ದರು. ಶ್ರೀಕೃಷ್ಣನ ಪ್ರಕರಣದ ಮಾಹಿತಿ ಕೇಳಿ, 2020ರ ಡಿಸೆಂಬರ್ 1ರಂದು ಸಿಸಿಬಿ ಅಧಿಕಾರಿಗಳಿಗೆ ಇ.ಡಿ ಉಪ ನಿರ್ದೇಶಕ ಎ. ಸಾದಿಕ್ ಮೊಹಮ್ಮದ್ ನೈನಾರ್ ಪತ್ರ ಬರೆದಿದ್ದರು.

'ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣನನ್ನು ಬಂಧಿಸಿ, ಆತನ ಬಗ್ಗೆ ನಿಮ್ಮ ಕಚೇರಿಯಲ್ಲಿ (ಸಿಸಿಬಿ) ತನಿಖೆ ನಡೆಸುತ್ತಿರುವುದು ಗಮನಕ್ಕೆ ಬಂದಿದೆ. ಈ ಪ್ರಕರಣದ ಎಫ್‌ಐಆರ್ ಪ್ರತಿ ಹಾಗೂ ಆರೋಪಗಳ ಪಟ್ಟಿ ಸಮೇತ ಮಾಹಿತಿ ನೀಡಬೇಕೆಂದು ಕೋರುತ್ತೇವೆ' ಎಂದೂ ಪತ್ರದಲ್ಲಿ ಕೋರಿದ್ದರು.

'ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಹಾಗೂ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಶ್ರೀಕೃಷ್ಣನನ್ನು ವಿಚಾರಣೆ ನಡೆಸಬೇಕಿದೆ. ಹೀಗಾಗಿ, ತ್ವರಿತವಾಗಿ ಮಾಹಿತಿ ಕಳುಹಿಸಿ' ಎಂದೂ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು.

₹333 ಕೋಟಿ ದೋಚಿದ ಪ್ರಕರಣಗಳು

- ಕಾಲೇಜಿನಲ್ಲಿದ್ದಾಗಲೇ 'ರೂನೆಸ್ಕೆಪ್ ಡಾಟ್ ಕಾಮ್' ಗೇಮಿಂಗ್ ಸರ್ವರ್ ಹ್ಯಾಕ್ ಮಾಡಿದ್ದ ಶ್ರೀಕೃಷ್ಣ, ₹ 7.48 ಕೋಟಿ ಸಂಪಾದಿಸಿದ್ದ.
- 'ಜಿಜಿ ಪೋಕರ್' ಗೇಮಿಂಗ್ ಸರ್ವರ್ ಹ್ಯಾಕ್ ಮಾಡಿದ್ದ ಆರೋಪಿ, 90 ಬಿಟಿಸಿ (₹41.22 ಕೋಟಿ) ಸಂಪಾದಿಸಿದ್ದ. ಸುನೀಶ್ ಹೆಗ್ಡೆ ಸಹಕಾರ ನೀಡಿದ್ದ
- 'ಬಿಟ್ ಕಾಯಿನ್ ಟಾಲ್ಕ್ ಡಾಟ್ ಒಆರ್‌ಜಿ' ಸರ್ವರ್‌ನ್ನು 2013ರಲ್ಲಿ ಹ್ಯಾಕ್ ಮಾಡಿದ್ದ.
- 'ಬಿಟ್ ಸೆಂಟ್ರಲ್' ಸರ್ವರ್ ಹ್ಯಾಕ್ ಮಾಡಿ, ₹ 74.89 ಲಕ್ಷ ಗಳಿಸಿದ್ದ.
- 'ಸ್ಲಸ್ ಪೂಲ್' ಸರ್ವರ್ ಹ್ಯಾಕ್ ಮಾಡಿದ್ದ ಶ್ರೀಕೃಷ್ಣ, ₹ 37.44 ಲಕ್ಷ ದೋಚಿದ್ದ.
- 2017ರಲ್ಲಿ 'ಬಿಟ್ ಕ್ಲಬ್ ನೆಟ್‌ವರ್ಕ್' ಸರ್ವರ್ ಹ್ಯಾಕ್ ಮಾಡಿದ್ದ ಶ್ರೀಕೃಷ್ಣ, ಅದರಿಂದ 100 ಬಿಟಿಸಿ (₹ 45.66 ಕೋಟಿ) ಗಳಿಸಿದ್ದ.
- ಚೀನಾ ತಂತ್ರಜ್ಞರು ಅಭಿವೃದ್ಧಿಪಡಿಸಿದ್ದ 'ಪಿಪಿ ಪೋಕರ್' ಗೇಮಿಂಗ್ ಸರ್ವರ್‌ನ್ನು 2017–18ರಲ್ಲಿ ಹ್ಯಾಕ್ ಮಾಡಿ ₹ 2 ಕೋಟಿ ಗಳಿಸಿದ್ದ.
- 2017ರ ಆಗಸ್ಟ್‌ನಲ್ಲಿ 'ಸಿಸಿಐ ಪನಮ್' ಜಾಲತಾಣ ಹ್ಯಾಕ್ ಮಾಡಿ ವೆಬ್ ಪ್ಯಾನಲ್ ತನ್ನ ತೆಕ್ಕೆಗೆ ತೆಗೆದುಕೊಂಡಿದ್ದ.
- 'ಪೋಕರ್ ಬಾಜಿ' ಗೇಮಿಂಗ್ ಸರ್ವರ್ ಹ್ಯಾಕ್ ಮಾಡಿದ್ದ. ಆಟಗಾರರಿಗೆ ಅಕ್ರಮವಾಗಿ ಗೋಲ್ಡ್ ಕಾಯಿನ್ ಮಾರಾಟ ಮಾಡಿ ಆರ್‌ಬಿಎಲ್ ಬ್ಯಾಂಕ್‌ನಿಂದ ₹ 70 ಲಕ್ಷವನ್ನು ತನ್ನ ಖಾತೆಗೆ ವರ್ಗಾಯಿಸಿಕೊಂಡಿದ್ದ. ಆದರೆ, ಈ ಪ್ರಕರಣದ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಹಣ ವಾಪಸ್ ಹೋಗಿತ್ತು.
- 2018ರ ನವೆಂಬರ್‌ನಲ್ಲಿ 'ಹೆಲಿಕ್ಸ್ ಮಿಕ್ಸರ್' ಹ್ಯಾಕ್ ಮಾಡಿದ್ದ ಆರೋಪಿ, 510 ಬಿಟಿಸಿ (₹ 232.90 ಕೋಟಿ) ಗಳಿಸಿದ್ದ.
- 'ಪೋಕರ್ ದಂಗಲ್' ಹಾಗೂ 'ಪೋಕರ್ ಬಾಜಿ' ಗೇಮಿಂಗ್ ಜಾಲತಾಣವನ್ನು 2015ರ ಏಪ್ರಿಲ್‌ನಲ್ಲಿ ಹ್ಯಾಕ್ ಮಾಡಿದ್ದ. ಅದರಿಂದ ₹ 1.50 ಕೋಟಿ ದೋಚಿದ್ದ.

'ಬಿಟ್ ಕಾಯಿನ್: ವರದಿ ಕೇಳಿದ ಪಿಎಂ ಕಚೇರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಟ್ ಕಾಯಿನ್ ಹಗರಣದ ಮಾಹಿತಿ ಪ್ರಧಾನಿ ಕಾರ್ಯಾಲಯಕ್ಕೂ ತಲುಪಿದ್ದು, ವರದಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ಬಂದಿದೆ. ಈ ಪ್ರಕರಣದ ತನಿಖೆಯ ಸತ್ಯಾಂಶ ಹೊರಬಂದರೆ, ಅನೇಕ ನಾಯಕರ ಕುರ್ಚಿ ಅಲುಗಾಡುತ್ತದೆ. ರಾಜ್ಯ ಸರ್ಕಾರಕ್ಕೆ ಕಂಟಕ ಆಗಬಹುದು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದರು.


ರಾಮಲಿಂಗಾ ರೆಡ್ಡಿ

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಈ ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನಿಸಲಾಗುತ್ತಿದೆ. ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಬೇಕು. ಉಳಿದ ಯಾವುದೇ ತನಿಖಾ ಸಂಸ್ಥೆ ಮೇಲೆ ನಂಬಿಕೆ ಇಲ್ಲ' ಎಂದರು.

'ಬಿಟ್ ಕಾಯಿನ್ ದಂಧೆಯಲ್ಲಿ ರಾಜ್ಯದ ಇಬ್ಬರು ಪ್ರಭಾವಿ ನಾಯಕರು ಭಾಗಿಯಾಗಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿ ನೋಡಿದ್ದೇನೆ. ಸುಮಾರು ₹ 10 ಸಾವಿರ ಕೋಟಿ ವಹಿವಾಟಿನ ಅನುಮಾನ ಇದೆ' ಎಂದರು.

'ಸಿದ್ದರಾಮಯ್ಯ ಅವರು ಈ ಬಗ್ಗೆ ಟ್ವೀಟ್ ಮಾಡಿದ್ದಾರೆ. ಈ ದಂಧೆಯ ರೂವಾರಿ ಶ್ರೀಕೃಷ್ಣ ಅವರನ್ನು ಬಂಧಿಸಲು ಸರ್ಕಾರ ಹಿಂದುಮುಂದು ನೋಡಿದ್ದು ಯಾಕೆ' ಎಂದೂ ಪ್ರಶ್ನಿಸಿದರು.

ಉತ್ತರ ಪ್ರದೇಶ: ಎಸ್‌ಪಿ ಜತೆ ಮೈತ್ರಿ ಮಾತುಕತೆ–ಆರ್‌ಎಲ್‌ಡಿ ಹೇಳಿಕೆ

ಮಥುರಾ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷದ ನಡೆಯಲಿರುವ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳಲು ಮಾತುಕತೆ ನಡೆಯುತ್ತಿದೆ ಎಂದು ರಾಷ್ಟ್ರೀಯ ಲೋಕದಳದ (ಆರ್‌ಎಲ್‌ಡಿ) ಮುಖ್ಯಸ್ಥ ಜಯಂತ್ ಚೌಧರಿ ಬುಧವಾರ ಹೇಳಿದ್ದಾರೆ.

ಆಡಳಿತಾರೂಢ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅವರು, ಸರ್ಕಾರಿ ಆಸ್ತಿಗಳನ್ನು ಮಾರಾಟ ಮಾಡುವ ಪಕ್ಷವನ್ನು ರಾಜ್ಯದ ಜನರು ಅಧಿಕಾರದಿಂದ ಕೆಳಗಿಳಿಸಲಿದ್ದಾರೆ ಎಂದರು.

ಇಲ್ಲಿ ಆಶೀರ್ವಾದ ಪಥ ಯಾತ್ರೆಯನ್ನು ಉದ್ದೇಶಿಸಿ ಮಾತನಾಡಿದ ಚೌಧರಿ, ಉತ್ತರ ಪ್ರದೇಶದ ಭವಿಷ್ಯವನ್ನು ಬದಲಾಯಿಸುವ ಕೀಲಿಯು ರೈತರು ಮತ್ತು ಯುವ ಸಮುದಾಯದ ಕೈಯಲ್ಲಿದೆ ಎಂದು ಹೇಳಿದರು.

ಮೇಳೈಸಿದ ಭಕ್ತರ ಜಯಘೋಷ

ದರ್ಶನ ಕರುಣಿಸಿದ ಹಾಸನಾಂಬೆ

ಪ್ರಜಾವಾಣಿ ವಾರ್ತೆ

ಹಾಸನ: ಭಕ್ತರ ಜಯಘೋಷದ ನಡುವೆ ನಗರದ ಅಧಿದೇವತೆ ಹಾಸನಾಂಬೆ ವರ್ಷದ ನಂತರ ಗುರುವಾರ ವಿಶ್ವರೂಪ ದರ್ಶನ ಕರುಣಿಸಿದಳು. ಸಂಪ್ರದಾಯದಂತೆ ಮೈಸೂರು ಅರಸು ಮನೆತನದ ನರಸಿಂಹರಾಜ ಅರಸ್, ದೇಗುಲದ ಬಾಗಿಲ ಎದುರು ಪೂಜೆ ಸಲ್ಲಿಸಿ ಬಾಳೆ ಕಂದು ಕತ್ತರಿಸಿದರು.

ನಂತರ ಪ್ರಧಾನ ಅರ್ಚಕರು ಮಧ್ಯಾಹ್ನ 12.19ಕ್ಕೆ ಆದಿಚುಂಚನಗಿರಿ ಕ್ಷೇತ್ರದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಗರ್ಭಗುಡಿ ಬಾಗಿಲಿನ ಬೀಗ ತೆರೆಯುತ್ತಿದ್ದಂತೆ ಭಕ್ತರ ಜಯಘೋಷ ಮೇಳೈಸಿತು.

ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಶಾಸಕ ಪ್ರೀತಂ ಗೌಡ, ಜಿಲ್ಲಾಧಿಕಾರಿ ಆರ್.ಗಿರೀಶ್, ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸ್ ಗೌಡ, ಶಾಖಾ ಮಠದ ಶಂಭುನಾಥ ಸ್ವಾಮೀಜಿ ಸೇರಿದಂತೆ ಸಾರ್ವಜನಿಕರು ಆಭರಣಾಲಂಕಾರವಿಲ್ಲದ ದೇವಿಯ ವಿಶ್ವರೂಪ ದರ್ಶನ ಪಡೆದರು.

ಕೋವಿಡ್ ಲಸಿಕೆ ಪ್ರಮಾಣ ಪತ್ರ ಹಾಗೂ ಗುರುತಿನ ಕಾರ್ಡ್ ಹೊಂದಿರುವವರಿಗೆ ಮಾತ್ರ ದೇವಿ ದರ್ಶನಕ್ಕೆ ಅವಕಾಶ ನೀಡಲಾಗಿದೆ. ಅಶ್ವಿಜ ಮಾಸದ ಕೃಷ್ಣಪಕ್ಷದ ಪ್ರಥಮ ಗುರುವಾರ ದೇವಸ್ಥಾನದ ಗರ್ಭಗುಡಿ ಬಾಗಿಲು ತೆರೆದಿದ್ದು, ಬಲಿಪಾಡ್ಯಮಿ ಮರು ದಿನವಾದ ನ.6ರಂದು ಬಾಗಿಲು ಮುಚ್ಚಲಾಗುವುದು. ಮೊದಲ ಮತ್ತು ಕೊನೆ ದಿನ ಹೊರತುಪಡಿಸಿ ಉಳಿದ ದಿನಗಳಲ್ಲಿ ನಿತ್ಯ ಬೆಳಿಗ್ಗೆ 6ರಿಂದ ರಾತ್ರಿ 8ರವರೆಗೆ ದೇವಿ ದರ್ಶನ ಮಾಡಬಹುದು.

ಕೋವಿಡ್ ಕಾರಣದಿಂದ ವಯೋವೃದ್ಧರು, ಮಕ್ಕಳನ್ನು ಕರೆತರದಂತೆ ಜಿಲ್ಲಾಡಳಿತ ಸಲಹೆ ನೀಡಿದೆ.

ಅರಸುವಂಶಸ್ಥ ನರಸಿಂಹರಾಜ ಅರಸ್ ಬಾಳೆ ಕಂದು ಕಡಿಯುವ ಮೂಲಕ ಹಾಸನಾಂಬೆ ಬಾಗಿಲು ತೆರೆಯಲು ಅನುವು ಮಾಡಿಕೊಟ್ಟರು

ಶಾಸಕ ಶ್ರೀಮಂತ ಪಾಟೀಲ, ಪುತ್ರರಿಬ್ಬರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಮೀನು ವಿವಾದಕ್ಕೆ ಸಂಬಂಧಿಸಿ ಕಾಗವಾಡ ಕ್ಷೇತ್ರದ ಬಿಜೆಪಿ ಶಾಸಕ ಶ್ರೀಮಂತ ಪಾಟೀಲ, ಅವರ ಪುತ್ರರಾದ ಶ್ರೀನಿವಾಸ ಮತ್ತು ಯೋಗೇಶ ಸೇರಿ 15 ರಿಂದ 16 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಕಾಗವಾಡ ತಾಲ್ಲೂಕಿನ ನವಿಲೇಹಾಳ ಗ್ರಾಮದ ನಿವಾಸಿ ದೇವದಾಸ ದೊಂಡಿಬಾ ಶೇರಖಾನೆ ನೀಡಿದ ದೂರಿನ ಮೇರೆಗೆ ಕಾಗವಾಡ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ.

'ಜಮೀನಿನ ವಿವಾದಕ್ಕೆ ಸಂಬಂಧಿಸಿ ಶಾಸಕ ಶ್ರೀಮಂತ ಪಾಟೀಲ ಅವರಿಂದ ಜೀವ ಬೇದರಿಕೆ ಇದೆ. ಶಾಸಕರು ಮತ್ತವರ ಪುತ್ರರ ಸೂಚನೆ ಮೇರೆಗೆ ಆಶೀಶ್ ಗಜಾನನ ಪಾಟೀಲ ನೇತೃತ್ವದಲ್ಲಿ ಬಂದ ಕೆಲವರು ನಮ್ಮ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದು, ಜಾತಿ ಪ್ರಸ್ತಾಪಿಸಿ ಅವಾಚ್ಯವಾಗಿ ನಿಂದಿಸಿದ್ದಾರೆ. ನನ್ನ ಮೇಲೆ ಹಲ್ಲೆ ನಡೆಸಿ, ಜಮೀನು ಬಿಟ್ಟು ಹೋಗದಿದ್ದರೆ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಒಡ್ಡಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

'ಜಮೀನಿನ ವಿಚಾರದಲ್ಲಿ ನ್ಯಾಯಾಲಯದಲ್ಲಿ ಸಿವಿಲ್ ದಾವೆ ನಡೆಯುತ್ತಿದೆ. ನಮ್ಮ ಜಮೀನಿನಲ್ಲಿ ಶಾಸಕರು ಗೊಬ್ಬರ ಕಾರ್ಖಾನೆ ನಿರ್ಮಿಸಲು ಮುಂದಾಗಿದ್ದಾರೆ. ಕೇಳಲೂ ಹೋದರೆ ಬೆಂಬಲಿಗರ ಮೂಲಕ ಹಲ್ಲೆ ಮಾಡಿಸುತ್ತಿದ್ದಾರೆ' ಎಂದು ದೇವದಾಸ ಆರೋಪಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಶ್ರೀಮಂತ ಪಾಟೀಲ, 'ಸುಳ್ಳು ಆರೋಪ ಮಾಡಲಾಗಿದೆ. ಈ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಪೊಲೀಸರು ತನಿಖೆ ನಡೆಸಿ ಸತ್ಯಾಸತ್ಯತೆ ಬಯಲಿಗೆಳೆಯಲಿ' ಎಂದರು.

20 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿ ದಾಖಲೆ ಸೃಷ್ಟಿಸಿದ ಕಾರ್ಯಕ್ರಮ

ನಾಡಿನ ದಶದಿಕ್ಕಿನಲ್ಲೂ ಅನುರಣಿಸಿದ ಕನ್ನಡ ಗಾಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡಕ್ಕಾಗಿ ನಾವು’ ಅಭಿಯಾನದ ಅಂಗವಾಗಿ ಗುರುವಾರ ಏರ್ಪಡಿಸಿದ್ದ ಕನ್ನಡ ಗೀತಗಾಯನ ಕಾರ್ಯಕ್ರಮ ರಾಜ್ಯದ ಮೂಲೆ ಮೂಲೆಗಳಲ್ಲೂ ಅನುರಣಿಸಿತು. ಎಲ್ಲ ಜಿಲ್ಲೆಗಳಲ್ಲೂ ಕನ್ನಡಾಭಿಮಾನಿಗಳು ಬಣ್ಣ ಬಣ್ಣದ ಉಡುಪನ್ನು ತೊಟ್ಟು ಸಂಭ್ರಮದಿಂದ ಕನ್ನಡ ಗೀತೆಯನ್ನು ಮೊಳಗಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹುಬ್ಬಳ್ಳಿಯ ಕನ್ನಡಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ‘ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು...’ ಗೀತೆಯನ್ನು ಹಾಡಿ ಸಂಭ್ರಮಿಸಿದರು. ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಷಿ ಒಡಿಶಾದಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ‘ಬಾರಿಸು ಕನ್ನಡ ಡಿಂಡಿಮವ’ ಗೀತೆ ಹಾಡಿದ್ದಲ್ಲದೇ, ತಮ್ಮ ಟ್ವಿಟರ್ ಖಾತೆಯಲ್ಲಿ ವಿಡಿಯೋ ಅಪ್‌ಲೋಡ್ ಮಾಡಿದರು.

ಬೆಂಗಳೂರಿನ ವಿಧಾನಸೌಧದ ಮೆಟ್ಟಿಲುಗಳ ಮೇಲೆ, ಮೆಟ್ರೊ ರೈಲು, ಬಸ್ ನಿಲ್ದಾಣ, ಆಟೋ ನಿಲ್ದಾಣ, ಶಾಲಾ–ಕಾಲೇಜುಗಳು, ವಿಶ್ವವಿದ್ಯಾಲಯ, ಸರ್ಕಾರಿ ಕಚೇರಿಗಳು, ಉದ್ಯಾನಗಳು, ಮಂಗಳೂರು–ಉಡುಪಿ ಕಡಲ ಕಿನಾರೆ, ವಿಜಯಪುರದ ಗೋಳಗುಮ್ಮಟ, ಹಂಪಿಯ ಕಲ್ಲಿನ ರಥದ ಮುಂದೆ, ಉಡುಪಿಯ ಕೃಷ್ಣಮಠದ ರಾಜಾಂಗಣದಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಸಾಮೂಹಿಕವಾಗಿ ಕನ್ನಡ ಗೀತೆಗಳನ್ನು ಹಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಗಳ ಪ್ರಕಾರ, ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಒಟ್ಟು 20 ಲಕ್ಷ ಜನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳು, ತಾಲ್ಲೂಕು ಕೇಂದ್ರಗಳು ಹಾಗೂ ಎಲ್ಲ ಸರ್ಕಾರಿ ಕಚೇರಿಗಳ ಆವರಣದಲ್ಲಿ ಕನ್ನಡ ಗೀತ ಗಾಯನದ ಕಂಪು ಹರಡಿತ್ತು. ಬೆಂಗಳೂರಿನ ಜನ ನಿಬಿಡ ವೃತ್ತಗಳಲ್ಲಿ ಸಂಚಾರ ಪೊಲೀಸರು ಬೆಳಿಗ್ಗೆ 11 ಕ್ಕೆ ಸರಿಯಾಗಿ ಮೂರು ಕನ್ನಡ ಗೀತೆಗಳಿಗೆ ಧ್ವನಿಗೂಡಿಸಿ ಕನ್ನಡಾಭಿಮಾನ ಮೆರೆದರು.

ಮಂಗಳೂರಿನ ತಣ್ಣೀರುಬಾವಿ ಕಡಲ ಕಿನಾರೆಯಲ್ಲಿ ನಗರದ ವಿವಿಧ ಶಾಲೆಗಳ ನೂರಾರು ವಿದ್ಯಾರ್ಥಿಗಳು ಬಿಸಿಲಿನ ತಾಪವನ್ನೂ ಲೆಕ್ಕಿಸದೇ ಗುರುವಾರ ‘ಗೀತಗಾಯನ’ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಕಾಲ ಬುಡದಲ್ಲಿ ಕಾದ ಮರಳು, ತಲೆಯ ಮೇಲೆ ಉರಿವ ಸೂರ್ಯನ ತಾಪವನ್ನು ತಾಳದೆ ಒಂದಿಬ್ಬರು ಮಕ್ಕಳು ಬಸವಳಿದು ಬಿದ್ದರೂ ಒಂದೆರಡು ನಿಮಿಷಗಳಲ್ಲಿ ಸುಧಾರಿಸಿ ಮತ್ತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ವಿಶೇಷ. ಮಂಡ್ಯದ ಜಿಲ್ಲಾ ಕ್ರೀಡಾಂಗಣದಲ್ಲಿ ಮೂರು ಸಾವಿರ ವಿದ್ಯಾರ್ಥಿಗಳು ಕನ್ನಡ ಗೀತೆಯನ್ನು ಹಾಡಿದರು.

ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಬಳಿಕ ನಡೆಯುತ್ತಿರುವ ರಾಜ್ಯ ವ್ಯಾಪಿ ಅತಿ ದೊಡ್ಡ ಸಾಂಸ್ಕೃತಿಕ ಕಾರ್ಯಕ್ರಮ ಇದೆಂಬ ಹೆಗ್ಗಳಿಕೆಗೂ ಪಾತ್ರವಾಯಿತು. ಬೆಂಗಳೂರಿನ ಅಧಿಕಾರ ಶಕ್ತಿ ಕೇಂದ್ರ ವಿಧಾನಸೌಧದ ಮೆಟ್ಟಿಲ ಮೇಲೆ ರಂಗು ರಂಗಿನ ವಸ್ತ್ರ ತೊಟ್ಟಿದ್ದ ಸಚಿವಾಲಯದ ಪುರುಷ ಮತ್ತು ಮಹಿಳಾ ಅಧಿಕಾರಿಗಳು, ಸಿಬ್ಬಂದಿ, ಪೊಲೀಸರು ಶಿಷ್ಟಾಚಾರವನ್ನು ಬದಿಗಿಟ್ಟು ಒಟ್ಟಿಗೆ ನಿಂತು ಕನ್ನಡ ಗೀತೆಗಳನ್ನು ಹಾಡಿದರು. ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಕೂಡ ಕನ್ನಡ ಗಾಯನಕ್ಕೆ ಧ್ವನಿಗೂಡಿಸಿದ್ದರು. ನಾಡ ಗೀತೆ ಹಾಡುವುದರೊಂದಿಗೆ ಆರಂಭವಾದ ಗೀತಗಾಯನದಲ್ಲಿ ‘ಬಾರಿಸು ಕನ್ನಡ ಡಿಂಡಿಮವ’, ‘ಜೋಗದ ಸಿರಿ ಬೆಳಕಿನಲ್ಲಿ’, ‘ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು’ ಗೀತೆಗಳನ್ನು ಹಾಡಲಾಯಿತು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸಚಿವಾಲಯ ಸಿಬ್ಬಂದಿ ಮತ್ತು ಕನ್ನಡಾಭಿಮಾನಿಗಳು ಗೀತಗಾಯನ ಮಾಡಿದರು. ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಕನ್ನಡ ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಇದ್ದರು –ಪ್ರಜಾವಾಣಿ ಚಿತ್ರ

ಎಲ್ಲೆಲ್ಲಿ ಎಷ್ಟು ಜನರಿಂದ ಗಾಯನ

- ಬೆಂಗಳೂರು ವಿಭಾಗದ 125 ಸ್ಥಳಗಳಲ್ಲಿ 1,61,232 ಮಂದಿ ಕನ್ನಡ ಗೀತೆಗಳಿಗೆ ಧ್ವನಿಗೂಡಿಸಿದರು.
- ಮೈಸೂರು ವಿಭಾಗದಲ್ಲಿ 96 ಸ್ಥಳಗಳಲ್ಲಿ 5,41,365 ಮಂದಿ ಗಾಯನದಲ್ಲಿ ಪಾಲ್ಗೊಂಡಿದ್ದರು.
- ಬೆಳಗಾವಿ ವಿಭಾಗದ 105 ಸ್ಥಳಗಳಲ್ಲಿ 10,74,418 ಮಂದಿ ಭಾಗವಹಿಸಿದ್ದರು.
- ಕಲಬುರಗಿ ವಿಭಾಗದಲ್ಲಿ 60 ಸ್ಥಳಗಳಲ್ಲಿ 77,125 ಮಂದಿ ಗೀತ ಗಾಯನದ ಮಾಧುರ್ಯಕ್ಕೆ ಜೊತೆಯಾದರು.
- ದೆಹಲಿ, ಮುಂಬಯಿ, ಕಾಸರಗೋಡು, ಪುಣೆ ಸೇರಿ ಹೊರ ರಾಜ್ಯಗಳಿಂದ 31 ಸ್ಥಳಗಳಲ್ಲಿ 350 ಮಂದಿ ಭಾಗವಹಿಸಿದ್ದರು.
- ಒಟ್ಟು 447 ಸ್ಥಳಗಳಲ್ಲಿ 20,49,743 ಮಂದಿ ಭಾಗವಹಿಸಿದ್ದರು

ಜಾರ್ಜಿಯಾದಲ್ಲಿ ರಾಜ್ಯೋತ್ಸವ ಆಚರಣೆಗೆ ಅನುಮೋದನೆ

ಹುಬ್ಬಳ್ಳಿ: ಯುರೋಪ್‌ನ ಜಾರ್ಜಿಯಾದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಿಸಲು ಅನುಮೋದನೆ ನೀಡಿ, ಅಲ್ಲಿಯ ಸರ್ಕಾರ ಕನ್ನಡದ ಮಹತ್ವವನ್ನು ಉಲ್ಲೇಖಿಸಿ ಅಧಿಕೃತವಾಗಿ ಘೋಷಣೆ ಮಾಡಿದೆ.

ಕನ್ನಡ ಭಾಷೆಯ ಇತಿಹಾಸ ಮತ್ತು ಅದರ ಮಹತ್ವವನ್ನು ಕೊಂಡಾಡಿರುವ ಜಾರ್ಜಿಯಾದ ಗವರ್ನರ್ ಬ್ರಿಯಾನ್ ಪಿ. ಕೆಂಪ್, ‘ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡವನ್ನು ನಮ್ಮ ಶಿಕ್ಷಣ ಇಲಾಖೆಯು ಐತಿಹಾಸ ಭಾಷೆ ಎಂದು ಗುರುತಿಸಿದೆ. ಕನ್ನಡ ಭಾಷೆ ಮತ್ತು ಕರ್ನಾಟಕದ ಮಹತ್ವ ಸಾರುವ ರಾಜ್ಯೋತ್ಸವ ಆಚರಣೆಯನ್ನು ಪ್ರತಿ ವರ್ಷ ನ. 1ರಂದು ಇಲ್ಲಿನ ಕನ್ನಡಿಗರು ಆಚರಿಸುತ್ತಾರೆ’ ಎಂದು ಹೇಳಿದ್ದಾರೆ.

‘ಜಾರ್ಜಿಯಾದಲ್ಲಿ ಸುಮಾರು 500 ಕನ್ನಡಿಗರ ಕುಟುಂಬಗಳಿವೆ. ಇಲ್ಲಿರುವ ನೃಪತುಂಗ ಕನ್ನಡ ಕೂಟವು 30 ವರ್ಷಗಳಿಂದ ರಾಜ್ಯೋತ್ಸವ ಆಚರಿಸಿಕೊಂಡು ಬರುತ್ತಿದೆ. ಅಂದು ಭಾವಗೀತೆ, ಜನಪದ ಗೀತೆ, ಸಿನಿಮಾ ಗೀತೆಗಳ ಗಾಯನ, ನಾಟಕ ಪ್ರದರ್ಶನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಬಾರಿ ಕೋವಿಡ್–19 ಕಾರಣದಿಂದಾಗಿ ವರ್ಚ್ಯುವಲ್ ಆಗಿ ಕಾರ್ಯಕ್ರಮ ನಡೆಯಲಿದೆ’ ಎಂದು ಕೂಟದ ಸದಸ್ಯ ಪ್ರಕಾಶ್ ರಾಮಚಂದ್ರಯ್ಯ ‘ಪ್ರಜಾವಾಣಿ’ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರ ಕವಿ ಕುವೆಂಪು ರಚಿಸಿದ ಬಾರಿಸು ಕನ್ನಡ ಡಿಂಡಿಮವ.. ಓ ಕರ್ನಾಟಕ ಹೃದಯ ಶಿವ.. ಗಾನದೊಂದಿಗೆ ಒಡಿಶಾದಿಂದ ಭಾಗಿಯಾಗಿದ್ದೇನೆ

ಪ್ರಲ್ಹಾದ ಜೋಷಿ
ಕೇಂದ್ರ ಸಚಿವ



ಸಾಮಾನ್ಯ ಕನ್ನಡಿಗರು ಪ್ರೀತಿ ಮತ್ತು ಅಭಿಮಾನದಿಂದ ಭಾಗವಹಿಸಿದ ಈ ಕಾರ್ಯಕ್ರಮ ದಾಖಲೆ ಸೃಷ್ಟಿಸಿದೆ. ‘ಕನ್ನಡತನ’ ಪುಟಿದೇಳಲು ಇದು ಸಹಾಯಕವಾಗಿದೆ.

ವಿ.ಸುನಿಲ್ ಕುಮಾರ್
ಕನ್ನಡ ಮತ್ತು ಸಂಸ್ಕೃತಿ ಸಚಿವ

ಕನ್ನಡಕ್ಕಾಗಿ ಕಟಿಬದ್ಧರಾಗುವ ಪ್ರತಿಜ್ಞೆ

‘ಕನ್ನಡ ನಾಡಿನ ಜವಾಬ್ದಾರಿಯುತ ಪ್ರಜೆಯಾಗಿ, ಕನ್ನಡದಲ್ಲೇ ಮಾತನಾಡುತ್ತೇನೆ. ಕನ್ನಡದಲ್ಲೇ ಬರೆಯುತ್ತೇನೆ, ನಿತ್ಯ ವ್ಯವಹಾರದಲ್ಲಿ ಕನ್ನಡವನ್ನೇ ಬಳಸುತ್ತೇನೆ. ಕನ್ನಡ ನಾಡಿನಲ್ಲಿ ವಾಸವಾಗಿರುವ ಕನ್ನಡೇತರರಿಗೂ ಪ್ರೀತಿಯಿಂದ ಕನ್ನಡ ಕಲಿಸುತ್ತೇನೆ. ಕನ್ನಡ ನಾಡು-ನುಡಿ, ಸಂಸ್ಕೃತಿ ಹಾಗೂ ಪರಂಪರೆ ಉಳಿಸಲು ಕಟಿಬದ್ಧವಾಗಿರುತ್ತೇನೆ’ ಎಂದು ಸಚಿವ ಸುನಿಲ್ ಕುಮಾರ್ ವಿಧಾನಸೌಧದ ಮುಂಭಾಗ ನೆರೆದವರಿಗೆ ಪ್ರತಿಜ್ಞೆ ಬೋಧಿಸಿದರು.

‘ಕನ್ನಡ ಉಳಿದರೆ ನಾವೂ ಉಳಿಯುತ್ತೇವೆ’

ಲಕ್ಷ ಕಂಠಗಳಿಂದ ಕನ್ನಡ ಗೀತೆಗಳ ಗಾಯನಕ್ಕೆ ದನಿಗೂಡಿಸಿದ ಮುಖ್ಯಮಂತ್ರಿ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಭಾಷೆ ಉಳಿದರೆ ನಾವೂ ಉಳಿಯುತ್ತೇವೆ ಎಂಬ ಭಾವನೆಯಿಂದ ಪ್ರತಿಯೊಬ್ಬರೂ ಕನ್ನಡ ಭಾಷೆ ಬಳಸಬೇಕು. ಯಾವ ಭಾಷೆಯ ಬೇರುಗಳು ಗಟ್ಟಿಯಾಗಿರುತ್ತದೊ ಅದನ್ನು ಯಾರಿಂದಲೂ ಕಡೆಗಣಿಸಲು ಸಾಧ್ಯವಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಮಾತಾಡ್ ಮಾತಾಡ್ ಕನ್ನಡ’ ಅಭಿಯಾನದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆ ವತಿಯಿಂದ ಹುಬ್ಬಳ್ಳಿಯಲ್ಲಿ ಗುರುವಾರ ಆಯೋಜಿಸಿದ್ದ ಲಕ್ಷ ಕಂಠಗಳಿಂದ ಕನ್ನಡದ ಶ್ರೇಷ್ಠತೆ ಸಾರುವ ಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಹೊಸ ಶಿಕ್ಷಣ ನೀತಿಯಲ್ಲಿ ಪ್ರಾಥಮಿಕ ಹಂತದಿಂದ ಪದವಿಯವರೆಗೆ ಮಾತೃಭಾಷೆಯಲ್ಲಿ ಕಲಿಯಲು ಆದ್ಯತೆ ನೀಡಲಾಗಿದೆ. ಕನ್ನಡದಲ್ಲಿ ಎಂಜಿನಿಯರಿಂಗ್ ಶಿಕ್ಷಣ ನೀಡಲು ರಾಜ್ಯದ 15 ಕಾಲೇಜುಗಳು ಮುಂದೆ ಬಂದಿವೆ. ಕನ್ನಡ ತಂತ್ರಜ್ಞಾನದ ಭಾಷೆಯಾಗಿಯೂ ಬೆಳೆಯಬೇಕಿದೆ. ಪೂರಕಕ್ರಮಗಳನ್ನು ಸರ್ಕಾರ ಕೈಗೊಳ್ಳಲಿದೆ’ ಎಂದರು.

ಪ್ರತಿ ತಿಂಗಳು ಕಾರ್ಯಕ್ರಮ: ‘ಕನ್ನಡಕ್ಕಾಗಿ ನಾವು’ ಅಭಿಯಾನದಂತಹ ಇನ್ನಷ್ಟು ವಿನೂತನ ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ಮಾಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನಿಲ್ ಕುಮಾರ್ ಅವರಿಗೆ ಸೂಚನೆ ನೀಡುವೆ’ ಎಂದರು. ‘ಬೆಳಗಾವಿಯಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಿಸುವ ಕುರಿತು ಶುಕ್ರವಾರದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಾರ್ಯಕ್ರಮದಲ್ಲಿ ಕುವೆಂಪು ರಚಿಸಿರುವ ‘ಬಾರಿಸು ಕನ್ನಡ ಡಿಂಡಿಮವಾ’, ಡಾ. ಕೆ.ಎಸ್. ನಿಸಾರ್ ಅಹ್ಮದ್ ಅವರ ‘ಜೋಗದ ಸಿರಿ ಬೆಳಕಿನಲ್ಲಿ’ ಹಾಗೂ ಹಂಸಲೇಖ ಅವರ ‘ಹುಟ್ಟಿದರೆ ಕನ್ನಡ ನಾಡಲಿ ಹುಟ್ಟಬೇಕು’ ಗೀತೆಗಳ ಗಾಯನಕ್ಕೆ ಮುಖ್ಯಮಂತ್ರಿ ಕೂಡ ದನಿಗೂಡಿಸಿದರು.

ಸುರಪುರ ಶಾಸಕ ರಾಜುಗೌಡ ಹಾಗೂ ಮಾಜಿ ಸಂಸದ ಪ್ರೊ. ಐ.ಜಿ. ಸನದಿ ಮುಖ್ಯಮಂತ್ರಿಗೆ ಸಾಥ್ ನೀಡಿದರು.


ಹುಬ್ಬಳ್ಳಿಯ ಅಶೋಕ ನಗರದ ಕನ್ನಡ ಭವನದಲ್ಲಿ ಗುರುವಾರ ಮಾತಾಡ್ ಮಾತಾಡ್ ಕನ್ನಡ ಕಾರ್ಯಕ್ರಮದ ಅಂಗವಾಗಿ ನಡೆದ ಲಕ್ಷ ಕಂಠಗಳಲ್ಲಿ ಕನ್ನಡ ಗೀತಗಾಯನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕನ್ನಡ ಹಾಡುಗಳನ್ನು ಹಾಡಿದರು –ಪ್ರಜಾವಾಣಿ ಚಿತ್ರ

ಕವಾಯತು: ನ.1 ರಿಂದ ಕನ್ನಡದಲ್ಲೇ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪೊಲೀಸ್ ಕವಾಯತು ವೇಳೆ ಇಂಗ್ಲಿಷ್ ಬದಲು ಕನ್ನಡದಲ್ಲೇ ನಿರ್ದೇಶನ (ಕಾಶನ್) ನೀಡುವ ಪದ್ಧತಿಯನ್ನು ನವೆಂಬರ್ 1 ರಿಂದ ಜಾರಿ ಮಾಡಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಇದಕ್ಕಾಗಿ ಈಗಾಗಲೇ ಕನ್ನಡದಲ್ಲಿ ತರಬೇತಿ ನೀಡಲಾಗುತ್ತಿದೆ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸ್ವಾತಂತ್ರ್ಯ ಬಂದ ಲಾಗಾಯ್ತಿನಿಂದಲೂ ಕವಾಯತು ಕಾಶನ್ ಇಂಗ್ಲಿಷ್‌ನಲ್ಲೇ ನೀಡಲಾಗುತ್ತಿದೆ. ಅದನ್ನು ಬದಲಿಸಿ ಕನ್ನಡದಲ್ಲಿ ಕವಾಯತು ನಿರ್ದೇಶನ ಆರಂಭಿಸಲು ವಿಶೇಷ ಪ್ರಯತ್ನ ನಡೆಸಲಾಗಿದೆ ಎಂದು ಅವರು ಹೇಳಿದರು.

ಅನಕ್ಷರಸ್ಥ ಕೈದಿಗಳಿಗೆ ಅಕ್ಷರ ಕಲಿಕೆ: ರಾಜ್ಯದ ವಿವಿಧ ಜೈಲುಗಳಲ್ಲಿರುವ ಅನಕ್ಷರಸ್ಥ ಕೈದಿಗಳಿಗೆ ಅಕ್ಷರ ಕಲಿಸಲಾಗುವುದು. ರಾಜ್ಯದಲ್ಲಿ 16 ಸಾವಿರ ಕೈದಿಗಳಿದ್ದು, ಸುಮಾರು 6 ಸಾವಿರ ಅನಕ್ಷರಸ್ಥರಿರಬಹುದು ಎಂದು ಅಂದಾಜು ಮಾಡಲಾಗುವುದು. ಹೆಬ್ಬೆಟ್ಟು ಒತ್ತಿ ಜೈಲಿಗೆ ಬಂದವರು ಮರಳಿ ಹೋಗುವಾಗ ಸಹಿ ಹಾಕುವ ಮಟ್ಟಕ್ಕೆ ಅಕ್ಷರ ಕಲಿತಿರಬೇಕು. ಅಕ್ಷರ ಕಲಿಕೆಗೆ ಕೈದಿಗಳನ್ನೇ ನಿಯೋಜಿಸಲಾಗುವುದು. ಇವರಿಗೆ ಗೌರವ ಧನ ನೀಡಲಾಗುವುದು ಎಂದು ಸಚಿವರು ತಿಳಿಸಿದರು.

ಸಿನಿಮಾ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ:

ಕರ್ನಾಟಕ ಸಿನಿಮಾ ನಿಯಂತ್ರಣ ಕಾಯ್ದೆ– 1967 ಕ್ಕೆ ತಿದ್ದುಪಡಿ ತರಲಾಗುವುದು. ಇದಕ್ಕಾಗಿ ಅಧಿಕಾರಿಗಳ ಸಭೆ ನಡೆಸಲಾಯಿತು. ಇಂದು ಚಲನಚಿತ್ರ ಮಂದಿರದ ಪರಿಕಲ್ಪನೆ ಮತ್ತು ತಂತ್ರಜ್ಞಾನವೂ ಬದಲಾಗಿದೆ. ಅದಕ್ಕೆ ತಕ್ಕಂತೆ ನಿಯಮಗಳಲ್ಲಿ ಮಾರ್ಪಾಡು ಮಾಡಲು ಉದ್ದೇಶಿಸಲಾಗಿದೆ. ಇದಕ್ಕಾಗಿ ವಿವಿಧ ಇಲಾಖೆಗಳ ಅಭಿಪ್ರಾಯವನ್ನೂ ಕೇಳಲಾಗಿದೆ ಎಂದು ಹೇಳಿದರು.

ತಿದ್ದುಪಡಿಯ ಬಗ್ಗೆ ಚಲನಚಿತ್ರೋದ್ಯಮದವರ ಜತೆಗೂ ಚರ್ಚೆ ನಡೆಸಲಾಗಿದೆ. ಮುಖ್ಯವಾಗಿ, ಲೈಸೆನ್ಸ್ ಶುಲ್ಕವನ್ನು ಪ್ರತಿ ವರ್ಷ ಪರಿಷ್ಕರಣೆ ಮಾಡುವ ಬದಲು ಐದು ವರ್ಷಕ್ಕೊಮ್ಮೆ ಮಾಡುವುದು, ಪೈರಸಿ ಪಿಡುಗು ನಿವಾರಣೆಗೆ ಕಟ್ಟುನಿಟ್ಟಿನ ಕ್ರಮ ಮತ್ತು ಪೈರಸಿ ಮಾಡುವವರನ್ನು ಹಿಡಿದು ಶಿಕ್ಷೆ ನೀಡುವ ಬಗ್ಗೆ ಸಮಾಲೋಚನೆ ನಡೆಸಲಾಯಿತು. ಈಗಾಗಲೇ ಪೈರಸಿ ಮಾಡುವವರನ್ನು ಪತ್ತೆ ಮಾಲು ಸಿಸಿಬಿ ಮತ್ತು ಸೈಬರ್ ತಂಡದ ಸದಸ್ಯರನ್ನು ಒಳಗೊಂಡ ಕಾರ್ಯಪಡೆ ರಚಿಸಲಾಗಿದೆ ಎಂದರು.

ಚಿತ್ರೋದ್ಯಮ ಲಕ್ಷಾಂತರ ಜನರಿಗೆ ಅನ್ನ ನೀಡುವ ಉದ್ಯಮವಾಗಿದೆ. ಆದ್ದರಿಂದ, ಚಿತ್ರ ತಯಾರಿಕೆ ಮಾಡುವವರಿಗೆ ರಕ್ಷಣೆ ನೀಡಬೇಕಾಗಿದೆ. ಈ ಮೂಲಕ ಕನ್ನಡ ಚಿತ್ರೋದ್ಯಮವನ್ನು ಉಳಿಸಬೇಕಾಗಿದೆ. ಇದರಲ್ಲಿ ಲಕ್ಷಾಂತರ ಜನರ ಭವಿಷ್ಯ ಅಡಗಿದೆ ಎಂದು ಜ್ಞಾನೇಂದ್ರ ಹೇಳಿದರು.

ಕನ್ನಡ ‘ಪುಟ’ಕ್ಕೆ ಮರಾಠಿ ಪುಟದ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕನ್ನಡ ನಾಡು–ನುಡಿಗೆ ಸಂಬಂಧಿಸಿದಂತೆ ಪೋಸ್ಟ್‌ಗಳನ್ನು ಹಾಕುವ ಕಾರ್ಯದಲ್ಲಿ ನಿರತವಾಗಿರುವ ‘ಬೆಳಗಾವಿ ಪುಟ’ದ (ಫೇಸ್‌ಬುಕ್) ಅಡ್ಮಿನ್‌ಗಳ ವಿಳಾಸ ಸಿಕ್ಕರೆ ಅವರ ಮನೆಗೆ ನುಗ್ಗಿ ಹೊಡೆಯುತ್ತೇವೆ ಎಂದು ‘ರಾಯಲ್ ಬೆಳಗಾಂವಕರ್’ ಎನ್ನುವ ಮರಾಠಿ ಪರ ಪುಟದವರು ಪೋಸ್ಟ್ ಹಾಕಿದ್ದಾರೆ.

ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಬೆಂಬಲಿಗರು ಈ ಕೃತ್ಯ ಎಸಗಿದ್ದಾರೆ ಎನ್ನಲಾಗುತ್ತಿದೆ. ಆ ಪೋಸ್ಟ್‌ಗೆ ಮತ್ತು ನಾಡದ್ರೋಹಿ ಚಟುವಟಿಕೆಗಳಿಗೆ ಸಾಮಾಜಿಕ ಮಾಧ್ಯಮ ಬಳಸಿಕೊಂಡಿರುವುದಕ್ಕೆ ಕನ್ನಡ ಅಭಿಮಾನಿಗಳಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

‘ಬೆಳಗಾವಿಯಲ್ಲಿ ಕನ್ನಡಪರ ಕೆಲಸ ಮಾಡಿದರೆ ಅದು ಹಿಂದೂ ಧರ್ಮ ಒಡೆಯುವ ಕೆಲಸವಂತೆ. ಅಡ್ಮಿನ್‌ಗಳಿಗೆ ಬೆದರಿಕೆ ಹಾಕಲಾಗಿದೆ. ಇಂಥ ಬೆದರಿಕೆಗೆ ಅಂಜದೆ, ಕನ್ನಡಪರ ಕೆಲಸವನ್ನು ಗಟ್ಟಿಗೊಳಿಸುತ್ತ ಬಂದಿದ್ದೇವೆ. ಕನ್ನಡಪರ ಕಾರ್ಯ ಮಾಡುತ್ತಿದ್ದೇವೆ’ ಎಂದು ಅಡ್ಮಿನ್ ಕಿರಣ ಮಾಳನ್ನವರ ಪೋಸ್ಟ್ ಹಾಕಿ ತಿರುಗೇಟು ನೀಡಿದ್ದಾರೆ.

‘ಇಂತಹ ಗೊಡ್ಡು ಬೆದರಿಕೆಗಳಿಗೆ ಹೆದರಿ, ನಾಡು–ನುಡಿಯ ಪರವಾದ ಕೆಲಸವನ್ನು ನಿಲ್ಲಿಸುವುದಿಲ್ಲ’ ಎಂದಿದ್ದಾರೆ. ಬೆದರಿಕೆ ಹಾಕಿದ ಪುಟದ ಬಗ್ಗೆ ಕ್ರಮಕ್ಕೆ ಕೋರಿ ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ಭಯ ಸೃಷ್ಟಿಸುವ ಕೆಲಸ: ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಆರೋಪ

ಗುತ್ತಿಗೆದಾರ ಸಹೋದರರ ಮನೆ ಮೇಲೆ ಐಟಿ ದಾಳಿ

ಪ್ರಜಾವಾಣಿ ವಾರ್ತೆ

ಧಾರವಾಡ: ಗುತ್ತಿಗೆದಾರ ಸಹೋದರರಾದ ಕಾಂಗ್ರೆಸ್ ಮುಖಂಡ ಯು.ಬಿ.ಶೆಟ್ಟಿ ಹಾಗೂ ಅವರ ಅಣ್ಣ ಸೀತಾರಾಮ ಶೆಟ್ಟಿ ಅವರ ಮನೆ ಮೇಲೆ ಆದಾಯ ತೆರಿಗೆ ಅಧಿಕಾರಿಗಳು ಗುರುವಾರ ಏಕಕಾಲಕ್ಕೆ ದಾಳಿ ನಡೆಸಿದರು.

ಕೇಂದ್ರ ಸರ್ಕಾರದ ಲೋಕೋಪಯೋಗಿ ಇಲಾಖೆ ಕಾಮಗಾರಿಗಳ ಗುತ್ತಿಗೆದಾರ ಸೀತಾರಾಮ ಶೆಟ್ಟಿ ಅವರ ವಿನಾಯಕ ನಗರದಲ್ಲಿರುವ ಮನೆ ಮೇಲೆ ಹಾಗೂ ರಾಜ್ಯದ ಲೋಕೋಪಯೋಗಿ ಇಲಾಖೆ ಗುತ್ತಿಗೆದಾರ ಯು.ಬಿ.ಶೆಟ್ಟಿ ಅವರಿಗೆ ಸೇರಿದ ಮನೆ ಮೇಲೆ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದರು.

ಗೋವಾ, ಬೆಂಗಳೂರು, ಬೆಳಗಾವಿಯಿಂದ 15ಕ್ಕೂ ಹೆಚ್ಚು ಕಾರುಗಳಲ್ಲಿ ಬಂದ ಅಧಿಕಾರಿಗಳು ಶೆಟ್ಟಿ ಸಹೋದರರ ಮನೆಯಲ್ಲಿ ಶೋಧ ಆರಂಭಿಸಿದರು.

ಯು.ಬಿ.ಶೆಟ್ಟಿ

ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಉಕ್ಕುಂದದವರಾದ ಯು.ಬಿ. ಶೆಟ್ಟಿ ಅವರು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದ್ದಾರೆ. ಉಡುಪಿ ಮತ್ತು ಮಂಗಳೂರು ಸ್ಥಳೀಯ ಸಂಸ್ಥೆಗಳ ವಿಧಾನಪರಿಷತ್ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ. ಬೆಂಗಳೂರಿಗೆ ಹೋಗಿದ್ದ ಯು.ಬಿ.ಶೆಟ್ಟಿ ಗುರುವಾರ ಬೆಳಿಗ್ಗೆ ಧಾರವಾಡಕ್ಕೆ ಮರಳಿದ್ದರು. ಬಂದ ಕೆಲವೇ ಕ್ಷಣಗಳಲ್ಲಿ ಆದಾಯ ತೆರಿಗೆ ಅಧಿಕಾರಿಗಳು ದಾಳಿ ನಡೆಸಿದರು.

ಭಯ ಸೃಷ್ಟಿಸುವ ಕೆಲಸ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಪ್ತರಾಗಿರುವ ಉದ್ಯಮಿ ಯು.ಬಿ. ಶೆಟ್ಟಿ ಅವರ ಮನೆ ಮೇಲೆ ನಡೆದಿರುವ ಐ.ಟಿ ದಾಳಿ ಕುರಿತು ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯಿಸಿದ ಶಾಸಕಿ ಲಕ್ಷ್ಮಿ ಹೆಬ್ಬಾಳಕರ, ‘ಐ.ಟಿ ದಾಳಿ ನಡೆಸಿ ಕಾರ್ಯಕರ್ತರಲ್ಲಿ ಭಯ ಸೃಷ್ಟಿಸುವ ರಾಜಕಾರಣವನ್ನು ಬಿಜೆಪಿ ಸರ್ಕಾರ ಮಾಡುತ್ತಿದೆ' ಎಂದರು.

'ಕರ್ನಾಟಕದಲ್ಲಷ್ಟೇ ಅಲ್ಲ, ಎಲ್ಲಾ ರಾಜ್ಯಗಳಲ್ಲೂ ಈ ರೀತಿ ನಡೆಯುತ್ತಿದೆ. ಆದಾಯ ತೆರಿಗೆ ಇಲಾಖೆ ಮತ್ತು ಜಾರಿ ನಿರ್ದೇಶನಾಲಯಕ್ಕೆ ನಾವು ಹೆದರುವುದಿಲ್ಲ. ಇಂತಹ ದಾಳಿಗಳು ಉಪ ಚುನಾವಣೆ ಫಲಿತಾಂಶದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ' ಎಂದರು.

‘ದಾಳಿ ರಾಜಕೀಯ ಪ್ರೇರಿತ. ಈ ಸಂದರ್ಭದಲ್ಲಿ ಮನೆಯಲ್ಲಿರುವವರ ಮೊಬೈಲ್ ಕಸಿದುಕೊಂಡ ಅಧಿಕಾರಿಗಳು ಭೀತಿ ಸೃಷ್ಟಿಸಿದ್ದಾರೆ. ಅವರ ಭೇಟಿಗೆ ಹೋಗಿದ್ದವರ ಮೊಬೈಲ್ ಫೋನ್‌ಗಳನ್ನೂ ಕಸಿದುಕೊಂಡಿದ್ದಾರೆ. ಯಾರನ್ನೂ ಸಂಪರ್ಕಿಸಲು ಅವರಿಗೆ ಅವಕಾಶ ನೀಡಿಲ್ಲ’ ಎಂದು ಕೆಪಿಸಿಸಿ ಸದಸ್ಯ ರಾಬರ್ಟ್ ದದ್ದಾಪುರಿ ಆರೋಪಿಸಿದರು.

ಉಡುಪಿಯಲ್ಲೂ ಐಟಿ ದಾಳಿ: ಉದ್ಯಮಿ ಯು.ಬಿ.ಶೆಟ್ಟಿ ಅವರ ಬೈಂದೂರು ತಾಲ್ಲೂಕು ಉಪ್ಪುಂದದ ನಿವಾಸದಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಗುರುವಾರ ಪರಿಶೀಲನೆ ನಡೆಸಿದ್ದಾರೆ.

ಗೋವಾದಿಂದ ಬಂದಿದ್ದ 9 ಅಧಿಕಾರಿಗಳ ತಂಡ ಹಲವು ತಾಸು ದಾಖಲೆಗಳನ್ನು ಪರಿಶೀಲಿಸಿ ವಶಕ್ಕೆ ಪಡೆದಿದೆ ಎಂದು ಮೂಲಗಳು ತಿಳಿಸಿವೆ. ಉಪ್ಪುಂದ ಮೂಲದ ಯು.ಬಿ.ಶೆಟ್ಟಿ ಧಾರವಾಡ ಜಿಲ್ಲೆಯಲ್ಲಿ ನೆಲೆಸಿದ್ದು, ಗುತ್ತಿಗೆ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರು.

ಧಾರವಾಡದ ವಿನಾಯಕನಗರದಲ್ಲಿರುವ ಸೀತಾರಾಮ ಶೆಟ್ಟಿ ಅವರ ಮನೆ ಮೇಲೆ ಆದಾಯ ತೆರಿಗೆ ಅಧಿಕಾರಿಗಳು ಗುರುವಾರ ದಾಳಿ ನಡೆಸಿದರು –ಪ್ರಜಾವಾಣಿ ಚಿತ್ರ

ಐಐಎಸ್ಸಿ ವಿಜ್ಞಾನಿಗಳ ಆವಿಷ್ಕಾರ

ಅಪಸ್ಮಾರಕ್ಕೆ ದಾಳಿಂಬೆ ರಸ ಮದ್ದು?

ಪ್ರಜಾವಾಣಿ ವಾರ್ತೆ



ಬೆಂಗಳೂರು: ದಾಳಿಂಬೆ ರಸ ಸೇವನೆಯಿಂದ ಆಯಸ್ಸು ಹೆಚ್ಚುತ್ತದೆ ಎಂಬ ಅಂಶವನ್ನು ರಾಜ್ಯದ ವಿಜ್ಞಾನಿಗಳು ಆರು ವರ್ಷಗಳ ಹಿಂದೆ ಪತ್ತೆಹಚ್ಚಿದ್ದರು. ಈ ಸಂಶೋಧನೆಯನ್ನು ಅಮೆರಿಕದ ನ್ಯಾಷನಲ್ ಇನ್‌ಸ್ಟಿಟ್ಯೂಟ್ಸ್ ಆಫ್ ಹೆಲ್ತ್ ಮಾನ್ಯ ಮಾಡಿತ್ತು. ಈ ವಿಜ್ಞಾನಿಗಳ ತಂಡವು ಅಪಸ್ಮಾರ ಗುಣಪಡಿಸಬಲ್ಲ ಇನ್ನೊಂದು ಆವಿಷ್ಕಾರವನ್ನು ನಡೆಸಿದೆ.

ಈ ಬಾರಿ ತಂಡವು ಸಂಶೋಧಿಸಿರುವ ‘ರಹಸ್ಯ ಔಷಧ’ವು ದಾಳಿಂಬೆಯಲ್ಲಿರುವ ನಿರ್ದಿಷ್ಟ ರಾಸಾಯನಿಕ. ಪ್ರಾಣಿಗಳಲ್ಲಿ ಇದು ಅಪಸ್ಮಾರವನ್ನು ಪರಿಣಾಮಕಾರಿಯಾಗಿ ಗುಣಪಡಿಸಿರುವುದು ಅಧ್ಯಯನದಲ್ಲಿ ದೃಢಪಟ್ಟಿದೆ.

‘ದಾಳಿಂಬೆಯ ಸೇವನೆಯು ನರ ಸಂಬಂಧಿ ಸಮಸ್ಯೆಗಳ ನಿವಾರಣೆಗೆ ಪ್ರಯೋಜನಕಾರಿ ಎಂಬುದನ್ನು ಜಗತ್ತಿನಾದ್ಯಂತ ನಡೆದಿರುವ ವಿವಿಧ ಅಧ್ಯಯನಗಳು ತೋರಿಸಿಕೊಟ್ಟಿವೆ. ಈ ಕುರಿತ ಸಂಶೋಧನೆಗಳಿಗೆ ಅಮೆರಿಕದಲ್ಲಿ ಹೆಚ್ಚಿನ ಒಲವು ವ್ಯಕ್ತವಾಗಿದೆ. ಅಮೆರಿಕದಲ್ಲಿ ಈಗಾಗಲೇ ದಾಳಿಂಬೆಯ ಸಾರಕ್ಕೆ ಸಂಬಂಧಿಸಿ 15 ಪೇಟೆಂಟ್‌ಗಳನ್ನು ಪಡೆಯಲಾಗಿದೆ. ಆದರೆ, ಅಪಸ್ಮಾರ ಚಿಕಿತ್ಸೆಗೆ ಇದನ್ನು ಬಳಸುವ ಸಾಧ್ಯತೆ ಕುರಿತು ಅಂತರರಾಷ್ಟ್ರೀಯ ಮಟ್ಟದ ಯಾವುದೇ ಸಂಶೋಧನೆಗಳು ಗಮನಹರಿಸಿರಲಿಲ್ಲ. ಈ ವಿಚಾರದಲ್ಲಿ ನಮ್ಮ ಸಂಶೋಧನೆ ಮಹತ್ವದ್ದು’ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಬೆಳವಣಿಗೆ ಮತ್ತು ಜೀವವೈದ್ಯಕೀಯ ವಂಶಾವಳಿ ವಿಜ್ಞಾನ (ಡೆವೆಲಪ್ಮೆಂಟಲ್ ಆ್ಯಂಡ್ ಬಯೋಮೆಡಿಕಲ್ ಜೆನೆಟಿಕ್ಸ್) ಪ್ರಾಧ್ಯಾಪಕ ಡಾ.ಉಪೇಂದ್ರ ನೊಂಗ್ಥೊಂಬಾ ತಿಳಿಸಿದರು. ಅವರು ಈ ಅಧ್ಯಯನ ತಂಡದ ಹಿರಿಯ ಸಂಶೋಧಕರು.

ಪ್ರಸ್ತುತ ಅಪಸ್ಮಾರ ಚಿಕಿತ್ಸೆಗೆ 12 ಬಗೆಯ ಔಷಧಗಳು ಲಭ್ಯ. ಅವುಗಳನ್ನು ನಿರಂತರವಾಗಿ ಮೂರರಿಂದ ಐದು ವರ್ಷಗಳ ಕಾಲ ಸೇವಿಸಬೇಕಾಗುತ್ತದೆ. ಆದಾಗ್ಯೂ ಅವೆಲ್ಲವೂ ಫಲಪ್ರದವಾಗುತ್ತವೆ ಎನ್ನಲಾಗದು. ಇವುಗಳಲ್ಲಿ ನಾಲ್ಕು ಔಷಧಗಳ ಬಳಕೆಗೆ ಮಾತ್ರ ವೈದ್ಯರು ಸಾಮಾನ್ಯವಾಗಿ ಶಿಫಾರಸು ಮಾಡುತ್ತಾರೆ ಎಂದು ಡಾ. ನೊಂಗ್ಥೊಂಬಾ ತಿಳಿಸಿದರು.

ಭಾರತೀಯ ಅಪಸ್ಮಾರ ಸಂಸ್ಥೆಯ ಬೆಂಗಳೂರು ಶಾಖೆಯ ಅಧ್ಯಕ್ಷ ಮುರಳೀಧರನ್ ಕೆ.ವಿ. ಅವರೂ ಈ ವಿಚಾರವನ್ನು ದೃಢಪಡಿಸಿದರು.

‘ಸತತ ಮೂರರಿಂದ ಐದು ವರ್ಷಗಳ ಕಾಲ ಸೇವಿಸಿದರೆ ಮಾತ್ರ ಈ ಔಷಧಗಳು ಅಪಸ್ಮಾರ ನಿವಾರಣೆಗೆ ಪರಿಣಾಮಕಾರಿಯಾಗಬಲ್ಲವು. ಇದರ ಲಕ್ಷಣಗಳು ಕ್ಷೀಣಿಸಿದ ಬಳಿಕವಷ್ಟೇ ವ್ಯಕ್ತಿಯು ಈ ಔಷಧಗಳ ಸೇವನೆಯನ್ನು ನಿಲ್ಲಿಸಬಹುದು. ಅಷ್ಟೇ ಅಲ್ಲ, ಈ ಔಷಧ ಸೇವಿಸುವವರು ರಾತ್ರಿ ಚೆನ್ನಾಗಿ ನಿದ್ರೆ ಮಾಡಬೇಕು’ ಎಂದು ಈ ಮುರಳೀಧರನ್ ತಿಳಿಸಿದರು.

ಈ ಸಾಂಪ್ರದಾಯಿಕ ಔಷಧಗಳಿಗೆ ಹೋಲಿಸಿದರೆ, ಐಐಎಸ್ಸಿಯ ವಿಜ್ಞಾನಿಗಳು ಆವಿಷ್ಕರಿಸಿರುವ ಔಷಧ ಹೆಚ್ಚು ಪರಿಣಾಮಕಾರಿಯಾಗಬಲ್ಲುದು. ಹಣ್ಣಿಗೆ ಮುತ್ತಿಗೆ ಬೀಳುವ ನೊಣದ ಮೇಲೆ ವಿಜ್ಞಾನಿಗಳು ಈ ಪ್ರಯೋಗ ನಡೆಸಿದ್ದರು. ‘ಈ ಕಾರ್ಯವಿಧಾನವು ತುಸು ಅಚ್ಚರಿದಾಯಕ. ಪ್ರಯೋಗಕ್ಕೆ ಬಳಸಿದ ಹಣ್ಣಿನ ನೊಣಗಳಲ್ಲಿ ಜೀವಕೋಶಗಳಿಗೆ ಆದ ಹಾನಿಯು ಈ ರಾಸಾಯನಿಕ ಸಂಯುಕ್ತವನ್ನು ಉಣಿಸಿದ ಆರು ಗಂಟೆಗಳಲ್ಲಿ ಶಮನಗೊಂಡಿದೆ’ ಎಂದು ಡಾ.ನೊಂಗ್ಥೊಂಬಾ ವಿವರಿಸಿದರು.

14ರಿಂದ ‘ಸಹಕಾರ ಸಪ್ತಾಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹಕಾರಿ ವಲಯ ಹಾಗೂ ಸಹಕಾರ ಇಲಾಖೆಯ ಅಸ್ತಿತ್ವ ಕಾಪಾಡಲು ‘ಸಹಕಾರ ಸಪ್ತಾಹ’ ವೇದಿಕೆ ಆಗಬೇಕು. ಈ ಗುರಿಯೊಂದಿಗೆ ವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ ಸಪ್ತಾಹ ಆಚರಿಸಬೇಕು’ ಎಂದು ಸಹಕಾರಿಗಳಿಗೆ ಹಾಗೂ ಇಲಾಖೆಯ ಅಧಿಕಾರಿಗಳಿಗೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಸಲಹೆ ನೀಡಿದರು.

ನ. 14ರಿಂದ 10ರವರೆಗೆ ನಡೆಯಲಿರುವ 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿಯಾಗಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ‘ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಬದ್ಧತೆ ಇರಬೇಕು’ ಎಂದರು.



‘ಸಹಕಾರ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಸಹಕಾರ ವಲಯದ ಆಮೂಲಾಗ್ರ ಬೆಳವಣಿಗೆಗೆ ರಾಜ್ಯಮಟ್ಟದ ಸಹಕಾರ ಸಂಸ್ಥೆಗಳು ಸಲಹೆಗಳನ್ನು ನೀಡಬೇಕು’ ಎಂದೂ ಅವರು ಹೇಳಿದರು.

ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡ ಮಾತನಾಡಿ, ‘ಪ್ರಸ್ತುತ ಸಹಕಾರಿ ವಲಯ ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಕೃಷಿ ಪತ್ತಿನ ಸಹಕಾರ ಸಂಘಗಳು, ಭೂ ಅಭಿವೃದ್ಧಿ ಬ್ಯಾಂಕುಗಳು ರೈತಾಪಿ ಜನರಿಗೆ ನೆರವಾಗಿ ಬೆಳವಣಿಗೆ ಕಾಣಬೇಕಿದೆ. ಸಹಕಾರ ಸಂಸ್ಥೆಗಳ ಬಲವರ್ಧನೆಗೆ ಅಗತ್ಯ ಇರುವ ವಿಚಾರಗಳನ್ನು ಚರ್ಚಿಸುವ ವೇದಿಕೆಯಾಗಿ ಸಪ್ತಾಹವನ್ನು ಆಚರಿಸಬೇಕು’ ಎಂದರು.

ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಮಾತನಾಡಿ, ‘ಕನಿಷ್ಠ 5 ವರ್ಷಗಳಿಗೊಮ್ಮೆ ಸಹಕಾರ ಕಾಯ್ದೆಗೆ ತಿದ್ದುಪಡಿ ತರಬೇಕು. ಉತ್ತಮವಾಗಿ ಕಾರ್ಯನಿರ್ವಹಿಸುವ ರಾಜ್ಯದ ಉನ್ನತಮಟ್ಟದ ಸಹಕಾರ ಸಂಸ್ಥೆಗಳಿಗೆ ಸಹಕಾರ ರತ್ನ ಪ್ರಶಸ್ತಿ ನೀಡಬೇಕು’ ಎಂದು ಅಭಿಪ್ರಾಯಪಟ್ಟರು.

ಸೌಹಾರ್ದ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಕೃಷ್ಣಾ ರೆಡ್ಡಿ, ‘ಸಹಕಾರಿ ವಲಯದಲ್ಲಿ ವಿಭಿನ್ನ ರೀತಿಯ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ವಲಯವು ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಕುರಿತು ಸಂಶೋಧನೆ ಮಾಡಿ ಸರ್ಕಾರದ ಮುಂದೆ ಅವುಗಳನ್ನು ತರಬೇಕು’ ಎಂದು ಸಲಹೆ ನೀಡಿದರು.

ಉ. ಪ್ರದೇಶ: 30 ಲಕ್ಷ ಕಾರ್ಯಕರ್ತರಿಗೆ ಬಿಜೆಯಿಂದ ದೀಪಾವಳಿ ಉಡುಗೊರೆ

ಲಖನೌ (ಪಿಟಿಐ): ಮುಂದಿನ ವರ್ಷ ಉತ್ತರ ಪ್ರದೇಶದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಕಾರ್ಯಕರ್ತರನ್ನು ಹುರಿದುಂಬಿಸುವುದಕ್ಕಾಗಿ ಬಿಜೆಪಿಯು ಬೂತ್ ಮಟ್ಟದ 30 ಲಕ್ಷ ಕಾರ್ಯಕರ್ತರಿಗೆ ದೀಪಾವಳಿ ಉಡುಗೊರೆಗಳನ್ನು ಕಳುಹಿಸಿಕೊಡಲಾಗಿದೆ.

ರಾಜ್ಯದಲ್ಲಿ 1.63 ಲಕ್ಷ ಮತಗಟ್ಟೆಗಳಿದ್ದು (ಬೂತ್), 1.5 ಲಕ್ಷ ಮತಗಟ್ಟೆಗಳಲ್ಲಿ ತಲಾ 20 ಸದಸ್ಯರನ್ನೊಳಗೊಂಡ ಸಮಿತಿ ರಚಿಸಲಾಗಿದೆ.

‘ನಮ್ಮ ಬಿಜೆಪಿ ಕುಟುಂಬದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆ. ಅದರಲ್ಲಿ ಬೂತ್ ಮಟ್ಟದ ಕಾರ್ಯಕರ್ತರು ಪ್ರಮುಖ ಕೊಂಡಿಯಾಗಿದ್ದಾರೆ. ಅವರೆಲ್ಲರಿಗೂ ಪ್ರತಿ ವರ್ಷ ದೀಪಾವಳಿಯ ಹಬ್ಬದಂದು ಉಡುಗೊರೆ ನೀಡುವ ಸಂಪ್ರದಾಯವಿದೆ. ಈ ಹಿನ್ನೆಲೆಯಲ್ಲಿ ಪಕ್ಷವು ಈ ಬಾರಿ 30 ಲಕ್ಷಕ್ಕೂ ಹೆಚ್ಚು ಬೂತ್ ಕಾರ್ಯಕರ್ತರಿಗೆ ಉಡುಗೊರೆಗಳನ್ನು ಕಳುಹಿಸಿದೆ‘ ಎಂದು ಬಿಜೆಪಿಯ ರಾಜ್ಯ ಘಟಕದ ಉಪಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ವಿಜಯ್ ಬಹದ್ದೂರ್ ಪಾಠಕ್ ಹೇಳಿದರು.

ಉಡುಗೊರೆಯ ಪ್ರತಿ ಬಾಕ್ಸ್‌ನಲ್ಲಿ ಮನೆಯ ಬಾಗಿಲಿಗೆ ಕಟ್ಟುವ ತೋರಣ ಮತ್ತು ಕಮಲದ ಆಕಾರದಲ್ಲಿರುವ ಮಣ್ಣಿನ ಹಣತೆಯಿದೆ. ಈ ಉಡುಗೊರೆಯನ್ನು ಬೂತ್ ಸಮಿತಿಗಳ ಪ್ರತಿ ಸದಸ್ಯರಿಗೂ ನೀಡಲಾಗುತ್ತಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಕೋಳಿಯು ಬಾತುಕೋಳಿಯಾಗಬೇಕು ಮತ್ತು ಬಾತುಕೋಳಿಯು ಕೋಳಿಯಾಗಬೇಕು ಎಂದು ನೀವು ಬಯಸುವಿರಾದರೆ, ಸಂಕಟಪಡುತ್ತೀರಿ. –ಅಜನ್ ಚಾ

ಪೆಗಾಸಸ್ ಪ್ರಕರಣದ ತೀರ್ಪು ತನಿಖೆಗೆ ಸಮಿತಿ ಸ್ವಾಗತಾರ್ಹ

ದೇಶದ ಜನ ಬಹಳ ನಿರೀಕ್ಷೆಯಿಂದ ಎದುರು ನೋಡುತ್ತಿದ್ದ ತೀರ್ಪೊಂದನ್ನು ಸುಪ್ರೀಂ ಕೋರ್ಟ್ ಬುಧವಾರ ಪ್ರಕಟಿಸಿದೆ. ಪೆಗಾಸಸ್ ಗೂಢಚರ್ಯೆ ಪ್ರಕರಣದಲ್ಲಿ ಕೋರ್ಟ್ ನೀಡಿರುವ ತೀರ್ಪು ಹಲವು ಕಾರಣಗಳಿಂದಾಗಿ ಮಹತ್ವದ್ದಾಗಲಿದೆ. ದೇಶದ ನಾಗರಿಕರ ಮೂಲಭೂತ ಹಕ್ಕುಗಳು ಹಾಗೂ ಆ ಹಕ್ಕುಗಳಿಗೆ ಇರಬೇಕಾದ ಸಾಂಸ್ಥಿಕ ರಕ್ಷಣೆಯ ದೃಷ್ಟಿಯಿಂದ ಇದು ಸ್ಮರಣೀಯ ಆಗಲಿದೆ. ಈ ಹಕ್ಕುಗಳಿಗೆ ಈಗಿನ ಸಂದರ್ಭದಲ್ಲಿ ದೇಶದಲ್ಲಿ ಹಲವು ರೂಪಗಳಲ್ಲಿ ಸವಾಲುಗಳು ಎದುರಾಗುತ್ತಿವೆ. ಇಂತಹ ಹಲವು ಸವಾಲುಗಳಲ್ಲಿ ಅತ್ಯಂತ ಪ್ರಮುಖವಾದ ಒಂದು ಸವಾಲನ್ನು ಪೆಗಾಸಸ್ ಪ್ರಕರಣವು ಸಂಕೇತಿಸುವಂತೆ ಇದೆ. ಇಸ್ರೇಲ್ ಮೂಲದ ಒಂದು ಕಂಪನಿ ಸಿದ್ಧಪಡಿಸಿದ ತಂತ್ರಾಂಶವೊಂದನ್ನು ಬಳಸಿ ದೇಶದ ನಾಗರಿಕರ ಮೊಬೈಲ್ ಫೋನ್‌ಗಳ ಮೇಲೆ ನಿಗಾ ಇರಿಸಲಾಗಿತ್ತು, ನಾಗರಿಕರ ಖಾಸಗಿ ಬದುಕಿನ ಮೇಲೆ ಕಣ್ಣು ಇಡಲಾಗಿತ್ತು, ಇದು ವರ್ಷಗಳಿಂದ ನಡೆದಿತ್ತು ಎಂದು ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆಗಳು ವರದಿ ಮಾಡಿವೆ. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಆರ್.ವಿ. ರವೀಂದ್ರನ್ ನೇತೃತ್ವದಲ್ಲಿ ಒಂದು ಸಮಿತಿಯನ್ನು ಸುಪ್ರೀಂ ಕೋರ್ಟ್ ಈಗ ರಚಿಸಿದೆ. ಪೆಗಾಸಸ್ ತಂತ್ರಾಂಶ ಬಳಸಿ, ನಾಗರಿಕರ ಮೇಲೆ ಅಕ್ರಮವಾಗಿ ಕಣ್ಗಾವಲು ಇರಿಸಲಾಗಿತ್ತೇ ಎಂಬುದನ್ನು ಈ ಸಮಿತಿಯು ತನಿಖೆಗೆ ಒಳಪಡಿಸಲಿದೆ. ಸಮಿತಿಯು ನಡೆಸಲಿರುವ ತನಿಖೆಯು ಪೆಗಾಸಸ್ ಪ್ರಕರಣದ ಹಿಂದಿರುವ ಸತ್ಯವನ್ನು ಹೊರಗೆ ತರಲಿದೆ ಎಂಬ ಭರವಸೆ ಇರಿಸಿಕೊಳ್ಳಬಹುದು. ಇಡೀ ಪ್ರಕರಣದಲ್ಲಿ ತೆಗೆದುಕೊಂಡಿರಬಹುದಾದ ತಪ್ಪು ತೀರ್ಮಾನಗಳು ಹಾಗೂ ಇರಿಸಿರಬಹುದಾದ ತಪ್ಪು ಹೆಜ್ಜೆಗಳಿಗೆ ಯಾರು ಹೊಣೆ ಎಂಬುದನ್ನು ಸಮಿತಿಯು ಬಹಿರಂಗಪಡಿಸಬಹುದು.

ದೇಶದ ನಾಗರಿಕರ ಮೂಲಭೂತ ಹಕ್ಕುಗಳು ಹಾಗೂ ಆ ಹಕ್ಕುಗಳಿಗೆ ಇರಬೇಕಾದ ಸಾಂಸ್ಥಿಕ ರಕ್ಷಣೆಯ ದೃಷ್ಟಿಯಿಂದ ಈ ತೀರ್ಪು ಸ್ಮರಣೀಯ ಆಗಲಿದೆ

ಈ ಸಮಿತಿಗೆ ತನಿಖೆಯಲ್ಲಿ ನೆರವು ನೀಡಲು ಹಲವು ತಜ್ಞರು ಇರಲಿದ್ದಾರೆ. ಸರ್ಕಾರವು ಪ್ರಕರಣದ ಬಗ್ಗೆ ತನಿಖೆ ನಡೆಸಲು ತಾನೇ ಒಂದು ಸಮಿತಿಯನ್ನು ರಚಿಸುವುದಾಗಿ ಹೇಳಿತ್ತು. ಆದರೆ, ಸರ್ಕಾರದ ಪ್ರಸ್ತಾವವನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿರುವುದು ಮಹತ್ವದ ಅಂಶ. ಪೆಗಾಸಸ್ ಪ್ರಕರಣದಲ್ಲಿ ಕೇಂದ್ರ ಸರ್ಕಾರದ ಮೇಲೆಯೇ ಅನುಮಾನದ ನೆರಳು ಇದೆ. ಹೀಗಿರುವಾಗ ಸರ್ಕಾರದ ಉಸ್ತುವಾರಿಯಲ್ಲಿಯೇ ಸಮಿತಿಯೊಂದು ಪ್ರಕರಣದ ಬಗ್ಗೆ ತನಿಖೆ ನಡೆಸುವುದು ಅದರ ವಿಶ್ವಾಸಾರ್ಹತೆಯ ಬಗ್ಗೆ ಪ್ರಶ್ನೆಗಳನ್ನು ಮೂಡಿಸುತ್ತಿತ್ತು. ಈ ತೀರ್ಪಿನ ಮೂಲಕ ಸುಪ್ರೀಂ ಕೋರ್ಟ್, ದೇಶದ ಜನರ ಮೂಲಭೂತ ಹಕ್ಕುಗಳ ಅತ್ಯಂತ ವಿಶ್ವಾಸಾರ್ಹ ಸಂರಕ್ಷಕ ತಾನು ಎಂಬುದನ್ನು ಮತ್ತೊಮ್ಮೆ ಗಟ್ಟಿ ದನಿಯಲ್ಲಿ ಹೇಳಿದಂತೆ ಆಗಿದೆ. 'ಜನರ ಖಾಸಗಿತನದ ಪ್ರತೀ ಉಲ್ಲಂಘನೆಯೂ, ಸಾಂವಿಧಾನಿಕ ಅನಿವಾರ್ಯತೆ ಹಾಗೂ ಉಲ್ಲಂಘನೆಯ ಅಗತ್ಯತೆಯ ಪರೀಕ್ಷೆಯಲ್ಲಿ ಉತ್ತೀರ್ಣವಾಗಬೇಕು' ಎಂದು ಕೋರ್ಟ್ ಹೇಳಿದೆ. 'ಕಾನೂನಿನ ಬೆಂಬಲ ಇಲ್ಲದೆ ಈ ರೀತಿ ಖಾಸಗಿತನದ ಉಲ್ಲಂಘನೆ ಆಗುವುದಕ್ಕೆ ಅವಕಾಶ ಕೊಡಲಾಗದು' ಎಂದೂ ಕೋರ್ಟ್ ಸಾರಿದೆ. ಸುಪ್ರೀಂ ಕೋರ್ಟ್‌ನ ಈ ಮಾತುಗಳು ನಾಗರಿಕರ ಹಕ್ಕುಗಳ ಬಗ್ಗೆ ಕಾಳಜಿ ಇರುವ ವ್ಯಕ್ತಿಗಳಲ್ಲಿ, ಪ್ರಜಾತಂತ್ರದ ಬಗ್ಗೆ ಪ್ರೀತಿ ಇರುವವರಲ್ಲಿ ಬಹಳ ವಿಶ್ವಾಸ ಮೂಡಿಸುವಂತಹವು. ದೇಶದ ಪ್ರಜೆಗಳ ಹಕ್ಕುಗಳನ್ನು ಸಂರಕ್ಷಿಸುವ ವಿಚಾರದಲ್ಲಿ ತಾನು ಯಾವ ರಾಜಿಗೂ ಸಿದ್ಧವಿಲ್ಲ ಎಂಬ ಸಂದೇಶವನ್ನು ಕೋರ್ಟ್ ರವಾನಿಸಿದೆ.

ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ತೀಕ್ಷ್ಣವಾಗಿ ಟೀಕಿಸಿರುವುದು ಮಹತ್ವದ್ದು. ಸರ್ವಾಧಿಕಾರದ ಕುರಿತು ಜಾರ್ಜ್ ಆರ್ವೆಲ್ ಬರೆದಿರುವ '1984' ಕಾದಂಬರಿಯನ್ನು ಕೋರ್ಟ್ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ. ಈ ಉಲ್ಲೇಖವೇ ಇಂದಿನ ಸಂದರ್ಭದಲ್ಲಿ ಬಹಳ ಮಹತ್ವದ್ದು. ಕೋರ್ಟ್ ಕೇಳಿದ ಮಾಹಿತಿಯನ್ನು ಸಲ್ಲಿಸಲು ಸಾಧ್ಯವಿಲ್ಲ ಎಂದು ಸರ್ಕಾರ ಹೇಳಿತ್ತು. ಮಾಹಿತಿ ನೀಡದೆ ಇರುವುದಕ್ಕೆ ರಾಷ್ಟ್ರದ ಭದ್ರತೆಯ ನೆಪವನ್ನು ಮುಂದೆ ಮಾಡಿತ್ತು. ಸರ್ಕಾರದ ಈ ವಾದವನ್ನು ಕೋರ್ಟ್ ತಿರಸ್ಕರಿಸಿದೆ. ಸರ್ಕಾರವು ಜನರ ಹಕ್ಕುಗಳನ್ನು ಮೊಟಕುಗೊಳಿಸಲು ಯತ್ನಿಸಿದ ಇತರ ಪ್ರಕರಣಗಳಲ್ಲಿಯೂ ಈ ಪ್ರಕರಣದಲ್ಲಿನ ತೀರ್ಪು ಮಹತ್ವದ್ದಾಗಬಹುದು. ಸುಪ್ರೀಂ ಕೋರ್ಟ್ ಈಗ ನೇಮಕ ಮಾಡಿರುವ ಸಮಿತಿಯು ಪ್ರಕರಣದ ತನಿಖೆ ನಡೆಸುವುದಷ್ಟೇ ಅಲ್ಲದೆ, ಜನರ ಹಕ್ಕುಗಳನ್ನು ರಕ್ಷಿಸಲು ಅಗತ್ಯವಿರುವ ಕಾನೂನು ಕುರಿತು ಶಿಫಾರಸು ಮಾಡಲಿದೆ. ಸರ್ಕಾರವು ಈ ಸಮಿತಿಗೆ ತನ್ನ ಪೂರ್ಣ ಸಹಕಾರವನ್ನು ನೀಡಬೇಕು.

ದಿನದ ಟ್ವೀಟ್

ವ್ಯತ್ಯಾಸದ ಅರಿವಾಗಲಿ

ಭಾರತದಲ್ಲಿ ನೆಲೆಸಿರುವವರು ಪಾಕಿಸ್ತಾನದ ವಿಜಯವನ್ನು ಅಸಹ್ಯಕರವಾದ ರೀತಿಯಲ್ಲಿ ಸಂಭ್ರಮಿಸಲು ಏಕೆ ಬಯಸುತ್ತಾರೆ ಎಂಬುದು ನನಗೆ ತಿಳಿಯುವುದಿಲ್ಲ. ಉತ್ತಮ ಕ್ರಿಕೆಟ್ ಆಟವನ್ನು ಆಸ್ವಾದಿಸುವುದು ಮತ್ತು ಕ್ರಿಕೆಟ್ ಕೌಶಲಕ್ಕಾಗಿ ಎದುರಾಳಿಯನ್ನು ಅಭಿನಂದಿಸುವುದೇ ಬೇರೆ, ಭಾರತ ವಿರುದ್ಧದ ಅವರ ವಿಜಯವನ್ನು ಸಂಭ್ರಮಿಸುವುದೇ ಬೇರೆ. ಇವೆರಡರ ನಡುವಿನ ವ್ಯತ್ಯಾಸವನ್ನು ಜನ ಅರಿಯುತ್ತಾರೆ ಎಂದು ಭಾವಿಸುತ್ತೇನೆ.

ರಾಮಚಂದ್ರ ಎಂ., ನಾಗರಿಕ

ಕಿಡಿನುಡಿ

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಗೆ ಎರಡು ಹೊಸ ತಂಡಗಳ ಸೇರ್ಪಡೆಯಿಂದ ₹12,715 ಕೋಟಿ ಗಳಿಸಿದೆ. ಸದ್ಯದ ಗಳಿಕೆಯ ಸಣ್ಣ ಪಾಲು ಮಹಿಳಾ ಕ್ರಿಕೆಟ್‌ಗೆ ಸಲ್ಲುವ ನಿರೀಕ್ಷೆ ಇದೆ. ಭವಿಷ್ಯದಲ್ಲಿ ಮಹಿಳಾ ಐಪಿಎಲ್ ಆರಂಭವಾಗುವುದನ್ನು ನೋಡುವ ಆಸೆಯಿದೆ. ತಮ್ಮ ದೇಶದ ಯುವ ಆಟಗಾರ್ತಿಯರ ಪ್ರತಿಭೆಯನ್ನು ಅನಾವರಣಗೊಳಿಸಲು ಮಂಡಳಿಗೆ ಇದು ಸಕಾಲ.

ಅಲೀಸಾ ಹೀಲಿ, ಆಸ್ಟ್ರೇಲಿಯಾ ಕ್ರಿಕೆಟ್ ಆಟಗಾರ್ತಿ

25 ವರ್ಷಗಳ ಹಿಂದೆ

ಮಂಗಳವಾರ, 29-10-1996

• ಅಂಚೆ ಮುಷ್ಕರ: ಇಂದು ಪರಿಹಾರ ನಿರೀಕ್ಷೆ

ನವದೆಹಲಿ, ಅ. 28 (ಪಿಟಿಐ)– ನಾಳೆ ನಡೆಯಲಿರುವ ಸಂಪುಟ ಸಭೆಯಲ್ಲಿ ಕೇಂದ್ರ ಸರ್ಕಾರಿ ನೌಕರರಿಗೆ ಬೋನಸ್ ನೀಡುವ ವಿಷಯ ಚರ್ಚೆಗೆ ಬರಲಿದ್ದು, ಮುಷ್ಕರನಿರತ 20 ಲಕ್ಷ ಕೇಂದ್ರ ಸರ್ಕಾರಿ ನೌಕರರ (ಅವರಲ್ಲಿ ಅರ್ಧದಷ್ಟು ಅಂಚೆ ಮತ್ತು ದೂರಸಂಪರ್ಕ ಇಲಾಖೆಯ ನೌಕರರು) ಮುಷ್ಕರಕ್ಕೆ ಪರಿಹಾರ ದೊರೆಯುವ ನಿರೀಕ್ಷೆ ಇದೆ.

ಅಂಚೆ ಮತ್ತು ದೂರಸಂಪರ್ಕ ಇಲಾಖೆಯ ನೌಕರರು ದೇಶದಾದ್ಯಂತ ನಡೆಸುತ್ತಿರುವ ಮುಷ್ಕರ ಇಂದು ಆರನೇ ದಿನ ತಲುಪಿದ್ದು, ಅಂಚೆ ಮತ್ತು ಮಾನವಚಾಲಿತ ದೂರಸಂಪರ್ಕ ಸೇವೆ ಇಂದು ಕೂಡಾ ಮುಷ್ಕರದಿಂದ ಅಸ್ತವ್ಯಸ್ತವಾಗಿದೆ.

• ಆಲಮಟ್ಟಿ: ವಿಚಾರಣೆ 97ಕ್ಕೆ

ನವದೆಹಲಿ, ಅ. 28 (ಪಿಟಿಐ)– ಕರ್ನಾಟಕ ಮತ್ತು ಆಂಧ್ರಪ್ರದೇಶದ ನಡುವಿನ ಆಲಮಟ್ಟಿ ಅಣೆಕಟ್ಟು ವಿವಾದ ಕುರಿತ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ 4 ತಿಂಗಳುಗಳ ಕಾಲ ಮುಂದೂಡಿತು.

ಪ್ರಸಕ್ತ ವಿವಾದವನ್ನು ಎರಡು ರಾಜ್ಯಗಳು ತಮ್ಮತಮ್ಮೊಳಗೇ ಪರಿಹರಿಸಿಕೊಳ್ಳಬೇಕು ಎಂದು ಆಂಧ್ರದ ಹೈಕೋರ್ಟ್ ಸೆ. 11ರಂದು ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಆರ್. ಕೃಷ್ಣ ಅಯ್ಯರ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಪರಿಶೀಲಿಸಿದ ನ್ಯಾಯಮೂರ್ತಿ ಗಳಾದ ಎನ್.ಪಿ. ಸಿಂಗ್ ಹಾಗೂ ಫೈಜಾನುದ್ದೀನ್ ಅವರನ್ನೊಳಗೊಂಡಿರುವ ವಿಭಾಗೀಯ ಪೀಠ ವಿಚಾರಣೆಯನ್ನು 1997ರ ಫೆಬ್ರುವರಿ ಮೊದಲ ವಾರಕ್ಕೆ ಮುಂದೂಡಿತು.

50 ವರ್ಷಗಳ ಹಿಂದೆ

ಶುಕ್ರವಾರ, 29-10-1971

• ಬಾಂಗ್ಲಾ ಸಮಸ್ಯೆ ಕುರಿತು ಭಾರತದ ನಿಲುವು ಬದಲು

ನವದೆಹಲಿ, ಅ. 28– ಭಾರತ– ರಷ್ಯಾ ಮೈತ್ರಿ ಒಪ್ಪಂದದ ಬಳಿಕ ಭಾರತವು ಬಾಂಗ್ಲಾದೇಶ ಸಮಸ್ಯೆ ಕುರಿತ ತನ್ನ ನಿಲುವನ್ನು ಬದಲಾಯಿಸಿದೆಯೆಂದು ಇಂದು ವಿದೇಶಾಂಗ ವ್ಯವಹಾರ ಶಾಖೆಯ ಸಂಸತ್ ಸಲಹಾ ಸಮಿತಿ ಸಭೆಯಲ್ಲಿ ಅನೇಕ ಸದಸ್ಯರು ಆಪಾದಿಸಿದರು.

ಆದರೆ, ವಿದೇಶಾಂಗ ಸಚಿವ ಸ್ವರಣ್ ಸಿಂಗ್ ಅವರು ಈ ಆರೋಪವನ್ನು ಅಲ್ಲಗಳೆದರು.

• ಬ್ರಿಟನ್ನಿನ ಪ್ರಥಮ ಉಪಗ್ರಹ ಪ್ರಯೋಗ

ಲಂಡನ್, ಅ. 28– ಪ್ರಾಸ್ಪೆರೊ– ಬ್ರಿಟಿಷ್ ರಾಕೆಟ್‌ನಿಂದ ಹಾರಿಸಲಾದ ಪ್ರಥಮ ಬ್ರಿಟಿಷ್ ಉಪಗ್ರಹ ಇಂದು ಯಶಸ್ವಿಯಾಗಿ ಕಕ್ಷಾಪಥವನ್ನು ಸೇರಿತು ಎಂದು ವಾಣಿಜ್ಯ ಮತ್ತು ಉದ್ಯಮ ಇಲಾಖೆ ಪ್ರಕಟಿಸಿದೆ.

• ರೇಷ್ಮೆ ನೇಕಾರರಿಗೆ ನೆರವು ನೀಡಲು ಕಾರ್ಪೊರೇಷನ್: ಕೇಂದ್ರ ಮಂಡಳಿ ಯೋಜನೆ

ಮುಂಬಯಿ, ಅ. 28– ರೇಷ್ಮೆ ಕೈಗಾರಿಕೆಗೆ ಸಹಾಯ ಮಾಡುವ ಸಲುವಾಗಿ ಒಂದು ಕೋಟಿ ರೂ. ವೆಚ್ಚದಲ್ಲಿ ಕಾರ್ಪೊರೇಷನ್ ಒಂದನ್ನು ಸ್ಥಾಪಿಸಲು ಕೇಂದ್ರ ರೇಷ್ಮೆ ಮಂಡಳಿ ಉದ್ದೇಶಿಸಿದೆಯೆಂದು ಮಂಡಳಿ ಅಧ್ಯಕ್ಷ ಡಿ. ದೇವರಾಜ ಅರಸು ಅವರು ಇಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಈ ಉದ್ದೇಶಿತ ಕಾರ್ಪೊರೇಷನ್ ಉತ್ಪಾದಕರಿಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನು ಸರಬರಾಜು ಮಾಡುವುದು ಮತ್ತು ಸಿದ್ಧಪಡಿಸಿದ ಉತ್ಪನ್ನಗಳನ್ನು ಖರೀದಿ ಮಾಡುವುದೆಂದು ಅವರು ಹೇಳಿದರು.

ವಿಧಾನಸೌಧದ ಮೊಗಸಾಲೆಯಲ್ಲಿ ಕಾಣುತ್ತದೆ ಲಂಚದ ಹೊಸ ಹೊಸ ರೂಪ

ಪ್ರತಿಜ್ಞೆ ಎಂಬ ಪಾಪದ ಪಾಪು!

ಅನುಸಂಧಾನ

ರವೀಂದ್ರ ಭಟ್ಟ

ಅಯೋಧ್ಯೆಗೆ ರಾಜನಾದ ಶ್ರೀರಾಮ ಒಂದು ದಿನ ತನ್ನ ಅರಮನೆಯ ಅಂಗಳದಲ್ಲಿ ಓಡಾಡುತ್ತಿದ್ದನಂತೆ. ಆಗ ಅವನಿಗೆ ಅಲ್ಲಿ ಇಲ್ಲಿ ತಿರುಗಾಡುತ್ತಿದ್ದ ಹನುಮಂತ ಕಾಣಿಸಿದನಂತೆ. ಅವನನ್ನು ನೋಡಿ 'ಅರೆ, ನೀನು ಇನ್ನೂ ಯಾಕೆ ಇಲ್ಲಿಯೇ ಇದ್ದೀಯಾ? ವಾಪಸು ಕಿಷ್ಕಿಂಧೆಗೆ ಹೋಗಿಲ್ಲವೇ?' ಎಂದು ಕೇಳಿದನಂತೆ. ಅದಕ್ಕೆ ಹನುಮಂತ 'ಇಲ್ಲಾ ಸ್ವಾಮಿ, ನಾನು ಸಂಜೀವಿನಿ ತಂದುಕೊಟ್ಟ ಟಿಎಡಿಎ ಬಿಲ್ ಇನ್ನೂ ಸೆಟ್ಲ್ ಆಗಿಲ್ಲ' ಎಂದನಂತೆ. ಅದಕ್ಕೆ ರಾಮನಿಗೆ ಸಿಟ್ಟು ಬಂತಂತೆ. ಹನುಮಂತನ ಬಿಲ್ ಸೆಟ್ಲ್ ಆಗಿಲ್ಲ ಎಂದರೆ ಇನ್ನು ಯಾರ ಬಿಲ್ ಸೆಟ್ಲ್ ಆಗುತ್ತದೆ ಎಂದು ಮಂತ್ರಿಯನ್ನು ಕರೆದು, ತಕ್ಷಣವೇ ಹನುಮಂತನ ಬಿಲ್ ಪಾವತಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ. ಮಂತ್ರಿ 'ಆಯ್ತು, ತಕ್ಷಣವೇ ಮಾಡಿಸುತ್ತೇನೆ' ಎಂದು ಭರವಸೆ ನೀಡಿದ.

ನಂತರ ಸುಮಾರು 3–4 ತಿಂಗಳು ಕಳೆದ ನಂತರವೂ ಹನುಮಂತ ಅರಮನೆ ಆವರಣದಲ್ಲಿ ತಿರುಗಾಡುವುದು ನಿಲ್ಲಲಿಲ್ಲ. ಮತ್ತೆ ಅವನನ್ನು ಕಂಡ ರಾಮ 'ಯಾಕೆ ಇನ್ನೂ ಇಲ್ಲೇ ಇದ್ದೀಯಾ?' ಎಂದು ಕೇಳಿದಾಗ ಹನುಮಂತ 'ಇಲ್ಲ, ಇನ್ನೂ ನನ್ನ ಬಿಲ್ ಬಂದಿಲ್ಲ' ಎಂದನಂತೆ. ಈಗ ರಾಮನ ಸಿಟ್ಟು ಇನ್ನೂ ಹೆಚ್ಚಾಯಿತು. ಮತ್ತೆ ಮಂತ್ರಿಯನ್ನು ವಿಚಾರಿಸಿದ. ಅದಕ್ಕೆ ಮಂತ್ರಿ 'ಇಲ್ಲಾ ಸ್ವಾಮಿ, ಕೇಸ್ ವರ್ಕರ್ ಕೆಲವು ತಕರಾರು ಎತ್ತಿದ್ದಾನೆ. ಅದಕ್ಕೆ ಬಿಲ್ ಇನ್ನೂ ಪಾಸ್ ಆಗಿಲ್ಲ' ಎಂದನಂತೆ. 'ಏನ್ ತಕರಾರು ಅವಂದು' ಎಂದು ಕೇಳಿದ ರಾಮ.

'ಕೇಸ್ ವರ್ಕರ್ ಮೂರು ಪ್ರಶ್ನೆ ಹಾಕಿ ಬಿಲ್ ಪೆಂಡಿಂಗ್ ಇಟ್ಟಿದ್ದಾನೆ. ಮೊದಲನೆ ಪ್ರಶ್ನೆ, ಸಂಜೀವಿನಿ ತರುವಂತೆ ಹನುಮಂತನಿಗೆ ಸೂಚಿಸಿದವನು ರಾಮ, ಆದರೆ ರಾಮ ಆಗ ಅಯೋಧ್ಯೆಯ ರಾಜ ಆಗಿರಲಿಲ್ಲ. ರಾಜನಲ್ಲದ ಯಾರೋ ವ್ಯಕ್ತಿ ಹೇಳಿದ ಕೆಲಸವನ್ನು ಮಾಡಿದರೆ ಅದಕ್ಕೆ ಬಿಲ್ ಕೊಡಲು ನಿಯಮದಲ್ಲಿ ಅವಕಾಶ ಇಲ್ಲ. ಅಲ್ಲದೆ ಹನುಮಂತ 'ಡಿ' ದರ್ಜೆ ನೌಕರ. 'ಡಿ' ದರ್ಜೆ ನೌಕರರಿಗೆ ವಾಯುಮಾರ್ಗದಲ್ಲಿ ಹೋಗಲು ಎಲಿಜಿಬಿಲಿಟಿ ಇಲ್ಲ. ಇದಲ್ಲದೆ ಹನುಮಂತನಿಗೆ ಸಂಜೀವಿನಿ ಮಾತ್ರ ತರಲು ಹೇಳಿದ್ದು. ಆದರೆ ಅವನು ಇಡೀ ಸಂಜೀವಿನಿ ಪರ್ವತವನ್ನೇ ತಂದಿದ್ದಾನೆ. ಇದು ಅನವಶ್ಯಕ ಖರ್ಚು. ಆದ್ದರಿಂದ ಬಿಲ್ ಪಾಸ್ ಮಾಡಲು ಸಾಧ್ಯವಿಲ್ಲ ಎನ್ನುತ್ತಿದ್ದಾನೆ' ಎಂದ ಮಂತ್ರಿ. ಇದನ್ನು ಕೇಳಿದ ರಾಮ ತಲೆ ಮೇಲೆ ಕೈಹೊತ್ತು 'ಏನಾದ್ರೂ ಮಾಡಿ ತಕ್ಷಣವೇ ಹನುಮಂತನ ಬಿಲ್ ಪಾಸ್ ಮಾಡಿಸಿ' ಎಂದು ಸೂಚಿಸಿದನಂತೆ.

ನಂತರ ಮಂತ್ರಿ ಹನುಮಂತನಿಗೆ 'ನಿನ್ನ ಬಿಲ್ ಪಾಸಾಗಬೇಕು ಎಂದರೆ ಕೇಸ್ ವರ್ಕರ್ ಭೇಟಿ ಮಾಡಿ ಅವನನ್ನು ನೋಡಿಕೊ' ಎಂದು ಸಲಹೆ ಮಾಡಿದನಂತೆ. ಅದರಂತೆ ಹನುಮಂತ ಕೇಸ್ ವರ್ಕರ್ ಭೇಟಿ ಮಾಡಿ 'ಬಿಲ್ ಪಾಸಾದರೆ ಅದರ ಪರ್ಸೆಂಟೇಜ್ ಇಂತಿಷ್ಟು ಕೊಡುತ್ತೇನೆ' ಎಂದಾಗ ಕೇಸ್ ವರ್ಕರ್ 'ಸಂಜೆಯೇ ಬಂದು ಬಿಲ್ ತೆಗೆದುಕೊಂಡು ಹೋಗು' ಎಂದನಂತೆ. 'ಅರೇ ನೀವು ಅದೇನೋ ತಕರಾರು ಹಾಕಿದ್ದೀರಂತಲ್ಲ' ಎಂದು ಕೇಳಿದಾಗ ಕೇಸ್ ವರ್ಕರ್ 'ಅದೆಲ್ಲಾ ಏನೂ ಇಲ್ಲ. ನಿನಗೆ ಸಂಜೀವಿನಿ ತರಲು ಹೇಳಿದಾಗ ರಾಮ ಅಯೋಧ್ಯೆಯ ರಾಜನಾಗಿರಲಿಲ್ಲ ಎನ್ನುವುದು ತಾನೆ. ಆಗ ಅಯೋಧ್ಯೆಗೆ ರಾಜರೇ ಇರಲಿಲ್ಲ. ರಾಮನ ಪಾದುಕೆ ಸಿಂಹಾಸನದ ಮೇಲಿತ್ತು. ಅದಕ್ಕಾಗಿ ರಾಮನೇ ರಾಜ ಎಂದು ಪರಿಗಣಿಸಿ ರಾಮ ಹೇಳಿದ್ದನ್ನು ಮಾಡಬಹುದು. ಇನ್ನು ನೀನು 'ಡಿ' ದರ್ಜೆ ನೌಕರ. ನಿನಗೆ ವಾಯುಮಾರ್ಗದಲ್ಲಿ ಹೋಗುವುದಕ್ಕೆ ಅನುಮತಿ ಇಲ್ಲ ಎನ್ನುವುದು. ತುರ್ತು ಸಂದರ್ಭದಲ್ಲಿ ಯಾರನ್ನು ಬೇಕಾದರೂ ವಾಯು-ಮಾರ್ಗದಲ್ಲಿ ಕಳಿಸಬಹುದು. ಮೂರನೆಯದ್ದು, ನೀನು ಸಂಜೀವಿನಿ ಪರ್ವತವನ್ನೇ ಯಾಕೆ ತಂದೆ ಎನ್ನುವುದು ತಾನೆ, ನೀನೇನು ಸಸ್ಯಶಾಸ್ತ್ರಜ್ಞ ಅಲ್ಲವಲ್ಲ, ನಿನಗೆ ಸಂಜೀವಿನಿ ಸಸ್ಯ ಯಾವುದು ಎನ್ನುವುದು ಗೊತ್ತಿಲ್ಲ. ಆದರೆ ಲಕ್ಷ್ಮಣನ ಜೀವ ಮುಖ್ಯ ಎಂದು ನೀನು ಸಂಜೀವಿನಿ ಪರ್ವತವನ್ನೇ ತಂದೆ. ಅದಕ್ಕಾಗಿ ನಿನ್ನ ಬಿಲ್ ಪಾಸ್ ಮಾಡಬಹುದು' ಎಂದನಂತೆ.

ಈ ಕತೆ ಈಗ ನೆನಪಾಗುವುದಕ್ಕೆ ಕಾರಣ, ಮೊನ್ನೆ-ಮೊನ್ನೆಯಷ್ಟೆ ವಿಧಾನಸೌಧದಲ್ಲಿ ಒಂದು ಅಣಕು ಪ್ರದರ್ಶನ ನಡೆಯಿತು. ನಮ್ಮ ಮುಖ್ಯಕಾರ್ಯದರ್ಶಿಗಳು ವಿಧಾನಸೌಧದ ಸಿಬ್ಬಂದಿಗೆ ಭ್ರಷ್ಟಾಚಾರ ವಿರೋಧಿ ಪ್ರತಿಜ್ಞೆ ಬೋಧಿಸಿದರು. 'ಲಂಚವನ್ನು ಮುಟ್ಟಲ್ಲ, ಭ್ರಷ್ಟಾಚಾರದಲ್ಲಿ ಭಾಗಿಯಾಗಲ್ಲ' ಎಂದು ಸಿಬ್ಬಂದಿ ಪ್ರತಿಜ್ಞೆ ಮಾಡಿದ್ದಾರಂತೆ. ಇದೇ ರೀತಿಯ ಪ್ರತಿಜ್ಞೆಯನ್ನು ಪೊಲೀಸರೂ ಮಾಡಿದ್ದಾರಂತೆ. ಇದಾಗಿ ಎರಡೇ ದಿನಗಳಲ್ಲಿ ಯಲ್ಲಾಪುರದಲ್ಲಿ ವ್ಯಕ್ತಿಯೊಬ್ಬ ತಹಶೀಲ್ದಾರ್ ಕಚೇರಿ ಸಿಬ್ಬಂದಿಗೆ ಲಂಚ ಕೊಡಲು ಭಿಕ್ಷೆ ಬೇಡಿದ್ದಾನೆ!

'ಲಂಚವಿನಾ ತೃಣಮಪಿ ನ ಚಲತಿ' ಅಂದರೆ ಲಂಚವಿಲ್ಲದೆ ತೃಣವೂ ವಿಧಾನಸೌಧದಲ್ಲಿ ಅಲುಗಾಡುವುದಿಲ್ಲ ಎಂಬ ಸ್ಥಿತಿ ಇರುವಾಗ, ಲಂಚ ಪಡೆಯುವುದಿಲ್ಲ ಎಂದು ಸಿಬ್ಬಂದಿ ಪ್ರತಿಜ್ಞೆ ಮಾಡುವುದನ್ನು ನೋಡಿ ನಗಬೇಕೋ ಅಳಬೇಕೋ ಎನ್ನುವ ಸ್ಥಿತಿ ಸಾಮಾನ್ಯ ಪ್ರಜೆಯದ್ದು. ನ್ಯಾಯಾಲಯದಲ್ಲಿ ಕಟಕಟೆಗೆ ಬಂದು ನಿಲ್ಲುವ ಸಾಕ್ಷಿದಾರನಿಂದ ಹಿಡಿದು ಶಾಸಕರು, ಸಚಿವರು, ನ್ಯಾಯಾಧೀಶರು ಎಲ್ಲರೂ ಇದೇ ರೀತಿ ಪ್ರತಿಜ್ಞೆ ಮಾಡುತ್ತಾರೆ. ಮುಖ್ಯಮಂತ್ರಿ ಕೂಡಾ ಪ್ರತಿಜ್ಞಾವಿಧಿ ಸ್ವೀಕಾರ ಮಾಡಿಯೇ ಅಧಿಕಾರಕ್ಕೆ ಬರುತ್ತಾರೆ. ಆದರೆ ಯಾರು ಕೂಡ ಪ್ರತಿಜ್ಞೆಯನ್ನು ಪಾಲಿಸುವ ಕುರುಹು ಸಹ ಸಿಗುವುದಿಲ್ಲ. ಪ್ರತಿಜ್ಞೆ ಎನ್ನುವುದು ಪಾಪದ ಪಾಪುವಾಗಿ ಬಿಟ್ಟದೆ.

ಮಾರುಕಟ್ಟೆಯಲ್ಲಿ ವಸ್ತುಗಳ ಬೆಲೆ ಏರಿಕೆಯಾದ ಹಾಗೆ ಸರ್ಕಾರಿ ಕಚೇರಿಗಳಲ್ಲಿ ಲಂಚದ ಮೊತ್ತವೂ ಏರಿಕೆಯಾಗುತ್ತಲೇ ಇದೆ. ಹಿಂದೆ ರಾಜೀವ್ ಗಾಂಧಿ ಒಮ್ಮೆ ಹೇಳಿದ್ದರು. ಯಾವುದೇ ಯೋಜನೆಗೆ ಹಣ ಮಂಜೂರಾದರೆ ಅದು ಐಸ್ ಗಡ್ಡೆಯಂತೆ ಕರಗುತ್ತಾ ಕರಗುತ್ತಾ ಸಾಗುತ್ತದೆ, ದೆಹಲಿಯಿಂದ ಹಳ್ಳಿಗೆ ಬಂದು ಸೇರುವವರೆಗೆ ಸೋರಿ ಸೋರಿ ಬರೀ ಕೈ ಉಳಿದಿರುತ್ತದೆ ಎಂದು. ಈಗಲೂ ಹಾಗೆಯೇ ಆಗಿದೆ. ವಿಧಾನಸೌಧದ ಮೊಗಸಾಲೆಯಲ್ಲಿ ಓಡಾಡಿ ಬಂದರೆ ಲಂಚದ ಹೊಸ ಹೊಸ ರೂಪಗಳು ಕಾಣಿಸುತ್ತವೆ.

ಮೊದಲೆಲ್ಲಾ ಅಧಿಕಾರಿಗಳು ಹಣ ಸಂಗ್ರಹಿಸಿ ಮಂತ್ರಿಗಳಿಗೆ ನೀಡುತ್ತಿದ್ದರಂತೆ. ಈಗ ಮಂತ್ರಿಗಳೇ ನೇರವಾಗಿ ಹಣ ಕೇಳುತ್ತಾರಂತೆ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಶೇ 10–15ರಷ್ಟಿದ್ದ ಲಂಚ ಈಗ ಶೇ 30ಕ್ಕೆ ಏರಿದೆಯಂತೆ. ಇನ್ನು ಕೆಲವರು ಕಾಮಗಾರಿ ಅಥವಾ ಖರೀದಿ ಅನುಮತಿಗೆ ಹಣದ ಪಾಲು ಕೊಡುವುದು ಬೇಡ, ನಿಮ್ಮ ಉದ್ದಿಮೆಯಲ್ಲಿಯೇ ಪಾಲುದಾರಿಕೆ ನೀಡಿ ಎಂದೂ ಕೇಳುತ್ತಾರಂತೆ. ಕೆಲವು ಸಚಿವರಂತೂ ಗುತ್ತಿಗೆದಾರರಿಗೆ ದೂರವಾಣಿ ಕರೆ ಮಾಡಿ 'ನಾನು ಯಾವ ಏಜೆಂಟ್ ಇಟ್ಟಿಲ್ಲ. ಅಧಿಕಾರಿಗಳಿಗೂ ಸೂಚನೆ ನೀಡಿಲ್ಲ. ಏನ್ ಕೊಡಬೇಕೋ ಅದನ್ನು ನನಗೇ ಕೊಟ್ಟುಬಿಡಿ' ಎಂದು ಕೇಳುತ್ತಿದ್ದಾರಂತೆ. ಕಳ್ಳನನ್ನು ಹಿಡಿದರೆ ಆತನಿಂದಲೇ ಕಳ್ಳತನದ ಟ್ರಿಕ್ ಕಲಿಯುವ ಪೊಲೀಸರೂ ಇದ್ದಾರಂತೆ. ವೆಬ್‌ಸೈಟ್ ಹ್ಯಾಕ್ ಮಾಡಿದ ಅಪರಾಧಕ್ಕೆ ವ್ಯಕ್ತಿಯೊಬ್ಬನನ್ನು ಬಂಧಿಸಿದರೆ ಆತನಿಂದಲೇ ಟೆಂಡರ್ ಸೈಟ್ ಹ್ಯಾಕ್ ಮಾಡಿಸಿ ತಮಗೆ ಬೇಕಾದವರಿಗೆ ಟೆಂಡರ್ ಸಿಗುವಂತೆ ಮಾಡುವ ಖದೀಮರೂ ಅಲ್ಲಿ ಕುಳಿತಿದ್ದಾರಂತೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬಿಟ್ ಕಾಯಿನ್ ಹ್ಯಾಕ್ ಮಾಡಿದರೆ ಆತನಿಂದಲೇ ಲಂಚ ಪಡೆಯುವ ಶೂರರೂ ಇದ್ದಾರಂತೆ. ಪಾಪ, ಪ್ರಜೆಗಳು ಮಾತ್ರ ದಿನವೆಲ್ಲಾ ದುಡಿದು ಇವರ ಜೇಬು ತುಂಬುತ್ತಿದ್ದಾರೆ. ರೈತ ಮಾತ್ರ ಯಾವ ಪ್ರತಿಜ್ಞೆಯೂ ಇಲ್ಲದೆ ಎಲ್ಲರ ಖರ್ಚಿನ ನೊಗವನ್ನು ಹೊತ್ತಿದ್ದಾನೆ.

ಮಿಲಿಯನ್ ಡಾಲರ್ ಪ್ರಶ್ನೆ ಏನಪ್ಪಾ ಅಂದರೆ, ಅತ್ಯಂತ ಸರಳ, ಪ್ರಾಮಾಣಿಕ ಎಂದು ಬಿಂಬಿಸಿಕೊಂಡಿರುವ ಹಾಗೂ ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿಯ ಮೇಲೆ ಪ್ರಬಲ ಹಿಡಿತ ಹೊಂದಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೂ ಇಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ತಡೆಯಲು ಸಾಧ್ಯವಾಗುತ್ತಿಲ್ಲ ಯಾಕೆ? ಬಹುಶಃ ಶ್ರೀರಾಮನೇ ಉತ್ತರಿಸಬೇಕು.

ಚುರುಮುರಿ

ಅವರು... ಇವರು

• ಬಿ.ಎನ್.ಮಲ್ಲೇಶ್

'ಹಲೋ... ಸಿಎಂ ಸಾಹೇಬ್ರಿಗೆ ಫೋನ್ ಕೊಡಿ'.

'ಸಿಎಂ ಸಾಹೇಬ್ರಿಗಾ? ಯಾಕೆ? ಯಾರು ನೀವು ಮಾತಾಡೋದು?'

'ರೀ ನಾವ್ಯಾರಾದ್ರೆ ನಿಮಗೇನ್ರಿ... ದುಸರಾ ಮಾತು ಬ್ಯಾಡ, ಸಿಎಂಗೆ ಫೋನ್ ಕೊಡಿ...'

'ಓಕೆ, ಕೊಡ್ತೀನಿ ಮಾತಾಡಿ... ಹಲೋ, ನಾನು ಸಿಎಂ ಮಾತಾಡೋದು. ಯಾರು ನೀವು, ಎಲ್ಲಿಂದ ಮಾತಾಡ್ತಿದೀರಿ?'

'ನಾನು ತೆಪರೇಸಿ ಅಂತ, ನಿಮ್ಹಾನ್ಸ್‌ನಿಂದ ಮಾತಾಡ್ತಾ ಇದೀನಿ. ಅಲ್ಲ ಸಾರ್, ನೀವು ರಾಜಕಾರಣಿಗಳು ಏನು ಹುಚ್ಚಾಟ ಆಡ್ತಾ ಇದೀರಾ? ಬಾಯಿಗೆ ಬಂದಂಗೆ ಮಾತಾಡರ್ನೆಲ್ಲ ನಿಮ್ಹಾನ್ಸ್‌ಗೆ ಕಳಿಸಬೇಕು ಅಂತೀರಿ. ಅವರೆಲ್ಲ ಇಲ್ಲಿಗೆ ಬಂದ್ರೆ ನಾವೆಲ್ಲಿಗೆ ಹೋಗಬೇಕು?'

'ಅಲ್ಲ, ಅವರು ಬಂದ್ರೆ ನಿಮಗೇನು ತೊಂದ್ರೆ? ಹೊಸ ಫ್ರೆಂಡ್ಸ್ ಸಿಕ್ಕಂಗಾಗಲ್ವ?'

'ಅಯ್ಯೋ ಬ್ಯಾಡ ಸಾ, ನಮಗೆ ಅವರಷ್ಟು ತೆಲಿ ಕೆಟ್ಟಿಲ್ಲ. ದಿನಾ ಟಿ.ವಿ ನೋಡ್ತೀವಲ್ಲ, ಎಷ್ಟು ಹುಚ್ಚುಚ್ಚಾಗಿ ಮಾತಾಡ್ತಾರೆ ಗೊತ್ತಾ? ಹೆಬ್ಬೆಟ್ ಗಿರಾಕಿ, ಡೀಲ್ ಮಾಸ್ತರು, ರಾತ್ರಿ ರಾಜಕಾರಣಿ, ಡ್ರಗ್ ಪೆಡ್ಲರು, ಸೂಟ್‌ಕೇಸ್ ಗಿರಾಕಿ, ಡೋಂಗಿಗಳು... ಇವೆಲ್ಲ ಏನ್ಸಾ? ಮಾತೆತ್ತಿದ್ರೆ ನಿಮ್ಮನ್ನ ನಿಮ್ಹಾನ್ಸ್‌ಗೆ ಕಳಿಸ್ಬೇಕು ಅಂತಾರೆ. ಅವರೆಲ್ಲ ಇಲ್ಲಿಗೆ ಬಂದ್ರೆ ನಮ್ ಗತಿ ಏನು?'

'ಅಲ್ಲಯ್ಯ ನಿಮ್ಹಾನ್ಸ್‌ನಲ್ಲಿದೀನಿ ಅಂತೀಯ, ಚೆನ್ನಾಗೇ ಮಾತಾಡ್ತೀಯ?'

'ನಾವು ಇಲ್ಲಿ ಒಳಗಿರೋರು ಯಾರಿಗೂ ಏನೂ ಆಗಿಲ್ಲ ಸಾ, ಸುಮ್ನೆ ಕೂಡಾಕಿದ್ದಾರೆ. ಹೊರಗಿರೋರಿಗೇ ತಲೆ ಕೆಟ್ಟಿದೆ. ನಮ್ಮ ಈ ಕಾಯಿಲೆ ಇವತ್ತಿಲ್ಲ ನಾಳೆ ವಾಸಿ ಆಗುತ್ತೆ, ಆದ್ರೆ ರಾಜಕಾರಣಿಗಳ ಆ ಕಾಯಿಲೆ ಯಾವತ್ತೂ ವಾಸಿ ಆಗಲ್ಲ'.

'ಅದಿರ್‍ಲಿ, ನೀನು ಇವತ್ತಿನ ಮಾತ್ರೆ ತಗಂಡ್ಯಾ? ನಾನು ಡಾಕ್ಟರು ಮಾತಾಡ್ತಾ ಇರೋದು. ನನಗೇ ಫೋನ್ ಮಾಡಿ ಸಿಎಂಗೆ ಕೊಡು ಅಂತೀಯ? ಬಂದೆ ಇರು, ದೊಡ್ಡ ಇಂಜೆಕ್ಷನ್ ಕೊಡ್ತೀನಿ...'

ಫೋನ್ ಕಟ್!

ಸಂಗತ

ಋಣಸಂದಾಯದ ಹೊಣೆಯರಿಯುವ ಹೊತ್ತು

ನಮಗೆಲ್ಲ ಅನ್ನ, ಅರಿವು, ನೆರಳನ್ನು ನೀಡಿ ಪೊರೆವ ಸಮಾಜದ ಋಣಸಂದಾಯವು ನಮ್ಮೊಟ್ಟಿಗೇ ಸಾಗಬೇಕು

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಹೌದು, ನಾವೆಲ್ಲಾ ಋಣದ ಮೂಟೆಯನ್ನು ಹೊತ್ತು ಬಂದವರು. ನಿಂತ ನೆಲ, ತಿನ್ನುವ ಅನ್ನದ ಪ್ರತೀ ಅಗುಳು, ತೊಡುವ ಬಟ್ಟೆಯ ಎಳೆಎಳೆಯಲ್ಲೂ ಸಾವಿರಾರು ಜನರ ಶ್ರಮವಿದೆ, ಬೆವರಿದೆ, ಋಣವಿದೆ. ಇಲ್ಲಿ ನಾವೆಲ್ಲರೂ ಪರಾವಲಂಬಿಗಳೇ. ಒಬ್ಬರ ನಿತ್ಯ ಬಳಕೆಯ ವಸ್ತು, ಸೇವೆ, ಸೌಕರ್ಯಗಳೆಲ್ಲ ಮತ್ಯಾರದೋ ಅವಿರತ ದುಡಿತದ, ತ್ಯಾಗದ ಫಲವಾಗಿರುತ್ತವೆ. ಜಿ.ಎಸ್. ಶಿವರುದ್ರಪ್ಪನವರ ಕವನದ ಸಾಲುಗಳು ಕೂಡ ಧ್ವನಿಸುವುದು ಇದನ್ನೇ...

ಎನಿತು ಜನ್ಮದಲಿ ಎನಿತು ಜೀವರಿಗೆ
ಎನಿತು ನಾವು ಋಣಿಯೋ
ತಿಳಿದು ನೋಡಿದರೆ ಬಾಳು ಎಂಬುದಿದು
ಋಣದ ರತ್ನಗಣಿಯೋ...

ದಿನೇದಿನೇ ಯಾಂತ್ರೀಕೃತಗೊಳ್ಳುತ್ತಿರುವ ಸ್ವಾರ್ಥಜಗತ್ತು ಅಶಕ್ತರು, ಅವಕಾಶವಂಚಿತರನ್ನು ಎಗ್ಗಿಲ್ಲದೆ ತುಳಿದುಕೊಂಡೇ ನಡೆಯುತ್ತಿರುವಾಗ, ಬದುಕಿನೆದುರು ಮುಕ್ತಿಮಾರ್ಗವೊಂದು ತೆರೆದುಕೊಳ್ಳಬೇಕಾದ ಜರೂರಿರುತ್ತದೆ. ಭೂತವನ್ನು ಮರೆತ ಭವಿಷ್ಯತ್ತಿನೆಡೆಗಿನ ಧಾವಂತದ ಹಾದಿಯಲ್ಲಿ 'ಸೇವೆ' ಎಂಬ ಸಾವಧಾನದ ತಂಗುದಾಣಗಳು ಅಗತ್ಯ. ಒಳಗಿನ ಆರ್ದ್ರತೆ, ಪ್ರೀತಿ- ಅಂತಃಕರಣಗಳ ಪಸೆಯಾರದಂತೆ ಕಾಪಿಡುವ ಮಾರ್ಗವಾಗಿ, ಮತ್ತಷ್ಟು ಮನುಷ್ಯರಾಗಿ ಉಳಿಯುವ ಸಲುವಾಗಿ...

ನಮಗೆಲ್ಲ ಅನ್ನ, ಅರಿವು, ನೆರಳನ್ನು ನೀಡಿ ಪೊರೆವ ಸಮಾಜದ ಋಣಸಂದಾಯವು ನಮ್ಮೊಟ್ಟಿಗೇ ಸಾಗಬೇಕು. ನಿಸ್ವಾರ್ಥ ಸೇವೆಯಲ್ಲಿಯೇ ದೈವತ್ವವನ್ನೂ ಮೋಕ್ಷವನ್ನೂ ಹುಡುಕಿಕೊಳ್ಳಬೇಕು. ಸೇವೆಯೆಂಬುದು ತನ್ನನ್ನು ತಾನು ಋಣಭಾರದಿಂದ ಮುಕ್ತಗೊಳಿಸಿಕೊಳ್ಳಲು ಸಾಗಬೇಕಾದ ದಾರಿಯೇ ಹೊರತು ಅದನ್ನು ಉಪಕಾರವೆಂದು ಭ್ರಮಿಸಬೇಕಾದ್ದಿಲ್ಲ.

ಹಾಗೆ ನೋಡಿದರೆ ನಿರುಪದ್ರವಿಗಳಾಗಿ ನಿರಾಡಂಬರದ ಬದುಕು ಸಾಗಿಸುವ ಇತರೆ ಪರಿಸರಸ್ನೇಹಿ ಜೀವಜಂತುಗಳಿಗಿಂತ ಮನುಷ್ಯನಿಗೇ ಹೆಚ್ಚು ಋಣಭಾರವಿದೆ. ಪ್ರೀತಿ, ತ್ಯಾಗ ಮತ್ತು ಋಣಸಂದಾಯದ ಮಾದರಿಯಿಂದಷ್ಟೇ ಮನುಷ್ಯ ಭೂಗ್ರಹದಲ್ಲಿ ವಿಭಿನ್ನನೂ ಅನನ್ಯನೂ ಆಗಿದ್ದಾನೆ. 'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿಯೂ ನಿನ್ನವಳಲ್ಲ. ಅವು ಜಗಕ್ಕಿಕ್ಕಿದ ವಿಧಿ...' ಎಂದ ಅಲ್ಲಮನೂ ಲೌಕಿಕವನ್ನು ಧ್ಯಾನಿಸಿದ್ದ.

ಕೊರೊನೋತ್ತರ ಕಾಲಘಟ್ಟವಂತೂ ಜನಜೀವನವನ್ನು ಕಡುಕಷ್ಟಕ್ಕೆ ತಳ್ಳಿದೆ. ಕಸುವು- ಕಸುಬುಗಳನ್ನು ಕಳೆದುಕೊಂಡು ಬೀದಿಗೆ ಬಿದ್ದವರನ್ನಿಲ್ಲಿ ಲೆಕ್ಕವಿಟ್ಟವರಿಲ್ಲ. ಸಂಕಟಕಾಲದಲ್ಲಿ ಬಲಿಷ್ಠರ ಆದಾಯವು ಗಣನೀಯವಾಗಿ ವೃದ್ಧಿಯಾಗಿದೆ! ಇಲ್ಲದವರ ಅವಶ್ಯಕತೆಗಳಿಗೆ ಆಸರೆಯಾಗಿ ಉಳ್ಳವರು ಒದಗಬೇಕಾದ್ದು ಮಾನವೀಯ ಧರ್ಮ. ಅದಕ್ಕೆ ಸೇವೆ ಅನ್ನುವ ಹೆಸರಿದೆ. 'ಸಂತೋಷಂ ಜನಯೇತ್ ಪ್ರಾಜ್ಞಃ ತದೇವ ಈಶ್ವರ ಪೂಜನಂ'- ಜನ್ಮವೆತ್ತಿದ ಪ್ರತಿಜೀವವೂ ದೇವರ ರೂಪವಾಗಿರುವುದರಿಂದ ಜೀವರಾಶಿಗಳನ್ನು ಸಂತೋಷಪಡಿಸುವುದೇ ಭಗವಂತನ ಪೂಜೆಯೆಂಬ ವಾಸ್ತವವನ್ನು ಪರಿಭಾವಿಸಬೇಕಿದೆ.

ಬೈಬಲ್‌ನಲ್ಲಿ 'ಪ್ರಾರ್ಥಿಸುವ ನೂರು ಕೈಗಳಿಗಿಂತ ಸಹಾಯಕ್ಕೊದಗುವ ಕೈಗಳೆರಡು ಮೇಲು' ಅಂತಿದೆ. ಸೇವೆಯಲ್ಲಿ ಚಿಕ್ಕದು ದೊಡ್ಡದೆಂಬ ಭೇದವಿಲ್ಲ. ರಾಮಾಯಣದ ಸೀತಾಪಹರಣದ ಸಮಯದಲ್ಲಿ ಸಮುದ್ರಕ್ಕೆ ಸೇತುವೆ ಕಟ್ಟುವ ಕಾರ್ಯವು ಭರದಿಂದ ಸಾಗಿರುವ ಸಂದರ್ಭವದು. ಬಲಾಢ್ಯ ವಾನರ ಸೇನೆಯು ಅನಾಮತ್ತಾಗಿ ಕಲ್ಲುಬಂಡೆ, ಬೆಟ್ಟಗುಡ್ಡಗಳನ್ನು ತಂದೊಡ್ಡುತ್ತಿದ್ದರೆ ಪುಟ್ಟ ಅಳಿಲೊಂದು ಕೈಲಾದಷ್ಟು ಹಿಡಿ ಮರಳನ್ನು ತಂದುತಂದು ಸುರಿಯುತ್ತಿತ್ತು. 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಕುವೆಂಪು ಕಂಡಂತೆ, ಪ್ರಭು ಶ್ರೀರಾಮನ ದೃಷ್ಟಿಯಲ್ಲಿ ಅವೆರಡಕ್ಕೂ ಒಂದೇ ಮಹತ್ವ. ಏಕೆಂದರೆ ರಾಮ ನೋಡಿದ್ದು ತೋಳ್ಬಲವನ್ನಲ್ಲ... ಎದೆಯಾಳವನ್ನು!

ಕುರಾನ್‌ನಲ್ಲೂ ಇಂಥದ್ದೇ ಘಟನೆಯೊಂದಿದೆ. ದುರಹಂಕಾರಿ ಚಕ್ರವರ್ತಿ ನಮ್ರಾಜ್‌ನ ಕೆಂಗಣ್ಣಿಗೆ ಗುರಿಯಾಗುವ ಇಬ್ರಾಹಿಂಗೆ ಹೊಡೆತದ ಶಿಕ್ಷೆಯೊಂದಿಗೆ ಬೆಂಕಿಗಾಹುತಿಗೆ ಈಡುಮಾಡಲಾಗುತ್ತದೆ. ಅಲ್ಲಿಯ ಉರಿಯುವ ಜ್ವಾಲೆಯ ಮೇಲೆ 'ಅವಾಬಿಲ್' ಎಂಬ ಪುಟ್ಟ ಹಕ್ಕಿಯೊಂದು ತನ್ನ ಕೊಕ್ಕಿನಲ್ಲಿ ಹನಿ ನೀರನ್ನು ತಂದು ಸುರಿದು ಬೆಂಕಿಯನ್ನಾರಿಸುವ ಪ್ರಯತ್ನ ಮಾಡುತ್ತಿರುತ್ತದೆ! ಕಡೆಗೆ ಬೆಂಕಿಯು ಹೂವಾಗಿ ಅರಳಿ ಇಬ್ರಾಹಿಂ ಮತ್ತಷ್ಟು ಪ್ರಖರನಾಗಿ ಹೊರಬರುತ್ತಾನೆ. ಇಲ್ಲಿಯೂ ಪುಟ್ಟಹಕ್ಕಿಯೊಂದು ತೋರಿದ್ದ ಸೇವಾ-ಮನೋಭಾವವನ್ನು ಬಹು ಶ್ರೇಷ್ಠವಾದುದೆಂದು ನಂಬಲಾಗಿದೆ.

ಗೀತೆಯಲ್ಲಿ 'ಕರ್ಮಣ್ಯೇ ವಾದಿಕಾರಸ್ತೇ ಮಾಫಲೇಷು ಕದಾಚನಾ...' ಎಂದಿದೆ. ಲಾಭದಾಸೆ, ಪ್ರತಿಫಲಾಪೇಕ್ಷೆ, ಕೀರ್ತಿಯಾಸೆಗಳನ್ನು ಮರೆತು, ಕ್ಯಾಮೆರಾಗಳನ್ನು ಮನೆಯಲ್ಲೇ ಬಿಟ್ಟು ಮಾಡುವ ಸೇವೆಯು ಹೆಚ್ಚು ಮೌಲ್ಯಯುತ. ಲಾಭದಾಸೆ ಮುಗಿವಲ್ಲಿಂದಲೇ ಮನುಷ್ಯತ್ವದ ಆರಂಭ. 'ಕರ್ಮಕ್ಕಾಗಿ ಕರ್ಮ ಮಾಡುವ ಮಹನೀಯನನ್ನು ಕಾಣಲು, ನಾನು ಬೇಕಾದರೆ ನಾನು ನನ್ನ ಮೊಣಕೈ, ಮೊಣಕಾಲುಗಳ ಮೇಲೆ ಇಪ್ಪತ್ತು ಮೈಲಿ ನಡೆಯಲು ಸಿದ್ಧನಿದ್ದೇನೆ' ಎಂಬ ಸ್ವಾಮಿ ವಿವೇಕಾನಂದರ ಮಾತೇ ನಿಸ್ವಾರ್ಥ ಕರ್ಮದ ಅಭಾವವನ್ನು ಸೂಚಿಸುತ್ತದೆ! ಸಮಾಜಸೇವೆಯೂ ಹೂಡಿಕೆಯಂತೆ ಒಂದು ದಂಧೆಯಂತಾಗಿರುವ ಹೊತ್ತಿನಲ್ಲಿ ಕೊಡುಗೆಗಳನ್ನು ಪ್ರಚಾರತಂತ್ರಗಳಾಗಿ ಬಳಸಿಕೊಳ್ಳುವ ಸ್ವಾರ್ಥಸಾಧಕರಿಗಿಲ್ಲಿ ಬರವಿಲ್ಲ.

ನೆನಪಿಡಬೇಕಾದ್ದು, ಜಗವ ಬೆಳಗುವ ನೇಸರ, ಇಳೆಗೆ ಜೀವಕಳೆ ತರುವ ಮಳೆ, ತನ್ನ ಪಾತ್ರದುದ್ದಕ್ಕೂ ಹಸಿರುಕ್ಕಿಸಿ ಹರಿವ ನದಿ, ಸುತ್ತ ಸುಳಿದಾಡಿ ಜೀವಾನಿಲ ಸೂಸುವ ಗಾಳಿ, ಹಣ್ಣು-ನೆರಳು ನೀಡಿ ಜೀವ ಪೊರೆವ ಮರಗಿಡಗಳೆಂದಿಗೂ ಸ್ವಾರ್ಥಕ್ಕಾಗಿ ಅಸ್ತಿತ್ವದಲ್ಲಿರವು, ಪರಹಿತಕ್ಕಷ್ಟೇ.

ವಾಚಕರ ವಾಣಿ

ವಿರೋಧ ಪಕ್ಷದ ಧ್ವನಿ ಜನರದ್ದೇ

'ಬೆಲೆ ಏರಿಕೆ ಕುರಿತು ಜನರಿಗೆ ಆಕ್ರೋಶವಿಲ್ಲ, ಕಾಂಗ್ರೆಸ್ ಪಕ್ಷದವರಿಗೆ ಮಾತ್ರ ಆಕ್ರೋಶವಿದೆ. ಎಲ್ಲಿದೆ ಬೆಲೆ ಏರಿಕೆ? ಜನರು ಪ್ರಶ್ನಿಸುತ್ತಿಲ್ಲ. ನೀವು ಮಾತ್ರ ಪ್ರಶ್ನಿಸುತ್ತಿದ್ದೀರಿ?' ಎಂದು ಕೇಂದ್ರ ರಸಗೊಬ್ಬರ ಮತ್ತು ರಾಸಾಯನಿಕ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಹೇಳಿದ್ದಾರೆ.

ಮಾನ್ಯ ಸಚಿವರೇ, ವಿರೋಧ ಪಕ್ಷಗಳ ಧ್ವನಿ ಎಂದರೆ ಅದು ಜನರ ಧ್ವನಿ ಎಂಬುದನ್ನು ಮರೆತಿರೇಕೆ? ಪ್ರತಿಯೊಬ್ಬರೂ ನಿಮ್ಮ ಮನೆಯ ಮುಂದೆ ಬಂದು, ಬೆಲೆ ಏರಿಕೆಯಿಂದ ತೊಂದರೆ ಎಂದು ಹೇಳಲಾಗುತ್ತದೆಯೇ? ಅಷ್ಟಕ್ಕೂ ಬೆಲೆ ಏರಿಕೆಯಿಂದ ಜನರು ಕಂಗೆಟ್ಟಿರುವುದು ನಿಮ್ಮ ಗಮನಕ್ಕೆ ಬಂದಿಲ್ಲವೇ? ನಿಮಗೆ ಸರ್ಕಾರದ ಎಲ್ಲ ಸೌಲಭ್ಯಗಳೂ ದೊರಕುತ್ತಿರುವುದರಿಂದ ಬೆಲೆ ಏರಿಕೆ ನಿಮ್ಮನ್ನು ಬಾಧಿಸುತ್ತಿಲ್ಲ. ನೀವು ಬೆವರು ಸುರಿಸಿ ಸಂಪಾದಿಸಿದ ಹಣದಲ್ಲಿ ಒಮ್ಮೆ ನಿಮ್ಮ ವಾಹನಕ್ಕೆ ಇಂಧನ ಹಾಕಿಸಿ, ಆಗ ಗೊತ್ತಾಗುತ್ತದೆ. ಪ್ರತಿಯೊಂದು ಅತ್ಯಗತ್ಯ ವಸ್ತುವಿನ ಬೆಲೆ ಏರಿರುವುದನ್ನು ಕಂಡೂ ಈ ರೀತಿ ಮಾತನಾಡುವುದು ಶೋಭೆ ತರದು. ಬೆಲೆ ಇಳಿಸುವ ಕ್ರಮದ ಕುರಿತು ಆಲೋಚಿಸಿ. ವಿರೋಧ ಪಕ್ಷಗಳ ಮಾತಿಗೂ ಬೆಲೆ ಕೊಡುವುದನ್ನು ರೂಢಿಸಿಕೊಳ್ಳಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ತಾಯಂದಿರ ಸಂಕುಲಕ್ಕೆ ಅವಮಾನ

ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಅವರು ಮುಸ್ಲಿಂ ಸಮುದಾಯದ ಕಾರ್ಯಕ್ರಮವೊಂದರಲ್ಲಿ ಬಿಳಿ ಟೋಪಿ ಧರಿಸಿಕೊಂಡಿರುವ ಚಿತ್ರವನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿರುವುದಕ್ಕೆ, ಬಿಜೆಪಿ ಮುಖಂಡ ಸಿ.ಟಿ.ರವಿ ಅವರು, 'ಈ ಟೋಪಿ ಹಾಕಲು ಯಾರಿಗೆ ಹುಟ್ಟಿರಬೇಕು ಮಾಜಿ ಮುಖ್ಯಮಂತ್ರಿಗಳೇ?' ಎಂದು ಪ್ರಶ್ನಿಸುವ ಮುಖೇನ, ತಾವು ಯಾವ ಬಗೆಯ ಸಂಸ್ಕೃತಿಗೆ ಸೇರಿದವರು ಎಂಬುದನ್ನು ಸಾಬೀತುಪಡಿಸಿದ್ದಾರೆ. ಇವರು ತಮ್ಮ ಈ ಕೀಳು ಅಭಿರುಚಿಯ ಮಾತಿನಿಂದ ತಮ್ಮ ತಾಯಿಯನ್ನೂ ಒಳಗೊಂಡಂತೆ ಇಡೀ ತಾಯಂದಿರ ಸಂಕುಲವನ್ನು ಅವಮಾನಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಖಾತೆಯ ಮಾಜಿ ಸಚಿವರೂ ಆಗಿರುವ ರವಿ ಅವರ ಈ ಮಾತಿನಿಂದ ಇಡೀ ಇಲಾಖೆಯೇ ತಲೆ ತಗ್ಗಿಸುವಂತಾಗಿದೆ. ಭಾಷೆ ಬಳಕೆಯ ಬಗ್ಗೆ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಪ್ರಜ್ಞಾವಂತರಾಗಿ ನಡೆದುಕೊಳ್ಳಲಿ.

ಎಸ್.ಜಿ.ಸಿದ್ಧರಾಮಯ್ಯ, ರುದ್ರಪ್ಪ ಹನಗವಾಡಿ, ಬೆಂಗಳೂರು

ಹಂಸಲೇಖ ಗೀತೆಗೆ ಆಕ್ಷೇಪವೇಕೆ?

'ಕನ್ನಡಕ್ಕಾಗಿ ನಾವು' ಅಭಿಯಾನದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಆರಿಸಿಕೊಂಡಿರುವ ಮೂರು ಗೀತೆಗಳ ಪೈಕಿ ಚಿತ್ರಗೀತೆಗಳ ರಚನೆಕಾರ ಹಂಸಲೇಖ ಅವರ ಒಂದು ಗೀತೆಯನ್ನೂ ಆರಿಸಿಕೊಂಡಿರುವುದಕ್ಕೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದು ಸರಿಯಲ್ಲ. ಕನ್ನಡವನ್ನು ನಾವು ಕೇವಲ 'ಅಕಡೆಮಿಕ್ ವಲಯದ ಸಾಹಿತಿಗಳ ಸುತ್ತ' ಮಾತ್ರವೇ ಗ್ರಹಿಸುತ್ತಿರುವ ಸೀಮಿತ ದೃಷ್ಟಿಕೋನವೇ ಇಂತಹ ತಕರಾರುಗಳಿಗೆ ಕಾರಣವಾಗಿದೆ. ಇದರ ಜೊತೆಗೆ ಮೊದಲಿನಿಂದಲೂ ಚಿತ್ರಗೀತೆಗಳನ್ನು ಬರೆಯುವವರನ್ನು ಅಸ್ಪೃಶ್ಯರಂತೆ ನೋಡುವ ಪರಿಪಾಟ ಆಳವಾಗಿ ಬೇರೂರಿದೆ. ಆದರೆ, ಸಾವಿರಾರು ಗೀತೆಗಳನ್ನು ಬರೆದಿರುವ ಚಿ.ಉದಯಶಂಕರ್, ವಿಜಯನಾರಸಿಂಹ ಮುಂತಾದವರು ಬರೆದಿರುವ ಗೀತೆಗಳು ಯಾವ ದೃಷ್ಟಿಯಿಂದಲೂ ಕಡಿಮೆಯಿಲ್ಲ.

ಕನ್ನಡವನ್ನು ನೋಡಲು ಮತ್ತು ಬೆಳೆಸಲು ಹಲವು ಬಗೆಯ ಕನ್ನಡಿಗಳಿವೆ. ಅವುಗಳ ಪೈಕಿ ಚಿತ್ರಗೀತೆಯೂ ಒಂದು. ಹಂಸಲೇಖ ಅವರ 'ಹುಟ್ಟಿದರೇ ಕನ್ನಡ ನಾಡಲ್ ಹುಟ್ಟಬೇಕು' ಗೀತೆಯು ವರ್ಣನಾತ್ಮಕ ಧಾಟಿಯಲ್ಲಿರುವ ಸುಶ್ರಾವ್ಯ ರಚನೆಯಾಗಿದೆ. ಇಂತಹ ಇನ್ನೂ ನೂರಾರು ಚಿತ್ರಗೀತೆಗಳು ಮತ್ತು ಭಾವಗೀತೆಗಳು ನಮ್ಮಲ್ಲಿರುವುದಕ್ಕೆ ನಾವು ಹೆಮ್ಮೆಪಡಬೇಕು. ಕನ್ನಡವು ಕೇವಲ ಕವಿಗಳ ಸುತ್ತ ಗಿರಕಿ ಹೊಡೆಯಬಾರದು. ಬದಲಿಗೆ, ನಮ್ಮ ಗೀತರಚನಕಾರರೂ ಸೇರಿದಂತೆ ಎಲ್ಲರನ್ನೂ 'ನಾನು-ನೀನು-ಅವನು' ಎನ್ನುವ ಸೂತ್ರದಲ್ಲಿ ಒಳಗೊಳ್ಳಬೇಕು. ಹೀಗೆ ಮಾಡಿದರೆ ಮಾತ್ರ ಕನ್ನಡ 'ಇನ್‌ಕ್ಲೂಸಿವ್' ಆಗುತ್ತದೆ. ಇಲ್ಲದೇ ಹೋದರೆ 'ಎಕ್ಸ್‌ಕ್ಲೂಸಿವ್' ಆಗಿ ತನ್ನ ಅವಸಾನವನ್ನು ತಾನೇ ಬರಮಾಡಿಕೊಳ್ಳುತ್ತದೆ. ಚಿತ್ರಗೀತೆಗಳು ಜನಮಾನಸದ ಮೇಲೆ ಅಗಾಧ ಪರಿಣಾಮ ಬೀರುವಷ್ಟು ಶಕ್ತಿಶಾಲಿಯಾಗಿರುತ್ತವೆ ಎನ್ನುವ ಪ್ರಾಥಮಿಕ ಸತ್ಯವನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು.

ಬಿ.ಎಸ್. ಜಯಪ್ರಕಾಶ ನಾರಾಯಣ, ಬೆಂಗಳೂರು

ಉದ್ಯೋಗಕ್ಕೆ ಅರ್ಹತೆ: ತಾರತಮ್ಯ ಸರಿಯಲ್ಲ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಅರ್ಜಿ ಆಹ್ವಾನಿಸಲಾಗಿದೆ. ಲಭ್ಯವಿರುವ ವಿಷಯವಾರು ಹುದ್ದೆಗಳಿಗೆ ವಿದ್ಯಾರ್ಹತೆಯನ್ನು ನಿಗದಿ ಮಾಡುತ್ತಾ ಕೆಲ ವಿಷಯಗಳಲ್ಲಿ ಸಮಾನಾಂತರ ವಿಷಯಗಳನ್ನು ನಿಗದಿ ಮಾಡಲಾಗಿದೆ. ಉದಾಹರಣೆಗೆ, ಸಾರ್ವಜನಿಕ ಆಡಳಿತ ವಿಷಯಕ್ಕೆ ಸಾರ್ವಜನಿಕ ಆಡಳಿತ ಅಥವಾ ರಾಜ್ಯಶಾಸ್ತ್ರದಲ್ಲಿ ಯಾವುದಾದರೂ ಒಂದರಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರೆ ಅರ್ಜಿ ಸಲ್ಲಿಸಬಹುದು. ಈ ರೀತಿ ಬೆಂಗಳೂರು ವಿಶ್ವವಿದ್ಯಾಲಯದ ಐದು ವರ್ಷಗಳ ಇಂಟಿಗ್ರೇಟೆಡ್ ಎಂ.ಎಸ್ಸಿ ಜೀವಶಾಸ್ತ್ರ ವಿಷಯದಲ್ಲಿ ಪದವಿ ಪಡೆದಿರುವವರ ಪದವಿಯನ್ನು ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಜೈವಿಕ ರಸಾಯನಶಾಸ್ತ್ರ ಮತ್ತು ಜೆನೆಟಿಕ್ಸ್ ವಿಷಯಗಳಿಗೆ ಸಮಾನಾಂತರ ಎಂ.ಎಸ್ಸಿ ಪದವಿ ಎಂದು ಪರಿಗಣಿಸಲಾಗಿದೆ.

ಆದರೆ ಐದು ವರ್ಷಗಳ ಇಂಟಿಗ್ರೇಟೆಡ್ ಎಂ.ಎಸ್ಸಿ ರಸಾಯನಶಾಸ್ತ್ರ ಪದವಿ ಪಡೆದಿರುವ ಅಭ್ಯರ್ಥಿಗಳು ರಸಾಯನಶಾಸ್ತ್ರ ವಿಷಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸದಿರುವುದು ಏಕೆ ಎಂದು ತಿಳಿಯದಾಗಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿ 2006ರಲ್ಲಿ ಈ ಪದವಿ ತರಗತಿಗಳನ್ನು ಪ್ರಾರಂಭಿಸಲಾಯಿತು. ಅನೇಕ ವಿದ್ಯಾರ್ಥಿಗಳು ಈ ಪದವಿ ಪಡೆದಿದ್ದು ಈಗ ಅವರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ರಸಾಯನಶಾಸ್ತ್ರ ವಿಷಯದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವುದರಿಂದ ಸರ್ಕಾರ ವಂಚಿತರನ್ನಾಗಿಸಿದೆ. ಐದು ವರ್ಷಗಳ ಈ ಪದವಿ ಕೂಡ ಎರಡು ವರ್ಷಗಳ ಎಂ.ಎಸ್ಸಿ ಪದವಿಗೆ ಸಮಾನಾಂತರ ಎಂದು ಸರ್ಕಾರ ಪರಿಗಣಿಸಿ, ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಬೇಕು.

ಸಂಜೀವ್, ರಮೇಶ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪೋಷಣೆ: ಏಕರೂಪದ ಅನುಷ್ಠಾನದ ಕೊರತೆ

ದೇಶದ ಮಕ್ಕಳು ಮತ್ತು ಮಹಿಳೆಯರಲ್ಲಿ ಅಪೌಷ್ಟಿಕತೆ ನೀಗಿಸಲು ಮತ್ತು ಅಗತ್ಯ ಪೋಷಕಾಂಶಗಳನ್ನು ಪೂರೈಸಲು ಕೇಂದ್ರ ಸರ್ಕಾರವು ಹಲವು ಯೋಜನೆಗಳನ್ನು ಹಾಕಿಕೊಂಡಿದೆ. ಅಂಗನವಾಡಿ ಮೂಲಕ, ಮಕ್ಕಳು ಮತ್ತು ಗರ್ಭಿಣಿ ಮಹಿಳೆಯರಿಗೆ ಪೋಷಕಾಂಶಯುಕ್ತ ಆಹಾರ ಪೂರೈಕೆ, ಮಾತೃತ್ವ ವಂದನಾ ಯೋಜನೆ ಮೂಲಕ ಆರ್ಥಿಕ ನೆರವು ಮೊದಲಾದ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಆದರೆ ದೇಶದ ಎಲ್ಲಾ ಭಾಗಗಳಲ್ಲಿ ಈ ಯೋಜನೆ ಏಕಪ್ರಕಾರದಲ್ಲಿ ಅನುಷ್ಠಾನಕ್ಕೆ ಬರುತ್ತಿಲ್ಲ. ಕೆಲವು ರಾಜ್ಯಗಳಲ್ಲಿ ಈ ಯೋಜನೆಗಳ ಫಲಾನುಭವಿಗಳ ಪ್ರಮಾಣ ಗರಿಷ್ಠಮಟ್ಟದಲ್ಲಿ ಇದೆ. ಕೆಲವು ರಾಜ್ಯಗಳಲ್ಲಿ ಕಡಿಮೆ ಮಟ್ಟದಲ್ಲಿ ಇದೆ



ಮಕ್ಕಳಲ್ಲಿ ಅಪೌಷ್ಟಿಕತೆ ಪ್ರಮಾಣ ಇಳಿಕೆ ಗುರಿ

ದೇಶದಲ್ಲಿ 2016ರ ವೇಳೆಗೆ ಅಪೌಷ್ಟಿಕತೆಯಿಂದ ಬಳಲುತ್ತಿದ್ದ ಮಕ್ಕಳ ಪ್ರಮಾಣ ಶೇ 37.5ರಷ್ಟು ಇತ್ತು. ಇದನ್ನು 2025ರ ವೇಳೆಗೆ ಶೇ 30ರಷ್ಟಕ್ಕೆ ಇಳಿಸುವ ಗುರಿ ಹಾಕಿಕೊಳ್ಳಲಾಗಿದೆ



- ಪಶ್ಚಿಮ ರಾಜಸ್ಥಾನ ಮತ್ತು ಅರುಣಾಚಲ ಪ್ರದೇಶದಲ್ಲಿ ಈ ಯೋಜನೆಗಳ ಫಲಾನುಭವಿಗಳ ಪ್ರಮಾಣ ಶೇ 25ಕ್ಕಿಂತಲೂ ಕಡಿಮೆ ಇದೆ. ಈ ಭಾಗಗಳಲ್ಲಿ ಯೋಜನೆಗಳು ಸರಿಯಾಗಿ ಅನುಷ್ಠಾನವಾಗಿಲ್ಲ
- ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನದ ಬಹುತೇಕ ಕಡೆ ಮತ್ತು ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರದ ಹಲವೆಡೆ ಯೋಜನೆಯ ಫಲಾನುಭವಿಗಳ ಪ್ರಮಾಣ ಶೇ 50ಕ್ಕಿಂತಲೂ ಕಡಿಮೆ ಇದೆ
- ಒಡಿಶಾ, ತೆಲಂಗಾಣ ಮತ್ತು ಆಂಧ್ರಪ್ರದೇಶದ ಬಹುತೇಕ ಕಡೆ ಈ ಯೋಜನೆಗಳ ಫಲಾನುಭವಿಗಳ ಸಂಖ್ಯೆ ಶೇ 75ಕ್ಕಿಂತಲೂ ಹೆಚ್ಚು. ಈ ರಾಜ್ಯಗಳಲ್ಲಿ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲಾಗಿದೆ
- ಉಳಿದ ರಾಜ್ಯಗಳಲ್ಲಿ ಈ ಯೋಜನೆಗಳು ಭಾಗಶಃ ಪರಿಣಾಮಕಾರಿಯಾಗಿವೆ. ಕರ್ನಾಟಕ, ತಮಿಳುನಾಡು, ಕೇರಳ, ಗೋವಾ, ಗುಜರಾತ್ ರಾಜ್ಯಗಳಲ್ಲಿ ಯೋಜನೆಯ ಫಲಾನುಭವಿಗಳ ಪ್ರಮಾಣ ಶೇ 50ರಿಂದ ಶೇ 75ರಷ್ಟಿದೆ. ರಾಜಸ್ಥಾನ ಮತ್ತು ಈಶಾನ್ಯ ಭಾರತದ ಕೆಲವೆಡೆ ಈ ಯೋಜನೆಗಳು ಭಾಗಶಃ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬಂದಿವೆ

ಮಕ್ಕಳಲ್ಲಿ ಪೋಷಕಾಂಶಗಳ ಕೊರತೆ

ದೇಶದ ಮಕ್ಕಳಲ್ಲಿ ಪೋಷಕಾಂಶಗಳ ಕೊರತೆ ಇರುವುದನ್ನು ಗುರುತಿಸಲಾಗಿದೆ. 1-4 ವರ್ಷದ ಮಕ್ಕಳಿಗಿಂತ 10-19 ವರ್ಷದ ಮಕ್ಕಳಲ್ಲಿ ಪೋಷಕಾಂಶಗಳ ಕೊರತೆ ಪ್ರಮಾಣ ಅಧಿಕವಾಗಿದೆ. ಶಾಲಾ ವಿದ್ಯಾರ್ಥಿಗಳಿಗೆ ಮಾತ್ರವೇ ಮಧ್ಯಾಹ್ನದ ಬಿಸಿಯೂಟ ಯೋಜನೆ ಲಭ್ಯವಿರುವುದು ಮತ್ತು ಕಾಲೇಜು ವಿದ್ಯಾರ್ಥಿಗಳು ಈ ಯೋಜನೆಯಿಂದ ಹೊರಗೆ ಉಳಿದಿರುವುದೇ ಇದಕ್ಕೆ ಕಾರಣ ಎಂದು ಗುರುತಿಸಲಾಗಿದೆ



ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ ನೋಂದಣಿ ಏರಿಕೆ, ಎಲ್ಲರಿಗೂ ದೊರಕದ ನೆರವು

ಗರ್ಭಿಣಿಯರಿಗೆ ಪೋಷಕಾಂಶಯುಕ್ತ ಆಹಾರ ಪೂರೈಕೆ ಉದ್ದೇಶದಿಂದ 2010ರಲ್ಲಿ ಯುಪಿಎ ಸರ್ಕಾರವು ಇಂದಿರಾ ಗಾಂಧಿ ಮಾತೃತ್ವ ಸಹಯೋಗ ಯೋಜನೆಯನ್ನು ಆರಂಭಿಸಿತ್ತು. 2017ರ ಡಿಸೆಂಬರ್‌ನಲ್ಲಿ ಎನ್‌ಡಿಎ ಸರ್ಕಾರವು ಯೋಜನೆಗೆ ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ ಎಂದು ಮರುನಾಮಕರಣ ಮಾಡಿತು. ಯೋಜನೆ ಅಡಿ, ಗರ್ಭಿಣಿಯರಿಗೆ ಮೂರು ಕಂತುಗಳಲ್ಲಿ ಒಟ್ಟು ₹5,000 ನಗದು ವರ್ಗಾವಣೆ ಮಾಡಲಾಗುತ್ತದೆ. ಯೋಜನೆಯ ಮರುನಾಮಕರಣದ ನಂತರ, ಯೋಜನೆಗೆ ನೋಂದಾಯಿಸಿಕೊಳ್ಳುವವರ ಸಂಖ್ಯೆ ಏರಿಕೆಯಾಗಿದೆ

- ನೋಂದಣಿ ಮಾಡಿಕೊಂಡ 150 ದಿನಗಳ ಒಳಗೆ ಮೊದಲ ಕಂತಿನ ಹಣವನ್ನು ವರ್ಗಾವಣೆ ಮಾಡಬೇಕು ಎಂಬುದು ಯೋಜನೆ ಗುರಿ. ಆದರೆ ಈ ಅವಧಿಯಲ್ಲಿ ಮೊದಲ ಕಂತಿನ ಹಣ ವರ್ಗಾವಣೆ ಮಾಡಲು ಕೆಲವು ಬಾರಿ 293 ದಿನಗಳನ್ನು ತೆಗೆದುಕೊಳ್ಳಲಾಗಿದೆ
- ನೋಂದಣಿ ಮಾಡಿಕೊಂಡ ಎಲ್ಲರಿಗೆ ಮೊದಲ ಕಂತಿನ ಹಣ ಇನ್ನೂ ವರ್ಗಾವಣೆಯಾಗಿಲ್ಲ. ಮೂರನೇ ಕಂತಿನ ಹಣ ಪಡೆದವರ ಪ್ರಮಾಣ ಇನ್ನೂ ಕಡಿಮೆ ಇದೆ



ಆಧಾರ: ನೀತಿ ಆಯೋಗ, ಪೋಷಣ ಅಭಿಯಾನದ ಪ್ರಗತಿ ವರದಿ-3 ಪ್ರಜಾವಾಣಿ ಗ್ರಾಫಿಕ್ಸ್

ಗರ್ಭಿಣಿಯರಲ್ಲಿ ರಕ್ತಹೀನತೆ ಪ್ರಮಾಣ

ದೇಶದಲ್ಲಿನ ಗರ್ಭಿಣಿಯರಲ್ಲಿ ರಕ್ತಹೀನತೆಯಿಂದ ಬಳಲುವವರ ಪ್ರಮಾಣವನ್ನು 2025ರ ವೇಳೆಗೆ ಶೇ 34.1ಕ್ಕೆ ಇಳಿಸುವ ಗುರಿಯನ್ನು ಹಾಕಿಕೊಳ್ಳಲಾಗಿದೆ. 2016ರಲ್ಲಿ ಈ ಪ್ರಮಾಣ ಶೇ 50.3ರಷ್ಟು ಇದ್ದು, 2022 ವೇಳೆಗೆ ಇದನ್ನು ಶೇ 34.4ಕ್ಕೆ ಇಳಿಸುವ ಗುರಿ ಹಾಕಿಕೊಳ್ಳಲಾಗಿದೆ. ಇದಕ್ಕೆ ಹೋಲಿಸಿದರೆ, 2025ರ ವೇಳೆಗಿನ ಗುರಿಯೇ ಕಡಿಮೆ ಇದೆ

ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿಯರ ಪ್ರಮಾಣ



ಸಂತಾನೋತ್ಪತ್ತಿ ವಯಸ್ಸಿನ ಮಹಿಳೆಯರಲ್ಲಿ ರಕ್ತಹೀನತೆಯ ಪ್ರಮಾಣ

ಸಂತಾನೋತ್ಪತಿ ವಯಸ್ಸಿನ (15-49) ಮಹಿಳೆಯರಲ್ಲಿ ರಕ್ತಹೀನತೆಯ ಪ್ರಮಾಣ 2016ರಲ್ಲಿ ಶೇ 50ಕ್ಕಿಂತಲೂ ಹೆಚ್ಚು ಇತ್ತು. ಅದನ್ನು 2025ರ ವೇಳೆಗೆ ಶೇ 38.9ಕ್ಕೆ ಇಳಿಸುವ ಗುರಿ ಹಾಕಿಕೊಳ್ಳಲಾಗಿದೆ

ರಕ್ತಹೀನತೆಯಿಂದ ಬಳಲುತ್ತಿರುವ ಸಂತಾನೋತ್ಪತಿ ವಯಸ್ಸಿನ ಮಹಿಳೆಯರ ಪ್ರಮಾಣ



ಸಂಚಲನ ಸೃಷ್ಟಿಸಿದ ಪಿಕೆ ಹೇಳಿಕೆ

‘ರಾಜಕೀಯ ಕೇಂದ್ರದಲ್ಲಿ ಇನ್ನೂ ಇರಲಿದೆ ಬಿಜೆಪಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದ ರಾಜಕಾರಣದ ಕೇಂದ್ರ ಸ್ಥಾನದಲ್ಲಿ ಬಿಜೆಪಿ ಇನ್ನೂ ಬಹಳ ವರ್ಷ ಇರಲಿದೆ ಎಂದು ರಾಜಕೀಯ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ (ಪಿಕೆ) ಅಭಿಪ್ರಾಯಪಟ್ಟಿದ್ದಾರೆ. ಆದರೆ, ಇದನ್ನು ರಾಹುಲ್ ಗಾಂಧಿ ಮನವರಿಕೆ ಮಾಡಿಕೊಂಡಿಲ್ಲ. ನರೇಂದ್ರ ಮೋದಿ ಅವರನ್ನು ಜನರೇ ಕೆಳಕ್ಕೆ ಇಳಿಸಲು ಇನ್ನು ಬಹಳ ಕಾಲ ಬೇಕಾಗುವುದಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾವಿಸಿದ್ದಾರೆ. ಇದುವೇ ರಾಹುಲ್ ಅವರ ಬಹುದೊಡ್ಡ ಸಮಸ್ಯೆ ಎಂದು ಪಿಕೆ ಅವರು ಹೇಳಿದ್ದಾರೆ.

ಪ್ರಶಾಂತ್ ಅವರು ಕಾಂಗ್ರೆಸ್ ಸೇರುವ ಸಾಧ್ಯತೆ ಕ್ಷೀಣವಾಗಿದೆ ಎಂಬುದನ್ನು ಅವರ ಈ ಮಾತುಗಳು ಸೂಚಿಸಿವೆ. ಕೆಲ ತಿಂಗಳ ಹಿಂದಿನವರೆಗೆ, ಅವರು ಕಾಂಗ್ರೆಸ್ ಸೇರುವ ಮತ್ತು ಕಾಂಗ್ರೆಸ್‌ನಲ್ಲಿ ಅವರಿಗೆ ಮಹತ್ವದ ಹೊಣೆಗಾರಿಕೆ ನೀಡುವ ಬಗ್ಗೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆ ನಡೆದಿತ್ತು.

ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು, ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸೇರಿ ವಿವಿಧ ಪ್ರಾದೇಶಿಕ ಪಕ್ಷಗಳಿಂದ ತೀವ್ರ ಟೀಕೆಗೆ ಒಳಗಾಗಿತ್ತು. ಮುಂದಿನ ವರ್ಷ ಆರು ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ಮತ್ತು ಮುಂದಿನ ಲೋಕಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿಯ ನೇರ ಎದುರಾಳಿ ಯಾರು ಎಂಬುದು ಚರ್ಚೆ ಆಗುತ್ತಿರುವ ಸಂದರ್ಭದಲ್ಲಿ ಪ್ರಶಾಂತ್ ಹೇಳಿಕೆ ಹೊರಬಿದ್ದಿದೆ. ಗೋವಾದಲ್ಲಿಯೂ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಟಿಎಂಸಿ ಪರವಾಗಿ ಪ್ರಶಾಂತ್ ಕೆಲಸ ಮಾಡುತ್ತಿದ್ದಾರೆ.

ಟಿಎಂಸಿ ಮತ್ತು ಕಾಂಗ್ರೆಸ್ ನಡುವೆ ತೀವ್ರ ವಾಗ್ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿಯೇ ಪ್ರಶಾಂತ್ ಅವರು ಈ ಮಾತನ್ನು ಹೇಳಿದ್ದಾರೆ. ಪ್ರಮುಖ ವಿರೋಧ ಪಕ್ಷದ ನಾಯಕನಾಗಿ ರಾಹುಲ್ ಗಾಂಧಿ ಅವರ ಸಾಮರ್ಥ್ಯದ ಬಗ್ಗೆ ಟಿಎಂಸಿ ಆಗಾಗ ಅನುಮಾನ ವ್ಯಕ್ತಪಡಿಸುತ್ತಲೇ ಬಂದಿದೆ. ಜತೆಗೆ, ಮಮತಾ ಅವರು ಉತ್ತಮ ನಾಯಕಿ ಎಂದೂ ಬಿಂಬಿಸುತ್ತಿದೆ. ಪ್ರಮುಖ ವಿರೋಧ ಪಕ್ಷದ ಸ್ಥಾನಕ್ಕೆ ಬರುವ ಆಕಾಂಕ್ಷೆಯನ್ನೂ ಟಿಎಂಸಿ ವ್ಯಕ್ತಪಡಿಸಿದೆ.

ಪ್ರಶಾಂತ್ ಕಿಶೋರ್

ಕಿಶೋರ್ ಹೇಳಿದ್ದೇನು?

ಪ್ರಶಾಂತ್ ಅವರ ಖಾಸಗಿ ಸಂಭಾಷಣೆಯೊಂದರ ವಿಡಿಯೊ ಈಗ ವೈರಲ್ ಆಗಿದೆ. ಆ ವಿಡಿಯೊದಲ್ಲಿ ಅವರು ಹೀಗೆ ಹೇಳಿದ್ದಾರೆ: ‘ಬಿಜೆಪಿ ಭಾರತದ ರಾಜಕಾರಣದ ಕೇಂದ್ರ ಸ್ಥಾನದಲ್ಲಿ ಇರಲಿದೆ... ಆ ಪಕ್ಷವು ಗೆಲ್ಲಲಿ, ಸೋಲಲಿ... ಸ್ವಾತಂತ್ರ್ಯಾನಂತರದ 40 ವರ್ಷಗಳಲ್ಲಿ ದೇಶದಲ್ಲಿ ಕಾಂಗ್ರೆಸ್ ಹೇಗೆ ಇತ್ತೋ, ಬಿಜೆಪಿ ಇನ್ನು ಮುಂದೆ ಹಾಗೆಯೇ ಇರಲಿದೆ. ಬಿಜೆಪಿ ಎಲ್ಲಿಗೂ ಹೋಗುವುದಿಲ್ಲ. ರಾಹುಲ್ ಸಮಸ್ಯೆಯೂ ಅದೇ. ಮೋದಿಯನ್ನು ಜನರು ಕಿತ್ತೆಸೆಯಲು ಇನ್ನು ಸ್ವಲ್ಪ ಸಮಯವಷ್ಟೇ ಬಾಕಿ ಇದೆ ಎಂದು ಅವರು ಭಾವಿಸಿದ್ದಾರೆ. ಆದರೆ, ಹಾಗೆ ಆಗುವುದಿಲ್ಲ’.

ಬಿಜೆಪಿ ಸಂಭ್ರಮ

ಕಿಶೋರ್ ಅವರ ಹೇಳಿಕೆಯು ಬಿಜೆಪಿಯಲ್ಲಿ ಸಂಭ್ರಮಕ್ಕೆ ಕಾರಣವಾಗಿದೆ. ಪ್ರಶಾಂತ್ ಕಿಶೋರ್ ಅವರ ಹೇಳಿಕೆಯನ್ನು ಇಡೀ ದೇಶವೇ ಒಪ್ಪುತ್ತದೆ. ಆಡಳಿತ ಪಕ್ಷವು ಇನ್ನೂ ಹಲವು ದಶಕ ಭಾರತದ ರಾಜಕೀಯದ ಕೇಂದ್ರ ಸ್ಥಾನದಲ್ಲಿ ಇರಲಿದೆ ಎಂದು ಬಿಜೆಪಿ ಹೇಳಿದೆ.

ದೇಶಕ್ಕೆ ಗೊತ್ತಿಲ್ಲದ ಏನನ್ನೂ ಪ್ರಶಾಂತ್ ಅವರು ಹೇಳಿಲ್ಲ. ಆದರೆ, ‘ದೇಶದ ಧ್ವನಿಯನ್ನು ರಾಹುಲ್ ಅವರು ಎಂದೂ ಆಲಿಸಿಲ್ಲ. ಇನ್ನು ಮುಂದೆಯೂ ಅವರು ಆಲಿಸುವುದಿಲ್ಲ’ ಎಂದು ಬಿಜೆಪಿ ವಕ್ತಾರ ರಾಜ್ಯವರ್ಧನ್ ಸಿಂಗ್ ರಾಠೋಡ್ ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಬೆಳಗಾವಿಯಲ್ಲಿ ಕಸ ಸಂಗ್ರಹಣೆಗೆ ವಿನೂತನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ. ಬೆಳಗಾವಿಯ ಬೀದಿಗಳ ನೆಲದಾಳದಲ್ಲಿ ಕಸದ ತೊಟ್ಟಿಗಳನ್ನು ಇರಿಸಲಾಗಿದೆ. ಕಸದ ಡಂಪರ್ ಟ್ರಕ್‌ಗಳು ಬಂದಾಗ, ಈ ತೊಟ್ಟಿಗಳಿಂದ ಕಸವನ್ನು ಎತ್ತಿಹಾಕಿಕೊಳ್ಳಲಾಗುತ್ತದೆ’ ಎಂಬ ವಿವರ ಇರುವ ಪೋಸ್ಟ್ ಮತ್ತು ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಹಲವಾರು ಮಂದಿ ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ಆದರೆ ಇದು ತಿರುಚಲಾದ ಮಾಹಿತಿ ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಈ ವಿಡಿಯೊದಲ್ಲಿ ಇರುವ ದೃಶ್ಯಗಳು ಟರ್ಕಿ ದೇಶದ ಇಸ್ತಾಂಬುಲ್ ನಗರಕ್ಕೆ ಸಂಬಂಧಿಸಿದ್ದು. ವಿಡಿಯೊದಲ್ಲಿ ಇರುವ ಟ್ರಕ್ ಇಸ್ತಾಂಬುಲ್‌ನಲ್ಲಿ ನೋಂದಣಿಯಾಗಿದೆ. ಮೂಲ ವಿಡಿಯೊವನ್ನು 2013ರಲ್ಲಿ ಮೊದಲ ಬಾರಿ ಪೋಸ್ಟ್ ಮಾಡಲಾಗಿದೆ. ಅದರಲ್ಲಿ ಅದು ಟರ್ಕಿಯ ಇಸ್ತಾಂಬುಲ್ ನಗರದ ವಿಡಿಯೊ ಎಂಬ ಮಾಹಿತಿ ಇದೆ. ಆದರೆ ಆ ವಿವರವನ್ನು ತಿರುಚಿ, ಇದು ಬೆಳಗಾವಿಯದ್ದು ಎಂದು ಹಂಚಿಕೊಳ್ಳಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ಅಕ್ಟೋಬರ್ 29, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಸ್ವಾತಿ ಅಷ್ಟಮಿ ಗಂ. 6-1 (ಬೆ.8-42) ಶುಕ್ರವಾರ ನಿತ್ಯ ನಕ್ಷತ್ರ ಪುಷ್ಯ ಗಂ. 3-23 (ಬೆ. 7-39) ಶುಭ ನಾಮ ಯೋಗ ಗಂ. 41-56 ಕೌಲವ ಕರಣ ಗಂ. 6-1 ವಿಷ ಗಂ. 36-54 ಅಮೃತಾಭಾವಃ : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-16 ಸೂರ್ಯಾಸ್ತ: 5-51 ಅದೃಷ್ಟ ಸಂಖ್ಯೆ 1, 8

ಮೇಷ: ದೀರ್ಘಕಾಲದ ಯತ್ನದಿಂದ ನೀವು ಮಾಡಲಿಚ್ಛಿಸಿದ ಕಾರ್ಯವು ಯಶಸ್ಸು ತಂದುಕೊಡಲಿದೆ. ಹಿರಿಯರ ಅನುಭವದ ಸಹಾಯವೂ ನಿಮಗೆ ದೊರೆಯುವುದು. ಅವಿವಾಹಿತರಿಗೆ ಸಂಬಂಧಗಳ ಪ್ರಸ್ತಾಪವಾಗುವ ಸಾಧ್ಯತೆ.

ವೃಷಭ: ನಿರಾಯಾಸವಾಗಿ ಎಲ್ಲ ಕಾರ್ಯಗಳೂ ನಡೆಯಲಿವೆ. ಆದಾಯ, ವೆಚ್ಚಗಳೆರಡೂ ನಿಮ್ಮ ನಿರೀಕ್ಷೆಯಂತೆ ನಡೆಯುವವು. ಆರೋಗ್ಯದ ವಿಚಾರದಲ್ಲಿ ಸ್ವಲ್ಪಮಟ್ಟಿನ ಎಚ್ಚರಿಕೆ ಅಗತ್ಯ. ಒಟ್ಟಾರೆ ನೆಮ್ಮದಿಯ ದಿನ.

ಮಿಥುನ: ಹೊಸದೊಂದು ಯೋಜನೆಯನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ. ವಿಶ್ವಾಸದ ನಡೆಯಿಂದಾಗಿ ಎಲ್ಲದರಲ್ಲಿಯೂ ಯಶಸ್ಸನ್ನು ಕಾಣುವಿರಿ. ಹಣಕಾಸಿನ ವಿಷಯದಲ್ಲಿ ಸ್ವಲ್ಪಮಟ್ಟಿನ ಎಚ್ಚರಿಕೆಯಿಂದ ಇರುವುದು ಒಳಿತು.

ಕರ್ಕಾಟಕ: ಅನ್ಯರ ಮಾತುಗಳಿಂದ ವಿಚಲಿತರಾಗದೇ ನಿಮ್ಮ ಇಚ್ಛೆಯನ್ನು ಈಡೇರಿಸಿಕೊಳ್ಳುವಲ್ಲಿ ಮುಂದಡಿ ಇಡಿ. ನಿಮ್ಮ ಯೋಜನೆ ಕಾರ್ಯರೂಪಕ್ಕೆ ತರುವಲ್ಲಿ ಯಶಸ್ಸು. ಕುಟುಂಬ ಸಮೇತ ಯಾತ್ರೆಯ ಬಗ್ಗೆ ಚಿಂತನೆ.

ಸಿಂಹ: ನೆರೆಹೊರೆಯವರೊಂದಿಗೆ ವಿನಾಕಾರಣ ವಾದ ವಿವಾದಕ್ಕೆ ಇಳಿಯದಿರಿ. ಚಿನ್ನಾಭರಣ ವ್ಯಾಪಾರಸ್ಥರಿಗೆ ಉತ್ತಮ ವ್ಯವಹಾರದಿಂದಾಗಿ ಲಾಭ. ವಾತಾವರಣದ ವ್ಯತ್ಯಯದಿಂದಾಗಿ ಆರೋಗ್ಯದಲ್ಲಿ ಏರುಪೇರು.

ಕನ್ಯಾ: ಕೃಷಿ ಕಾರ್ಯಗಳಲ್ಲಿರುವವರಿಗೆ ಒತ್ತಡದ ದಿನವಾಗುವುದರೊಂದಿಗೆ ಕೆಲಸ ಕಾರ್ಯಗಳಲ್ಲಿ ಹಿನ್ನಡೆ. ಎದುರಾದ ಆಪತ್ತಿನಿಂದ ಮಾನಸಿಕವಾಗಿ ಕುಗ್ಗದೇ ಎಲ್ಲರೊಳಗೊಬ್ಬ ಎಂಬ ಧೈರ್ಯದಿಂದ ಮುಂದುವರಿದಲ್ಲಿ ಯಶಸ್ಸು.

ತುಲಾ: ದೂರ ಪ್ರಯಾಣದಲ್ಲಿ ಭಾಗಿಯಾಗುವ ಸಾಧ್ಯತೆ. ರಕ್ಷಣಾ ಕಾರ್ಯದಲ್ಲಿರುವವರಿಗೆ ಅತಿಯಾದ ಒತ್ತಡದ ದಿನವಾಗಿ ಪರಿಣಮಿಸುವುದು. ಮಾನಸಿಕ ಕಿರಿಕಿರಿಯ ನಡುವೆಯೂ ಮನೆಯವರೊಂದಿಗೆ ನೆಮ್ಮದಿ ದೊರಕುವುದು.

ವೃಶ್ಚಿಕ: ಕೃಷಿ ಮತ್ತು ಹೈನುಗಾರಿಕೆಯಲ್ಲಿ ತೊಡಗಿಕೊಂಡವರಿಗೆ ಕೆಲಸ ಕಾರ್ಯಗಳಲ್ಲಿ ಹಿನ್ನಡೆ. ತರಕಾರಿ, ಹಣ್ಣು ಹೂವುಗಳ ಮಾರಾಟಗಾರರಿಗೆ ಮತ್ತು ಮಧ್ಯವರ್ತಿಗಳಿಗೆ ಉತ್ತಮ ಲಾಭದ ದಿನವಾಗಿ ಕಂಡುಬರುತ್ತಿದೆ.

ಧನು: ವಾಹನ ಖರೀದಿಗೆ ಮುಂದಾಗಲಿದ್ದೀರಿ. ಮನೆಯವರ ಒತ್ತಾಯಕ್ಕೆ ಮಣಿದು ದೇವಾಲಯ ದರ್ಶನಕ್ಕೂ ತೆರಳುವ ಸಾಧ್ಯತೆ. ಮಕ್ಕಳೊಂದಿಗೆ ವಿಹಾರ ವಿನೋದಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ ಕಂಡುಬರುತ್ತಿದೆ.

ಮಕರ: ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆಯುಂಟಾದರೂ ಚಿಂತಿಸುವ ಅಗತ್ಯವಿಲ್ಲ. ತಾಳ್ಮೆಯಿಂದ ವ್ಯವಹರಿಸಿದಲ್ಲಿ ದಿನದ ಆದಾಯಕ್ಕೆ ಕುತ್ತಾಗದು. ಹಿರಿಯರ ಆರೋಗ್ಯದ ವಿಚಾರದಲ್ಲಿ ಜಾಗರೂಕರಾಗಿರಿ.

ಕುಂಭ: ಮನರಂಜನೆಗಾಗಿ ವಿಶೇಷ ಧನ ವ್ಯಯ ಮಾಡುವ ಸಾಧ್ಯತೆ. ಜೂಜು, ಮೋಜು ಮಸ್ತಿಗಳಿಗೆ ಮನಸ್ಸು ಮಾಡದೆ ಸ್ಥಿಮಿತವನ್ನು ಸಾಧಿಸಿದಲ್ಲಿ ಎಲ್ಲ ರೀತಿಯಲ್ಲಿಯೂ ಉತ್ತಮ. ಮನೆಯವರೊಂದಿಗೆ ಮನಸ್ತಾಪದ ಸಾಧ್ಯತೆ.

ಮೀನ: ಬಹುದಿನಗಳಿಂದ ನಿರೀಕ್ಷಿಸಿದ ಆಸ್ತಿ ನಿಮ್ಮ ವಶಕ್ಕೆ ದೊರಕಲಿದೆ. ದಿನವಿಡೀ ಹರ್ಷದಿಂದ ತುಂಬಿದ ವಾತಾವರಣ. ಸಂಗಾತಿಯೊಂದಿಗೆ ಕುಶಲ-ವಿನೋದದ ಮಾತುಗಳೊಂದಿಗೆ ದಿನ ಕಳೆಯುವಿರಿ.

ನಿಮ್ಮ ಜನ್ಮದಿನ 29-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕ. ದೃಢಚಿತ್ತರಾದ ನೀವು ಕೈಗೆತ್ತಿಕೊಂಡ ಯೋಜನೆಗಳನ್ನು ಎಂದೂ ಕೈಬಿಡಲಾರಿರಿ. ಯಶಸ್ಸು ದೊರೆಯುವವರೆಗೂ ನಿಮ್ಮ ಯತ್ನಗಳು ಮುಂದುವರಿಯುತ್ತಲೇ ಇರುತ್ತವೆ. ಅತಿಯಾದ ಆತ್ಮವಿಶ್ವಾಸವೂ ಒಮ್ಮೊಮ್ಮೆ ಯೋಚಿಸುವಂತೆ ಮಾಡುತ್ತದೆ. ಸಂಬಂಧಿಕರ ಸಕಾಲಿಕ ನೆರವು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮಾನವನ ಹಿರಿಮೆ

ತನಗಿಂತ ಹಿರಿದ, ಭುವನಕ್ಕಿಂತ ಹಿರಿದೊಂದ- |
ನನುಭವದ ಹಿಂದೆ, ಸೃಷ್ಟಿಯ ನೆರಳ ಹಿಂದೆ ||
ಅನುಮಿತಿಸಿ ಮನುಜನಾ ಹಿರಿದನೆಳಸುವನೆಯ್ದೆ |
ಮನುಜನೊಳಹಿರಿಮೆಯದು – ಮಂಕುತಿಮ್ಮ
|| 486 ||

ಪದ-ಅರ್ಥ: ಹಿರಿದೊಂದನನುಭವದ = ಹಿರಿದು + ಒಂದನು + ಅನುಭವದ, ಅನುಮಿತಿಸಿ = ಊಹಿಸಿ, ಹಿರಿದನೆಳಸುವನೆಯ್ದೆ = ಹಿರಿದನು + ಎಳಸುವನು(ಶೋಧಿಸುವನು, ಹುಡುಕಾಡುವನು) + ಎಯ್ದೆ(ತುಂಬಾ), ಮನುಜನೊಳಹಿರಿಮೆಯದು = ಮನುಜನೊಳ್ + ಹಿರಿಮೆಯದು (ದೊಡ್ಡತನ).

ವಾಚ್ಯಾರ್ಥ: ತನಗಿಂತ ಹಿರಿದಾದ, ಪ್ರಪಂಚಕ್ಕಿಂತ ದೊಡ್ಡದಾದ ಅನುಭವದ ಹಿಂದೆ, ಈ ಸೃಷ್ಟಿಯ ಉಗಮದ ಹಿಂದೆ, ಇರುವುದನ್ನು ಅನುಮಾನದಿಂದ ಗ್ರಹಿಸಿ, ಮನುಷ್ಯ ಮಹತ್ತಾದದ್ದನ್ನು ತುಂಬ ಅರಸುತ್ತಾನೆ. ಅದು ಮನುಷ್ಯನ ಹಿರಿಮೆ.

ವಿವರಣೆ: ನಾನು ತುಂಬ ಸಲ ಚಿಂತಿಸಿದ್ದೇನೆ. ಸ್ಥಿರವಾದ, ವ್ಯವಸ್ಥಿತವಾದ, ಸಂತೋಷದ ರಾಜಭೋಗವನ್ನು ಬಿಟ್ಟು ಬುದ್ಧ ಯಾಕೆ ದೂರ ಏಕಾಂಗಿಯಾಗಿ ತೆರಳಿದ? ಅಂತೆಯೇ ರಾಜಕುಮಾರನಾಗಿದ್ದ ಮಹಾವೀರ ಎಲ್ಲವನ್ನು ತೊರೆದು ದಿಗಂಬರನಾದದ್ದು ಏಕೆ? ತನ್ನದಾಗಿದ್ದ ರಾಜ್ಯವನ್ನು ಹೊರ ತಳ್ಳಿ ನಿರ್ವಾಣದಲ್ಲಿ ನಿಂತ ಬಾಹುಬಲಿಯ ಕಾರ್ಯದ ಹಿಂದಿನ ಚಿಂತನೆ ಏನಿದ್ದಿರಬಹುದು? ದರ್ಬಾನ್‌ನಲ್ಲಿ ಸಾಕಷ್ಟು ಶ್ರೀಮಂತಿಕೆಯಲ್ಲಿ, ಜನಪ್ರಿಯತೆಯಲ್ಲಿ ಇದ್ದ ಗಾಂಧೀ ಸಂತನಂತೆ ತುಂಡುಪಂಚೆಯನ್ನುಟ್ಟು, ದೇಶವನ್ನು ಸುತ್ತುವಂತೆ ಮಾಡಿದ್ದು ಯಾವುದು? ಭಂಡಾರಿಯಾದ ಬಸವಣ್ಣ, ಅತ್ಯಪೂರ್ವವಾದ ಸಾಮಾಜಿಕ ಚಿಂತನೆಯನ್ನು ಮಾಡಿ, ತನ್ನ ವೈಯಕ್ತಿಕ ಬದುಕಿಗೆ ಮಹತ್ವ ಕೊಡದಿರುವುದು ಏನು ಕಾರಣ?

ಹಾಗೆ ವಿಶೇಷವಾಗಿ ಚಿಂತನೆ ಮಾಡಿದವರೆಲ್ಲ ಜಗಮಾನ್ಯರಾದದ್ದು ಸತ್ಯ. ಅವರೆಲ್ಲರ ಪ್ರಯಾಣ ಸ್ಥಿರನೆಲೆಯಿಂದ ಚರನೆಲೆಯತ್ತ. ಅವರು ತಮ್ಮ ಇಡೀ ಬದುಕನ್ನೇ ಒಂದು ಅನ್ವೇಷಣೆಯನ್ನಾಗಿ ಮಾಡಿಕೊಂಡರು. ಅದೊಂದು ಸತ್ಯದ ಅವಿರತ ಅನ್ವೇಷಣೆ. ಯಾವುದು ಸತ್ಯ? ತಾನು ಸತ್ಯವೇ, ಪ್ರಪಂಚ ಸತ್ಯವೇ? ಬಹುಶ: ಅವರಿಗೆಲ್ಲ ತಮಗಿಂತ, ಈ ಪ್ರಪಂಚಕ್ಕಿಂತ, ತಮ್ಮ ಅರಿವಿಗೆ ಬರುವ ಎಲ್ಲ ಅನುಭವಗಳ ಹಿಂದೆ ಒಂದು ಹಿರಿದಾದ ಸತ್ಯವಿದೆ ಎಂದು ಎನ್ನಿಸಿರಬೇಕು. ಅದರ ಅನ್ವೇಷಣೆಯೆ ಜೀವನದ ಉದ್ದೇಶವಾಗಿರಬೇಕು. ಇದು ಬರೀ ಭಾರತದಲ್ಲಿ ಮಾತ್ರವಿಲ್ಲ, ಪ್ರಪಂಚದ ಎಲ್ಲೆಡೆಯಿಯೂ ಜನರನ್ನು ಕೆಣಕಿದ ಚಿಂತನೆ. ಇಲ್ಲದೆ ಹೋದಲ್ಲಿ ಶ್ರೀಮಂತನಾದ ಪ್ಲೇಟೋ, ಬಡತನವನ್ನೇ ಅಪ್ಪಿಕೊಂಡ ಸಾಕ್ರೆಟಿಸ್‌ನ ಹಿಂದೆ ಏನನ್ನು ಹುಡುಕಿಕೊಂಡು ಹೋದ? ಟಾಲ್‌ಸ್ಟಾಯ್‌ನ ‘ವಾರ್ ಆ್ಯಂಡ ಪೀಸ್’ ಬೃಹತ್ ಕಾದಂಬರಿಯಲ್ಲಿ ಎರಡು ಮುಖ್ಯ ಪಾತ್ರಗಳಿವೆ. ಒಂದು ಪಿಯರೆ ಬೆಜುಖೋಯ್, ಮತ್ತೊಂದು ಆ್ಯಂಡ್ರೇ ಬೋಲ್ಕೋನ್ಸ್ಕಿ. ಟಾಲ್‌ಸ್ಟಾಯ್‌ನ ಕಾದಂಬರಿಯ ನಾಯಕರೂ ನೈತಿಕ ಅನ್ವೇಷಣೆಯಲ್ಲೇ ತೊಡಗಿ ಕಠಿಣವಾದ ಹಾದಿಯಲ್ಲಿ ಸಾಗುತ್ತಾರೆ.

ಹಾಗಾದರೆ ಇದು ಪ್ರತಿಯೊಬ್ಬ ಮನುಷ್ಯನಿಗೆ ಸಹಜವಾದ ಗುಣವೆ? ಇದ್ದಿರಬಹುದು. ಆದರೆ ಕೆಲವರಲ್ಲಿ ಮಾತ್ರ ಅದು ಪ್ರಖರವಾಗಿ, ತಡೆದುಕೊಳ್ಳಲಾಗದಷ್ಟು ತೀವ್ರವಾಗಿರಬಹುದು. ಅದು ವೈಯಕ್ತಿಕ ಸ್ತರದಲ್ಲಿ ನಡೆಯುವಂಥದ್ದು. ಮನುಷ್ಯನನ್ನು ಅಂತರ್ಮುಖಿಯನ್ನಾಗಿಸಿ, ತನ್ನನ್ನು, ತನ್ನ ಪ್ರಪಂಚದ ಹಿನ್ನಲೆಯನ್ನು, ಅದನ್ನು ನಿಗ್ರಹಿಸುವ ಶಕ್ತಿಯನ್ನು ಅರಿಯ ಬಯಸುವ ಆಳವಾದ ಪ್ರಕ್ರಿಯೆ. ಇದೇ ಕಗ್ಗದ ಮಾತು. ತನ್ನ ಅರಿವಿನ, ಅನುಭವದ ಮಿತಿಗಳನ್ನು ಮೀರಿದ ಸತ್ಯವೊಂದಿದೆ ಎಂಬುದನ್ನು ಅನುಮಾನದಿಂದ ಊಹಿಸಿ ಅದನ್ನು ಪಡೆಯಲು ಪ್ರಯತ್ನಿಸುವುದೇ ಮನುಷ್ಯನ ಹಿರಿದಾದ ಗುಣ.

ಪದಬಂಧ 4762 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭ್ರಾಂತಿಯನ್ನು ಹೋಗಲಾಡಿಸುವುದು (6)
4.ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವುದು (4)
5.ವ್ಯವಹಾರ ಕುಶಲನೀತ (3)
7.ಶ್ರೇಷ್ಠ ಅಥವಾ ಅತಿಶಯವೆಂದರೂ ಸರಿಯೇ (3)
9.ಕೈಯಲ್ಲಿರುವ ಹಣ (3)
12.ಟಾರ ರಸ್ತೆ ಬದಿಯಲ್ಲಿನ ಮೋರಿ (3)
13.ಕನ್ನಡಿಗ ಧರಿಸಿದ ಚಾಳೀಸು (4)
15.ಮೂರ್ತಿ ಪೂಜೆಯಿದು (6)

ಮೇಲಿಂದ ಕೆಳಕ್ಕೆ

1.ಚಾರನ ಕೆಟ್ಟ ನಡವಳಿಕೆ (4)
2.ಅಳು ಪದದ ವಿರುದ್ಧ ಪದ (2)
3.ಸ್ಮರಣೆಗೆ ಬಾರದಿರುವುದು (3)
6.ತಪ್ಪನ್ನು ಮನ್ನಿಸುವುದು (4)
7.ಉಮೇದುವಾರ ತೋರಿದ ಹುರುಪು (3)
8.ಈತ ಲಗ್ನವಾಗುತ್ತಿರುವವ (4)
10.ರಾಜನ ಗೃಹವಿದು (4)
11.ಕುತ್ತು ಕೊನೆಗಿಟ್ಟು ತೋರಿದ ಸಾಮರ್ಥ್ಯ (3)
14.ಕವಿತೆ ಬರೆಯುವವನು (2)



4761ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸೂಕ್ಷ್ಮದರ್ಶಕ 4.ವಾರ್ಧಕ್ಯ 5.ಸುಗಮ 6.ನಲಿವು 8.ಹಸು 9.ರಾವು 11.ಪರಮ 14.ನಖಾಗ್ರ 15.ತಪಸ್ವಿ 16.ಜಲಜನಕ
ಮೇಲಿಂದ ಕೆಳಕ್ಕೆ: 1.ಸೂಕ್ಷ್ಮದೃಷ್ಟಿ 2.ದನಿಗೂಡಿಸು 3.ಕಸುವು 4.ವಾಮನ 7.ಲಿಲಾವು 8.ಹಗುರ 9.ರಾಜಾಧಿರಾಜ 10.ಅಕರ್ಷಕ 12.ಮನಸ್ವಿ 13.ಅಗ್ರಜ

ಸುಡೊಕು 5148

9		3		6				2
	4						5	
	1			5		6		4
	8			1		4		
3		4	2		7		8	
	9		4		3			6
6		5					2	
				7		3		1
1		8	9		6		4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5147 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ನಿರುದ್ಯೋಗಿ ಕನ್ನಡಿಗರಿಗೆ ಫ್ರಾಂಚೈಸಿ ನೀಡಲು ಯೋಜನೆ ● 500ಕ್ಕೂ ಹೆಚ್ಚು ಉತ್ಪನ್ನಗಳು ಲಭ್ಯ

ಮೇಕ್ ಇನ್ ಕರ್ನಾಟಕದ ಪೂಜಾ ಲೋಕ

ಪ್ರಜಾವಾಣಿ ವಾರ್ತೆ

ಉತ್ಪನ್ನಗಳ ಪೊಟ್ಟಣದ ಮೇಲೆ ಆನೆ ಗುರುತಿನ ಮೇಕ್ ಇನ್ ಕರ್ನಾಟಕ ಲಾಂಛನ ಹಾಕಿರುವುದು

ಬೆಂಗಳೂರು: ರಸ್ತೆ ಬದಿಯಲ್ಲಿ ಆರಂಭವಾದ ಬಾಳೆ ಎಲೆ ವ್ಯಾಪಾರ ಈಗ 'ಆರ್.ವಿ. ಭದ್ರಯ್ಯ ಪೂಜಾಲೋಕ' ಎಂಬ ಬ್ರ್ಯಾಂಡ್ ಅಡಿಯಲ್ಲಿ ಸಮಸ್ತ ಪೂಜಾ ಸಾಮಗ್ರಿಗಳನ್ನು ಒದಗಿಸುವ ಕಂಪನಿಯಾಗಿ ಹೊರ ಹೊಮ್ಮಿದೆ. ತನ್ನ ಉತ್ಪನ್ನಗಳಿಗೆ 'ಮೇಕ್ ಇನ್ ಕರ್ನಾಟಕ' ಲಾಂಛನ ಅಳವಡಿಸುವ ಮೂಲಕ ಕನ್ನಡ ಪ್ರೀತಿ ಮೆರೆದಿದೆ. ಅಲ್ಲದೇ 500ಕ್ಕೂ ಹೆಚ್ಚು ನಿರುದ್ಯೋಗಿ ಕನ್ನಡಿಗರಿಗೆ ಫ್ರಾಂಚೈಸಿ ನೀಡಲು ಮುಂದಾಗಿದೆ.

ರಾಜಾಜಿನಗರದ ಬಾಷ್ಯಂ ವೃತ್ತದ ಆಸುಪಾಸಿನ ರಸ್ತೆ ಬದಿಯಲ್ಲಿ 1980ರ ದಶಕದಲ್ಲಿ ಬಾಳೆಎಲೆ ವ್ಯಾಪಾರ ಮಾಡುತ್ತಿದ್ದ ಆರ್.ವಿ. ಭದ್ರಯ್ಯ, ಬಾಯಾರಿ ಬಂದ ಜನರಿಗೆ ರಸ್ತೆ ಬದಿಯಲ್ಲಿ ತಮ್ಮ ಪಕ್ಕದಲ್ಲೇ ಕುಡಿಯುವ ನೀರಿನ ಮಡಕೆಯೊಂದನ್ನು ಇರಿಸಿಕೊಂಡಿದ್ದರು. ಇದೇ ಭದ್ರಯ್ಯ ಮುಂದೆ ದೊಡ್ಡ ವ್ಯಾಪಾರಿಯಾಗುತ್ತಾರೆ ಎಂದು ಆಗ ಯಾರೂ ನಿರೀಕ್ಷೆ ಮಾಡಿರಲಿಲ್ಲ.

ವ್ಯಾಪಾರ ಕೈಹಿಡಿದಂತೆ ಲಾಭಾಂಶದ ಸ್ವಲ್ಪ ಭಾಗವನ್ನು ಜನೋಪಯೋಗಿ ಕೆಲಸಕ್ಕೆ ಮೀಸಲಿಟ್ಟರು. ಬಸ್ ಪ್ರಯಾಣಿಕರಿಗಾಗಿ 40 ಕಡೆ ತಂಗುದಾಣ ಕಟ್ಟಿಸಿದರು. 145 ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ಮಡಕೆಗಳನ್ನು ಇರಿಸಿ ನಿತ್ಯವೂ ಅವರೇ ಆ ಮಡಿಕೆಗಳಿಗೆ ನೀರು ತುಂಬಿಸುತ್ತಿದ್ದರು. ಜನ ಕುಳಿತುಕೊಳ್ಳಲು ಅಲ್ಲಲ್ಲಿ ಬೆಂಚ್ ಕಲ್ಲುಗಳನ್ನು ಹಾಕಿಸಿದ್ದರು. ಜನರಿಗೆ ಕುಡಿಯುವ ನೀರು ಪೂರೈಸಿದ ಭದ್ರಯ್ಯ ಮುಂದೆ 'ನೀರ್ ಭದ್ರಯ್ಯ' ಎಂದೇ ಹೆಸರು ಗಳಿಸಿದರು. ಬಾಳೆ ಎಲೆಗಳ ಜೊತೆಗೆ ಪೂಜಾ ಸಾಮಗ್ರಿಗಳ ಮಾರಾಟವನ್ನೂ ಆರಂಭಿಸಿದರು.

ಜನೋಪಯೋಗಿ ಕೆಲಸ ಹೆಚ್ಚಾದಷ್ಟೂ ವ್ಯಾಪಾರವೂ ಕೈಹಿಡಿಯುತ್ತಾ ಹೋಯಿತು. ಭದ್ರಯ್ಯ ನಿಧನರಾದ ಬಳಿಕ ಅವರ ಮಗ ಆರ್. ಬಿ. ಶಿವಕುಮಾರ್ ಪೂಜಾ ಸಾಮಗ್ರಿಗಳ ವ್ಯಾಪಾರ ಮುಂದುವರಿಸಿದ್ದಾರೆ. ನಗರದ 11 ಕಡೆಗಳಲ್ಲಿ ಪೂಜಾಲೋಕದ ಶಾಖೆಗಳನ್ನು ತೆರೆದಿದ್ದಾರೆ. 500ಕ್ಕೂ ಹೆಚ್ಚು ಉತ್ಪನ್ನಗಳು ಒಂದೇ ಮಳಿಗೆಯಲ್ಲಿ ಸಿಗುವಂತೆ ಮಾಡಿದ್ದಾರೆ. ನಗರದಲ್ಲಿ 60 ಮಳಿಗೆ ಸೇರಿ ರಾಜ್ಯ, ಹೊರ ರಾಜ್ಯ ಮತ್ತು ಹೊರ ದೇಶಗಳಲ್ಲೂ ಸೇರಿ 500 ಮಳಿಗೆ ಫ್ರಾಂಚೈಸಿ ಮೂಲಕ ತೆರೆಯಲು ಉದ್ದೇಶಿಸಿದ್ದಾರೆ.

'ಎಲ್ಲ ಕಡೆಯೂ ನಿರುದ್ಯೋಗಿ ಕನ್ನಡಿಗರನ್ನೇ ಹುಡುಕಿ, ಅವರಿಗೆ ಬೇಕಿರುವ ಸಾಲ ಸೌಲಭ್ಯಗಳನ್ನು ಬ್ಯಾಂಕ್‌ಗಳಿಂದ ಕೊಡಿಸಿ ಫ್ರಾಂಚೈಸಿ ನೀಡಲಾಗುವುದು. ₹60 ಸಾಲ ಪಡೆದು ನಮ್ಮ ತಂದೆ ಈ ವ್ಯಾಪಾರ ಆರಂಭಿಸಿದರು. ಬಳಿಕ ವಾಟಾಳ್ ನಾಗರಾಜ್ ಅವರ ಸಹಕಾರದಿಂದ ₹5 ಸಾವಿರ ಸಾಲ ಬ್ಯಾಂಕ್‌ನಿಂದ ದೊರೆತಿತ್ತು. ಆದ್ದರಿಂದ ಕನ್ನಡಿಗರ ಋಣ ತೀರಿಸಲು ಕನ್ನಡಿಗ ನಿರುದ್ಯೋಗಿಗಳಿಗಷ್ಟೇ ಫ್ರಾಂಚೈಸಿ ನೀಡಲಾಗುತ್ತಿದೆ' ಎಂದು ಶಿವಕುಮಾರ್ ಹೇಳುತ್ತಾರೆ.

ನ.1ರಂದು ಉತ್ಪನ್ನಗಳ ಬಿಡುಗಡೆ

ಆರ್.ಬಿ. ಶಿವಕುಮಾರ್

'ಅರಿಶಿನ–ಕುಂಕುಮದ ಆದಿಯಾಗಿ ನಮ್ಮ ಮಳಿಗೆಯಲ್ಲಿ ಸಿಗುವ 500ಕ್ಕೂ ಹೆಚ್ಚು ಉತ್ಪನ್ನಗಳು ಸ್ಥಳೀಯವಾಗಿಯೇ ಮನೆಗಳಲ್ಲೇ ತಯಾರಿಸಲಾಗುತ್ತದೆ. ಆದ್ದರಿಂದ ಅವುಗಳಿಗೆ 'ಮೇಕ್ ಇನ್ ಕರ್ನಾಟಕ' ಎಂಬ ಲಾಂಛನ ಅಳವಡಿಸಲಾಗುತ್ತಿದೆ' ಎಂದು ಭದ್ರಯ್ಯ ಪೂಜಾಲೋಕದ ಸಿಇಒ ಆರ್.ಬಿ. ಶಿವಕುಮಾರ್ ಹೇಳಿದರು.

'ಕನ್ನಡದ ಬಾವುಟದ ಒಳಗೆ ಆನೆ ಚಿತ್ರ ಇರುವ ಲಾಂಛನ ಅಳವಡಿಸಿರುವ ಉತ್ಪನ್ನಗಳನ್ನು ನ.1ರಂದು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು. ಕರ್ನಾಟಕದ ಬ್ರ್ಯಾಂಡ್‌ನ ಉತ್ಪನ್ನಗಳು ದೇಶ–ವಿದೇಶಗಳಲ್ಲೂ ಪಸರಿಸಬೇಕು. ಶಾಪಿಂಗ್ ಮಾಲ್‌ಗಳಲ್ಲಿ ಮಾರಾಟಕ್ಕೆ ಒಡಂಬಡಿಕೆ ಮಾಡಿಕೊಳ್ಳಲು ಹಲವು ಬಹುರಾಷ್ಟ್ರೀಯ ಕಂಪನಿಗಳು ಒತ್ತಡ ಹೇರಿದವು. ಲಾಭದ ಪಾಲು ಕನ್ನಡಿಗರಿಗೇ ಸಲ್ಲಬೇಕು ಎಂಬ ಉದ್ದೇಶದಿಂದ ಒಪ್ಪಿಗೆ ಸೂಚಿಸಿಲ್ಲ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಪ್ರತಿಮೆಗಳಿಂದ ತೊಂದರೆ: ಬಿಬಿಎಂಪಿಗೆ ದೂರು ಸಲ್ಲಿಸಲು ಸೂಚನೆ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಮೆಗಳ ನಿರ್ಮಾಣದ ವಿರುದ್ಧ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಲೇವಾರಿ ಮಾಡಿರುವ ಹೈಕೋರ್ಟ್, ಈ ಕುರಿತು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ದೂರು ಸಲ್ಲಿಸುವಂತೆ ಅರ್ಜಿದಾರರಿಗೆ ನಿರ್ದೇಶನ ನೀಡಿದೆ.

ನಗರದ ನಿವಾಸಿ ಕೆ.ಎಸ್. ಸುರೇಶ್ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ತಿ ಮತ್ತು ಸಚಿನ್ ಶಂಕರ್ ಮಗದುಮ್ ಅವರಿದ್ದ ವಿಭಾಗೀಯ ಪೀಠವು ವಿಚಾರಣೆ ನಡೆಸಿತು.



ಸಾರ್ವಜನಿಕ ಜಾಗದಲ್ಲಿ ನಿರ್ಮಾಣ ಆಗಿರುವ ಪ್ರತಿಮೆಗಳು ಸಂಚಾರಕ್ಕೆ ತೊಂದರೆ ಉಂಟು ಮಾಡುತ್ತಿವೆ ಎಂದು ಅರ್ಜಿದಾರರು ವಾದಿಸಿದರು. 'ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ಯಾವುದೇ ನಿರ್ದಿಷ್ಟ ಪ್ರತಿಮೆಗಳನ್ನು ಅರ್ಜಿದಾರರು ಉಲ್ಲೇಖಿಸಿಲ್ಲ' ಎಂದು ಬಿಬಿಎಂಪಿ ಪರ ವಕೀಲ ಶ್ರೀನಿಧಿ ಹೇಳಿದರು.

ಪ್ರತಿಮೆಗಳು ಅಥವಾ ಧ್ವಜ ಸ್ತಂಭಗಳು ಸಂಚಾರಕ್ಕೆ ತೊಂದರೆ ಉಂಟು ಮಾಡುತ್ತಿರುವ ನಿರ್ದಿಷ್ಟ ಪ್ರಕರಣಗಳಿದ್ದರೆ ಬಿಬಿಎಂಪಿಗೆ 10 ದಿನಗಳಲ್ಲಿ ದೂರು ನೀಡುವಂತೆ ಪೀಠ ತಿಳಿಸಿತು.

ವಾರ್ಡ್ ಸಮಿತಿಗಳಲ್ಲಿ ಶಾಸಕರ ಹಸ್ತಕ್ಷೇಪ: ಬಿಎನ್‌ಪಿ ಆರೋಪ

ಬೆಂಗಳೂರು: ವಾರ್ಡ್ ಸಮಿತಿಗಳಲ್ಲಿ ಹಸ್ತಕ್ಷೇಪ ಮಾಡುತ್ತಿರುವ ಸಿ.ವಿ.ರಾಮನ್ ನಗರ ಶಾಸಕ ಎಸ್. ರಘು ಅವರು, ನಾಗರಿಕರು ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳಲು ಅವಕಾಶ ನೀಡುತ್ತಿಲ್ಲ ಎಂದು ಬೆಂಗಳೂರು ನವನಿರ್ಮಾಣ ಪಕ್ಷ (ಬಿಎನ್‌ಪಿ) ಆರೋಪಿಸಿದೆ.

ವಾರ್ಡ್ ಸಮಿತಿ ಸಭೆಗಳ ಮೂಲಕ ಆಡಳಿತದಲ್ಲಿ ನಾಗರಿಕರು ಭಾಗವಹಿಸುವ ವ್ಯವಸ್ಥೆಯನ್ನು ಬಿಬಿಎಂಪಿ ರೂಪಿಸಿದೆ. ಆದರೆ, ಶಾಸಕರ ಹಸ್ತಕ್ಷೇಪದಿಂದ ಈ ಸಮಿತಿಗಳು ನಿಷ್ಕ್ರಿಯವಾಗುತ್ತಿವೆ. ವಾರ್ಡ್ ಸಮಿತಿಗಳ ಮೇಲೆ ಶಾಸಕರ ನಿಯಂತ್ರಣ ಕಾನೂನುಬಾಹಿರ ಎಂದು ಪಕ್ಷವು ದೂರಿದೆ.

ನಾಗರಿಕರು ತಮ್ಮ ವಾರ್ಡ್‌ನ ಸಮಸ್ಯೆಗಳನ್ನು ಗುರುತಿಸಿ, ಅವುಗಳ ಬಗ್ಗೆ ಧ್ವನಿ ಎತ್ತುವುದನ್ನು ಶಾಸಕರು ತಡೆಯುತ್ತಿದ್ದಾರೆ. ವೈಯಕ್ತಿಕ ಲಾಭಕ್ಕಾಗಿ ವಾರ್ಡ್‌ಮಟ್ಟದ ಬಜೆಟ್ ನಿಯಂತ್ರಿಸುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಎಂದು ಬಿಎನ್‌ಪಿ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನರಸಿಂಹನ್ ತಿಳಿಸಿದ್ದಾರೆ.

ನಾಗರಿಕರು ಪ್ರಸ್ತಾಪಿಸುವ ಸಮಸ್ಯೆಗಳಿಗೆ ಪರಿಹಾರ ರೂಪಿಸುವ ಪ್ರಯತ್ನವನ್ನು ಶಾಸಕರು ಮಾಡುತ್ತಿಲ್ಲ. ಬದಲಾಗಿ, ವಾರ್ಡ್ ಸಮಿತಿಯ ವಾಟ್ಸ್‌ಆ್ಯಪ್ ಗುಂಪಿನಿಂದಲೇ ನಾಗರಿಕರನ್ನು ತೆಗೆದುಹಾಕಲಾಗುತ್ತಿದೆ. ತಮ್ಮ ವೈಯಕ್ತಿಕ ಲಾಭಕ್ಕಾಗಿ ಶಾಸಕರು ವಾರ್ಡ್ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದನ್ನು ಬಿಎನ್‌ಪಿ ವಿರೋಧಿಸುತ್ತದೆ ಎಂದು ಅವರು ಹೇಳಿದ್ದಾರೆ.

ಕ್ರಿಕೆಟ್ ಬೆಟ್ಟಿಂಗ್; ₹ 3.50 ಲಕ್ಷ ಜಪ್ತಿ

ಬೆಂಗಳೂರು: 'ಟಿ–20' ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ₹ 3.50 ಲಕ್ಷ ಜಪ್ತಿ ಮಾಡಿದ್ದಾರೆ.

'ಓಂಪ್ರಕಾಶ್, ಸತ್ಪಾಲ್ ಸಿಂಗ್ ಹಾಗೂ ಗೇವರ್ ಚಂದ್ ಬಂಧಿತರು. ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯ ಮೂರು ಸ್ಥಳಗಳ ಮೇಲೆ ಪ್ರತ್ಯೇಕವಾಗಿ ದಾಳಿ ನಡೆಸಿ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪಾಕಿಸ್ತಾನ್ – ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ – ವೆಸ್ಟ್ ಇಂಡೀಸ್, ಇಂಗ್ಲೆಂಡ್ – ಬಾಂಗ್ಲಾದೇಶ, ಸ್ಕಾಟ್ಲೆಂಡ್ – ನಮೀಬಿಯಾ ನಡುವಿನ ಪಂದ್ಯಗಳ ಮೇಲೆ ಆರೋಪಿಗಳು ಬೆಟ್ಟಿಂಗ್ ನಡೆಸಿದ್ದರು. ಇದಕ್ಕಾಗಿ ಮೊಬೈಲ್ ಆ್ಯಪ್‌ಗಳನ್ನು ಬಳಸುತ್ತಿದ್ದರು. ಸೋಲು ಹಾಗೂ ಗೆಲುವಿನ ಲೆಕ್ಕಾಚಾರದಲ್ಲಿ ಹಣ ಕಟ್ಟಿಸಿಕೊಳ್ಳುತ್ತಿದ್ದರು' ಎಂದು ತಿಳಿಸಿದರು.

ನಗರದ ಕೋವಿಡ್ ಅಂಕಿ–ಅಂಶ

12,51,390 ▲	ಒಟ್ಟು ಪ್ರಕರಣಗಳು (12,51,155 ನಿನ್ನೆಯ ವಿವರ)
6,493 ▲	ಸಕ್ರಿಯ ಪ್ರಕರಣಗಳು
12,28,630 ▲	ಗುಣಮುಖರಾದವರು
16,266 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	235	▲
ಗುಣಮುಖ	161	▼
ಸಾವು	07	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಹಸಿರು ಪಟಾಕಿಯಿಂದಲೂ ಕಣ್ಣಿಗೆ ಹಾನಿ ಸಾಧ್ಯತೆ ● ಮುನ್ನೆಚ್ಚರಿಕೆ ವಹಿಸಲು ವೈದ್ಯರಿಂದ ಸೂಚನೆ

ಪಟಾಕಿ ಗಾಯ: 24 ಗಂಟೆ ಸೇವೆಗೆ ಮಿಂಟೊ ಆಸ್ಪತ್ರೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಅವಘಡಗಳು ಸಂಭವಿಸಿದಲ್ಲಿ ಕಣ್ಣಿಗೆ ಹಾನಿಯಾಗುವುದನ್ನು ತಪ್ಪಿಸಲು ನಗರದ ಮಿಂಟೊ ಕಣ್ಣಿನ ಆಸ್ಪತ್ರೆಯು ಚಿಕಿತ್ಸೆಗೆ ಅಗತ್ಯ ಸಿದ್ಧತೆ ಮಾಡಿಕೊಂಡಿದ್ದು, ಹಬ್ಬದ ದಿನಗಳಲ್ಲಿ 24x7 ಸೇವೆ ನೀಡಲು ಮುಂದಾಗಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ನಿರ್ದೇಶಕಿ ಡಾ. ಸುಜಾತಾ ರಾಥೋಡ್, 'ಹಸಿರು ಪಟಾಕಿಗಳಲ್ಲಿಯೂ ರಾಸಾಯನಿಕಗಳು ಇರುತ್ತವೆ. ಹಾಗಾಗಿ, ಅವುಗಳಿಂದಲೂ ಕಣ್ಣಿಗೆ ಅಪಾಯವಿದೆ. ಪಟಾಕಿಯ ಕಿಡಿಗಳು ಕಣ್ಣಿನ ಮೇಲೆ ಬಿದ್ದಲ್ಲಿ ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ದೀಪಾವಳಿಯ ಸಂರ್ಭದಲ್ಲಿ ಬೆಳಕಿನಿಂದ ಕತ್ತಲೆಗೆ ಹೋಗಬಾರದು. ಎಲ್ಲ ರೀತಿಯ ಪಟಾಕಿಗಳನ್ನು ಪೂರ್ಣ ಪ್ರಮಾಣದಲ್ಲಿ ನಿಷೇಧ ಮಾಡಬೇಕಿದೆ. ಆದರೆ, ಆ ಉದ್ಯಮವನ್ನು ನಂಬಿಕೊಂಡವರ ಬಗ್ಗೆಯೂ ಗಮನ ಹರಿಸಬೇಕಲ್ಲ' ಎಂದರು.

'ಹಸಿರು ಪಟಾಕಿಗಳಲ್ಲಿ ರಾಸಾಯನಿಕಗಳ ಬಳಕೆ ಪ್ರಮಾಣ ಶೇ 50 ರಷ್ಟು ಕಡಿಮೆ ಇರುತ್ತದೆ. ಹೆಚ್ಚು ಹಾನಿ ಮಾಡುವ ಬೇರಿಯಂ ಮತ್ತು ಲಿಥಿಯಂ ಹೊರತುಪಡಿಸಿ ಇತರೆ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಇದರಿಂದ ಮಾಲಿನ್ಯ ಪ್ರಮಾಣ ಕಡಿಮೆಯಾದರೂ, ಸ್ಫೋಟ ಮತ್ತು ಶಬ್ದದ ತೀವ್ರತೆ ಸಾಮಾನ್ಯ ಪಟಾಕಿಗಳಂತೆ ಇರುತ್ತದೆ' ಎಂದು ಹೇಳಿದರು.

ತುರ್ತು ಚಿಕಿತ್ಸೆ ಅಗತ್ಯ: 'ಪಟಾಕಿಯಿಂದ ಕಣ್ಣಿಗೆ ಹಾನಿಯಾದಲ್ಲಿ ಸ್ವಚ್ಛವಾದ ಕರವಸ್ತ್ರದಿಂದ ಕಣ್ಣನ್ನು ಮುಚ್ಚಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಕಣ್ಣನ್ನು ಉಜ್ಜುವುದು, ನೀರಿನಿಂದ ತೊಳೆದುಕೊಳ್ಳಬಾರದು. ಕೂಡಲೇ ಹತ್ತಿರದ ಕಣ್ಣಿನ ಆಸ್ಪತ್ರೆಗೆ ತೆರಳಿ, ತುರ್ತು ಚಿಕಿತ್ಸೆ ಪಡೆಯಬೇಕು. ಪಟಾಕಿ ಹೊಡೆದ ಬಳಿಕ ಅದರ ಮೇಲೆ ನೀರು ಹಾಕಬೇಕು. ಇದರಿಂದ ಮಾಲಿನ್ಯದ ಪ್ರಮಾಣ ಕಡಿಮೆ ಆಗುವ ಜತೆಗೆ ಅರಿವಿಲ್ಲದೆಯೇ ಸುಟ್ಟ ಪಟಾಕಿಗಳ ಬಿಸಿ ತುಂಡುಗಳನ್ನು ಮೆಟ್ಟುವುದು ತಪ್ಪಲಿದೆ' ಎಂದು ತಿಳಿಸಿದರು.

'ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಅಗತ್ಯವಾದ ವೈದ್ಯರು, ಶುಶ್ರೂಷಕರು, ಅರೆವೈದ್ಯಕೀಯ ಸಿಬ್ಬಂದಿಯಿದ್ದು, ಅಗತ್ಯ ಔಷಧ ಸಾಮಗ್ರಿಗಳ ವ್ಯವಸ್ಥೆಯನ್ನೂ ಮಾಡಿಕೊಳ್ಳಲಾಗಿದೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕಣ್ಣಿನ ಚಿಕಿತ್ಸೆಗೆ ಪ್ರತಿವರ್ಷ ಸರಾಸರಿ 50ರಿಂದ 60 ಮಂದಿ ದಾಖಲಾಗುತ್ತಿದ್ದಾರೆ. ಇವರುಗಳಲ್ಲಿ ಶೇ 40 ರಷ್ಟು ಗಾಯಾಳುಗಳು 14 ವರ್ಷದ ಒಳಗಿನವರಾಗಿದ್ದಾರೆ. ಹಾಗಾಗಿ, ಮಕ್ಕಳು ಸೇರಿದಂತೆ ಎಲ್ಲ ವಯೋಮಾನದವರು ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು' ಎಂದರು.

ಪಟಾಕಿಯಿಂದ ಕಣ್ಣಿಗೆ ಹಾನಿಯಾದಲ್ಲಿ ಸಹಾಯವಾಣಿ: 9480832430

ಮಿಂಟೊ ಕಣ್ಣಿನ ಆಸ್ಪತ್ರೆ ಪ್ರಜಾವಾಣಿ ಚಿತ್ರ



ಹಸಿರು ಪಟಾಕಿಯಿಂದ ಯಾವುದೇ ತರಹದ ಹಾನಿಯಾಗುವುದಿಲ್ಲ ಎಂಬ ತಪ್ಪುಕಲ್ಪನೆಯಿಂದ ಹೊರಬರಬೇಕು. ಪಟಾಕಿ ಸಿಡಿಸುವಾಗ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು

ಡಾ. ಸುಜಾತಾ ರಾಥೋಡ್ ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ

ಮಿಂಟೊ ವೈದ್ಯರು ನೀಡಿದ ಸಲಹೆಗಳು

- ಪಟಾಕಿ ಖರೀದಿಸಲೇ ಬೇಕಾದಲ್ಲಿ ಐಎಸ್‌ಐ ಗುರುತಿನ ಹಸಿರು ಪಟಾಕಿಗಳನ್ನು ಖರೀದಿಸಿ
- ಪಟಾಕಿಗಳ ಮೇಲಿರುವ ಎಚ್ಚರಿಕೆ, ಸೂಚನೆ ಅನುಸರಿಸಿ
- ಕನಿಷ್ಠ 2-3 ಅಡಿ ದೂರದಿಂದ ಪಟಾಕಿ ಹಚ್ಚಿ
- ಪಟಾಕಿ ಹಚ್ಚಲು ಉದ್ದನೆಯ ಕೋಲು ಬಳಸಿ
- ಮೈದಾನ, ಖಾಲಿ ಜಾಗಗಳಲ್ಲಷ್ಟೇ ಪಟಾಕಿ ಹಚ್ಚಿ
- ಬೆಂಕಿ ಹಾಗೂ ಥಟ್ಟನೆ ಹೊತ್ತಿಕೊಳ್ಳುವ ವಸ್ತುಗಳ ಬಳಿ ಪಟಾಕಿ ಸಂಗ್ರಹಿಸಬೇಡಿ
- ಪಟಾಕಿ ಸುಡುವುದಕ್ಕೆ ಗಾಜಿನ ಬಾಟಲಿಗಳನ್ನು ಬಳಸಬೇಡಿ. ಇದರಿಂದ ಸಿಡಿಯುವ ಚೂರುಗಳು ಕಣ್ಣಿಗೆ ಹಾನಿ ಮಾಡಬಹುದು
- ಮಕ್ಕಳು ಒಂಟಿಯಾಗಿ ಪಟಾಕಿ ಸಿಡಿಸುವುದಕ್ಕೆ ಅವಕಾಶ ನೀಡಬೇಡಿ. ಜತೆಯಲ್ಲಿ ಪಾಲಕರು ಇರಲಿ
- ಪಟಾಕಿ ಸಿಡಿದಾಗ ಯಾವುದಾದರೂ ಕಿಡಿ ನಿಮ್ಮ ಕಣ್ಣನ್ನು ಸೇರಿದರೆ ಕಣ್ಣನ್ನು ಉಜ್ಜಿಕೊಳ್ಳಬೇಡಿ
- ಅರೆಬರೆ ಸುಟ್ಟ ಪಟಾಕಿ ತುಣುಕನ್ನು ಗಾಳಿಯಲ್ಲಿ ಎಸೆಯಬೇಡಿ
- ಕೈಯಲ್ಲೇ ಪಟಾಕಿ ಸಿಡಿಸುವ ಸಾಹಸ ಬೇಡ
- ಅರೆಬರೆ ಸುಟ್ಟ ಪಟಾಕಿಯನ್ನು ಕೈಯಿಂದ ಹೊಸಕಿ ನಂದಿಸಲು ಯತ್ನಿಸಬೇಡಿ

ಐಷಾರಾಮಿ 'ವಿಲ್ಲಾ'ದಲ್ಲಿ ಜಾತಿ ನಿಂದನೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: 'ಸ್ಟಿಲ್ ವಾಟರ್' ಐಷಾರಾಮಿ ವಿಲ್ಲಾದಲ್ಲಿ ಜಾತಿ ನಿಂದನೆ ಮಾಡಿರುವ ಪ್ರಕರಣ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಪರಿಶಿಷ್ಟ ಜಾತಿಗೆ ಸೇರಿದ ಹೇಮಾವತಿ ರಾಜಾರಾಂ ಎಂಬುವವರ ಮೇಲೆ, ಅದೇ ವಿಲ್ಲಾದ ಪಕ್ಕದ ಮನೆಯ ಬೆಂಗಾಲಿ ಬ್ರಾಹ್ಮಣ ಕುಟುಂಬವೊಂದು ಜಾತಿ ನಿಂದನೆ ಮಾಡಿ, ಕಿರುಕುಳ ನೀಡುತ್ತಿದೆ ಎನ್ನುವ ಆರೋಪದ ಮೇಲೆ ದೂರು ದಾಖಲಾಗಿದೆ.

ಪಕ್ಕದ ವಿಲ್ಲಾದಲ್ಲಿ (ನಂ.74) ವಾಸವಿರುವ ಅಂಬರ್ ಮಿತ್ರಾ ಹಾಗೂ ರಶ್ಮಿ ಮಿತ್ರಾ ಎಂಬ ದಂಪತಿ, 'ಬ್ರಾಹ್ಮಣರು ವಾಸಿಸುವ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರು ವಾಸಿಸಬಾರದು ಎಂದು ನೇರವಾಗಿಯೇ ನಿತ್ಯವೂ ಜಗಳ ತೆಗೆದು ಮಾನಸಿಕ ಹಿಂಸೆ ಕೊಡುತ್ತಿದ್ದಾರೆ' ಎಂದು ದೂರು ನೀಡಿರುವ ಹೇಮಾವತಿ ರಾಜಾರಾಂ ಆರೋಪಿಸಿದ್ದಾರೆ.

'ಕೀಳು ಜಾತಿಯ ಜನರನ್ನು ನೋಡುವುದು ಅಸಹ್ಯ. ಅವರ ಉಸಿರು ಇತ್ತ ಸುಳಿಯಬಾರದೆಂದು ಎರಡು ಮನೆಗಳ ಮಧ್ಯೆ ಎತ್ತರದ ಚಾವಣಿ ಹಾಕಿಸಿದ್ದಾರೆ. ಇದರಿಂದ ಗಾಳಿ, ಬೆಳಕು ಬರುತ್ತಿಲ್ಲ. ವಿಲ್ಲಾ ಸಮುಚ್ಚಯದ ನಿಯಮಗಳಿಗೆ ವಿರುದ್ಧವಾಗಿ ಚಾವಣಿ ನಿರ್ಮಿಸಿದ್ದಾರೆ. ಈ ಬಗ್ಗೆ ವಿಲ್ಲಾದ ಅಸೋಸಿಯೇಷನ್‌ಗೆ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ' ಎಂದು ತಿಳಿಸಿದ್ದಾರೆ.

'ವಿಲ್ಲಾದೊಳಗೆ ಸಭೆ ಸಮಾರಂಭಗಳು ನಡೆದಾಗ ಜಾತಿ ಹೆಸರು ಹಿಡಿದು ಅವಮಾನಿಸುತ್ತಲೇ ಬಂದಿದ್ದಾರೆ. ಬೇಕೆಂದೇ ಗಲೀಜು ನೀರು ಸುರಿಯುತ್ತಾರೆ. ವಿಲ್ಲಾ ಮಾರಾಟ ಮಾಡಿ ಇಲ್ಲಿಂದ ಜಾಗ ಖಾಲಿ ಮಾಡಿ ಎಂದು ನೇರವಾಗಿಯೇ ಹೇಳುತ್ತಾರೆ' ಎಂದು ಹೇಮಾವತಿ ರಾಜಾರಾಂ ದೂರಿದ್ದಾರೆ.

'ಪ್ರಕರಣದ ತನಿಖೆ ನಡೆಯುತ್ತಿದೆ, ತಪ್ಪಿತಸ್ಥರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅನ್ವಯ ಕ್ರಮ ಕೈಗೊಳ್ಳಲಾಗುವುದು' ಎಂದು ಸಹಾಯಕ ಪೊಲೀಸ್ ಕಮಿಷನರ್ ಕಿಶೋರ್ ಭರಣಿ ಹೇಳಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	24.60 ಕೋಟಿ ▲	3.42 ಕೋಟಿ
ಸಕ್ರಿಯ ಪ್ರಕರಣ	1.81ಕೋಟಿ ▲	1.55 ಲಕ್ಷ ▲
ಗುಣಮುಖ	22.29 ಕೋಟಿ ▲	3.36 ಕೋಟಿ
ಸಾವು	49.92 ಲಕ್ಷ ▲	4.57 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.79 ಲಕ್ಷ ▲	14,242 ▼
ಗುಣಮುಖ	4.02 ಲಕ್ಷ ▲	12,704 ▼
ಸಾವು	8,671 ▲	803 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
78,932 ▲	43,971 ▲	36,582 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
93.58 ▼	15.24 ▲	8.75 ▲

(* ರಾತ್ರಿ 12ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

1.40 ಲಕ್ಷ	ಮಹಾರಾಷ್ಟ್ರ
36,072 ▲	ತಮಿಳುನಾಡು
30,685 ▲	ಕೇರಳ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

66.07 ▲	ಮಹಾರಾಷ್ಟ್ರ
49.46 ▲	ಕೇರಳ
26.99 ▲	ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

'ಉದ್ಯೋಗ ಸೃಷ್ಟಿ: ಸರ್ಕಾರದ್ದಷ್ಟೇ ಹೊಣೆಯಲ್ಲ'

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಲಿಂಗರಾಜ ಗಾಂಧಿ, ಪಿವಿಪಿ ಕಾಯದರ್ಶಿ ಕೃಷ್ಣಮೂರ್ತಿ, ಎಸ್.ಮರಿಸ್ವಾಮಿ, ಬಿ.ಎನ್. ಉಮೇಶ್, ಪಿ.ಎಲ್ ನಂಜುಂಡಸ್ವಾಮಿ, ಎಸ್.ಶಿವಮಲ್ಲು, ಡಾ.ಎಂ.ಮಹದೇವ್ ಇದ್ದರು

ಕೆಂಗೇರಿ: 'ಉದ್ಯೋಗ ಸೃಷ್ಟಿ ವಿಷಯದಲ್ಲಿ ಸರ್ಕಾರ ಮಾತ್ರ ಜವಾಬ್ದಾರಿ ವಹಿಸಬೇಕು ಎಂದು ಬಯಸುವುದು ಸಲ್ಲದು. ಯುವಕರು ಸಹ ಉದ್ಯೋಗ ಸೃಷ್ಟಿಗೆ ಮುಂದಾಗಬೇಕು. ಆಗ ಮಾತ್ರ ನಿರುದ್ಯೋಗ ಸಮಸ್ಯೆಗೆ ಇತಿಶ್ರೀ ಹಾಡಬಹುದು' ಎಂದು ಎಂದು ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವ ಎ. ನಾರಾಯಣಸ್ವಾಮಿ ಹೇಳಿದರು.

ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲದಲ್ಲಿ ಗುರುವಾರ ಆಯೋಜಿಸಲಾಗಿದ್ದ 7 ಮತ್ತು 8ನೇ ವರ್ಷದ ಘಟಿಕೋತ್ಸವ ಕಾರ್ಯಕ್ರಮದಲ್ಲಿ 116 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

'ಪದವಿ ಎನ್ನುವುದು ಉದ್ಯೋಗ ಖಾತ್ರಿಯ ಪ್ರಮಾಣ ಪತ್ರವಲ್ಲ. ಕಾಲಘಟ್ಟಕ್ಕೆ ಪೂರಕವಾಗಿ ಕೌಶಲ ಬೆಳೆಸಿಕೊಳ್ಳಬೇಕು' ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

'ದೇಶದಲ್ಲಿ ದಲಿತರ ಸ್ಥಿತಿ ಇಂದಿಗೂ ಶೋಚನೀಯವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಶಿಕ್ಷಣವು ಜ್ಞಾನಾರ್ಜನೆಗೆ ಮೀಸಲಾಗಬಾರದು. ಸಾಮಾಜಿಕ ಕಳಕಳಿ, ನೈತಿಕತೆ ಹಾಗೂ ಮೌಲ್ಯಗಳನ್ನು ಜಾಗೃತಗೊಳಿಸಬೇಕು' ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಹೇಳಿದರು.

ಪಿವಿಪಿ ಕಾಯದರ್ಶಿ ಕೃಷ್ಣಮೂರ್ತಿ, ಟ್ರಸ್ಟಿಗಳಾದ ಎಸ್.ಮರಿಸ್ವಾಮಿ, ಬಿ.ಎನ್.ಉಮೇಶ್, ಪಿ.ಎಲ್ ನಂಜುಂಡಸ್ವಾಮಿ, ಎಸ್.ಶಿವಮಲ್ಲು, ಡಾ.ಎಂ.ಮಹದೇವ್ ಇದ್ದರು.

ಪಾರ್ಶ್ವವಾಯು ತಪಾಸಣೆ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪಾರ್ಶ್ವವಾಯು ದಿನದ ಪ್ರಯುಕ್ತ ನಾರಾಯಣ ಹೆಲ್ತ್ ಪಾರ್ಶ್ವವಾಯು ಸಮಸ್ಯೆಗೆ ಸಂಬಂಧಿಸಿದಂತೆ ಉಚಿತ ತಪಾಸಣಾ ಶಿಬಿರವನ್ನು ಶುಕ್ರವಾರ ತನ್ನ ಕೇಂದ್ರಗಳಲ್ಲಿ ಹಮ್ಮಿಕೊಂಡಿದೆ.

ಪಾರ್ಶ್ವವಾಯು ಸಂಭವಿಸಿದಾಗ, ಮಿದುಳಿಗೆ ಅಗತ್ಯವಾದ ರಕ್ತ ಪೂರೈಕೆ ಸ್ಥಗಿತಗೊಳ್ಳುತ್ತದೆ. ಇದರಿಂದ ಮಿದುಳಿಗೆ ಹಾನಿಯಾಗಿ ಅಂಗವೈಕಲ್ಯ ಅಥವಾ ಸಾವಿಗೆ ಕಾರಣವಾಗಬಹುದು. ಇದರ ಮಾರಕ ಪರಿಣಾಮಗಳನ್ನು ತಪ್ಪಿಸಲು ಪ್ರಾರಂಭಿಕ ಹಂತದಲ್ಲಿಯೇ ಲಕ್ಷಣಗಳನ್ನು ಗುರುತಿಸಿ, ಚಿಕಿತ್ಸೆ ಒದಗಿಸಬೇಕಾಗುತ್ತದೆ. ಬೆಳಿಗ್ಗೆ 7ರಿಂದ ಸಂಜೆ 8 ಗಂಟೆಯವರೆಗೆ ನಡೆಯುವ ಶಿಬಿರದಲ್ಲಿ ತಜ್ಞ ವೈದ್ಯರು ಲಭ್ಯವಿರುತ್ತಾರೆ ಎಂದು ಆಸ್ಪತ್ರೆ ತಿಳಿಸಿದೆ.

ಬೊಮ್ಮಸಂದ್ರದ ನಾರಾಯಣ ಹೆಲ್ತ್ ಸಿಟಿ, ಲ್ಯಾಂಗ್‌ಫೋರ್ಡ್ ಟೌನ್‌ನ ನಾರಾಯಣ ಮೆಡಿಕಲ್ ಸೆಂಟರ್, ಎಚ್‌ಎಸ್‌ಆರ್. ಬಡಾವಣೆಯ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಜಯನಗರ, ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿ, ಎಚ್‌ಎಸ್‌ಆರ್ ಬಡಾವಣೆ ಹಾಗೂ ಹೊಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಕ್ಲಿನಿಕ್‌ಗಳಲ್ಲಿ ತಪಾಸಣೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಆಲ್ ಸೇಂಟ್ಸ್' ಚರ್ಚ್‌ನಲ್ಲಿ ₹ 2.08 ಕೋಟಿ ದುರುಪಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 'ಆಲ್ ಸೇಂಟ್ಸ್' ಚರ್ಚ್‌ನಲ್ಲಿ ₹ 2.08 ಕೋಟಿ ದುರುಪಯೋಗ ನಡೆದಿರುವ ಆರೋಪ ಕೇಳಿಬಂದಿದ್ದು, ಚರ್ಚ್‌ನ ಫಾದರ್ ಸೇರಿ ನಾಲ್ವರ ವಿರುದ್ಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಚರ್ಚ್ ಸದಸ್ಯ ಎಬೆನೇಜರ್ ಪ್ರೇಮ್‌ಕುಮಾರ್ ಎಂಬುವವರು ದೂರು ನೀಡಿದ್ದಾರೆ. ಫಾದರ್ ರೆವರೆಂಡ್ ಸತೀಶ್ ತಿಮೋತಿ ಪೌಲ್, ಚರ್ಚ್ ಕಾರ್ಯದರ್ಶಿ ಹರಿನಾಥ್ ಕಾಂತನ್, ಖಜಾಂಚಿ ಸುದೀಪ್ ಫಿಲಿಪ್ ರಾಜ್ ಹಾಗೂ ಜೆರಾಲ್ಡ್ ಥಿಯೊಫಿಲೋಸ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'2016ರ ಜೂನ್ 1ರಿಂದ 2021ರ ಮೇ 16ರವರೆಗೆ ಚರ್ಚ್ ಉಸ್ತುವಾರಿಯನ್ನು ಆರೋಪಿಗಳು ವಹಿಸಿಕೊಂಡಿದ್ದರು. ಚರ್ಚ್‌ನ ಆರ್ಥಿಕ ವ್ಯವಹಾರವನ್ನೆಲ್ಲ ಅವರೇ ನೋಡಿಕೊಳ್ಳುತ್ತಿದ್ದರು. ಸಭಾಭವನದ ಬಾಡಿಗೆ, ಭದ್ರತಾ ಠೇವಣಿ, ವಿದ್ಯುತ್ ಬಿಲ್ ಹಾಗೂ ಕಟ್ಟಡ ನಿರ್ಮಾಣ ಯೋಜನೆ ಹೆಸರಿನಲ್ಲಿ ಹಣ ದುರುಪಯೋಗಪಡಿಸಿಕೊಂಡಿರುವುದಾಗಿ ದೂರುದಾರ ಆರೋಪಿಸಿದ್ದಾರೆ' ಎಂದೂ ತಿಳಿಸಿವೆ.

'ಆರೋಪಿಗಳ ಕೃತ್ಯದಿಂದ ಚರ್ಚ್‌ನ ಬೊಕ್ಕಸಕ್ಕೆ ಆರ್ಥಿಕ ನಷ್ಟವಾಗಿದೆ. ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರುದಾರ ಒತ್ತಾಯಿಸಿದ್ದಾರೆ. ಹಣ ದುರುಪಯೋಗ ಸಂಬಂಧ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದೂ ಹೇಳಿವೆ.

ಪ್ರಕರಣದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಫಾದರ್ ರೆವರೆಂಡ್ ಸತೀಶ್ ತಿಮೋತಿ ಪೌಲ್ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಮಾತೃಸಂಸ್ಥೆಯ ಹೆಸರು ಬದಲಿಸಿದ ಫೇಸ್‌ಬುಕ್

ಸ್ಯಾನ್‌ಫ್ರಾನ್ಸಿಸ್ಕೊ (ಎಎಫ್‌ಪಿ): ಫೇಸ್‌ಬುಕ್‌ನ ಮಾತೃಸಂಸ್ಥೆಯ ಹೆಸರು 'ಮೆಟಾ' ಎಂದು ಬದಲಾಗಲಿದೆ. ಫೇಸ್‌ಬುಕ್ ಜಾಲತಾಣದ ಮುಖ್ಯಸ್ಥ ಮಾರ್ಕ್ ಝುಕರ್‌ಬರ್ಗ್ ಈ ವಿಷಯ ಪ್ರಕಟಿಸಿದರು.

'ಮೆಟಾ' ಸಾಮಾಜಿಕ ಜಾಲತಾಣವನ್ನು ಇನ್ನೊಂದು ಹಂತಕ್ಕೆ ಒಯ್ಯಲಿದೆ ಎಂದು ಹೇಳಿದ್ದಾರೆ. ಸಾಮಾಜಿಕ ವಿಷಯಗಳ ಜೊತೆಗಿನ ಜಂಜಾಟಗಳಿಂದ ಸಾಕಷ್ಟು ಕಲಿತಿದ್ದೇವೆ. ನಾವು ಕಲಿತಿದ್ದು ಹೊಸ ಅಧ್ಯಾಯ ರೂಪಿಸಲು ನೆರವಾಗಲಿದೆ ಎಂದು ಅವರು ಡೆವಲಪರ್‌ಗಳ ವಾರ್ಷಿಕ ಸಮ್ಮೇಳನದಲ್ಲಿ ಹೇಳಿದರು.

'ಆದರೆ, ನಮ್ಮ ಅಪ್ಲಿಕೇಷನ್‌ಗಳು ಹಾಗೂ ಅದರ ಬ್ರ್ಯಾಂಡ್ ಬದಲಾಗುತ್ತಿಲ್ಲ' ಎಂದು ಅವರು ಹೇಳಿದರು.

ಕಣಕುಂಬಿ ಅಧಿಕಾರಿಗೆ ಪ್ರಭಾರ; ಕಾರ್ಯದೊತ್ತಡ

ಭೀಮಗಡ ಅಭಯಾರಣ್ಯ: 3 ತಿಂಗಳಿಂದ 'ಪ್ರಭಾರ' ಆರ್‌ಎಫ್‌ಒ

● ಎಂ. ಮಹೇಶ

ಬೆಳಗಾವಿ: ಅರಣ್ಯ ಸಚಿವ ಉಮೇಶ ಕತ್ತಿ ಅವರ ತವರು ಜಿಲ್ಲೆಯಾದ ಬೆಳಗಾವಿಯ ಖಾನಾಪುರದಲ್ಲಿರುವ ಭೀಮಗಡ ಅಭಯಾರಣ್ಯದಲ್ಲಿ ಆರ್‌ಎಫ್‌ಒ ಹುದ್ದೆಗೆ ಪೂರ್ಣಕಾಲಿಕ ಅಧಿಕಾರಿ ನೇಮಿಸುವ ಕಾರ್ಯ ಮೂರು ತಿಂಗಳಾದರೂ ನಡೆದಿಲ್ಲ.

ಹಿಂದೆ ಇದ್ದ ಅಮೃತ ಗಂಡೋಸಿ ಅವರು ಜುಲೈನಲ್ಲಿ ವರ್ಗಾವಣೆಯಾಗಿದ್ದಾರೆ. ಬಳಿಕ ಸಮೀಪದ ಕಣಕುಂಬಿಯ ಆರ್‌ಎಫ್‌ಒ ಸಂತೋಷ ಹುಬ್ಬಳ್ಳಿಗೆ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ. ಪ್ರಮುಖ ಅಭಯಾರಣ್ಯದ ಮೇಲೆ ನಿಗಾ ವಹಿಸಬೇಕಾದ ಅಧಿಕಾರಿಯ ಹುದ್ದೆ ತ್ವರಿತವಾಗಿ ಭರ್ತಿ ಆಗದಿರುವುದು ಅಲ್ಲಿನ ಕಾರ್ಯಚಟುವಟಿಕೆಗಳು ಮತ್ತು ಸಂರಕ್ಷಣೆಯ ಕೆಲಸದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಮುಖ್ಯಾಂಶಗಳು

- 19ಸಾವಿರ ಹೆಕ್ಟೇರ್ ಪ್ರದೇಶದ ಅಭಯಾರಣ್ಯ
- ಸಸ್ಯ, ಪ್ರಾಣಿ ಸಂಪತ್ತಿನ ಆಗರ
- ನಿತ್ಯ ರಾತ್ರಿ ಕಾವಲು ಅತ್ಯಗತ್ಯ

ನೆರೆಯ ಕಣಕುಂಬಿ ಹಾಗೂ ಭೀಮಗಡ ಎರಡು ಕಡೆಗಳಲ್ಲೂ ರಾತ್ರಿ ಕಾವಲು ಅತ್ಯಗತ್ಯವಾಗಿದೆ. ಜೊತೆಗೆ, ಕಳ್ಳ ಬೇಟೆ ತಡೆ ಮೇಲೆ ಅಧಿಕಾರಿ ನಿಗಾ ವಹಿಸಬೇಕಾಗುತ್ತದೆ. ಈಗಿರುವ ಒಬ್ಬರೇ ಅಧಿಕಾರಿಯು ಎರಡೂ ಕಡೆಗಳಲ್ಲಿ ಸಮರ್ಪಕವಾಗಿ ನಿರ್ವಹಿಸುವುದು ಕಷ್ಟಸಾಧ್ಯವಾಗಿದೆ. ಈ ಅರಣ್ಯಕ್ಕೆ ಹೆಚ್ಚಿನ ಆದ್ಯತೆಯ ಅಗತ್ಯವಿದೆ ಎನ್ನುತ್ತಾರೆ ಪರಿಸರ ಹೋರಾಟಗಾರರು.

'ಪೂರ್ಣಕಾಲಿಕ ಆರ್‌ಎಫ್‌ಒ ದೀರ್ಘ ಕಾಲದವರೆಗೆ ಇಲ್ಲದಿದ್ದರೆ ತೊಂದರೆ ಖಂಡಿತ ಆಗುತ್ತದೆ. ಭೀಮಗಡ ಅಭಯಾರಣ್ಯದ ಆರ್‌ಎಫ್‌ಒ ಹುದ್ದೆ ಖಾಲಿ ಇರುವ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಉಂಟಾಗುವ ಸಮಸ್ಯೆಗಳ ಬಗ್ಗೆಯೂ ಗಮನಸೆಳೆಯಲಾಗಿದೆ. ನೇಮಕಾತಿಗೆ ಕ್ರಮ ವಹಿಸುವಂತೆ ಕೋರಲಾಗಿದೆ. ಆದರೆ, ನೇಮಕಾತಿ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ' ಎಂದು ಬೆಳಗಾವಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಿಜಯಕುಮಾರ ಸಾಲಿಮಠ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಹೆಮ್ಮಡಗಾದಲ್ಲಿರುವ ಭೀಮಗಡ ಪ್ರಕೃತಿ ಶಿಬಿರದ ಪ್ರವೇಶದ್ವಾರ

ಭೀಮಗಡ ಅಭಯಾರಣ್ಯದಲ್ಲಿ ಆರ್‌ಎಫ್‌ಒ, ಖಾನಾಪುರದಲ್ಲಿ ಎಸಿಎಫ್ ಹುದ್ದೆಗೆ ಅಧಿಕಾರಿಗಳ ನೇಮಕ ಆಗಿಲ್ಲದಿರುವುದು ಗಮನಕ್ಕೆ ಬಂದಿದೆ. ಕ್ರಮ ಕೈಕೊಳ್ಳಲಾಗುವುದು

ಉಮೇಶ ಕತ್ತಿ , ಅರಣ್ಯ ಸಚಿವ

'ಖಾನಾಪುರ ಎಸಿಎಫ್ ಹುದ್ದೆಯೂ ಖಾಲಿ ಇದೆ. ಬೇರೊಬ್ಬರಿಗೆ ಪ್ರಭಾರ ವಹಿಸಲಾಗಿದೆ. ಈ ವಿಷಯವನ್ನೂ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ನೇಮಕಾತಿ ಅಥವಾ ವರ್ಗಾವಣೆ ಸರ್ಕಾರದ ಮಟ್ಟದಲ್ಲಿ ಆಗುತ್ತದೆ' ಎಂದು ಹೇಳಿದರು.

'ಗೋಪೂಜೆಗೆ ರಾಜಕೀಯ ಬಣ್ಣ'

ಬೆಂಗಳೂರು: 'ದೀಪಾವಳಿ ಹಬ್ಬದಂದು ದೇವಾಲಯಗಳಲ್ಲಿ ಗೋಪೂಜೆ ಮಾಡಬೇಕೆಂದು ಆದೇಶ ಹೊರಡಿಸಿರುವ ರಾಜ್ಯ ಸರ್ಕಾರ ಹಬ್ಬದ ವೇಳೆ ಸಹಜವಾಗಿ ನಡೆಯುತ್ತಿದ್ದ ಆಚರಣೆಗಳಿಗೂ ತನ್ನ ರಾಜಕೀಯ ಬಣ್ಣ ಬಳಿದಿದೆ' ಎಂದು ಕಾಂಗ್ರೆಸ್ ನಾಯಕ ಎಚ್.ಸಿ. ಮಹದೇವಪ್ಪ ಟೀಕಿಸಿದ್ದಾರೆ.

'ಗ್ರಾಮೀಣ ಭಾರತದಲ್ಲಿ ಕೃಷಿಯ ಮೂಲಕ ಬದುಕು ಕಂಡು ಕೊಂಡಿರುವ ಎಲ್ಲಾ ರೈತರೂ ದೀಪಾವಳಿ ಮತ್ತು ಸಂಕ್ರಾಂತಿ ಹಬ್ಬದ ವೇಳೆ ಹಸುಗಳ ಮೈತೊಳೆದು, ಅಲಂಕಾರ ಮಾಡಿ, ನಂತರ ಕಿಚ್ಚು ಹಾಯಿಸುವಂತಹ ಆಚರಣೆ ಎಲ್ಲ ಕಡೆ ನಡೆಯುತ್ತಿದೆ. ಈ ಆಚರಣೆಯನ್ನು ನಮ್ಮ ರೈತರು ಬಿಜೆಪಿಯವರಿಂದ ಕಲಿಯಬೇಕಾದುದು ಏನಿದೆ' ಎಂದು ಅವರು ಪ್ರಶ್ನಿಸಿದ್ದಾರೆ.

'ಬೆಲೆ ಏರಿಕೆಯ ದೀಪಾವಳಿಯೂ ಬೇಡ ಏನೂ ಬೇಡ ಎಂಬ ಪರಿಸ್ಥಿತಿಗೆ ಜನ ಸಾಮಾನ್ಯರನ್ನು ನೂಕಿರುವ ಬಿಜೆಪಿಗರು ಗೋವಿನ ಹೆಸರಲ್ಲಿ ರಾಜಕೀಯ ಮಾಡುತ್ತಿರುವುದು ಅತ್ಯಂತ ಹಾಸ್ಯಾಸ್ಪದ.ಇವರಿಗೆ ನಿಜವಾಗಲೂ ಹಸುಗಳ ಬಗ್ಗೆ ಪ್ರೀತಿ ಇದ್ದರೆ ಮೊದಲು ಗೋಮಾಂಸ ರಫ್ತನ್ನು ನಿಲ್ಲಿಸಲಿ' ಎಂದು ಆಗ್ರಹಿಸಿದ್ದಾರೆ.

'ನಮ್ಮೆಲ್ಲಾ ರೈತರ ಕುಟುಂಬಗಳಿಗೆ ತಲಾ 2 ಹಸುಗಳನ್ನು ನೀಡುವ ಮೂಲಕ ಹಸು ಮತ್ತು ರೈತರಿಗೂ ನೆರವಾಗಲಿ. ಗಗನಕ್ಕೆ ಏರಿರುವ ರಸಗೊಬ್ಬರದ ಬೆಲೆ ಇಳಿಸಲಿ. ಅವೆಲ್ಲ ಮಾಡುವುದು ಬಿಟ್ಟು, ಸುಮ್ಮನೇ ಗೋವಿನ ಹೆಸರಲ್ಲಿ ನಾಟಕವಾಡುವುದೇಕೆ?' ಎಂದು ಅವರು ಕುಟುಕಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಡಾ. ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಮಿಲ್ಲರ್ಸ್ ರಸ್ತೆ, ಬೆಂಗಳೂರು. ದೂ.: 080–22207784
ಸಂಖ್ಯೆ: ಸಕಇ/ಪಪೂತಕೇ/ಎಸ್–7/ಸಿಆರ್–12/2021–22 ದಿನಾಂಕ: 25.10.2021
ಪ್ರಕಟಣೆ
ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಯು.ಪಿ.ಎಸ್.ಸಿ. / ಕೆ.ಎ.ಎಸ್. / ಬ್ಯಾಂಕಿಂಗ್ / ಆರ್.ಆರ್.ಬಿ. / ಎಸ್.ಎಸ್.ಸಿ. / ಗ್ರೂಪ್–ಸಿ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವಭಾವಿ ತರಬೇತಿಗಾಗಿ ಅರ್ಜಿ ಸಲ್ಲಿಸಿರುವ ಪರಿಶಿಷ್ಟ ಜಾತಿ / ಪಂಗಡಗಳ ಅಭ್ಯರ್ಥಿಗಳಿಗೆ ದಿನಾಂಕ **31.10.2021**ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ರವರ ಮೂಲಕ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಯಲಿದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು **keauthority-ka@nic.in** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಅಭ್ಯರ್ಥಿಗಳು ಪ್ರವೇಶ ಪತ್ರದಲ್ಲಿರುವ ಪರೀಕ್ಷಾ ಕೇಂದ್ರದಲ್ಲಿ ನಿಗದಿತ ದಿನಾಂಕ ಹಾಗೂ ಸಮಯಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗುವುದು. ಹೆಚ್ಚಿನ ಮಾಹಿತಿಗಾಗಿ: ವೆಬ್‌ಸೈಟ್ **keauthority-ka@nic.in & https://sw.kar.nic.in** ಗಳನ್ನು ಸಂಪರ್ಕಿಸುವುದು.
ಸಹಿ/–
ವಾಸಾಸಂಇ/ಉನಿನ/ಎಲ್‌ಸಿ/2022/2021–22 **ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ**
ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
ನಮ್ಮ ಮೆಟ್ರೋ namma metro · Azadi Ka Amrit Mahotsav
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ-ಮೇಲ್: bmrcl@dataone.in ವೆಬ್‌ಸೈಟ್: www.bmrc.co.in
ಸಂ: ಬಿಎಂಆರ್‌ಸಿಎಲ್/ವೈಟ್‌ಫೀಲ್ಡ್, ಹೆಬ್ಬಗೋಡಿ ಮತ್ತು ಕೊತ್ತನೂರು ಡಿಪೋಗಳು/ಎಂ&ಪಿ –ಎಲ್22
ದಿನಾಂಕ: 28.10.2021
ಟೆಂಡರ್ ಪ್ರಕಟಣೆ
ಬಿಎಂಆರ್‌ಸಿಎಲ್, ಇವರು ಬಿಎಂಆರ್‌ಸಿಎಲ್ 2ನೇ ಹಂತ ಯೋಜನೆಗಳಡಿ ಬರುವ ವೈಟ್‌ಫೀಲ್ಡ್, ಹೆಬ್ಬಗೋಡಿ ಹಾಗೂ ಕೊತ್ತನೂರು ಡಿಪೋಗಳಿಗೆ ''ರೀ ರೈಲಿಂಗ್ ಉಪಕರಣಗಳೊಂದಿಗೆ ರೋಡ್ ಕಂ ರೈಲ್ ವೆಹಿಕಲ್‌ನ ವಿನ್ಯಾಸ, ಉತ್ಪಾದನೆ, ಸರಬರಾಜು, ಸ್ಥಾಪನೆ, ಪರೀಕ್ಷಿಸುವುದು ಮತ್ತು ಕಾರ್ಯಾಚರಣೆ''ಗಾಗಿ ಅರ್ಹ ತಯಾರಕರು ಅಥವಾ ತಯಾರಕರ ಭಾರತೀಯ ಅಂಗಸಂಸ್ಥೆ ಅಥವಾ ಓಇಎಂಗಳ ಅಧಿಕೃತ ಭಾರತೀಯ ತಯಾರಕರು ಏಕೈಕ ಟೆಂಡರ್‌ದಾರರಾಗಿ ಅಥವಾ ಜಂಟಿ ಹೂಡಿಕೆದಾರರಾಗಿ/ಒಕ್ಕೂಟಗಳಾಗಿ(ಗ್ರೂಪ್), ಸ್ಥಳೀಯ ಸ್ಪರ್ಧಾತ್ಮಕ ಬಿಡ್ಡಿಂಗ್ ಮೂಲಕ ಏಕಹಂತ, ದ್ವಿಲಕೋಟೆ ಪದ್ಧತಿಯಲ್ಲಿ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ದಸ್ತಾವೇಜುಗಳ ದರ (ಹಿಂದಿರುಗಿಸಲಾಗದ): **ರೂ29,500/-** [25,000+4,500 (ಜಿಎಸ್‌ಟಿ @18%)]. ಆನ್‌ಲೈನ್‌ನಲ್ಲಿ ದಸ್ತಾವೇಜುಗಳ ಮಾರಾಟ: **30.10.2021 ರಿಂದ 20.11.2021 ಮಧ್ಯರಾತ್ರಿಯವರೆಗೆ.** ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **23.11.2021.** ಬಿಡ್ ಪೂರ್ವ ಸಭೆ : **26.11.2021.** ಟೆಂಡರ್ ಸಲ್ಲಿಸುವ ದಿನಾಂಕ: **18.12.2021, 11.00 ಗಂಟೆಯಿಂದ 15.00 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ: **18.12.2021, 15.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ನಮ್ಮ ವೆಬ್‌ಸೈಟ್ **www.bmrc.co.in** ಪರಿವೀಕ್ಷಿಸುವುದು.
ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ
ಕವಿಕಾ KAVIKA
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಪಿ.ಬಿ.ನಂ. 2610, ಮೈಸೂರು ರಸ್ತೆ, ಬೆಂಗಳೂರು–560 026
ಸಂಖ್ಯೆ :ಕವಿಕಾ/ಜಾಹಿರಾತು/ಉವ್ಯ/1703/2021–22 ದಿನಾಂಕ:28.10.2021
ಸಾರ್ವಜನಿಕ ಪ್ರಕಟಣೆ
ವಿತರಣಾ ಪರಿವರ್ತಕಗಳ ಮಾರಾಟಕ್ಕಾಗಿ ಡೀಲರ್‌ಗಳ ಆಹ್ವಾನ
ಕವಿಕಾ ಸಂಸ್ಥೆಯ ಲೆವೆಲ್–1(4 ಸ್ಟಾರ್) ಮತ್ತು ಲೆವೆಲ್–2 (5 ಸ್ಟಾರ್) ವಿತರಣಾ ಪರಿವರ್ತಕಗಳನ್ನು ಉತ್ಪಾದಿಸುತ್ತಿದ್ದು, ISO-9001:2015 ಹಾಗೂ BIS ಮಾನ್ಯತೆ ಪಡೆದಿದೆ. ಕವಿಕಾ ಸಂಸ್ಥೆಯು ಕರ್ನಾಟಕದಾದ್ಯಂತ ವಿತರಣಾ ಪರಿವರ್ತಕಗಳ ಮಾರಾಟ ಮಳಿಗೆಗಳನ್ನು ತೆರೆಯಲು ಡೀಲರ್ (Dealership) ಗಳ ನೋಂದಣಿಗಾಗಿ ಆಹ್ವಾನಿಸಲಾಗಿದೆ. ಕೈಗಾರಿಕಾ ವಿದ್ಯುತ್ ಉಪಕರಣಗಳ ಮಾರಾಟ/ಹಂಚಿಕೆಯಲ್ಲಿ 3 ವರ್ಷಗಳ ಅನುಭವ ಇರುವ, ಆಸಕ್ತಿಯುಳ್ಳ ನುರಿತ ವ್ಯಕ್ತಿಗಳು/ಏಜೆನ್ಸಿ/ಸಂಸ್ಥೆಗಳು ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವೀಕ್ಷಿಸಿರಿ.
ಅರ್ಜಿ ನಮೂನೆ, ಷರತ್ತು ಮತ್ತು ನಿಬಂಧನೆಗಳು, ಕರಾರುಪತ್ರ, ಹಾಗೂ ಇನ್ನಿತರೆ ವಿವರಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯನ್ನು ಸೂಕ್ತ ದಾಖಲೆಯೊಂದಿಗೆ ಇ–ಮೇಲ್ ಮುಖಾಂತರ ಅಥವಾ ಅಂಚೆ ಮುಖಾಂತರ ಅಥವಾ ಖುದ್ದಾಗಿ **ದಿನಾಂಕ:30ನೇ ನವೆಂಬರ್ 2021ರೊಳಗಾಗಿ** ಸಲ್ಲಿಸಲು ಕೋರಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ಕವಿಕಾ ಜಾಲತಾಣ: **kavika.karnataka.gov.in** ಲಿಂಕ್: **https://kavika.karnataka.gov.in/storage/pdf-files/Dealership Particulars.pdf.** ದೂರವಾಣಿ ಸಂಖ್ಯೆ :080–26987200 ಫ್ಯಾಕ್ಸ್:080–26744291 ಇ–ಮೇಲ್: **marketing@kavika.co.in md@kavika.co.in ed@kavika.co.in**
ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

EMPLOYEES' PROVIDENT FUND ORGANISATION
BEFORE ASSISTANT PROVIDENT FUND COMMISSIONER (EPFO)
REGIONAL OFFICE, KR PURAM, No. F-28, NSU Block, ITI Campus (Bengaluru Plant), DOORAVANI NAGAR, BENGALURU - 560 016.
No. KN/RO/KRP/2021-22 Dated: 20.10.2021
SUBSTITUTED SUMMONS
In the matter of proceedings under section 7A and 7C of the Employees' Provident Fund and Miscellaneous Provision Act, 1952. Whereas, an enquiry against the following establishments under section 7A and 7C of the Act for non-payment of statutory dues.
And whereas, the Department has sent the notices to the establishments as well as to the employer's residential address, however the notices got undelivered. Now, therefore notice is hereby given to the employers in relation to the below mentioned establishments and are directed to appear before the Assessing Officer on or before **26.11.2021** at the address mentioned above.

Sl. No.	PF Code No.	Name of the Establishment	PERIOD OF INQUIRY	PINCODE
1	52413	M/s KENS Trading Co.	Inquiry u/s 7A for non enrollment of eligible employees	560016
2	23490	M/s MAA Security Services Pvt. Ltd.	Inquiry u/s 7C from 06/2011 to 04/2013	560016

Any person having information about the whereabouts of the establishment and/or employer of the establishments mentioned above, may send the information by post or in person to the Employees' Provident Fund Organisation at the address mentioned above, on or before **26.11.2021.** In case, no information is received or none appears the inquiry shall be closed and if information becomes available subsequently the inquiry will be started afresh, as per the Head Officer Circular No. Conf.7(3)2013/RCs Review Meeting/Vol.IV dated: 28.04.2015
Sd/- (SHADAKSHARA GOPAL REDDY)
REGIONAL PF COMMISSIONER (COMPLIANCE)
RO KR PURAM.

ದಕ್ಷಿಣ ಭಾರತದ ಪ್ರವಾಸೋದ್ಯಮ ಸಚಿವರ ತೀವ್ರ ಅಸಮಾಧಾನ

'ಪುರಾತತ್ವ ಇಲಾಖೆ ಸ್ಪಂದನೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐತಿಹಾಸಿಕ ತಾಣಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸುವ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಸ್ಥಳೀಯರ ಭಾವನೆಗಳಿಗೆ ಸ್ಪಂದಿಸುತ್ತಿಲ್ಲ' ಎಂದು ದಕ್ಷಿಣ ಭಾರತದ ಪ್ರವಾಸೋದ್ಯಮ ಸಚಿವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಗುರುವಾರ ಆರಂಭವಾದ ದಕ್ಷಿಣ ರಾಜ್ಯಗಳ ಪ್ರವಾಸೋದ್ಯಮ ಸಚಿವರ ಎರಡು ದಿನಗಳ ಸಮ್ಮೇಳನದಲ್ಲಿ ಭಾಗವಹಿಸಿದ ಸಚಿವರು, ಎಎಸ್‌ಐ ಅಧಿಕಾರಿಗಳ ಬಗ್ಗೆ ತಮ್ಮ ಅಸಮಾಧಾನ ಹಂಚಿಕೊಂಡರು.

ಕರ್ನಾಟಕ ಪ್ರವಾಸಿ ತಾಣಗಳ ಬಗ್ಗೆ ಮಾತನಾಡಿದ ಪ್ರವಾಸೋದ್ಯಮ ಸಚಿವ ಆನಂದ ಸಿಂಗ್, 'ಹಂಪಿಯನ್ನು ಎಎಸ್‌ಐ ತನ್ನ ವಶಕ್ಕೆ ತೆಗೆದುಕೊಂಡ ಬಳಿಕ ಬದಲಾವಣೆಗಳು ಆಗಿವೆ. ಆದರೆ, ಎಎಸ್‌ಐ ಮತ್ತು ಸ್ಥಳೀಯರ ನಡುವೆ ಭಿನ್ನಾಭಿಪ್ರಾಯವಿದೆ' ಎಂದರು.

'ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಎಸ್‌ಐ ಅಧಿಕಾರಿಗಳು ಕೆಲಸ ಮಾಡಬೇಕು. 2011ರಲ್ಲಿ, ವಿರೂಪಾಕ್ಷ ದೇವಸ್ಥಾನದ ಎದುರಿನ ಮಾರ್ಕೆಟ್‌ಅನ್ನು ತೆರವುಗೊಳಿಸಲಾಯಿತು. ಆದರೆ, ದಶಕ ಕಳೆದರೂ ಮರುನಿರ್ಮಾಣ ಮಾಡಿಲ್ಲ. ಅಕ್ಷಯ್ ಕುಮಾರ್ ಸಿನಿಮಾ ಚಿತ್ರೀಕರಣಕ್ಕೆ ಒಬ್ಬ ಅಧಿಕಾರಿ ಅವಕಾಶ ನಿರಾಕರಿಸಿದ ಬಳಿಕ ಯಾರೂ ಚಿತ್ರೀಕರಣಕ್ಕೆ ಬರುತ್ತಿಲ್ಲ. ಸಿನಿಮಾ ಚಿತ್ರೀಕರಣಕ್ಕೆ ಅವಕಾಶ ನೀಡಿದರೆ ಪ್ರೇಕ್ಷಣೀಯ ಸ್ಥಳಗಳ ಪ್ರಚಾರಕ್ಕೆ ಅನುಕೂಲವಾಗುತ್ತದೆ. ಏಕಗವಾಕ್ಷಿ ವ್ಯವಸ್ಥೆ ಮೂಲಕ ಸಿನಿಮಾ ಚಿತ್ರೀಕರಣಕ್ಕೆ ಅವಕಾಶ ನೀಡಬೇಕು. ಶಿಲ್ಪಕಲೆಯನ್ನು ಸ್ಪರ್ಶಿಸಲು ಅವಕಾಶ ನೀಡದೆ, ವಿಠಲರಾಯ ದೇವಸ್ಥಾನದಲ್ಲಿ ಪ್ರವೇಶಕ್ಕೆ ಅವಕಾಶ ನೀಡಬೇಕು' ಎಂದರು.

'ಪ್ರವಾಸೋದ್ಯಮ ಕ್ಷೇತ್ರದ ಚಟುವಟಿಕೆ ಉತ್ತೇಜನ ಹಾಗೂ ಹೂಡಿಕೆ ಹೆಚ್ಚಳಕ್ಕೆ ಸರ್ಕಾರಗಳು ಪ್ರಯತ್ನ ಮಾಡುತ್ತಿವೆ' ಎಂದು ಕೇಂದ್ರ ಪ್ರವಾಸೋದ್ಯಮ ಸಚಿವ ಕಿಶನ್ ರೆಡ್ಡಿ ಹೇಳಿದರು.

'ಇತ್ತೀಚೆಗೆ ರಾಮಪ್ಪ ರುದ್ರೇಶ್ವರ ದೇವಸ್ಥಾನ ಯುನೆಸ್ಕೊ ಪಟ್ಟಿಗೆ ಸೇರಿರುವುದು ಇಲಾಖೆಗಳ ಕಾರ್ಯಕ್ಕೆ ಸಾಕ್ಷಿ. ಕರ್ನಾಟಕದ ಹಂಪಿ, ಬೇಲೂರು-ಹಳೇಬೀಡು ತಾಣಗಳು ಸೇರಿದಂತೆ ದಕ್ಷಿಣದ ಎಲ್ಲ ರಾಜ್ಯಗಳಲ್ಲೂ ಪ್ರವಾಸಿ ತಾಣಗಳಿವೆ. ಅವುಗಳ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ' ಎಂದರು.

'ದೇಶದ ಪ್ರವಾಸೋದ್ಯಮ ಕ್ಷೇತ್ರಗಳ ಕುರಿತು ವಿದೇಶಗಳಲ್ಲಿ ಲೇಖನ, ಟಿವಿ ಜಾಹೀರಾತು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು 20 ದೇಶಗಳ ರಾಯಭಾರ ಕಚೇರಿಗಳಲ್ಲಿ ಪ್ರವಾಸೋದ್ಯಮ ಅಧಿಕಾರಿಗಳನ್ನು ವಿದೇಶಾಂಗ ಇಲಾಖೆ ನೇಮಿಸಿದೆ' ಎಂದರು.

ಕರ್ನಾಟಕಕ್ಕಿಲ್ಲ ಅನುದಾನ: '2014ರಿಂದ ಇಲ್ಲಿಯವರೆಗೆ ದಕ್ಷಿಣ ರಾಜ್ಯಗಳಿಗೆ ₹ 1,185 ಕೋಟಿ ಅನುದಾನ ನೀಡಲಾಗಿದೆ. ಆದರೆ, ಕರ್ನಾಟಕಕ್ಕೆ ಯಾವುದೇ ಹಣ ನೀಡಿಲ್ಲ. ಕರ್ನಾಟಕವನ್ನು ಕಡೆಗಣಿಸಲಾಗಿದೆಯೆ' ಎಂದು ಸುದ್ದಿಗಾರರ ಪ್ರಶ್ನೆಗೆ ಕೇಂದ್ರ ಪ್ರವಾಸೋದ್ಯಮ ಹೆಚ್ಚುವರಿ ಮಹಾನಿರ್ದೇಶಕಿ ರೂಪಿಂದರ್ ಬ್ರಾರ್, 'ಚಾಮುಂಡಿ ಬೆಟ್ಟವನ್ನು ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ' ಎಂದರು.

'ರಾಜ್ಯ ಸರ್ಕಾರ ಚಾಮುಂಡಿ ಬೆಟ್ಟದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿದೆ. ಅದೇ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಮಗೆ ಇಷ್ಟವಿಲ್ಲ. ಹೀಗಾಗಿ ರಾಜ್ಯ ಸರ್ಕಾರ ಸಲ್ಲಿಸಿದ ಪ್ರಸ್ತಾವನೆಗಳಿಗೆ ಒಪ್ಪಿಗೆ ಆಗಿಲ್ಲ. ಹೊಸ ಪ್ರಸ್ತಾವನೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದ್ದೇವೆ' ಎಂದರು.

ಈ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವ ಕಿಶನ್ ರೆಡ್ಡಿ, 'ಕರ್ನಾಟಕವನ್ನು ಕಡೆಗಣಿಸುವ ಉದ್ದೇಶವಿಲ್ಲ. ಅಧಿಕಾರಿಗಳ ಜೊತೆ ಚರ್ಚಿಸಿ ತಕ್ಷಣ ಯೋಜನೆಗೆ ಅನುಮತಿ ನೀಡಲಾಗುವುದು' ಎಂದರು.

ಸಮ್ಮೇಳನದಲ್ಲಿ ಆನಂದ್ ಸಿಂಗ್ ಮಾತನಾಡಿದರು. ಕೇಂದ್ರ ಪ್ರವಾಸೋದ್ಯಮ ಸಚಿವ ಕಿಶನ್ ರೆಡ್ಡಿ ಇದ್ದರು – ಪ್ರಜಾವಾಣಿ ಚಿತ್ರ

'ಹಂಪಿ ಸೇರಿ 19 ತಾಣಗಳ ಅಭಿವೃದ್ಧಿ'

'ಹಂಪಿ ಸೇರಿ ದೇಶದ 19 ಪ್ರವಾಸಿ ತಾಣಗಳನ್ನು ಸಾಂಪ್ರದಾಯಿಕ ಮಾದರಿ ನಗರಗಳಾಗಿ (ಐಕಾನಿಕ್ ಡೆಸ್ಟಿನೇಷನ್) ಅಭಿವೃದ್ಧಿಪಡಿಸಲು ಆಯ್ಕೆ ಮಾಡಲಾಗಿದೆ' ಎಂದು ಕಿಶನ್ ರೆಡ್ಡಿ ತಿಳಿಸಿದರು.

'ಹಂಪಿಯನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಿಕೊಳ್ಳುವಂತೆ ಆನಂದ ಸಿಂಗ್ ಮನವಿ ಮಾಡಿದ್ದಾರೆ. ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಶೀಘ್ರ ಅನುಮೋದನೆ ಸಿಗುವ ನಿರೀಕ್ಷೆ ಇದೆ. ಮೂಲ ಸೌಕರ್ಯ, ರಸ್ತೆ, ವಿಮಾನನಿಲ್ದಾಣ ಸೇರಿದಂತೆ ಎಲ್ಲ ಯೋಜನೆಗಳನ್ನೂ ಏಕಕಾಲದಲ್ಲಿ ಅಭಿವೃದ್ಧಿಪಡಿಸಲಾಗುವುದು' ಎಂದರು.

ಕನ್ನಡ ಕಣ್ಮರೆಗೆ ಆಕ್ಷೇಪ

ಮುಖ್ಯ ವೇದಿಕೆ ಸೇರಿದಂತೆ ಸಮ್ಮೇಳನ ನಡೆದ ಕಡೆ ಕನ್ನಡ ಬಳಸದಿರುವ ಬಗ್ಗೆ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಸುದ್ದಿ ಪ್ರಸಾರವಾಗುತ್ತಿದ್ದಂತೆ ಕಾರ್ಯಕ್ರಮ ಸಂಘಟಿಸಿದ್ದ ಅಧಿಕಾರಿಗಳನ್ನು ಆನಂದ್ ಸಿಂಗ್ ತರಾಟೆಗೆ ತೆಗೆದುಕೊಂಡರು. ಸುಮಾರು ಒಂದು ಗಂಟೆಯ ಬಳಿಕ ವೇದಿಕೆಯಲ್ಲಿದ್ದ ಡಿಜಿಟಲ್ ಫಲಕದಲ್ಲಿ ಕನ್ನಡದಲ್ಲಿ ಮಾಹಿತಿ ನೀಡಲಾಯಿತು.

ಈ ಬಗ್ಗೆ ಪ್ರತಿಕ್ರಿಯಿಸಿದ ಕಿಶನ್ ರೆಡ್ಡಿ, 'ಅಧಿಕಾರಿಗಳಿಂದ ತಪ್ಪಾಗಿದೆ. ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸಲಾಗುವುದು' ಎಂದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)
ಪ್ರಕಟಣೆ
ಶ್ರೀ ಕೌಟಿ ರೇಣುಕಾರಾಧ್ಯ, ತಂದೆ. ಶ್ರೀ ಕೌಟಿ ಹಾಲಪ್ಪ, ಮೆಕ್ಯಾನಿಕ ದರ್ಜೆ–2. ಬೆವಿಕಂ. ಘಟಕ–1. ನ್ಯಾಮತಿ ಉಪ ವಿಭಾಗದಲ್ಲಿ (ಎಣಿಕೆ ಅರಸಿಕೆರೆ ಶಾಖೆ, ಹರಪನಹಳ್ಳಿ ಉಪ ವಿಭಾಗ) ಕೆಲಸ ನಿರ್ವಹಿಸುತ್ತಿದ್ದು, ನೀವು ದಿನಾಂಕ: 20.05.2020 ರಿಂದ 18.10.2021 ರವರೆಗೆ ಒಟ್ಟು 517 ದಿನಗಳು ಕಂಪನಿಯ ಕೆಲಸಕ್ಕೆ ಅನಧಿಕೃತ ಗೈರುಹಾಜರಾಗಿರುವ ಪ್ರಯುಕ್ತ ಶಿಸ್ತು ಕ್ರಮ ಪ್ರಾಧಿಕಾರ ಆದೇಶ ಸಂಖ್ಯೆ: ಹ/ಕಾನಿಇಂ(ವಿ)/ಲೆಅ/ಸಲೆಅ/ಹಿಸ(ಸಾ)/ಎಫ್–2/2021–22/5052–57 ದಿನಾಂಕ: 22.10.2021 ನಡಾವಳಿಯ ಪ್ರಕಾರ ಹಾಗೂ ಕ.ವಿ.ಪ್ರ.ನಿ.ನಿ ಸುತ್ತೋಲೆ ಸಂಖ್ಯೆ:ಕ.ವಿ.ಪ್ರ.ನಿ.ನಿ/ಬಿ81/26057/2011–12 ದಿನಾಂಕ: 14.09.2011 ರ ಅನ್ವಯ ನಿಮ್ಮನ್ನು ಈ ಆದೇಶದ ದಿನಾಂಕ: 21.10.2021 ರಿಂದ ಅನ್ವಯವಾಗುವಂತೆ ಕಂಪನಿ ಸೇವೆಯಿಂದ ವಜಾಗೊಳಿಸಲಾಗಿದೆ. ಸೇವಾ ಪುಸ್ತಕದಲ್ಲಿ ದಾಖಲಾಗಿರುವ ಪ್ರಕಾರ ಸದರಿಯವರ ಸ್ವಂತ ವಿಳಾಸವು, **ಶ್ರೀ ಕೌಟಿ ರೇಣುಕಾರಾಧ್ಯ, ತಂದೆ. ಶ್ರೀ. ಕೌಟಿ ಹಾಲಪ್ಪ, ಮೇಗಳ ಪೇಟೆ, ಕೊಟ್ಟೂರು ರಸ್ತೆ, ಕೊಟ್ಟೂರು ವೃತ್ತ, ಹರಪನಹಳ್ಳಿ (ಪೋ/ತಾ), ವಿಜಯನಗರ(ಜಿ), ದಾವಣಗೆರೆ.**
ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್(ವಿದ್ಯುತ್) ಕಾ ಮತ್ತು ಪಾ ವಿಭಾಗ, ಬೆ.ವಿ.ಸ.ಕಂ., ಹರಿಹರ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್, ಶೇಷಾದ್ರಿ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: +91–80–29619801 ಮಿಂಚ್ ಅಂಚೆ: latha.mdksmscl@gmail.com
No: HFW/KSMSCL/TND/9 Drugs/34/2021-22 Dated: 28.10.2021
ಟೆಂಡರ್ ಪ್ರಕಟಣೆ
ಉಲ್ಲೇಖ: 1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/ TND/9 Drugs /34/2021-22, Dated: 28.10.2021 (IND-857).
2. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/5 Drugs/35/2021-22 Dated: 28.10.2021 (IND-858).
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ. ನಿಯಮಾನುಸಾರ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.
1) 2020–21ನೇ ಸಾಲಿನ ಔಷಧ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ.
ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://eproc.karnataka.gov.in** ನಲ್ಲಿ **ದಿನಾಂಕ: 28.10.2021** ರಿಂದ ಔಷಧಿ ಟೆಂಡರ್‌ಗಳ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಂ.ಎಸ್.ಸಿ.ಎಲ್., ಬೆಂಗಳೂರು.
DIPR/Urban/RO2012/21-22
ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತ ರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.2, ಹೂವಿನಹಡಗಲಿ, ವಿಜಯನಗರ ಜಿಲ್ಲೆ.
Ph. No. 08399-240390 e-mail:eeslid2hdl@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
(ONLY THROUGH "*e-Procurement*" SYSTEM)
ಉಲ್ಲೇಖ: 1.ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 670/2021–22 ದಿನಾಂಕ: 22.10.2021. 2. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 671/2021–22 ದಿನಾಂಕ: 22.10.2021
ಸಿಂಗಟಾಲೂರು ಏತ ನೀರಾವರಿ ಯೋಜನೆ ವ್ಯಾಪ್ತಿಯಲ್ಲಿ ಬರುವ ಎಡಭಾಗದ 2ನೇ ಲಿಫ್ಟ್ ಮತ್ತು 3ನೇ ಲಿಫ್ಟ್‌ನ ವಾರ್ಷಿಕ ನಿರ್ವಹಣೆ ಕಾಮಗಾರಿಗಳನ್ನು ಹಾಗೂ ಬಲಭಾಗದಲ್ಲಿ ಬರುವ 10 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ವಾರ್ಷಿಕ ನಿರ್ವಹಣೆ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ 2701ರಂತೆ ಮೂರು ವಾರ್ಷಿಕ ನಿರ್ವಹಣಾ ಕಾಮಗಾರಿಗಳಿಗೆ ಉಲ್ಲೇಖ(1) ಮತ್ತು ಉಲ್ಲೇಖ(2)ರ ಅಲ್ಪಾವಧಿ ಟೆಂಡರ್ ಪ್ರಕಟಣೆಗಳಲ್ಲಿ ಸೂಚಿಸಿರುವಂತೆ, Super Grade Electrical Contractor with valid License issued by CEIG ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಗಳ ಟೆಂಡರ್‌ಗೆ ಇಟ್ಟ ಮೊತ್ತವು ಕ್ರಮವಾಗಿ ರೂ. 172.59 ಲಕ್ಷಗಳು, ರೂ. 165.79 ಲಕ್ಷಗಳು ಮತ್ತು ರೂ. 175.96 ಲಕ್ಷಗಳು ಇರುತ್ತದೆ. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 675 ವೆಚ್ಚ–12/2020 ದಿನಾಂಕ: 22.12.2020ರಂತೆ ಇ.ಎಂ.ಡಿ. ಮೊತ್ತ ಪಾವತಿಯಿಂದ ಷರತ್ತುಬದ್ಧ ವಿನಾಯಿತಿ ನೀಡಲಾಗಿರುತ್ತದೆ.ಇನ್ನುಳಿದಂತೆ, ಸದರಿ ಟೆಂಡರಿಗಳಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 29.10.2021ರ ನಂತರ "***eproc.karnataka.gov.in***", ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯುಮೆಂಟಗಳನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: 15.11.2021 ಎಂದು ಮತ್ತು ಟೆಂಡರ್‌ಗಳ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 16.11.2021 ಎಂದು ನಿಗದಿಪಡಿಸಲಾಗಿದೆ. ಅದರಂತೆ, ಸದರಿ ಟೆಂಡರಗಳ ಕುರಿತು **Pre-bid** ಸಭೆಯನ್ನು ದಿನಾಂಕ: 08.11.2021 ರಂದು ವಿಭಾಗ–2 ಕಛೇರಿ ಹೂವಿನಹಡಗಲಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **e-procurement Helpdesk Phone Numbers: +91–80–46010000, +91–80–68948777** ನಲ್ಲಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/–ಕಾರ್ಯಪಾಲಕ ಅಭಿಯಂತರರು, ಸಿಂಗಟಾಲೂರು ಏತ ನೀರಾವರಿ ಯೋಜನೆ, ನಂ. 2 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಹೂವಿನಹಡಗಲಿ.
ಡಿಐಪಿಆರ್/ಬಳ್ಳಾರಿ/463/ಎಂಸಿಎ/2021–22

ಭಾರತ ಸರ್ಕಾರ
ಅಪರ ನಿರ್ದೇಶಕರ ಕಚೇರಿ, ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ
3ನೇ ಮಹಡಿ, ಇ-ವಿಂಗ್, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು-34.
ಮೈಸೂರಿನಲ್ಲಿ ಹೊಸ ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್ ಪ್ರಾರಂಭಕ್ಕಾಗಿ ಮೈಸೂರು ನಗರದಲ್ಲಿನ ವಸತಿ/ವಾಣಿಜ್ಯ ಪ್ರದೇಶದಲ್ಲಿ ಸ್ಥಳಾವಕಾಶ ಬೇಕಾಗಿದೆ.
ಸಿಜಿಹೆಚ್‌ಎಸ್, ಬೆಂಗಳೂರು ಇವರು ಮೈಸೂರಿನಲ್ಲಿ ಹೊಸ ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್ ಪ್ರಾರಂಭಿಸಲು ಕೇಂದ್ರ ಸ್ಥಳದಲ್ಲಿ ಆದ್ಯನೀಯವಾಗಿ ನೆಲ ಮಹಡಿಯಲ್ಲಿ (ಅಥವಾ) 1ನೇ ಮಹಡಿಯಲ್ಲಿ ಸೂಕ್ತವಾದ ಸ್ಥಳಾವಕಾಶಕ್ಕಾಗಿ ಆಸಕ್ತಿಯುಳ್ಳ ವ್ಯಕ್ತಿಗಳಿಂದ ಆಫರುಗಳನ್ನು ಆಹ್ವಾನಿಸಿದ್ದಾರೆ. ಆಸಕ್ತಿಯುಳ್ಳ ವ್ಯಕ್ತಿಗಳು ಕಟ್ಟಡದ ನಕ್ಷೆಯ ಜೊತೆಗೆ ತಮ್ಮ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು **"ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಇ-ವಿಂಗ್, 3ನೇ ಮಹಡಿ, ಕೇಂದ್ರೀಯ ಸದನ್, ಕೋರಮಂಗಲ, ಬೆಂಗಳೂರು–560034"** ಇವರಿಗೆ ದಿನಾಂಕ **30.11.2021**ರ ವೇಳೆಗೆ ಮುನ್ನ ಸಲ್ಲಿಸತಕ್ಕದ್ದು. ಸ್ಥಳಾವಕಾಶಕ್ಕಾಗಿ ನೀಡಿರುವ ಈ ಜಾಹೀರಾತನ್ನು ಯಾವುದೇ ಸಮಯದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಹಕ್ಕನ್ನು ಸಿಜಿಹೆಚ್‌ಎಸ್ ಕಾಯ್ದಿರಿಸಿಕೊಂಡಿದೆ.
ಪೂರ್ಣ ವಿವರಗಳಿಗಾಗಿ ಸಿಜಿಹೆಚ್‌ಎಸ್ ವೆಬ್‌ಸೈಟ್ **cghs.nic.in** ನೋಡಿ
ಸಹಿ/- ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಬೆಂಗಳೂರು.

ಕರ್ನಾಟಕ ಸರ್ಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ.
ಚಾಮರಾಜಪೇಟೆ ಸರ್ಕಲ್, ದಾವಣಗೆರೆ–577001
ಇ–ಮೇಲ್: wchdvg.84@gmail.com ದೂ. ಸಂಖ್ಯೆ: 08192 258784
ಸಂ: ಮಮಆ/ಪಥ್ಯಾಹಾರ/ಅ.ಟೆಂಡರ್/28/2021–21 ದಿನಾಂಕ: 26.10.2021
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆಗೆ 2021–22ನೇ ಸಾಲಿನ ಅವಧಿಗೆ ಆಹಾರ ಪದಾರ್ಥಗಳು, ಪ್ರಥಮ ದರ್ಜೆ ಬ್ರೆಡ್ ಸರಬರಾಜು ಮಾಡಲು ಎರಡು ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಚ್ಚೆಯುಳ್ಳ ಟೆಂಡರ್‌ದಾರರು, ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ***https://eproc.karnataka.gov.in*** ಜಾಲಾ ತಾಣದಲ್ಲಿ ಪಡೆಯಬಹುದು. ಇ–ಪ್ರೊಕ್ಯೂರ್‌ಮೆಂಟ್ ಸಹಾಯ ಕೇಂದ್ರ ದೂರವಾಣಿ ಸಂಖ್ಯೆ: 080–25501216 ಮತ್ತು 25501227 ಸಂಪರ್ಕಿಸಿ ಅಗತ್ಯ ಸಹಾಯವನ್ನು ಪಡೆಯಬಹುದು. ಟೆಂಡರ್ ದಾಖಲಾತಿಗಳನ್ನು ದಿನಾಂಕ: 26.10.2021 ರಿಂದ ದಿನಾಂಕ: 11.11.2021 ಅಪರಾಹ್ನ 4.30 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಇ–ಪ್ರೊಕ್ಯೂರ್‌ಮೆಂಟ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 11.11.2021 ಆಗಿರುತ್ತದೆ. ಮೊದಲನೆ ಲಕೋಟೆ ತೆರೆಯುವ ದಿನಾಂಕ: 15.11.2021ರ ಬೆಳಗ್ಗೆ 11.00ಕ್ಕೆ ನಿಗಧಿಯಾಗಿದ್ದು ಮತ್ತು ಎರಡನೇಯ ಲಕೋಟೆ ತೆರೆಯುವ ದಿನಾಂಕ: 23.11.2021ರ ಬೆಳಗ್ಗೆ 11.30ಕ್ಕೆ ಆಗಿರುತ್ತದೆ.
ವಾಸಾಇ/ದಾವಣಗೆರೆ/476/ಎಂಸಿಎ/2021–22 ಸಹಿ/– ವೈದ್ಯಕೀಯ ಅಧೀಕ್ಷಕರು,

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ3:ಇ.ಟೆಂಡರ್:09:2021–22 ದಿನಾಂಕ: 26–10–2021
ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2021–22 ನೇ ಸಾಲಿನ ಎಸ್ ಎಫ್ ಸಿ ಮುಕ್ತ ನಿಧಿಯ ಶೇಕಡ 24.10 ಅನುದಾನದಲ್ಲಿ – 01 ಸಂಖ್ಯೆಯ ಕಾಮಗಾರಿ, 2021–22 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯಲ್ಲಿ – 03 ಸಂಖ್ಯೆಯ ಕಾಮಗಾರಿಗಳು, 2020–21 ನೇ ಸಾಲಿನ 15ನೇ ಹಣಕಾಸು ಜನರಲ್ ಬೇಸಿಕ್ ಗ್ರಾಂಟ್ ಅಡಿಯಲ್ಲಿ – 03 ಸಂಖ್ಯೆಯ ಕಾಮಗಾರಿಗಳ ಮರು ಟೆಂಡರ್(2ನೇ ಕರೆ), 2019–20 ನೇ ಸಾಲಿನ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ – ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ – 04 ಸಂಖ್ಯೆಯ ಕಾಮಗಾರಿಗಳ ಮರು ಟೆಂಡರ್(2ನೇ ಹಾಗೂ 3ನೇ ಕರೆ), 2020–21 ನೇ ಸಾಲಿನ ಎಸ್.ಎಫ್.ಸಿ. ಕುಡಿಯುವ ನೀರಿನ ಅನುದಾನ – 02 ಸಂಖ್ಯೆಯ ಕಾಮಗಾರಿಗಳ ಮರು ಟೆಂಡರ್(4ನೇ ಕರೆ) ಹಾಗೂ 2021–22 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 07 ಸಂಖ್ಯೆಯ ಕಾಮಗಾರಿಗಳ ಮರು ಟೆಂಡರ್(2ನೇ ಹಾಗೂ 3ನೇ ಕರೆ) ಒಟ್ಟು 20 ಸಂಖ್ಯೆಯ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ರವರು ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 08192 234444 ರಿಂದ ಮಾಹಿತಿ ಪಡೆಯಬಹುದು. (1) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 12–11–2021 ಸಮಯ : 16.30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 12–11–2021 ಸಮಯ : 17.00 (3) ಟೆಂಡರ್ ತೆರೆಯುವ ದಿನಾಂಕ: 14–11–2021 ಸಮಯ : 11.00 ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿ ಗಳು ಇದ್ದಲ್ಲಿ ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.
ವಾಸಾಇ/ದಾವಣಗೆರೆ/467/ಎಂಸಿಎ/2021–22 ಸಹಿ/– ಆಯುಕ್ತರು

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಸರಕು ಖರೀದಿ ಅಧಿಕಾರಿಗಳ ಕಾರ್ಯಾಲಯ, ಕೃವಿವಿ, ರಾಯಚೂರು
ಮಿಂಚಂಚೆ: spo@uasraichur.edu.in ದೂರವಾಣಿ ಸಂಖ್ಯೆ: 08532 220165
ಇ–ಟೆಂಡರ್ ಪ್ರಕಟಣೆ ಸಂಖ್ಯೆ: SPO/UASR/E-Proc-09/2021-22 Dt: 23-10-2021
:: ಟೆಂಡರ ಪ್ರಕಟಣೆ ::
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ 2021 ಘಟಿಕೋತ್ಸವಕ್ಕೆ ಅಗತ್ಯವಿರುವ ಮಿನಿ ಪುಸ್ತಕಗಳು, ಆಮಂತ್ರಣ ಕಾರ್ಡ್‌ಗಳು, ಸಮಾರಂಭದ ಹಾಳೆ ಬುಕಲೆಟ್, ಅನುಶಾಸನ ಕಾರ್ಡ್, ಫೈಲ್ ಬೋರ್ಡ್‌ನ ಮುದ್ರಣ ಮತ್ತು ಸರಬರಾಜು, ಅಲ್ಪಾವಧಿ ಟೆಂಡರನ್ನು ಕರೆಯಲಾಗಿದ್ದು,
ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.eproc.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UAS/2021-22/IND3977) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ ಕಡೆ ದಿನಾಂಕ: **03–11–2021** ಆಗಿರುತ್ತದೆ.
ಸಹಿ/– ಸರಕು ಖರೀದಿ ಅಧಿಕಾರಿಗಳು, ಕೃವಿವಿ., ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/404/ಎಂ.ಸಿ.&ಎ/2021–22

ಆನ್‌ಲೈನ್ ಜೂಜು: ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಜೂಜು ನಿಯಂತ್ರಿಸುವ ಕರ್ನಾಟಕ ಪೊಲೀಸ್ ತಿದ್ದುಪಡಿ ಕಾಯ್ದೆ ಪ್ರಶ್ನಿಸಿದ್ದ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ನ.9ಕ್ಕೆ ಮುಂದೂಡಿದೆ.

ಕೆಲ ಆಟಗಳು ಮತ್ತು ಅರ್ಜಿದಾರರ ವಿರುದ್ಧ ಕ್ರಮ ಕೈಗೊಳ್ಳುವುದಿಲ್ಲ ಎಂದು ಅಡ್ವೊಕೇಟ್ ಜನರಲ್ ಭರವಸೆ ನೀಡಿದ ಬಳಿಕ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಪೀಠ ವಿಚಾರಣೆ ಮುಂದೂಡಿತು. 'ತಿದ್ದುಪಡಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಬಲವಂತದ ಕ್ರಮ ಕೈಗೊಳ್ಳದಂತೆ ಮಧ್ಯಂತರ ತಡೆ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದರು.

'ಮಧ್ಯಂತರ ತಡೆ ನೀಡಿದರೆ ಪೊಲೀಸರ ಕಾರ್ಯನಿರ್ವಹಣೆಗೆ ಯಾವುದೇ ತೊಂದರೆ ಆಗುವುದಿಲ್ಲ' ಎಂದು ಅರ್ಜಿದಾರರ ಪರ ವಕೀಲ ಅಭಿಷೇಕ್ ಮನುಸಿಂಘ್ವಿ ವಿವರಿಸಿದರು. 'ಆನ್‌ಲೈನ್ ರಮ್ಮಿ ಒಂದು ಪಾರದರ್ಶಕ ಆಟವಾಗಿದೆ. ಪ್ರತಿಯೊಂದು ಪ್ರಕ್ರಿಯೆಯೂ ಡಿಜಿಟಲ್‌ನಲ್ಲಿ ದಾಖಲಾಗುತ್ತದೆ. ಷರತ್ತುಗಳನ್ನು ಪೂರೈಸದಿದ್ದರೆ ಆಟವಾಡಲು ಅವಕಾಶವೇ ಸಿಗುವುದಿಲ್ಲ' ಎಂದು ಹೇಳಿದರು.

ಕರ್ನಾಟಕ ಪೊಲೀಸ್ ಕಾಯ್ದೆ –1963ಕ್ಕೆ ತಿದ್ದುಪಡಿ ತಂದಿರುವ ರಾಜ್ಯ ಸರ್ಕಾರ, ಹಣ ಕಳೆದುಕೊಳ್ಳಬಹುದಾದ ಆನ್‌ಲೈನ್ ಆಟಗಳನ್ನು ನಿಷೇಧಿಸಿದೆ. ಇದನ್ನು ಪ್ರಶ್ನಿಸಿ ಅಖಿಲ ಭಾರತ ಗೇಮಿಂಗ್ ಫೆಡರೇಷನ್ ಮತ್ತು ಇತರರು ಅರ್ಜಿ ಸಲ್ಲಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯುಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಸಂಜೆ 4: ಸಿನಿ ಮ್ಯಾಟಿನಿ
ನಾಳೆ
ಆರ್ಯನ್ ಖಾನ್ ಡ್ರಗ್ ಪ್ರಕರಣದ ರಹಸ್ಯವೇನು?
ಭಾಗವಹಿಸುವವರು:
ಎನ್.ಎಸ್.ಶಂಕರ್, ಸಿನಿಮಾ ನಿರ್ದೇಶಕ
ಡಿ.ವಿ.ಗುರುಪ್ರಸಾದ್, ನಿವೃತ್ತ ಡಿ.ಜಿ.ಪಿ.
ಎನ್. ರವಿಕುಮಾರ್, ವಿಧಾನ ಪರಿಷತ್ ಸದಸ್ಯ, ಬಿಜೆಪಿ
ಭವ್ಯ ನರಸಿಂಹಮೂರ್ತಿ, ಕೆಪಿಸಿಸಿ ವಕ್ತಾರರು
ಸಂವಾದ ಸಂಜೆ 5 ರಿಂದ 6

ಕೆಆರ್‌ಎಸ್ ಜಲಾಶಯ ಬಹುತೇಕ ಭರ್ತಿ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೆಆರ್‌ಎಸ್ ಜಲಾಶಯ ಬಹುತೇಕ ಭರ್ತಿಯಾಗಿದ್ದು, ಗರಿಷ್ಠ ಮಟ್ಟ (124.80 ಅಡಿ) ತಲುಪಲು ಕೇವಲ 0.12 ಅಡಿಯಷ್ಟೇ ಬಾಕಿ ಉಳಿದಿದೆ.

ಗುರುವಾರ ಸಂಜೆ ವೇಳೆಗೆ ಜಲಾಶಯದ ಮಟ್ಟ 124.68 ಅಡಿ ದಾಖಲಾಗಿತ್ತು. 9,734 ಕ್ಯುಸೆಕ್ ಒಳಹರಿವು, 3,665 ಕ್ಯುಸೆಕ್ ಹೊರಹರಿವು ದಾಖಲಾಗಿತ್ತು.

'ಗರಿಷ್ಠ ಮಟ್ಟ ತಲುಪಿದ ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಲಾಶಯಕ್ಕೆ ಬಾಗಿನ ಅರ್ಪಿಸಲಿದ್ದು, ಶೀಘ್ರ ದಿನಾಂಕ ನಿಗದಿಗೊಳಿಸಲಾಗುವುದು' ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.68	9,734	3,665
ಹಾರಂಗಿ	2,859	2,858.15	852	1,333
ಕಬಿನಿ	2,284	2,283.40	1,500	2,000
ಹೇಮಾವತಿ	2,922	2,910.45	2,308	3,681
ಲಿಂಗನಮಕ್ಕಿ	1,819	1,815.05	1,545	-
ಸೂಪಾ (ಮೀ)	564	556.32	1,041	1,483
ಮಾಣಿ	594.36	587.06	94	-
ತುಂಗಭದ್ರಾ	1,633	1,632.98	22,270	21,910
ಮಲಪ್ರಭಾ	2,079.50	2,078.70	-	994
ಘಟಪ್ರಭಾ	2,175	2,173.75	-	2,875
ಭದ್ರಾ	186	186	3,507	3,507
ಆಲಮಟ್ಟಿ (ಮೀ)	519.60	519.34	-	11,736
ನಾರಾಯಣಪುರ (ಮೀ)	492.25	491.64	9,500	11,450

* ನೆಲಮಟ್ಟದಿಂದ

ಬಿನೀಶ್‌ಗೆ ಹೈಕೋರ್ಟ್ ಜಾಮೀನು

ಬೆಂಗಳೂರು: ಮಾದಕವಸ್ತು ಜಾಲದಲ್ಲಿ ಅಕ್ರಮ ಹಣ ವರ್ಗಾವಣೆ ಪ್ರಕರಣದ ಆರೋಪಿ ಕೇರಳ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಪುತ್ರ ಬಿನೀಶ್ ಕೊಡಿಯೇರಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಪೀಠ, ಷರತ್ತು ಬದ್ಧ ಜಾಮೀನು ಮಂಜೂರು ಮಾಡಿತು. 2020ರ ಅ.29ರಂದು ಬಿನೀಶ್‌ನನ್ನು ಜಾರಿ ನಿರ್ದೇಶನಾಲಯ(ಇ.ಡಿ) ಬಂಧಿಸಿತ್ತು.

ಬಸ್ ಕಮರಿಗೆ ಬಿದ್ದು 11 ಮಂದಿ ಸಾವು

ಭದರ್ವಾ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯ ಬಟೋಟೆ-ಕಿಶ್ತ್ವಾರ್ ಹೆದ್ದಾರಿಯಲ್ಲಿ ಗುರುವಾರ ಮುಂಜಾನೆ ಮಿನಿ ಬಸ್ ಕಮರಿಗೆ ಉರುಳಿ ಬಿದ್ದು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ 11 ಜನರು ಸಾವನ್ನಪ್ಪಿದ್ದು, 14 ಮಂದಿ ಗಾಯಗೊಂಡಿದ್ದಾರೆ.

ಥಾತ್ರಿಯಿಂದ ದೋಡಾಗೆ ತೆರಳುತ್ತಿದ್ದ ಮಿನಿ ಬಸ್, ಸೋಯಿ-ಗ್ವಾರಿ ಬಳಿ ಚೆನಾಬ್ ನದಿಯ ದಡದಲ್ಲಿ ರಸ್ತೆಯಿಂದ ಸ್ಕಿಡ್ ಆಗಿ ಆಳ ಕಮರಿಗೆ ಕೆಳಮುಖವಾಗಿ ಬಿದ್ದಿದೆ. ಇನ್ನೆರಡು ಶವಗಳನ್ನು ಗುರುತಿಸಬೇಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪ್ಪನಷ್ಟು ರೊಮ್ಯಾನ್ಸ್ ಮಾಡಲ್ಲ...

ಶರತ್ ಹೆಗ್ಡೆ

ಕ್ರಿಕೆಟ್ ಆಡುತ್ತಾ ಹಾಯಾಗಿರಬೇಕು ಎಂದುಕೊಂಡಿದ್ದವರು ಕ್ರೇಜಿಸ್ಟಾರ್ ರವಿಚಂದ್ರನ್ ಪುತ್ರ ಮನು ರವಿಚಂದ್ರನ್. ಈಗ ತಂದೆಯ ಪರಂಪರೆಯನ್ನೇ ಮುಂದುವರಿಸಲು ಮನಸ್ಸು ಮಾಡಿದ್ದಾರೆ. 'ಮುಗಿಲ್ ಪೇಟೆ' ಮೂಲಕ ಮತ್ತೆ ತೆರೆಗೆ ಬರುತ್ತಿದ್ದಾರೆ. 'ಸಿನಿಮಾ ಪುರವಣಿ'ಯೊಂದಿಗೆ ಅವರ ಮಾತುಕತೆ ಹೀಗಿತ್ತು...

• ಸಿನಿಮಾ ಪ್ರವೇಶ ಹೇಗಾಯಿತು?

ನಾನು ನಟನಾಗಬೇಕು ಅಂತ ಯೋಚಿಸಿದವನೇ ಅಲ್ಲ. ಕ್ರಿಕೆಟ್ ಆಟಗಾರ ಆಗಬೇಕು ಎಂದು ಯೋಚಿಸುತ್ತಾ ಹಾಗೇ ಆಡುತ್ತಾ ಬೆಳೆದವನು. ನನಗೆ ಮಂದಹಾಸ ಬೀರಲೂ ತುಂಬಾ ಮುಜುಗರ ಇತ್ತು. ಆದರೆ ಪಿಯುಸಿ ಮುಗಿದ ಬಳಿಕ ನಟನೆ ನನ್ನ ಬದುಕಾಗಬೇಕು ಎಂದು ನಿರ್ಧಾರ ಮಾಡಿದೆ. ಅದಕ್ಕಾಗಿ ಚೆನ್ನೈಗೆ ಹೋಗಿ ನಟನೆ ಕಲಿತೆ. ಡ್ಯಾನ್ಸ್, ಫೈಟ್ ಎಲ್ಲವನ್ನೂ ಕಲಿತು ಸರಿಯಾದ ತರಬೇತಿಯ ಬಳಿಕ ಈ ಕ್ಷೇತ್ರ ಪ್ರವೇಶಿಸಿದೆ. ಬೆಂಗಳೂರಿನಲ್ಲಿ ಅಭಿನಯ ತರಂಗ ಸಂಸ್ಥೆಯಲ್ಲಿ ಒಂದು ವರ್ಷ ರಂಗಭೂಮಿಯ ತರಬೇತಿ ಸಿಕ್ಕಿತು. ಸಾಕಷ್ಟು ಬೀದಿ ನಾಟಕ, ಸ್ಟೇಜ್ ಷೋಗಳನ್ನು ಮಾಡಿ ಆಳವಾದ ತರಬೇತಿಯ ಬಳಿಕ ಸಿನಿಮಾ ಪ್ರವೇಶ ಪಡೆದೆ.

• 'ಹಳ್ಳಿ ಮೇಷ್ಟ್ರ' ಮಗನ ರೊಮ್ಯಾನ್ಸ್ ಪಾಠ ಹೇಗಿದೆ?

ಅವರಷ್ಟು (ತಂದೆ ರವಿಚಂದ್ರನ್ ಅವರಷ್ಟು) ರೊಮ್ಯಾನ್ಸ್ ಮಾಡುವುದಿಲ್ಲ. ಆದರೆ, ಪಾತ್ರ ಏನನ್ನು ಬಯಸುತ್ತದೋ ಅದನ್ನು ಮಾಡುತ್ತೇನೆ. ಆಯಾ ಸನ್ನಿವೇಶಕ್ಕೆ ತಕ್ಕಂತೆ ಅಭಿನಯಿಸಬೇಕು. ಮೇಲಿಂದ ಬೀಳು ಅಂದ್ರೂ ಸರಿ. ಬೀಳುತ್ತೇನೆ.

• 'ಮುಗಿಲ್‌ಪೇಟೆ'ಗೆ ತಯಾರಿ ಹೇಗಿತ್ತು?

ಮುಗಿಲ್‌ಪೇಟೆ ಮೊದಲ ಹಂತದ 50 ದಿನಗಳ ಚಿತ್ರೀಕರಣದ ನಂತರ ಲಾಕ್‌ಡೌನ್ ಆಯಿತು. ಹಾಗಾಗಿ ನಮಗೆ ಈ ಸಿನಿಮಾದ ಸುಧಾರಣೆಗೆ ಸಾಕಷ್ಟು ಸಮಯ ಸಿಕ್ಕಿತು. ಲಾಕ್‌ಡೌನ್ ಅವಧಿಯಲ್ಲೆಲ್ಲಾ ಚಿತ್ರೀಕರಣದ ವಿಡಿಯೊಗಳನ್ನು ನೋಡುತ್ತಲೇ ಸಾಕಷ್ಟು ಸುಧಾರಣೆಯ ಅಂಶಗಳನ್ನು ಹಾಕಿಕೊಂಡೆವು. ಇದೆಲ್ಲಾ ಆದ ಮೇಲೆ ಎರಡನೇ ಹಂತದ ಚಿತ್ರೀಕರಣಕ್ಕೆ ಹೋದೆವು. ಸರಿಯಾಗಿ ಯೋಜನೆ ಹಾಕಿಕೊಂಡೇ ಇಲ್ಲಿ ಕೆಲಸ ಮಾಡಿದ್ದೇವೆ.

• ಏನಿದು 'ಮುಗಿಲ್‌ಪೇಟೆ'?

ಚಿತ್ರದ ಕಥೆ ಆರಂಭ ಹಾಗೂ ಅಂತ್ಯ ಆಗುವುದು ಮುಗಿಲ್‌ಪೇಟೆಯಲ್ಲೇ. ಇದರಲ್ಲೇ ಎಲ್ಲ ಭಾವಗಳೂ ಇವೆ. ಲೊಕೇಷನ್, ಕಥೆ, ಪ್ರೇಮ, ರೊಮ್ಯಾನ್ಸ್, ಹಾಸ್ಯ, ನೋವು ಎಲ್ಲವೂ ಇದೆ. ಕುಟುಂಬ ಸಮೇತ ಎಲ್ಲರೂ ನೋಡಬಹುದಾದ ಚಿತ್ರ.

• ಪರಿಪೂರ್ಣತೆಯತ್ತ ಸಾಗುವಲ್ಲಿ ತಂದೆ ರವಿಚಂದ್ರನ್ ಅವರ ಪಾತ್ರವೇನು?

ಆತ್ಮವಿಶ್ವಾಸ ಇದ್ದರೆ ಮಾತ್ರ ಬಾ ಎನ್ನುತ್ತಿದ್ದರು. ಹಾಗಾಗಿ ನಾನು ಹೆಚ್ಚು ತರಬೇತಿ ಪಡೆದೆ. ಸಣ್ಣ ಅಭಿನಯದಲ್ಲೇ ನನ್ನ ಆತ್ಮವಿಶ್ವಾಸ ಅಳೆಯುತ್ತಿದ್ದರು. ಪ್ರತಿಯೊಂದೂ ಸಮರ್ಪಕ ಅನಿಸಿದ ಬಳಿಕವೇ 'ಸಾಹೇಬ'ದಲ್ಲಿ ಅಭಿನಯಿಸಲು ಸಮ್ಮತಿಸಿದರು. ಆ ಬಳಿಕ 'ಬೃಹಸ್ಪತಿ', 'ಪ್ರಾರಂಭ' ಕೂಡಾ ಆಗಿದೆ. ಈಗ 'ಮುಗಿಲ್‌ಪೇಟೆ'ಯತ್ತ ಗಮನ ಹರಿಸಿದ್ದೇನೆ.

ಮನು ರವಿಚಂದ್ರನ್

• 'ಮುಗಿಲ್‌ಪೇಟೆ'ಯಲ್ಲಿ ನಿಮ್ಮ ಮತ್ತು ರಂಗಾಯಣ ರಘು ಅವರ ದೀರ್ಘ ಪ್ರಯಾಣ ಇದೆಯಲ್ಲಾ?

ಹೌದು. ಈ ಕಥೆ ಶುರುವಾಗುವುದೇ ನನ್ನ ಮತ್ತು ರಂಗಾಯಣ ರಘು ಅವರ ಪ್ರಯಾಣದಿಂದ. ಮುಗಿಲ್‌ಪೇಟೆಯಿಂದ, ಸಕಲೇಶಪುರ, ತೀರ್ಥಹಳ್ಳಿ, ಕುಂದಾಪುರ ಹೀಗೆ ಎಲ್ಲ ಕಡೆ ಹೋಗುತ್ತೇವೆ. ಕಥೆಯ ಕೊನೆಯಲ್ಲಿ ರಘು ಮತ್ತು ನನ್ನ ಪಾತ್ರಗಳು ತಂದೆ ಮಗನ ಬಾಂಧವ್ಯದವರೆಗೆ ತಿರುಗುತ್ತದೆ. ಹೀಗೆ ತುಂಬಾ ಗಾಢವಾದ ಭಾವ ಇದರಲ್ಲಿದೆ.

• 'ಮುಗಿಲ್‌ಪೇಟೆ'ಯ ಪ್ರಚಾರದ ದೃಶ್ಯದಲ್ಲಿ ಪ್ರೇಮಲೋಕ ಚಿತ್ರದ ಯಥಾವತ್ ದೃಶ್ಯವೊಂದು ಬಂದಿದೆಯಲ್ಲಾ?

ಚಿತ್ರದಲ್ಲಿ ನಾಯಕ – ನಾಯಕಿಗೆ ಒಂದು ಪಂಚ್ ಇರುವ ದೃಶ್ಯ ಬೇಕು ಅಂದಾಗ 'ಪ್ರೇಮಲೋಕ'ದ ಪ್ರಾಸ (ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ದೃಶ್ಯ) ತರೋಣ ಎಂದು ನಮ್ಮ ನಿರ್ದೇಶಕರು ಹೇಳಿದರು. ನಾನು ಹಳೆಯ ಚಿತ್ರಗಳ ದೃಶ್ಯಗಳ ಮರುಸೃಷ್ಟಿ ಮಾಡುವುದನ್ನು ಒಪ್ಪುವುದಿಲ್ಲ. ಆದರೆ ಇಲ್ಲಿ ಎಲ್ಲರೂ ಒತ್ತಾಯಿಸಿದರು. ಹಾಗಾಗಿ 1987ರ 'ಪ್ರೇಮಲೋಕ'ವನ್ನು ನೆನಪಿಸೋಣ ಎಂದು ಪ್ರಯತ್ನಿಸಿದೆವು. ಈಗ ಜನರ ಪ್ರತಿಕ್ರಿಯೆ ಒಂದಕ್ಕಿಂತ ಒಂದು ಬೇರೆಬೇರೆಯಾಗಿ ಬರುತ್ತಿವೆ. ಹಾಗಾಗಿ ಈ ದೃಶ್ಯವನ್ನು ಚಿತ್ರದಲ್ಲಿ ಬಳಸಬೇಕೇ ಬೇಡವೇ ಎಂಬುದನ್ನು ಇನ್ನು ನಿರ್ಧರಿಸಬೇಕಿದೆ.

• ಕಯಾದು ಲೋಹರ್ ಅವರನ್ನು ನಾಯಕಿಯಾಗಿಸಿದ ಗುಟ್ಟು ಏನು?

ನಮಗೆ ಇಲ್ಲಿನ ನಾಯಕಿಯರ ದಿನಾಂಕಗಳು ಸಿಗಲಿಲ್ಲ. ನಮಗೆ ದೀರ್ಘಾವಧಿಗೆ ಅವರ ಪಾಲ್ಗೊಳ್ಳುವಿಕೆ ಬೇಕಿತ್ತು. ಹಾಗಾಗಿ ನಾವು ಕಯಾದು ಅವರನ್ನು ಇಲ್ಲಿ ತೊಡಗಿಸಿಕೊಳ್ಳಬೇಕಾಯಿತು. ಕೊನೆಯಲ್ಲಿ ಆಯ್ಕೆಯಾದ ಹೊಸ ಪ್ರತಿಭೆ ಕಯಾದು. ಅವರೂ ಚೆನ್ನಾಗಿ ಹೊಂದಿಕೊಂಡಿದ್ದಾರೆ.

• ನಿರ್ದೇಶನದ ಕನಸು ಏನಾದರೂ?

ಖಂಡಿತಾ ಇಲ್ಲ. ನಿರ್ದೇಶನ ಏನಿದ್ದರೂ ತಂದೆಯವರು ಮತ್ತು ನನ್ನ ತಮ್ಮನದ್ದು. ನಾನು ನಟನಾಗಿಯೇ ಮುಂದುವರಿಯುವ ಆಸೆ ಇದೆ. ಕಥೆಗಳನ್ನು ಕೇಳುತ್ತಿದ್ದೇನೆ. ಅಪ್ಪನಿಗೂ ತುಂಬಾ ಖುಷಿಯಾಗಿದೆ. ಟೀಸರ್, ಹಾಡುಗಳನ್ನು ಇಷ್ಟಪಟ್ಟಿದ್ದಾರೆ. ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ನೋಡೋಣ. ಇನ್ನೂ ಕೆಲವು ದಿನಗಳಿವೆಯಲ್ಲಾ.

ಶಿವರಾಜ್‌ಕುಮಾರ್

ಇಂದು ತೆರೆಗೆ

ಬಂದ ಭಜರಂಗಿ 2

ವೈದ್ಯೋ ನಾರಾಯಣೋ ಹರಿಃ ಎಂಬ ಪರಿಕಲ್ಪನೆಯಿಟ್ಟುಕೊಂಡು ತೆರೆಗೆ ಬಂದಿದೆ 'ಭಜರಂಗಿ 2'. ನಟ ಶಿವರಾಜ್ ಕುಮಾರ್ – ಭಾವನಾ ಮೆನನ್ ಅಭಿನಯದಲ್ಲಿ ಮೂಡಿಬಂದ ಚಿತ್ರವಿದು. ಹಳೆ ಕಾಲದ ಫ್ಯಾಂಟಸಿ ಕಥೆ, ಆಧುನಿಕ ಕಾಲದ ಸನ್ನಿವೇಶ ಎಲ್ಲದರ ಸಮ್ಮಿಶ್ರಣ ಚಿತ್ರದಲ್ಲಿದೆ ಎಂದಿದೆ ಚಿತ್ರತಂಡ.

ನಟಿ ಶ್ರುತಿ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಜಯಣ್ಣ ಕಂಬೈನ್ಸ್ ಲಾಂಛನದಲ್ಲಿ ಜಯಣ್ಣ ಹಾಗೂ ಭೋಗೇಂದ್ರ ನಿರ್ಮಿಸಿರುವ ಈ ಚಿತ್ರವನ್ನು ಎ.ಹರ್ಷ ನಿರ್ದೇಶಿಸಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಸ್ವಾಮಿ ಜೆ. ಗೌಡ ಛಾಯಾಗ್ರಹಣ, ದೀಪು ಎಸ್.ಕುಮಾರ್ ಸಂಕಲನ, ರವಿವರ್ಮ, ವಿಕ್ರಂ ಸಾಹಸ ನಿರ್ದೇಶನ, ರವಿ ಸಂತೆಹಕ್ಲು ಕಲಾ ನಿರ್ದೇಶನ ಹಾಗೂ ಯೋಗಿ ಜಿ. ರಾಜ್ ಅವರ ಕಲಾ ನಿರ್ದೇಶನವಿರುವ ಈ ಚಿತ್ರಕ್ಕೆ ರಘು ನಿಡವಳ್ಳಿ ಸಂಭಾಷಣೆ ಬರೆದಿದ್ದಾರೆ.

ಕುರಿ ಪ್ರತಾಪ್, ಶಿವರಾಜ್ ಕೆ.ಆರ್.ಪೇಟೆ, ಭಜರಂಗಿ ಲೋಕಿ (ಸೌರವ್ ಲೋಕೇಶ್), ಚೆಲುವರಾಜು, ಶಿವಮಣಿ, ಬಾಬು ಹಿರಣ್ಣಯ್ಯ, ವಿಜಯಲಕ್ಷ್ಮಿ ಪಂಡಿತ್, ಪ್ರಸನ್ನ, ಗಿರೀಶ್, ಎಂ.ಕೆ. ಮಠ ತಾರಾಬಳಗದಲ್ಲಿದ್ದಾರೆ.

'ತಾಯಿ ಕಸ್ತೂರ್ ಗಾಂಧಿ' ಮುಗಿದ ಚಿತ್ರೀಕರಣ

ಕಸ್ತೂರ್‌ಬಾ ಗಾಂಧಿಯವರ ಜೀವನದ ಮುಖ್ಯ ಘಟನೆಗಳನ್ನು ಆಧರಿಸಿದ ಚಲನಚಿತ್ರ 'ತಾಯಿ ಕಸ್ತೂರ್‌ಗಾಂಧಿ'ಯ ಚಿತ್ರೀಕರಣ ಇತ್ತೀಚೆಗೆ ಮುಗಿದಿದೆ.

ಪ್ರೊ.ಬರಗೂರು ರಾಮಚಂದ್ರಪ್ಪ ನಿರ್ದೇಶನದಲ್ಲಿ ಜನಮಿತ್ರ ಮೂವೀಸ್ ಬ್ಯಾನರ್ ಅಡಿ ಗೀತಾ ಅವರು ಈ ಚಿತ್ರ ನಿರ್ಮಿಸಿದ್ದಾರೆ. ಬರಗೂರು ಅವರೇ ಬರೆದ, 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾದ 'ಕಸ್ತೂರ್‌ಬಾ ವರ್ಸಸ್ ಗಾಂಧಿ' ಕಾದಂಬರಿಯನ್ನು ಆಧರಿಸಿ ಈ ಚಿತ್ರ ನಿರ್ಮಾಣವಾಗಿದೆ. ಕಸ್ತೂರ್‌ಬಾ ಪಾತ್ರದಲ್ಲಿ ಖ್ಯಾತ ನಟಿ ಹರಿಪ್ರಿಯಾ ಹಾಗೂ ಗಾಂಧಿ ಪಾತ್ರದಲ್ಲಿ ಬಹುಭಾಷಾ ನಟ ಕಿಶೋರ್ ಅಭಿನಯಿಸಿದ್ದಾರೆ.

'ವರ್ಸಸ್ ಎಂದರೆ ಕೇವಲ ವಿರೋಧ ಎಂದು ತಿಳಿಯಬೇಕಿಲ್ಲ. ಬದುಕಿನ ವಿವಿಧ ಘಟ್ಟಗಳಲ್ಲಿ ಎದುರಾದ ವಿಭಿನ್ನ ನೋಟಗಳ ಮತ್ತು ನಂಬಿಕೆಗಳ ರಚನಾತ್ಮಕ ಮುಖಾಮುಖಿಯಾಗಿ ಗಾಂಧಿ ಮತ್ತು ಕಸ್ತೂರ್‌ಬಾ ಅವರ ವ್ಯಕ್ತಿತ್ವವನ್ನು ವಿಶ್ಲೇಷಿಸುವುದು ಸಿನಿಮಾದ ಮುಖ್ಯ ಆಶಯವಾಗಿದೆ' ಎನ್ನುತ್ತಾರೆ ಪ್ರೊ. ಬರಗೂರು.

ಕಸ್ತೂರ್‌ಬಾ ತಾಯಿಯಾಗಿ ಮತ್ತು ಪತ್ನಿಯಾಗಿ ಎದುರಿಸಿದ ಬಿಕ್ಕಟ್ಟಗಳು, ಅಪರೂಪದ ದಾಂಪತ್ಯ ಮತ್ತು ಸಾಮಾಜಿಕ ಕಾಳಜಿಗಳು ಸಿನಿಮಾದ ಮುಖ್ಯ ಕಥಾವಸ್ತುಗಳಾಗಿವೆ ಎಂದು ಅವರು ಮಾಹಿತಿ ನೀಡುತ್ತಾರೆ.

ಬೆಂಗಳೂರಿನ ಅಭಿಮಾನ್ ಸ್ಟುಡಿಯೊದಲ್ಲಿ ಸಬರಮತಿ ಆಶ್ರಮದ ಸೆಟ್ ಹಾಗೂ ಕುಂಬಳಗೋಡು ಬಳಿಯ ಮುನಿಕುಮಾರ್ ಅವರ ಆಶ್ರಮಧಾಮದಲ್ಲಿ ಮಹಾರಾಷ್ಟ್ರದ ವಾರ್ಧಾದ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗಿತ್ತು.

ಹಿರಿಯ ನಟ ಶ್ರೀನಾಥ್, ಸುಂದರರಾಜ್, ಪ್ರಮೀಳಾ ಜೋಷಾಯ್, ರೇಖಾ, ವೆಂಕಟರಾಜ್, ಸುಂದರರಾಜ್ ಅರಸು, ರಾಘವ್, ಆಕಾಂಕ್ಷಾ ಬರಗೂರು, ಸ್ಪಂದನ ಸುಭಾಷ್ ತಾರಾಗಣದಲ್ಲಿದ್ದಾರೆ. ಶಮಿತಾ ಮಲ್ನಾಡ್ ಅವರ ಸಂಗೀತ ಈ ಚಿತ್ರಕ್ಕಿದೆ.

ಹರಿಪ್ರಿಯಾ

ಸಿನಿ ಸಂಕ್ಷಿಪ್ತ

'ಪಿಂಗಾರ' ಅತ್ಯುತ್ತಮ ತುಳು ಚಿತ್ರ

2019ನೇ ಸಾಲಿನ 67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ ನವದೆಹಲಿಯಲ್ಲಿ ನಡೆದಿದ್ದು, ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಇರದ ಭಾಷೆಗಳ ಚಲನಚಿತ್ರ ವಿಭಾಗದಲ್ಲಿ 'ಪಿಂಗಾರ' ಚಿತ್ರವು ಅತ್ಯುತ್ತಮ ತುಳು ಚಲನಚಿತ್ರ ಪ್ರಶಸ್ತಿ ಪಡೆದಿದೆ.

ಚಿತ್ರದ ನಿರ್ಮಾಪಕ ಅವಿನಾಶ್ ಯು. ಶೆಟ್ಟಿ ಹಾಗೂ ನಿರ್ದೇಶಕ ಪ್ರೀತಮ್ ಶೆಟ್ಟಿ ಅವರು ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರಿಂದ ಪ್ರಶಸ್ತಿ ಸ್ವೀಕರಿಸಿದರು. 'ಕರಾವಳಿ ಭಾಗದಲ್ಲಿ ದೈವಾರಾಧನೆ ಸಂಸ್ಕೃತಿ ಹೆಚ್ಚಾಗಿದೆ. ದೈವವನ್ನು ತಮ್ಮ ಮೇಲೆ ಆವರಿಸಿಕೊಳ್ಳುವ ಸಾಮರ್ಥ್ಯವುಳ್ಳವರು ದಲಿತ ಜಾತಿಯವರೇ ಆದರೂ, ಅವರನ್ನು ಕ್ಷಣಿಕವಾಗಿ ದೇವರೆಂದೇ ಪರಿಗಣಿಸಲಾಗುತ್ತದೆ. 'ಪಿಂಗಾರ' ಚಿತ್ರದ ಕಥೆಯನ್ನು ಈ ಅಪರೂಪದ ಸಂಸ್ಕೃತಿಯ ಸುತ್ತ ಹೆಣೆಯಲಾಗಿದೆ' ಎಂದಿದೆ ಚಿತ್ರತಂಡ.

ತುಳು ಚಿತ್ರರಂಗ ಹಾಗೂ ರಂಗಭೂಮಿಯ ಖ್ಯಾತ ಕಲಾವಿದರಾದ ನೀಮಾರೇ, ಶರಣ್ ಶೆಟ್ಟಿ, ಉಷಾ ಭಂಡಾರಿ, ಗುರು ಹೆಗ್ಡೆ, ಸಿಂಚನ ಚಂದ್ರಮೋಹನ್, ಸುನಿಲ್ ನೆಲ್ಲಿಗುಡ್ಡೆ ಹಾಗೂ ಪ್ರಶಾಂತ್ ಸಿ.ಕೆ. ಚಿತ್ರದಲ್ಲಿ ಅಭಿನಯಿಸಿದ್ದಾರೆ. ಪ್ರೀತಮ್ ಶೆಟ್ಟಿ ಅವರೇ ಈ ಚಿತ್ರಕ್ಕೆ ಕಥೆ ಹಾಗೂ ಚಿತ್ರಕಥೆ ಬರೆದಿದ್ದಾರೆ. ಶಶಿರಾಜ್ ರಾವ್ ಕಾವೂರ್ ಅವರು ಚಿತ್ರಕ್ಕೆ ಸಂಭಾಷಣೆ ಬರೆದಿದ್ದು, ವಿ.ಪವನ್ ಕುಮಾರ್ ಛಾಯಾಗ್ರಹಣ ಈ ಚಿತ್ರಕ್ಕಿದೆ.



ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಭಾವಪೂರ್ಣ ಶ್ರದ್ಧಾಂಜಲಿ

ನಿಧನ: 21-10-21
ಕ್ಯಾಪ್ಟನ್ ಜಿ. ರಮಾನಂದ ರೆಡ್ಡಿ
ಮಾಜಿ ಕಾರ್ಯದರ್ಶಿಗಳು
ಕರ್ನಾಟಕ ರೆಡ್ಡಿಜನ ಸಂಘ
ಇವರಿಂದ: ಪದಾಧಿಕಾರಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರುಗಳು, ನಂ. 1, ಮಹಾಯೋಗಿ ವೇಮನ ರಸ್ತೆ, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-34.

LOOKING FOR JOB OPPORTUNITY
Refer Classifieds on Wednesday

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,210
ಇಂದಿನ ಅಂತ್ಯ	17,857
▼	353
ದಿನದ ಗರಿಷ್ಠ	18,190

ವಿನಿಮಯ ದರ

$ ಡಾಲರ್	74.92
£ ಪೌಂಡ್	102.88
€ ಯುರೊ	86.88
¥ ಯೆನ್ (100ಕ್ಕೆ)	65.99

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹435
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹442

ರಿಯಾಯಿತಿ ದರದಲ್ಲಿ ಅಲರ್ಜಿ ಪತ್ತೆ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬಗೆಯ ಅಲರ್ಜಿಗಳ ಬಗ್ಗೆ ಪರೀಕ್ಷೆ ನಡೆಸುವ 'ಅಂಜನ್ ಪಾಥ್ ಲ್ಯಾಬ್ಸ್' ಶುಕ್ರವಾರದಿಂದ ಸೋಮವಾರದವರೆಗೆ ರಾಜ್ಯದ ವಿವಿಧೆಡೆ ಅಲರ್ಜಿ ಪತ್ತೆ ಪರೀಕ್ಷೆಗಳನ್ನು ರಿಯಾಯಿತಿ ದರದಲ್ಲಿ ನಡೆಸಲಿದೆ.

ಶೇಕಡ 50ಕ್ಕಿಂತ ಹೆಚ್ಚಿನ ಪ್ರಮಾಣದ ರಿಯಾಯಿತಿ ಇರಲಿದೆ. ಅಲರ್ಜಿಗಳಿಗೆ ಸಂಬಂಧಿಸಿದ ಸಂಪೂರ್ಣ ಪರೀಕ್ಷೆಯ ಜೊತೆಯಲ್ಲಿ ವಿಟಾಮಿನ್ ಡಿ ಹಾಗೂ ವಿಟಾಮಿನ್ ಬಿ12 ಮಾತ್ರೆಗಳನ್ನು ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಪರೀಕ್ಷಾ ಕೇಂದ್ರಗಳು ಹಾಗೂ ಇತರ ಮಾಹಿತಿಗೆ 90032-22841, 90032-22541 ಸಂಖ್ಯೆಗೆ ಕರೆ ಮಾಡಬಹುದು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ;
ಕೂಳೆ 600- 650
ನಡುಗೋಲು 700-750
ರಾಶಿ 800-850
ರಾಶಿ ಉತ್ತಮ 900-950
ಜರಡಿ 1000 -1050
ಹರಕಿದ್ದು 1200-1300
ಹಸಿರು ಸಾಧಾರಣ 800-850
ಹಸಿರು ಉತ್ತಮ 1000-1050
ಹಸಿರು ಅತಿ ಉತ್ತಮ 1300-1400
ಕಾಳು ಮೆಣಸು - 470
ಅಡಿಕೆ
ಬಂಟ್ವಾಳ
ಕೋಕ 10000-25000
ಹೊಸತು 25000-50000
ಹಳತು 46000-51500
ಚನ್ನಗಿರಿ
ರಾಶಿ 45599-47369
ಚಿತ್ರದುರ್ಗ
ಆಪಿ 46419-46829
ಬೆಟ್ಟೆ 39810-40279
ಕೆಂಪುಗೋಟು 30309-30710
ರಾಶಿ 45939-46369
ಕಾರ್ಕಳ
ಹೊಸತು 35000-42500
ಹಳತು 46000-50000
ಕುಮಟಾ
ಚಿಪ್ಪು 32099-41924
ಕೋಕ 17429-35875
ಹಳೆಚಾಲಿ 42669-46807
ಹೊಸಚಾಲಿ 44999-47609
ಮಂಗಳೂರು
ಕೋಕ 24445-43750
ಪುತ್ತೂರು
ಕೋಕ 10500-26000
ಹೊಸತು 35500-50000
ಸಾಗರ
ಬಿಳಿಗೋಟು 14450-38289
ಚಾಲಿ 31510-45599
ಕೋಕ 14250-37786
ಕೆಂಪುಗೋಟು 19379-38409
ರಾಶಿ 38699-46899
ಸಿಪ್ಪೆಗೋಟು 17299-25429
ಶಿವಮೊಗ್ಗ
ಗೊರಬಲು 17000-38799
ರಾಶಿ 43199-47209
ಸಿದ್ದಾಪುರ
ಬಿಳಿಗೋಟು 30999-42999
ಚಾಲಿ 42599-47739
ಕೋಕ 24999-36219
ಕೆಂಪುಗೋಟು 22099-36599
ರಾಶಿ 42639-46969
ತಟ್ಟಿಬೆಟ್ಟೆ 33090-42899
ಶಿರಸಿ
ಬೆಟ್ಟೆ 38099-44699
ಬಿಳಿಗೋಟು 30164-42409
ಚಾಲಿ 45671-47718
ರಾಶಿ 47729-49619
ತುಮಕೂರು
ರಾಶಿ 45800-47100
ಯಲ್ಲಾಪುರ
ಬಿಳಿಗೋಟು 34899-41200
ಚಾಲಿ 42019-48199
ಕೋಕ 24299-31509
ಕೆಂಪುಗೋಟು 37035-38199
ರಾಶಿ 46709-50869
ತಟ್ಟಿಬೆಟ್ಟೆ 40340-45001
ರೇಷ್ಮೆಗೂಡು ಮಾರುಕಟ್ಟೆ
ರಾಮನಗರ
ಮಿಶ್ರ ತಳಿ: 231-505
ದ್ವಿತಳಿ; 317-546

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12900	12,500	13,250	201.35ಸೆಂಟ್ಸ್
ಎಸಿ	6,325	5,600	5,450	
ಆರ್‌ಪಿ	6000	6,000	6,325	ಲಂಡನ್
ಆರ್‌ಸಿ	3510	137/ಕೆಜಿ	3700	2197ಡಾಲರ್ಸ್

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1410 (1425)
ಸೋಯಾ (ರಿಫೈನ್ಡ್)	₹1295(1305)
ಸೂರ್ಯಕಾಂತಿ (ರಿಫೈನ್ಡ್)	₹1335 (1340)
ಪಾಮೋಲಿನ್	₹1200 (1205)

ಮುಂಬೈ ಧಾರಣೆ

ಶೇಂಗಾ
28-10-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9350-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1420 (1435)
ಒಂದು ವಾರದ ಡೆಲಿವರಿ	1415 (1430)
ಸೋಯಾ ಕಚ್ಚಾ	1252 (1260)
ಪಾಮ್ ವಾರದ ಡೆಲಿವರಿ	1198(1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1265 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
47,950 (47,800)
ಬೆಳ್ಳಿ ಕೆ.ಜಿ
64,800 (64,600)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರುತಿ: ಇನ್ನಷ್ಟು ಸಿಎನ್‌ಜಿ ವಾಹನಗಳು ಮಾರುಕಟ್ಟೆಗೆ

ನವದೆಹಲಿ (ಪಿಟಿಐ): ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಹೆಚ್ಚಾಗುತ್ತ ಇರುವುದರಿಂದ ತನ್ನ ಸಿಎನ್‌ಜಿ ಚಾಲಿತ ವಾಹನಗಳಿಗೆ ಬೇಡಿಕೆ ಹೆಚ್ಚುತ್ತಿದೆ ಎಂದು ಹೇಳಿರುವ ಮಾರುತಿ ಸುಜುಕಿ ಕಂಪನಿ, ಇನ್ನೂ ನಾಲ್ಕು ಮಾದರಿಯ ಕಾರುಗಳಲ್ಲಿ ಸಿಎನ್‌ಜಿ ಆಯ್ಕೆಯನ್ನು ಶೀಘ್ರದಲ್ಲಿಯೇ ನೀಡುವುದಾಗಿ ತಿಳಿಸಿದೆ.

ಕಂಪನಿಯು 2025ರ ಸುಮಾರಿಗೆ ದೇಶದ ಮಾರುಕಟ್ಟೆಯಲ್ಲಿ ವಿದ್ಯುತ್ ಚಾಲಿತ ವಾಹನವೊಂದನ್ನು ಬಿಡುಗಡೆ ಮಾಡುವ ಆಲೋಚನೆಯನ್ನು ಕೂಡ ಹೊಂದಿದೆ. 'ಈಗ ನಮ್ಮ ಎಂಟು ಮಾದರಿ ಕಾರುಗಳಲ್ಲಿ ಸಿಎನ್‌ಜಿ ಆಯ್ಕೆ ಲಭ್ಯವಿದೆ. ಇನ್ನೂ ನಾಲ್ಕು ಮಾದರಿಗಳಲ್ಲಿ ಸಿಎನ್‌ಜಿ ಆಯ್ಕೆಯನ್ನು ಶೀಘ್ರವೇ ನೀಡಬೇಕು ಎಂದು ಆಲೋಚನೆ ಇದೆ' ಎಂದು ಕಂಪನಿಯ ಮಾರುಕಟ್ಟೆ ಮತ್ತು ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ಕಂಪನಿಯ ಕೈಯಲ್ಲಿ ಒಟ್ಟು 2.8 ಲಕ್ಷ ವಾಹನಗಳಿಗೆ ಬುಕಿಂಗ್ ಬಾಕಿ ಇದೆ. ಈ ಪೈಕಿ ಸಿಎನ್‌ಜಿ ಹೊಂದಿರುವ 1.1 ಲಕ್ಷ ವಾಹನಗಳಿಗೆ ಬುಕಿಂಗ್ ಬಂದಿವೆ. 'ಪೆಟ್ರೋಲ್ ಅಥವಾ ಡೀಸೆಲ್ ವಾಹನ ಓಡಿಸಲು, ಪ್ರತಿ ಕಿ.ಮೀ.ಗೆ ₹ 5ರಷ್ಟು ಖರ್ಚು ಮಾಡಬೇಕು. ಆದರೆ, ಸಿಎನ್‌ಜಿ ಚಾಲಿತ ವಾಹನಕ್ಕೆ ಮಾಡಬೇಕಿರುವ ಖರ್ಚು ಪ್ರತಿ ಕಿ.ಮೀ.ಗೆ ₹ 1.7 ಮಾತ್ರ. ಗ್ರಾಹಕರು ಸಿಎನ್‌ಜಿ ಆಯ್ಕೆಯ ವಾಹನಗಳತ್ತ ಮುಖ ಮಾಡಲು ಇದು ಮುಖ್ಯ ಕಾರಣ' ಎಂದು ಅವರು ಹೇಳಿದ್ದಾರೆ.

ಎರಡು ವರ್ಷಗಳ ಹಿಂದೆ ದೇಶದಲ್ಲಿ ಒಟ್ಟು 1,500 ಸಿಎನ್‌ಜಿ ಭರ್ತಿ ಕೇಂದ್ರಗಳು ಇದ್ದವು. ಈಗ ಈ ಸಂಖ್ಯೆಯು 3,400ಕ್ಕೆ ಏರಿಕೆ ಆಗಿದೆ.

ನ. 8ರಿಂದ ಪೇಟಿಎಂ ಐಪಿಒ

ನವದೆಹಲಿ (ಪಿಟಿಐ): ಪೇಟಿಎಂ ಕಂಪನಿಯ ಮಾತೃಸಂಸ್ಥೆ ಆಗಿರುವ ಒನ್97 ಕಮ್ಯುನಿಕೇಷನ್ಸ್ ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸಲಿದ್ದು, ನವೆಂಬರ್ 8ರಿಂದ 10ರವರೆಗೆ ಆರಂಭಿಕ ಸಾರ್ವಜನಿಕ ಕೊಡುಗೆಗೆ (ಐಪಿಒ) ಅರ್ಜಿ ಸಲ್ಲಿಸಲು ಅವಕಾಶ ಇರಲಿದೆ. ಕಂಪನಿಯು ಪ್ರತಿ ಷೇರಿಗೆ ₹ 2,080–2,150 ಬೆಲೆ ನಿಗದಿ ಮಾಡಿದೆ.

ಅಂದರೆ, ಕಂಪನಿಯು ತನ್ನ ಮೌಲ್ಯವು ₹ 1.48 ಲಕ್ಷ ಕೋಟಿ ಎಂದು ಹೇಳಿದೆ. ಐಪಿಒ ಮೂಲಕ ಕಂಪನಿಯು ಒಟ್ಟು ₹ 18,300 ಕೋಟಿ ಸಂಗ್ರಹಿಸಲಿದೆ. ಇದು ದೇಶದಲ್ಲಿನ ಇದುವರೆಗಿನ ಅತಿದೊಡ್ಡ ಐಪಿಒ ಆಗಲಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಕಂಪನಿಯ ಆದಾಯವು ಶೇಕಡ 62ರಷ್ಟು ಹೆಚ್ಚಳ ಕಂಡಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 5,512 ಕೋಟಿ ಆದಾಯ ಗಳಿಸಿದ್ದ ಕಂಪನಿಯು, ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ₹ 8,908 ಕೋಟಿ ಆದಾಯ ಕಂಡಿದೆ.

ಸೆನ್ಸೆಕ್ಸ್: 6 ತಿಂಗಳ ಅತಿದೊಡ್ಡ ಕುಸಿತ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಗುರುವಾರದ ವಹಿವಾಟಿನಲ್ಲಿ 1,158 ಅಂಶ ಕುಸಿಯಿತು. ಆರು ತಿಂಗಳ ಅವಧಿಯಲ್ಲಿ ಸೆನ್ಸೆಕ್ಸ್ ಒಂದು ದಿನದಲ್ಲಿ ಕಂಡಿರುವ ಅತಿದೊಡ್ಡ ಕುಸಿತ ಇದು.

ಬ್ಯಾಂಕಿಂಗ್, ಎಫ್‌ಎಂಸಿಜಿ ಮತ್ತು ಇಂಧನ ವಲಯದ ಷೇರುಗಳನ್ನು ಹೂಡಿಕೆದಾರರು ಭಾರಿ ಸಂಖ್ಯೆಯಲ್ಲಿ ಮಾರಾಟ ಮಾಡಿದರು. ಬಿಎಸ್‌ಇ ಮಿಡ್ ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕಗಳು ಕೂಡ ಕುಸಿತ ಕಂಡವು.ದಿನದ ಕೊನೆಯಲ್ಲಿ ಸೆನ್ಸೆಕ್ಸ್ 59,984 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ಏಪ್ರಿಲ್ 12ರ ವಹಿವಾಟಿನಲ್ಲಿ ಸೆನ್ಸೆಕ್ಸ್ 1,708 ಅಂಶ ಇಳಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ಗುರುವಾರದ ವಹಿವಾಟಿನಲ್ಲಿ 353 ಅಂಶ ಕುಸಿಯಿತು.

ಹೂಡಿಕೆದಾರರು ಗುರುವಾರದ ವಹಿವಾಟಿನಲ್ಲಿ ಒಟ್ಟು ₹ 4.82 ಲಕ್ಷ ಕೋಟಿ ಮೌಲ್ಯದ ಸಂಪತ್ತು ಕಳೆದುಕೊಂಡರು. 'ಏಷ್ಯಾ ಮತ್ತು ಯುರೋಪಿನ ಇತರ ಷೇರು ಮಾರುಕಟ್ಟೆಗಳಲ್ಲಿನ ವಹಿವಾಟಿನ ಪ್ರಭಾವುದೇಶಿ ಷೇರು ಮಾರುಕಟ್ಟೆಗಳ ಮೇಲೆಯೂ ಆಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ ಶೇಕಡ 1.11ರಷ್ಟು ಇಳಿಕೆ ಆಗಿದ್ದು, 82.94 ಡಾಲರ್‌ಗೆ ತಲುಪಿದೆ.

ಹೊಸ ಬಜಾಜ್ ಪಲ್ಸರ್ 250 ಬಿಡುಗಡೆ

● ವಿಶ್ವನಾಥ ಎಸ್.

ಹೊಸ ಪಲ್ಸರ್ 250 ಬೈಕ್ ಜೊತೆ ಬಜಾಜ್ಕಂ ಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಪ್ರದೀಪ್ ಶ್ರೀವಾಸ್ತವ, ವ್ಯವಸ್ಥಾಪಕ ನಿರ್ದೇಶಕ ರಾಜೀವ್ ಬಜಾಜ್ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ರಾಕೇಶ್ ಶರ್ಮಾ

ಪುಣೆ: ಭಾರತದ ಸ್ಪೋರ್ಟ್ಸ್ ಮೋಟರ್ ಸೈಕಲ್ ಮಾರುಕಟ್ಟೆಯಲ್ಲಿ 20ನೇ ವರ್ಷವನ್ನು ಆಚರಿಸಿಕೊಳ್ಳುತ್ತಿರುವ ಬಜಾಜ್ ಆಟೊ ಕಂಪನಿಯು ತನ್ನ 'ಐಕಾನಿಕ್ ಬ್ರ್ಯಾಂಡ್' ಪಲ್ಸರ್‌ಅನ್ನು ಸಂಪೂರ್ಣ ಹೊಸ ರೂಪದಲ್ಲಿ ಪರಿಚಯಿಸಿದೆ. ಪಲ್ಸರ್ ಎಫ್ 250 ಮತ್ತು ಎನ್ 250 ಎಂಬ ಎರಡು ಹೊಸ ಮಾದರಿಗಳನ್ನು ಕಂಪನಿ ಬಿಡುಗಡೆ ಮಾಡಿದ್ದು, ಬೆಲೆಯು ಕ್ರಮವಾಗಿ ₹ 1.40 ಲಕ್ಷ ಮತ್ತು ₹ 1.38 ಲಕ್ಷ ಇದೆ (ದೆಹಲಿ ಎಕ್ಸ್ ಷೋ ರೂಂ).

ಕ್ವಾರ್ಟರ್ ಲೀಟರ್ ಸ್ಪೋರ್ಟ್ಸ್ (quarter litre sports) ವಿಭಾಗಕ್ಕೆ ಮುಂದಿನ ಪೀಳಿಗೆಯ ಶಕ್ತಿ, ಕಾರ್ಯಕ್ಷಮತೆ ಮತ್ತು ಶೈಲಿಯನ್ನು ಇದು ತಂದುಕೊಟ್ಟಿದೆ. ಸ್ಪೋರ್ಟ್ಸ್ ಬೈಕಿಂಗ್ ಲೋಕವನ್ನು ಬದಲಾಯಿಸಲು ಈ ಬೈಕ್ ಸಿದ್ಧವಾಗಿದೆ ಎಂದು ಕಂಪನಿ ಹೇಳಿದೆ.

ಎಲ್‌ಇಡಿ ಪ್ರೊಜೆಕ್ಟರ್ ಯುನಿಪಾಡ್ ಹೆಡ್‌ಲ್ಯಾಂಪ್, ಮೊನೊ-ಶಾಕ್ ಸಸ್ಪೆನ್ಷನ್, ಯುಎಸ್‌ಬಿ ಮೊಬೈಲ್ ಚಾರ್ಜಿಂಗ್, ಅಶೂರ್ಡ್ ಬ್ರೇಕಿಂಗ್ - 300ಎಂಎಂ ಮುಂಭಾಗ ಮತ್ತು 230 ಎಂಎಂ ಹಿಂಭಾಗ - ಡಿಸ್ಕ್ ಬ್ರೇಕ್ ಮತ್ತು ಸುಧಾರಿತ ಎಬಿಎಸ್ ತಂತ್ರಜ್ಞಾನ ಸೇರಿದಂತೆ ಹಲವು ವೈಶಿಷ್ಟ್ಯಗಳನ್ನು ಇವು ಹೊಂದಿವೆ.

'ಬಜಾಜ್ ಪಲ್ಸರ್ ಭಾರತದಲ್ಲಿ ಬಿಡುಗಡೆ ಆಗಿ ಗುರುವಾರಕ್ಕೆ ಇಪತ್ತು ವರ್ಷಗಳು ಸಂದಿವೆ. ಈ ಹಾದಿ ಬಹಳಷ್ಟು ಸವಾಲಿನಿಂದ ಕೂಡಿತ್ತು. ಕಂಪನಿಗೆ ಹೊಸ ರೂಪ ನೀಡುವಲ್ಲಿ, ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಮಾಡುವಲ್ಲಿ ಪಲ್ಸರ್‌ನ ಪಾತ್ರ ಮಹತ್ವದ್ದು' ಎಂದು ಬಜಾಜ್ ಆಟೊ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಬಜಾಜ್ ಅವರು ಪಲ್ಸರ್ ರೂಪುಗೊಂಡ ಕತೆಯನ್ನು ನೆನಪಿಸಿಕೊಂಡರು.

2001ರ ಅಕ್ಟೋಬರ್ 28ರಂದು ಬಜಾಜ್ ಆಟೊ, ಭಾರತದಲ್ಲಿ ಮೊದಲ ಪಲ್ಸರ್ ಬಿಡುಗಡೆ ಮಾಡಿತ್ತು. ಇದುವರೆಗೆ ಪಲ್ಸರ್‌ನ ವಿವಿಧ ಮಾದರಿಗಳು ದೇಶಿ ಮಾರುಕಟ್ಟೆಯಲ್ಲಿ ಬಿಡುಗಡೆಯಾಗಿವೆ. ಇವು ಭಾರತ ಹಾಗೂ ಜಾಗತಿಕ ಮಾರುಕಟ್ಟೆಗಳಲ್ಲಿ ಹೊಸ ಮಾನದಂಡ ಸೃಷ್ಟಿಸಿವೆ. 50 ದೇಶಗಳಲ್ಲಿ ಬಹು ಜನಪ್ರಿಯ ಬ್ರ್ಯಾಂಡ್‌ಗಳ ಪೈಕಿ ಪಲ್ಸರ್ ಕೂಡ ಮನ್ನಣೆ ಪಡೆದಿದೆ. ಈಗ ಸಂಪೂರ್ಣ ಹೊಸದಾದ ಪಲ್ಸರ್ 250 ಮೂಲಕ ಬ್ರ್ಯಾಂಡ್‌ನ ಮಾನದಂಡವನ್ನು ಹೊಸ ಎತ್ತರಕ್ಕೆ ಏರಿಸಲಾಗಿದೆ ಎಂದು ಬಜಾಜ್ ಆಟೊದ ಕಾರ್ಯನಿರ್ವಾಹಕ ನಿರ್ದೇಶಕ ರಾಕೇಶ್ ಶರ್ಮಾ ಹೇಳಿದರು.

(ಕಂಪನಿಯ ಆಹ್ವಾನದ ಮೇರೆಗೆ ವರದಿಗಾರ ಪುಣೆಗೆ ಭೇಟಿ ನೀಡಿದ್ದರು)

ಕರ್ಣಾಟಕ ಬ್ಯಾಂಕ್‌ಗೆ ₹125.61 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಮಂಗಳೂರು: ಈ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕದಲ್ಲಿ ಕರ್ಣಾಟಕ ಬ್ಯಾಂಕ್ ₹125.61 ಕೋಟಿ ಲಾಭ ಗಳಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹119.44 ಕೋಟಿ ಲಾಭ ಗಳಿಸಿತ್ತು.

ನಗರದ ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿ ಗುರುವಾರ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ದ್ವಿತೀಯ ತ್ರೈಮಾಸಿಕ ಹಾಗೂ ಅರ್ಧ ವಾರ್ಷಿಕದ (30-09-2021) ಹಣಕಾಸು ವರದಿಯನ್ನು ಅನುಮೋದಿಸಲಾಯಿತು.

ಬ್ಯಾಂಕಿನ ನಿವ್ವಳ ಬಡ್ಡಿ ಆದಾಯವು ಶೇ 10.83ರ ದರದಲ್ಲಿ ವೃದ್ಧಿಯಾಗಿದ್ದು, ₹637.10 ಕೋಟಿ ತಲುಪಿದೆ. ಮೊದಲ ತ್ರೈಮಾಸಿಕದ ಅಂತ್ಯಕ್ಕೆ ಇದು ₹574.87 ಕೋಟಿಯಾಗಿತ್ತು. ಬ್ಯಾಂಕಿನ ಅನುತ್ಪಾದಕ ಸ್ವತ್ತುಗಳು ಗಣನೀಯವಾಗಿ ಇಳಿಕೆಯಾಗಿದ್ದು, ಸ್ಥೂಲ ಅನುತ್ಪಾದಕ ಸ್ವತ್ತುಗಳು (ಜಿಎನ್‌ಪಿಎ) ಶೇ 4.50ಕ್ಕೆ ಇಳಿಕೆಯಾಗಿದೆ. ನಿವ್ವಳ ಅನುತ್ಪಾದಕ ಸ್ವತ್ತುಗಳು (ಎನ್‌ಎನ್‌ಪಿಎ) ಶೇ 3ರಿಂದ ಶೇ 2.84 ಕ್ಕೆ ಇಳಿಕೆಯಾಗಿದೆ.

₹76,921.98 ಕೋಟಿ ಠೇವಣಿ ಹಾಗೂ ₹54,467.94 ಕೋಟಿ ಮುಂಗಡ ಸೇರಿ ಬ್ಯಾಂಕಿನ ಒಟ್ಟು ವಹಿವಾಟು ₹1,31,389.92 ಕೋಟಿ ತಲುಪಿದೆ. ಮುಂಗಡ ಮತ್ತು ಠೇವಣಿಗಳ ಅನುಪಾತ ಶೇ 70.81 ರಷ್ಟಿದೆ.

ಕೊರೊನಾ: ಸಾವು ಹೆಚ್ಚುತ್ತಿದ್ದಂತೆ ಮಾಸ್ಕೊದಲ್ಲಿ ಕೆಲಸ ಸ್ಥಗಿತ

ಮಾಸ್ಕೊ (ಎಪಿ): ಕೊರೊನಾ ವೈರಸ್ ಸೋಂಕು ಹರಡುವುದನ್ನು ತಡೆಯುವ ಉದ್ದೇಶದಿಂದ ರಷ್ಯಾದ ರಾಜಧಾನಿ ಮಾಸ್ಕೊದಲ್ಲಿ ಗುರುವಾರ ಕೆಲಸ ಮಾಡದ ಅವಧಿ ಪ್ರಾರಂಭಿಸಲಾಗಿದೆ. ದೈನಂದಿನ ಹೊಸಪ್ರಕರಣಗಳುಮತ್ತುಕೋವಿಡ್–19ನಿಂದ ಸಂಭವಿಸುತ್ತಿರುವ ಸಾವುಗಳು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿರುವುದರಿಂದ ಈ ನಿರ್ಧಾರಕ್ಕೆ ಬರಲಾಗಿದೆ.

ಸೋಂಕು ಹರಡುವಿಕೆ ತಡೆಗಟ್ಟಲು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು, ಅಕ್ಟೋಬರ್ 30ರಿಂದ ನವೆಂಬರ್ 7ರವರೆಗೆ ಕೆಲಸ ಮಾಡದ ಅವಧಿ ಜಾರಿಗೊಳಿಸಿ, ಆದೇಶಿಸಿದ್ದಾರೆ. ಹೆಚ್ಚಿನ ಸರ್ಕಾರಿ ಸಂಸ್ಥೆಗಳು ಮತ್ತು ಖಾಸಗಿ ವಾಣಿಜ್ಯ ಉದ್ದಿಮೆಗಳು ಕಾರ್ಯಾಚರಣೆ ಸ್ಥಗಿತಗೊಳಿಸಲಿವೆ.

ಕೊರೊನಾ ವೈರಸ್ ಸರ್ಕಾರಿ ಕಾರ್ಯಪಡೆಯು 24 ಗಂಟೆಗಳಲ್ಲಿ 1,159 ಸಾವುಗಳನ್ನು ವರದಿ ಮಾಡಿದೆ. ಇದು ಪಿಡುಗು ಪ್ರಾರಂಭವಾದ ನಂತರದ ಅತಿದೊಡ್ಡ ದೈನಂದಿನ ಸಂಖ್ಯೆ ಎನಿಸಿದೆ. ದೇಶದಲ್ಲಿ ಕೋವಿಡ್‌ನಿಂದಾಗಿ ಮೃತಪಟ್ಟವರ ಸಂಖ್ಯೆ ಅಧಿಕೃತವಾಗಿ 2,35,057ಕ್ಕೆ ತಲುಪಿದೆ. ಇದು ಯುರೋಪಿನಲ್ಲಿ ಅತಿ ಹೆಚ್ಚು ಸಾವಿನ ಸಂಖ್ಯೆಯಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC, Degree,ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 7829215432, 9538804499

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ Salary+OT 16,800-45000/-.9902839010, 9980295449

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್, ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ,ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ ssle puc degree ಸಂಬಳ 15000to28000 ಸಂಪರ್ಕಿಸಿರಿ:8904879948/ 8904879491

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಶಿಪ್ಪಿಂಗ್ ಕಂಪನಿಗೆ ಬೇಕಾಗಿದ್ದಾರೆ. 10 ನೇ/12 ನೇ/ಪದವೀಧರರು ಹುಡುಗರು. ವಯಸ್ಸು: 18-28 ವರ್ಷಗಳು. ಸಂಬಳ: 25000-45000+ ವಸತಿಗಳೊಂದಿಗೆ. www.sanskaedu.org sanskaadmndpt@gmail.com 7737450836

ರಿಯಲ್ ಎಸ್ಟೇಟ್ ಸೆಲ್ಲಿಂಗ್
Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

HEALTH SPECIAL

ಹಬ್ಬದ ವಿಶೇಷ ರಿಯಾಯಿತಿ
ಭಾರತದಲ್ಲಿ ಮೊದಲ ಬಾರಿಗೆ
ಕಿವಿಗೆ ಕಸ್ಟಮೈಸ್ ಮಾಡಲಾದ ರಿಚಾರ್ಜೇಬಲ್ ಶ್ರವಣ ಸಾಧನಗಳು
HHCC
- ಪ್ರಸ್ತುತ ಶ್ರವಣ ಸಾಧನಗಳಿಗೆ ಆಕರ್ಷಕ ವಿನಿಯಮ
- ಮೊಬೈಲ್ ಕನೆಕ್ಟಿವಿಟಿ ಮತ್ತು ಭಾಷೆಯ ಅನುವಾದ
- ಕುಡುವೇವ್ ಬೂಥ್‌ಲೆಸ್ ಆಡಿಯೋಮೀಟರ್ ಮೂಲಕ ಮನೆಗೆ ಭೇಟಿ
ಚಿಕ್ಕದಾದರೂ ಶಕ್ತಿಶಾಲಿಯಾದ ಅಗೋಚರ ಶ್ರವಣ ಸಾಧನ
*T&C Apply
www.hearingc.com ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್ as
99456 11100
ಬೆಂಗಳೂರು ಮತ್ತು ಕರ್ನಾಟಕದಾದ್ಯಂತ ಶಾಖೆಗಳಿವೆ

ಭವಿಷ್ಯ
Astrology

★॥ಸ್ತ್ರೀವಶೀಕರಣ ಸ್ಪೆಷಲಿಸ್ಟ್॥★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

★॥ಶ್ರೀಕಬ್ಬಾಳಮ್ಮ ದೇವಿ॥★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ,ದಾಂಪತ್ಯಕಿರಿಕಿರಿ, ಸಾಲದಬಾದೆ,ವ್ಯಾಪಾರ, ಶತ್ರುಕಾಟ,ಇನ್ಯಾವುದೇ_ಕಠಿಣ ಸಮಸ್ಯೆಗಳಿಗೆ_ಕೇವಲ 30_ನಿಮಿಷದಲ್ಲಿ ಶಾಶ್ವತಪರಿಹಾರ. ''ಸ್ತ್ರೀಯರಿಗೆ ಕಡಿಮೆ_ಖರ್ಚಿನಲ್ಲಿ ವಿಶೇಷ_ಪರಿಹಾರ'' ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

॥ಶ್ರೀಧರ್ಮಶಾಸ್ತ್ರಂ ವಶೀಕರಣಂ॥ ಸರ್ವಸಿದ್ಧಿ ಸಾಧಕರು, ಸಮಸ್ಯೆ ಏನೇಯಿರಲಿ ಎಷ್ಟೇ ಕಠಿಣವಾಗಿರಲಿ ವಶೀಕರಣ ಪದ್ಧತಿಯಿಂದ ಶೀಘ್ರದಲ್ಲಿ ಶಾಸ್ತ್ರೋಕ್ತ ಪರಿಹಾರ ಕಲ್ಪಿಸುವರು. ವೇದಬ್ರಾಹ್ಮಣ ಶ್ರೀಶ್ರೀಮೃತ್ಯುಂಜಯರಾವ್ 9686980376

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

ವಶೀಕರಣ ಸ್ಪೆಷಲಿಸ್ಟ್: ಸ್ತ್ರೀಪುರುಷ ವಶೀಕರಣ, ಲೈಂಗಿಕ ವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ. ಸ್ತ್ರೀಯರಿಗೆ ಉಚಿತ ಪರಿಹಾರ. 9448687421

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಪ್ರವಾಸ
Travel

15-11-2021, 7 ದಿನಗಳ ತಮಿಳುನಾಡು, 10-11-2021, 6 ದಿನಗಳ 27 ಸ್ಥಳಗಳ ದಕ್ಷಿಣಕನ್ನಡ ಪ್ರವಾಸ. 28-12-2021, 4ದಿನಗಳ ಗೋವಾ ದುಧ್‌ಸಾಗರ್. 15-12-2021, 7ದಿನಗಳ ಅಸ್ಸಾಂ ಗುವಾಹಟಿ ಕಝಿರಂಗ್ 18-12-2021, 12 ದಿನಗಳ ದೆಹಲಿ,ಮನಾಲಿ, ವೈಷ್ಣೋದೇವಿ. 15-12-2021, 11 ದಿನಗಳು ಸಂಪೂರ್ಣ ಮಧ್ಯಪ್ರದೇಶ. 18-12-2021. 12 ದಿನಗಳ ಸಂಪೂರ್ಣ ರಾಜಸ್ಥಾನ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, ಬೆಂಗಳೂರು. 9342848791, 9880847001

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 18/11/21 ರಾಮೇಶ್ವರಂ, ಶ್ರೀರಂಗಂ, ಕನ್ಯಾಕುಮಾರಿ, ಮಧುರೈ, ನವಗ್ರಹ. 18/11/21 ಶಿರಡಿ ಪ್ರವಾಸ ಪಂಡರಾಪುರ, ಎಲ್ಲೋರ, ಗೃಷ್ಣೇಶ್ವರ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಸೇವನೆ ಆರೋಪ: 25 ದಿನಗಳ ಬಳಿಕ ಬಿಡುಗಡೆ ಅವಕಾಶ

ಡ್ರಗ್ಸ್ ಪ್ರಕರಣ: ಆರ್ಯನ್‌ಗೆ ಜಾಮೀನು

ಆರ್ಯನ್ ಖಾನ್ ಪರ ವಕೀಲರ ತಂಡದ ಜತೆಗೆ ಶಾರುಕ್ ಖಾನ್ ಪಿಟಿಐ ಚಿತ್ರ

ಮುಂಬೈ (ಪಿಟಿಐ): ಬಾಲಿವುಡ್ ಸೂಪರ್ ಸ್ಟಾರ್ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್‌ಗೆ ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಸೇವನೆ ಪ್ರಕರಣದಲ್ಲಿ ಬಾಂಬೆ ಹೈಕೋರ್ಟ್ ಗುರುವಾರ ಜಾಮೀನು ಮಂಜೂರು ಮಾಡಿದೆ.

ಮುಂಬೈ ಕರಾವಳಿ ಸಮೀಪ ಐಷಾರಾಮಿ ಹಡಗಿನಲ್ಲಿ ನಡೆಯುತ್ತಿತ್ತು ಎನ್ನಲಾದ ಡ್ರಗ್ಸ್ ಪಾರ್ಟಿಗೆ ಮಾದಕ ಪದಾರ್ಥ ನಿಯಂತ್ರಣ ಬ್ಯೂರೊದ (ಎನ್‌ಸಿಬಿ) ಅಧಿಕಾರಿಗಳು ಈ ತಿಂಗಳ 3ರಂದು ದಾಳಿ ನಡೆಸಿದ್ದರು. ಈ ದಾಳಿಯ ಸಂದರ್ಭದಲ್ಲಿ ಆರ್ಯನ್ ಅವರನ್ನು ಬಂಧಿಸಲಾಗಿತ್ತು. 25 ದಿನಗಳ ಬಳಿಕ ಅವರಿಗೆ ಜಾಮೀನು ದೊರೆತಿದೆ.

ನ್ಯಾಯಾಂಗ ಬಂಧನದಲ್ಲಿರುವ ಆರ್ಯನ್ ಅವರು ಮುಂಬೈನ ಆರ್ಥರ್ ರೋಡ್ ಜೈಲಿನಲ್ಲಿದ್ದಾರೆ. ಜಾಮೀನು ಷರತ್ತುಗಳನ್ನು ಒಳಗೊಂಡ ಆದೇಶವನ್ನು ನ್ಯಾಯಾಲಯವು ಶುಕ್ರವಾರ ಪ್ರಕಟಿಸಲಿದೆ. ಹಾಗಾಗಿ, ಆರ್ಯನ್ ಅವರು ಜೈಲಿನಿಂದ ಶುಕ್ರವಾರ ಬಿಡುಗಡೆಯಾಗುವ ಸಾಧ್ಯತೆ ಇದೆ.

ನ್ಯಾಯಮೂರ್ತಿ ಎನ್. ಡಬ್ಲ್ಯು. ಸಾಂಬ್ರೆ ಅವರ ಏಕಸದಸ್ಯ ಪೀಠವು ಆರ್ಯನ್ ಅವರಲ್ಲದೆ ಇತರ ಆರೋಪಿಗಳಾದ ಅರ್ಬಾಜ್ ಮರ್ಚಂಟ್ ಮತ್ತು ಮುನ್‌ಮುನ್ ದಮೇಚಾ ಅವರಿಗೂ ಜಾಮೀನು ನೀಡಿದೆ.

ಗುರುವಾರ ಮಧ್ಯಾಹ್ನ ಜಾಮೀನು ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡಾಗ, ಹೆಚ್ಚುವರಿ ಸಾಲಿಸಿಟರ್ ಜನರಲ್ ಅನಿಲ್ ಸಿಂಗ್ ಅವರು ವಾದ ಮಂಡಿಸಿದರು. ಅವರ ವಾದವು ಸಂಜೆ 4.10ರವರೆಗೆ ಮುಂದುವರಿಯಿತು. ಬಳಿಕ, ಆರ್ಯನ್ ಪರ ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ಪೂರಕ ವಾದ ಆರಂಭಿಸಿದರು.

ಅವರು ವಾದ ಮುಂದುವರಿಸುತ್ತಿದ್ದಂತೆಯೇ, 'ಎಲ್ಲ ಮೂವರಿಗೆ ಜಾಮೀನು ಅಂಗೀಕರಿಸಲಾಗಿದೆ' ಎಂದು ನ್ಯಾಯಮೂರ್ತಿ ಪ್ರಕಟಿಸಿದರು. 'ವಿವರವಾದ ಆದೇಶವನ್ನು ನಾಳೆ ನೀಡಲಾಗುವುದು' ಎಂದು ನ್ಯಾಯಮೂರ್ತಿ ಹೇಳಿದರು. ನಗದು ಭದ್ರತೆ ಸಲ್ಲಿಕೆಗೆ ಅವಕಾಶ ನೀಡಬೇಕು ಎಂದು ವಕೀಲರು ಕೋರಿದರೂ ಪೀಠವು ಅದಕ್ಕೆ ಅವಕಾಶ ಕೊಡಲಿಲ್ಲ. ಜಾಮೀನು ಭದ್ರತೆ ಏನು ಎಂಬುದನ್ನೇ ಹೇಳಿಲ್ಲ ಎಂದು ಪೀಠವು ಹೇಳಿತು. ಜಾಮೀನು ಅರ್ಜಿ ವಿಚಾರಣೆಯು ಮಂಗಳವಾರ ಆರಂಭವಾಗಿತ್ತು.

ಆರ್ಯನ್ ಮತ್ತು ಇತರರಿಗೆ ಜಾಮೀನು ನೀಡುವುದನ್ನು ಎನ್‌ಸಿಬಿ ಬಲವಾಗಿ ವಿರೋಧಿಸಿತ್ತು.

'ಸಮೀರ್‌ರನ್ನು ದಾವೂದ್ ಎನ್ನುತ್ತಿದ್ದರು'

'ಸಮೀರ್ ವಾಂಖೆಡೆಯನ್ನು ಆತನ ತಾಯಿ ಝಹೀದಾ ಅವರು ದಾವೂದ್ ಎಂದು ಕರೆಯುತ್ತಿದ್ದುದು ನಿಜ' ಎಂದು ಸಮೀರ್ ಅವರ ತಂದೆ ಧ್ಯಾನದೇವ್ ವಾಂಖೆಡೆ ಹೇಳಿದ್ದಾರೆ. ಧ್ಯಾನದೇವ್ ಅವರು ಮತಾಂತರಗೊಂಡ ಮುಸ್ಲಿಂ ಎಂಬ ಆರೋಪಗಳ ನಡುವೆಯೇ ಅವರು ಈ ಹೇಳಿಕೆ ನೀಡಿದ್ದಾರೆ. ಸಮೀರ್ ವಾಂಖೆಡೆ ಅವರ ಹೆಸರು ದಾವೂದ್ ವಾಂಖೆಡೆ ಎಂದು ಇತ್ತು ಎಂದು ನವಾಬ್ ಮಲಿಕ್ ಅವರು ಆರೋಪ ಮಾಡಿದ್ದರು.

ತಮ್ಮ ಹೆಂಡತಿಯು ಪ್ರೀತಿಯಿಂದ ಒಮ್ಮೊಮ್ಮೆ ದಾವೂದ್ ಎಂದು ಕರೆಯುತ್ತಿದ್ದದ್ದು ಹೌದು. ಆದರೆ, ಸಮೀರ್ ಮುಸ್ಲಿಂ ಅಲ್ಲ, ಆತ ಪರಿಶಿಷ್ಟ ಪಂಗಡದ ವ್ಯಕ್ತಿ ಎಂದು ಧ್ಯಾನದೇವ್ ಹೇಳಿದ್ದಾರೆ. 'ನಾನು ದಲಿತ. ಎಂದೂ ಮತಾಂತರ ಆಗಿಲ್ಲ. ನಾನು ಮುಸ್ಲಿಂ ಮಹಿಳೆಯನ್ನು ಮದುವೆ ಆಗಿದ್ದೇನೆ. ನನ್ನ ಹೆಂಡತಿಯು ತನ್ನ ಹೆಸರನ್ನು ಝಹೀದಾ ಧ್ಯಾನದೇವ್ ಎಂದೇ ಬರೆಯುತ್ತಿದ್ದಳು. ತಮ್ಮ ಖಾಸಗಿ ವಿಚಾರಗಳಲ್ಲಿನ ಹಸ್ತಕ್ಷೇಪವನ್ನು ನವಾಬ್ ಮಲಿಕ್ ಮುಂದುವರಿಸಿದರೆ ಮಾನಹಾನಿ ಪ್ರಕರಣ ದಾಖಲಿಸಲಾಗುವುದು' ಎಂದೂ ಅವರು ಹೇಳಿದ್ದಾರೆ.

ಬಾಲಿವುಡ್ ಸಂಭ್ರಮ

ಬಾಲಿವುಡ್‌ನ ಪ್ರಮುಖರಾದ ಸೋನಮ್ ಕಪೂರ್, ಸ್ವರಾ ಭಾಸ್ಕರ್, ಆರ್. ಮಾಧವನ್, ರಾಹುಲ್ ಧೋಲಾಕಿಯಯಾ ಮಂತಾದವರು ಆರ್ಯನ್ ಖಾನ್‌ಗೆ ಜಾಮೀನು ದೊರೆತದ್ದಕ್ಕೆ ಸಂತಸ ವ್ಯಕ್ತಪಡಿಸಿದವರಲ್ಲಿ ಸೇರಿದ್ದಾರೆ.

ಇವರೆಲ್ಲರೂ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಸಂತಸವನ್ನು ಹಂಚಿಕೊಂಡಿದ್ದಾರೆ.

'ಕಾಲದ ನ್ಯಾಯದಾನದಲ್ಲಿ ಸಾಕ್ಷಿಗಳ ಅಗತ್ಯ ಇಲ್ಲ' ಎಂದು ನಟ ಸೋನು ಸೂದ್ ಟ್ವೀಟ್ ಮಾಡಿದ್ದಾರೆ. ಸಿನಿಮಾ ನಿರ್ದೇಶಕ ಸಂಜಯ್ ಗುಪ್ತಾ ಅವರು 'ಬಹಳ ಸಂತಸವಾಗಿದೆ' ಎಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಶಾರುಕ್ ಅವರ ನಿವಾಸದ ಮುಂದೆ ಸೇರಿದ್ದ ಭಾರಿ ಸಂಖ್ಯೆಯ ಅಭಿಮಾನಿಗಳು ಸಂಭ್ರಮ ಆಚರಿಸಿದ್ದಾರೆ.

ಡ್ರಗ್ಸ್ ಪ್ರಕರಣದ ಸಾಕ್ಷಿ ಗೋಸಾವಿ ಸೆರೆ

ಪುಣೆ (ಪಿಟಿಐ): ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪ್ರಕರಣದ ಸಾಕ್ಷಿ ಕಿರಣ್ ಗೋಸಾವಿಯನ್ನು ಪುಣೆ ಪೊಲೀಸರು ಹಳೆಯ ಪ್ರಕರಣವೊಂದರಲ್ಲಿ ಬಂಧಿಸಿದ್ದಾರೆ.

2018ರ ವಂಚನೆ ಪ್ರಕರಣವೊಂದರಲ್ಲಿ ಆತ ಪ್ರಮುಖ ಆರೋಪಿ. ಆತನ ಮೇಲೆ 2019ರಲ್ಲಿ ಆರೋಪಪಟ್ಟಿ ಸಲ್ಲಿಸಲಾಗಿತ್ತು. ಆತ ಪೊಲೀಸರೆದುರು ಶರಣಾಗುವುದಾಗಿ ಹೇಳಿದ್ದರೂ ಆಗಿರಲಿಲ್ಲ. ಆತನನ್ನು ಇಲ್ಲಿಯ ಕತ್ರಾಜ್ ಪ್ರದೇಶದ ಲಾಡ್ಜ್ ಒಂದರಲ್ಲಿ ಬೆಳಗ್ಗಿನ ಜಾವ ಮೂರು ಗಂಟೆಗೆ ಬಂಧಿಸಲಾಗಿದೆ. ಆತನನ್ನು ಕೋರ್ಟ್ ಎದುರು ಹಾಜರುಪಡಿಸಲಾಯಿತು ಎಂದು ಪುಣೆ ಪೊಲೀಸ್ ಆಯುಕ್ತ ಅಮಿತಾಭ್ ಗುಪ್ತಾ ಹೇಳಿದ್ದಾರೆ.

'ಕಳೆದ ಹತ್ತು ದಿನಗಳಿಂದ ಗೋಸಾವಿಗಾಗಿ ನಾವು ಹುಡುಕಾಟ ನಡೆಸಿದ್ದವು. ಆತ ಲಖನೌ, ಹೈದರಾಬಾದ್, ಫತೇಪುರ್, ಜಲಗಾಂವ್, ಮುಂಬೈ, ಲೋನವಾಲ ಮತ್ತಿತರ ನಗರಗಳ ಮಧ್ಯೆ ಓಡಾಡುತ್ತಾ ತಲೆಮರೆಸಿಕೊಂಡಿದ್ದ' ಎಂದಿದ್ದಾರೆ.

ಮಲೇಷ್ಯಾದಲ್ಲಿ ಹೋಟೆಲ್ ಉದ್ಯಮದಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ಗೋಸಾವಿ ತಮ್ಮಿಂದ ₹3.09 ಲಕ್ಷ ಪಡೆದು ನಂತರ ಮೋಸ ಮಾಡಿದ್ದಾನೆ ಎಂದು ಚಿನ್ಮಯ್ ದೇಶ್‌ಮುಖ್ ಎಂಬುವವರು ಪುಣೆಯ ಫಾರಸ್ಖಾನ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ಗೋಸಾವಿ ತಮ್ಮನ್ನು ಬೆದರಿಸುತ್ತಿದ್ದ ಎಂದು ದೂರುದಾರ ದೇಶ್‌ಮುಖ್ ಹೇಳಿದ್ದಾರೆ. ಅವರೇನಾದರೂ ಮತ್ತೊಂದು ದೂರು ನೀಡಿದರೆ ಮತ್ತೊಂದು ಮೊಕದ್ದಮೆ ದಾಖಲಿಸಲಾಗುವುದು ಎಂದು ಗುಪ್ತಾ ಹೇಳಿದ್ದಾರೆ.

ಆರ್ಯನ್ ಖಾನ್ ಪ್ರಕರಣದಲ್ಲಿ ಎನ್‌ಸಿಬಿ ಅಧಿಕಾರಿಗಳು ಮತ್ತು ಇತರರು ₹25 ಕೋಟಿಗೆ ಬೇಡಿಕೆ ಇಟ್ಟಿದ್ದಾರೆ ಎಂಬ ಆರೋಪದಲ್ಲಿಯೂ ಗೋಸಾವಿ ಹೆಸರು ಕೇಳಿ ಬಂದಿತ್ತು.

'ನೋಟಿಸ್ ನೀಡದೆ ಸಮೀರ್ ಬಂಧನವಿಲ್ಲ'

ಪ್ರಜಾವಾಣಿ ವಾರ್ತೆ

ಮುಂಬೈ: ಮಾದಕಪದಾರ್ಥ ನಿಯಂತ್ರಣ ಬ್ಯೂರೊದ (ಎನ್‌ಸಿಬಿ) ವಲಯ ನಿರ್ದೇಶಕ ಸಮೀರ್ ವಾಂಖೆಡೆ ಅವರನ್ನು ಮೂರು ದಿನಗಳ ನೋಟಿಸ್ ನೀಡದೆ ಬಂಧಿಸುವುದಿಲ್ಲ ಎಂಬ ಭರವಸೆಯನ್ನು ಬಾಂಬೆ ಹೈಕೋರ್ಟ್‌ಗೆ ಮಹಾರಾಷ್ಟ್ರ ಪೊಲೀಸ್ ಇಲಾಖೆಯು ನೀಡಿದೆ.

ಬಾಲಿವುಡ್ ನಟ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್ ಆರೋಪಿಯಾಗಿರುವ ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪ್ರಕರಣಕ್ಕೆ ಸಂಬಂಧಿಸಿ ತಮ್ಮ ವಿರುದ್ಧ ಸುಲಿಗೆ ಪ್ರಕರಣ ದಾಖಲಾಗಿದೆ. ಪೊಲೀಸರು ತಮ್ಮನ್ನು ಬಂಧಿಸುವ ಅಪಾಯ ಇದೆ. ಹಾಗಾಗಿ ಬಂಧನದಿಂದ ರಕ್ಷಣೆ ನೀಡಬೇಕು ಎಂದು ಕೋರಿ ಸಮೀರ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಸಮೀರ್ ವಿರುದ್ಧದ ಆರೋಪಗಳ ಬಗೆಗಿನ ತನಿಖೆಯನ್ನು ಸಿಬಿಐ ಅಥವಾ ರಾಷ್ಟ್ರೀಯ ತನಿಖಾ ಸಂಸ್ಥೆಯಂತಹ (ಎನ್‌ಐಎ) ಕೇಂದ್ರದ ಸ್ವತಂತ್ರ ತನಿಖಾ ಸಂಸ್ಥೆಯೊಂದಕ್ಕೆ ಒಪ್ಪಿಸಬೇಕು ಎಂದೂ ಅರ್ಜಿಯಲ್ಲಿ ಕೋರಲಾಗಿತ್ತು.

ಮುಂಬೈ ಪೊಲೀಸರ ತನಿಖೆಯಯು ಪೂರ್ವಗ್ರಹಪೀಡಿತವಾಗಬಹುದು ಮತ್ತು ನ್ಯಾಯಯುತ ಆಗಿಲ್ಲದೇ ಇರಬಹುದು. ಸಮೀರ್ ಅವರು ಎನ್‌ಸಿಬಿಯ ಅತ್ಯುತ್ತಮ ಅಧಿಕಾರಿಗಳಲ್ಲಿ ಒಬ್ಬರು. ಆರ್ಯನ್ ಖಾನ್ ಬಂಧನದ ಬಳಿಕ ಅವರನ್ನು ಸಾರ್ವಜನಿಕವಾಗಿ ತೇಜೋವಧೆ ಮಾಡಲಾಗುತ್ತಿದೆ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

ಹೆಂಡತಿಯ ಪತ್ರ: ಸಮೀರ್ ವಾಂಖೆಡೆ ಅವರ ವಿರುದ್ಧ ಲಂಚ ಮತ್ತು ಅಧಿಕಾರ ದುರ್ಬಳಕೆಯ ಆರೋಪ ಕೇಳಿ ಬಂದ ಬೆನ್ನಿಗೇ, ಅವರ ಹೆಂಡತಿ ಕ್ರಾಂತಿ ರೇಡ್ಕರ್ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಪತ್ರ ಬರೆದು ನ್ಯಾಯ ದೊರಕಿಸಿಕೊಡುವಂತೆ ಕೋರಿದ್ದಾರೆ.

ವಾಂಖೆಡೆ ಕುಟುಂಬವನ್ನು ಗುರಿ ಮಾಡಿ ದಾಳಿ ನಡೆಸಲಾಗುತ್ತಿದೆ ಎಂದು ಮರಾಠಿಯಲ್ಲಿ ಬರೆಯಲಾದ ಒಂದು ಪುಟದ ಪತ್ರದಲ್ಲಿ ಹೇಳಲಾಗಿದೆ.

ಮಹಾರಾಷ್ಟ್ರದ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ಮತ್ತು ಎನ್‌ಸಿಪಿ ಮುಖ್ಯ ವಕ್ತಾರ ನವಾಬ್ ಮಲಿಕ್ ಅವರು, ಸಮೀರ್ ಅವರ ವಿರುದ್ಧ ನಿತ್ಯವೂ ಒಂದಲ್ಲ ಒಂದು ಆರೋಪ ಮಾಡುತ್ತಿದ್ದಾರೆ. ಮಲಿಕ್ ಅವರ ಅಳಿಯನನ್ನೂ ಸಮೀರ್ ಡ್ರಗ್ಸ್ ಪ್ರಕರಣದಲ್ಲಿ ಬಂಧಿಸಿದ್ದರು.

'ಜನರ ಮುಂದೆ ನಮ್ಮನ್ನು ದಿನವೂ ಅವಮಾನಿಸಲಾಗುತ್ತಿದೆ. ಛತ್ರಪತಿ ಶಿವಾಜಿ ಮಹಾರಾಜರ ರಾಜ್ಯದಲ್ಲಿ ಮಹಿಳೆಯರ ಘನತೆಯ ಜೊತೆ ಆಟವಾಡಲಾಗುತ್ತಿದೆ. ಬಾಳಾ ಸಾಹೇಬ್ (ಉದ್ಧವ್ ಅವರ ತಂದೆ ಬಾಳಾ ಠಾಕ್ರೆ) ಅವರು ಇದ್ದಿದ್ದರೆ ಅವರು ಇದನ್ನು ಸಹಿಸುತ್ತಿರಲಿಲ್ಲ' ಎಂದು ಸಿನಿಮಾ ನಟಿಯೂ ಆಗಿರುವ ರೇಡ್ಕರ್ ಹೇಳಿದ್ದಾರೆ.

'ಅವರು ಇಲ್ಲ, ಆದರೆ ನೀವು ಇದ್ದೀರಿ. ನಿಮ್ಮಲ್ಲಿ ನಾವು ಅವರನ್ನು ಕಾಣುತ್ತಿದ್ದೇವೆ. ನಿಮ್ಮ ಮೇಲೆ ನಮಗೆ ನಂಬಿಕೆ ಇದೆ. ನನಗೆ ಮತ್ತು ನನ್ನ ಕುಟುಂಬಕ್ಕೆ ಆಗುತ್ತಿರುವ ಅನ್ಯಾಯವನ್ನು ನೀವು ತಡೆಯುತ್ತೀರಿ ಎಂಬ ನಂಬಿಕೆ ಇದೆ' ಎಂದಿದ್ದಾರೆ.

'ನನ್ನ ಗಂಡ (ಸಮೀರ್ ವಾಂಖೆಡೆ) ಪ್ರಾಮಾಣಿಕ ಅಧಿಕಾರಿ. 15 ವರ್ಷಗಳಿಂದ ಅವರು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಮೀರ್ ಅವರು ಯಾವುದೇ ರಾಜಕೀಯ ಪಕ್ಷದ ಜತೆ ಸಂಪರ್ಕ ಹೊಂದಿಲ್ಲ. ಕೇಂದ್ರ ಸರ್ಕಾರದ ಉದ್ಯೋಗಿಯಾಗಿರುವ ಅವರು ತಮ್ಮ ಕೆಲಸವನ್ನಷ್ಟೇ ನಿರ್ವಹಿಸುತ್ತಿದ್ದಾರೆ. ಅವರ ಕೆಲಸದ ಬಗ್ಗೆ ಕೆಲವರಿಗೆ ಸಮಸ್ಯೆ ಇದೆ. ಅದುವೇ ಈಗಿನ ಎಲ್ಲ ಸಮಸ್ಯೆಗಳಿಗೆ ಕಾರಣ' ಎಂದು ರೇಡ್ಕರ್ ವಿವರಿಸಿದ್ದಾರೆ.

ಮಹಿಳಾ ಆಯೋಗಕ್ಕೆ ದೂರು

ಸಮೀರ್ ವಾಂಖೆಡೆ ಅವರ ಸಹೋದರಿ ಯಾಸ್ಮೀನ್ ವಾಂಖೆಡೆ ಅವರು ಸಚಿವ ನವಾಬ್ ಮಲಿಕ್ ವಿರುದ್ಧ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ. ಮಾನಹಾನಿ, ಬೆದರಿಕೆ, ಅವಮಾನ, ಮಹಿಳೆಯರ ಘನತೆಗೆ ಕುತ್ತು ಸೇರಿದಂತೆ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್‌ಗಳಡಿ ಮಲಿಕ್ ವಿರುದ್ಧ ಪ್ರಕರಣ ದಾಖಲಿಸುವಂತೆ ಪೊಲೀಸರಿಗೆ ನಿರ್ದೇಶನ ನೀಡಬೇಕು. ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆ ಅಡಿಯಲ್ಲಿಯೂ ದೂರು ದಾಖಲಿಸಲು ಸೂಚಿಸಬೇಕು ಎಂದು ಕೋರಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಘೋಷಣೆ

ಭಾರತ, ಅಮೆರಿಕ, ಚೀನಾ, ಜಪಾನ್ ಮತ್ತು ಆಸ್ಟ್ರೇಲಿಯಾ ಸೇರಿದಂತೆ ಹಲವು ಇತರ ದೇಶಗಳು ಆಸಿಯಾನ್ ಕೂಟದ ಪಾಲುದಾರರಾಗಿದ್ದಾರೆ

'2022 ಆಸಿಯಾನ್–ಭಾರತ ಸ್ನೇಹ ವರ್ಷ'

ನವದೆಹಲಿ (ಪಿಟಿಐ): ಆಸಿಯಾನ್ ಕೂಟ ರಾಷ್ಟ್ರಗಳ ಏಕತೆ ಮತ್ತು ಕೇಂದ್ರೀಯತೆಯು ಭಾರತಕ್ಕೆ ಯಾವಾಗಲೂ ಪ್ರಮುಖ ಆದ್ಯತೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದ್ದಾರೆ.

2022ರ ವರ್ಷವನ್ನು 'ಆಸಿಯಾನ್–ಭಾರತ ಸ್ನೇಹ ವರ್ಷ' ಎಂದು ಆಚರಿಸಲಾಗುವುದು ಎಂದು ಇದೇ ವೇಳೆ ಅವರು ಘೋಷಿಸಿದರು.

ಭಾರತ–ಆಸಿಯಾನ್ ಶೃಂಗಸಭೆಯನ್ನು ಉದ್ದೇಶಿಸಿ ವರ್ಚುವಲ್ ವಿಧಾನದ ಮೂಲಕ ಮಾತನಾಡಿದ ಅವರು, ಭಾರತದ ಇಂಡೊ–ಪೆಸಿಫಿಕ್ ಸಾಗರಗಳ ಯೋಜನೆಯು (ಐಪಿಒಪಿ) ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಆಸಿಯಾನ್ ಕೂಟದ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದು ಮತ್ತು ಪರಸ್ಪರ ಸಹಕಾರ ನೀಡುವುದಾಗಿದೆ ಎಂದು ಅವರು ಹೇಳಿದರು.

'ಕೋವಿಡ್ ಪಿಡುಗಿನಿಂದ ಭಾರತ–ಆಸಿಯಾನ್ ಕೂಟದ ಸ್ನೇಹಕ್ಕೂ ಪರೀಕ್ಷೆಯ ಸಮಯವಾಗಿತ್ತು. ಆದರೆ ಪಿಡುಗಿನ ಈ ಯುಗದಲ್ಲಿ ನಮ್ಮ ಪರಸ್ಪರ ಸಹಕಾರ, ಸಹಾನುಭೂತಿಯಿಂದ ಭವಿಷ್ಯದಲ್ಲೂ ನಮ್ಮ ಸ್ನೇಹ ಮುಂದುವರಿಯುತ್ತದೆ' ಎಂದು ಪ್ರಧಾನಿ ಮೋದಿ ಹೇಳಿದರು.

'2022ರ ವರ್ಷದಲ್ಲಿ ನಮ್ಮ ನಡುವಿನ ಸಹಭಾಗಿತ್ವವು 30 ವರ್ಷಗಳನ್ನು ಪೂರೈಸಲಿದೆ. ಭಾರತವು ತನ್ನ ಸ್ವಾತಂತ್ರ್ಯದ 75 ವರ್ಷಗಳನ್ನು ಪೂರ್ಣಗೊಳಿಸುತ್ತದೆ. ಈ ಮೈಲುಗಲ್ಲನ್ನು ಸಂಭ್ರಮಿಸಲು ನಾವು 'ಆಸಿಯಾನ್–ಭಾರತದ ಸ್ನೇಹ ವರ್ಷ' ಎಂದು ಆಚರಿಸಲು ನನಗೆ ಬಹಳ ಹರ್ಷವಾಗುತ್ತದೆ' ಎಂದರು.

10 ರಾಷ್ಟ್ರಗಳ ಆಸಿಯಾನ್ ಅಂತರರಾಷ್ಟ್ರೀಯ ಸಂಘಟನೆಯು ಈ ಪ್ರದೇಶದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದೆ.

ಪಾರ್ಶ್ವವಾಯು ಚಿಕಿತ್ಸಾ ಸೌಲಭ್ಯ ಬಲಪಡಿಸಲು ಡಬ್ಲ್ಯುಎಚ್‌ಒ ಬದ್ಧ

ಡಾ.ಪೂನಂ

ನವದೆಹಲಿ (ಪಿಟಿಐ): 'ಕಡಿಮೆ ಮತ್ತು ಮಧ್ಯಮ ಆದಾಯ ಹೊಂದಿರುವ ದೇಶಗಳಲ್ಲಿ ಅಂದಾಜು ಶೇ 70ರಷ್ಟು ಪಾರ್ಶ್ವವಾಯು ಹಾಗೂ ಶೇ 87ರಷ್ಟು ಪಾರ್ಶ್ವವಾಯುಗೆ ಸಂಬಂಧಿಸಿದ ಕಾಯಿಲೆಗಳಿಂದ ಸಾವುಗಳುಂಟಾಗುತ್ತಿವೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಆಗ್ನೇಯ ಏಷ್ಯಾದ ಪ್ರಾದೇಶಿಕ ನಿರ್ದೇಶಕಿ ಡಾ.ಪೂನಂ ಖೇತ್ರಪಾಲ್ ಸಿಂಗ್ ಗುರುವಾರ ಹೇಳಿದ್ದಾರೆ.

'ವಿಶ್ವ ಆರೋಗ್ಯ ಸಂಸ್ಥೆಯು ಆಗ್ನೇಯ ಏಷ್ಯಾದ ಎಲ್ಲಾ ದೇಶಗಳಲ್ಲೂ ಪಾರ್ಶ್ವವಾಯು ಅಪಾಯವನ್ನು ಕಡಿಮೆ ಮಾಡುವ ನಿಟ್ಟನಲ್ಲಿ ಕೆಲಸ ಮಾಡುತ್ತಿದೆ. ಪಾರ್ಶ್ವವಾಯು ತಡೆಗಟ್ಟಲು, ಚಿಕಿತ್ಸೆ ಮತ್ತು ಪಾರ್ಶ್ವವಾಯು ಸಂಬಂಧಿತ ಅಂಗವೈಕಲ್ಯಕ್ಕೆ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಬಲಪಡಿಸಲು ಬದ್ಧವಾಗಿದೆ' ಎಂದು ಅವರು ವಿಶ್ವ ಪಾರ್ಶ್ವವಾಯು ದಿನಕ್ಕೂ (ಅ. 29) ಮುನ್ನ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಆಗ್ನೇಯ ಏಷ್ಯಾದ ಪ್ರದೇಶಗಳಲ್ಲಿ ಸಾಂಕ್ರಾಮಿಕವಲ್ಲದ ಕಾಯಿಲೆಗಳನ್ನು ತಡೆಗಟ್ಟುವ, ನಿಯಂತ್ರಿಸುವ (ಎನ್‌ಸಿಡಿ) ಮತ್ತು ಸಾರ್ವತ್ರಿಕ ಆರೋಗ್ಯ ರಕ್ಷಣೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. 2016ರ ಕೊಲಂಬೊ ಘೋಷಣೆಗೆ ಅನುಗುಣವಾಗಿ ಪ್ರಾಥಮಿಕ ಹಂತದಲ್ಲಿ ಎನ್‌ಸಿಡಿಯ ಸೇವೆಯನ್ನು ವಿಸ್ತರಿಸಲಾಗುತ್ತಿದೆ' ಎಂದೂ ಅವರು ಹೇಳಿದ್ದಾರೆ.

'ಪ್ರಾಥಮಿಕ ಹಂತದಲ್ಲಿಯೇ ಪಾರ್ಶ್ವವಾಯುವಿನ ಲಕ್ಷಣಗಳನ್ನು ಪತ್ತೆಹಚ್ಚುವುದರಿಂದ ಅದರಿಂದ ಉಂಟಾಗುವ ಪರಿಣಾಮಗಳನ್ನು ತಡೆಯಬಹುದು. ಸೂಕ್ತ ಚಿಕಿತ್ಸಾ ಸೌಲಭ್ಯ ಮತ್ತು ಜೀವನ ಶೈಲಿಯ ಬದಲಾವಣೆಯಿಂದ ಕನಿಷ್ಠ 50 ಪ್ರತಿಶತದಷ್ಟು ಪಾರ್ಶ್ವವಾಯು ಘಟನೆಗಳನ್ನು ತಡೆಯಬಹುದು. ಪಾರ್ಶ್ವವಾಯು ಚಿಕಿತ್ಸೆಗೆ ಸಂಬಂಧಿಸಿದ ಔಷಧಿಗಳನ್ನು ಡಬ್ಲ್ಯುಎಚ್‌ಒ ಅಗತ್ಯ ಔಷಧಿಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿದೆ. ಇದನ್ನು ರಾಷ್ಟ್ರೀಯ ಅಗತ್ಯ ಔಷಧಿಗಳ ಪಟ್ಟಿಯಲ್ಲೂ ಸೇರಿಸುವ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಲಾರಿ ಹರಿದು ಮೂವರು ರೈತ ಮಹಿಳೆಯರ ಸಾವು

ಬಹದ್ದೂರ್‌ಗಡ (ಹರಿಯಾಣ): ರೈತ ಮಹಿಳೆಯರು ಆಟೊ ರಿಕ್ಷಾಕ್ಕಾಗಿ ಕಾಯುತ್ತಿದ್ದ ವೇಳೆ ಅವರ ಮೇಲೆ ಲಾರಿ ಹರಿದು ಮೂವರು ಮಹಿಳೆಯರು ಮೃತಪಟ್ಟು, ಇಬ್ಬರು ಗಾಯಗೊಂಡಿರುವ ಘಟನೆ ಇಲ್ಲಿಯ ಟಿಕ್ರಿ ಗಡಿಯಲ್ಲಿ ನಡೆದಿದೆ.

ಈ ರೈತ ಮಹಿಳೆಯರು ಪಂಜಾಬ್‌ನ ಮಾನ್ಸ ಜಿಲ್ಲೆಯ ಖೀವ ದ್ಯಾಲುವಾಲ ಗ್ರಾಮದವರು. ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಟಿಕ್ರಿ ಗಡಿಯಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಅವರು ಇಲ್ಲಿಗೆ ಬಂದಿದ್ದರು.

ಪ್ರತಿಭಟನೆಯಲ್ಲಿ ಭಾಗಿಯಾದ ಬಳಿಕ ತಮ್ಮ ಗ್ರಾಮಕ್ಕೆ ಹಿಂದಿರುಗುವ ಸಲುವಾಗಿ ಬಹದ್ದೂರ್‌ಗಡ ರೈಲು ನಿಲ್ದಾಣಕ್ಕೆ ಹೋಗಲು ರಿಕ್ಷಾಕ್ಕಾಗಿ ಕಾಯುತ್ತಿದ್ದ ವೇಳೆ ಈ ಅಪಘಾತ ನಡೆದಿದೆ. ಗಾಯಗೊಂಡವರನ್ನು ರೋಹ್ಟಕ್‌ನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪಘಾತ ನಡೆದ ಸ್ಥಳದಿಂದ ಲಾರಿ ಚಾಲಕ ತಪ್ಪಿಸಿಕೊಂಡಿದ್ದಾನೆ.

ಮೃತ ಮಹಿಳೆಯರನ್ನು ಛಿಂದರ್ ಕೌರ್ (60), ಅಮರ್‌ಜೀತ್ ಕೌರ್ (58) ಮತ್ತು ಗರ್ಮೈಲ್ ಕೌರ್ (60) ಎಂದು ಗುರುತಿಸಲಾಗಿದೆ.

ರಾಹುಲ್ ಆಕ್ರೋಶ: 'ಭಾರತ ಮಾತೆ, ದೇಶದ ಅನ್ನದಾತರನ್ನು ಹೊಸಕಿ ಹಾಕಲಾಗಿದೆ. ಕ್ರೌರ್ಯ ಮತ್ತು ದ್ವೇಷ ನಮ್ಮ ದೇಶವನ್ನು ತುಂಬಿಕೊಳ್ಳುತ್ತಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ಚೆನ್ನೈ: ರಜನಿಕಾಂತ್ ಆಸ್ಪತ್ರೆಗೆ ದಾಖಲು

ಚೆನ್ನೈ: ಸೂಪರ್ ಸ್ಟಾರ್ ರಜನಿಕಾಂತ್ (70) ಗುರುವಾರ ನಿಯಮಿತ ಆರೋಗ್ಯ ತಪಾಸಣೆಗಾಗಿ ಇಲ್ಲಿನ ಕಾವೇರಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಸಂಜೆ 4.30ಕ್ಕೆ ಅವರು ಆಸ್ಪತ್ರೆ ತಲುಪಿರುವುದಾಗಿ ತಿಳಿದು ಬಂದಿದೆ. 'ನಿಯಮಿತವಾಗಿ ನಡೆಸುವ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಯಲ್ಲಿದ್ದಾರೆ' ಎಂದು ರಜನಿಕಾಂತ್ ಅವರ ಪ್ರಚಾರಕ ರಿಯಾಜ್ ಕೆ. ಅಹ್ಮದ್ ಹೇಳಿದ್ದಾರೆ.

2020ರ ಡಿಸೆಂಬರ್‌ನಲ್ಲಿ ಚಿತ್ರೀಕರಣದಲ್ಲಿ ರಜನಿಕಾಂತ್ ಅವರಿಗೆ ರಕ್ತದೊತ್ತಡದಲ್ಲಿ ಏರುಪೇರು ಉಂಟಾದ ಕಾರಣ ಹೈದರಾಬಾದ್‌ನಲ್ಲಿ ಅಪೋಲೊ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದರು.

ಅಜೀಮ್ ಪ್ರೇಮ್‌ಜಿ ದಾನದಲ್ಲಿ ಮೊದಲಿಗ



ಪ್ರೇಮ್‌ಜಿ

ಮುಂಬೈ (ಪಿಟಿಐ): ದೇಶದ ಪ್ರಮುಖ ಸಾಫ್ಟ್‌ವೇರ್ ಕಂಪನಿಗಳಲ್ಲಿ ಒಂದಾದ ವಿಪ್ರೊ ಸ್ಥಾಪಕ ಅಜೀಮ್ ಪ್ರೇಮ್‌ಜಿ ಅವರು 2020–21ನೇ ಆರ್ಥಿಕ ವರ್ಷದಲ್ಲಿಯೂ ದೇಶದ ದಾನಿಗಳಲ್ಲಿ ಮೊದಲಿಗ ಅನಿಸಿಕೊಂಡಿದ್ದಾರೆ. ಅವರು ಈ ವರ್ಷದಲ್ಲಿ ದಾನ ನೀಡಿದ ಮೊತ್ತ ₹9,713 ಕೋಟಿ. ಅಂದರೆ, ಪ್ರತಿ ದಿನ ಅವರು ₹27 ಕೋಟಿ ದಾನ ನೀಡಿದಂತಾಗಿದೆ.

ದೇಶವು ಕೋವಿಡ್ ಸಾಂಕ್ರಾಮಿಕದಿಂದ ಸಂಕಷ್ಟಕ್ಕೆ ಒಳಗಾದ ವರ್ಷದಲ್ಲಿ ಅಜೀಮ್ ಅವರು ತಮ್ಮ ದಾನದ ಪ್ರಮಾಣವನ್ನು ನಾಲ್ಕನೇ ಒಂದರಷ್ಟು ಹೆಚ್ಚಳ ಮಾಡಿದ್ದಾರೆ.

ಎಡೆಲ್‌ಗಿವ್ ಹುರುನ್ ಇಂಡಿಯಾ ಫಿಲಾಂಥ್ರಪಿ ಪಟ್ಟಿ 2021ರಲ್ಲಿ ಈ ಮಾಹಿತಿ ಇದೆ. ಈ ಪಟ್ಟಿಯ ಪ್ರಕಾರ, ಎಚ್‌ಸಿಎಲ್‌ನ ಶಿವ ನಾಡಾರ್ ಅವರು ಎರಡನೇ ಸ್ಥಾನದಲ್ಲಿದ್ದಾರೆ. ಅವರ ದಾನದ ಮೊತ್ತವು ₹1,263 ಕೋಟಿ.

ದೇಶದ ಅತ್ಯಂತ ದೊಡ್ಡ ಶ್ರೀಮಂತ, ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ₹577 ಕೋಟಿ ದಾನ ನೀಡಿದ್ದಾರೆ. ₹377 ಕೋಟಿ ದಾನ ಮಾಡಿರುವ ಕುಮಾರಮಂಗಲಂ ಬಿರ್ಲಾ ಮತ್ತು ₹183 ಕೋಟಿ ದಾನ ನೀಡಿರುವ ನಂದನ್ ನಿಲೇಕಣಿ ಅವರು 4 ಮತ್ತು 5ನೇ ಸ್ಥಾನಗಳಲ್ಲಿದ್ದಾರೆ. ದೇಶದ ಎರಡನೇ ಅತಿ ದೊಡ್ಡ ಶ್ರೀಮಂತ ಗೌತಮ್ ಅದಾನಿ ಅವರು ₹130 ಕೋಟಿ ದಾನ ಕೊಟ್ಟಿದ್ದಾರೆ. ಅವರು ಎಂಟನೇ ಸ್ಥಾನದಲ್ಲಿದ್ದಾರೆ.

ಕೋವಿಡ್: 22 ದಿನಗಳಲ್ಲಿ ಗರಿಷ್ಠ ಪ್ರಕರಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಗುರುವಾರ 478 ಕೋವಿಡ್ ಪ್ರಕರಣಗಳು ವರದಿಯಾಗಿವೆ. 22 ದಿನಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಒಂದು ದಿನದಲ್ಲಿ 1.13 ಲಕ್ಷ ಮಾದರಿ ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.42 ರಷ್ಟಿದೆ. 7 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 11 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 235 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.87 ಲಕ್ಷಕ್ಕೆ ಏರಿಕೆಯಾಗಿದೆ.

ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 8,557ಕ್ಕೆ ಏರಿಕೆ ಕಂಡಿದೆ. 16 ಜಿಲ್ಲೆಗಳಲ್ಲಿ 50ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ. ಬಾಗಲಕೋಟೆ ಸೇರಿದಂತೆ 6 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಹತ್ತರೊಳಗೆ ಇದೆ. ಬೆಂಗಳೂರಿನಲ್ಲಿ ಗರಿಷ್ಠ (6,493) ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ 334 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.40 ಲಕ್ಷ ದಾಟಿದೆ.

17 ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಏಳು ಮಂದಿ, ದಕ್ಷಿಣ ಕನ್ನಡದಲ್ಲಿ ನಾಲ್ವರು, ಕೋಲಾರ ಹಾಗೂ ಮೈಸೂರಿನಲ್ಲಿ ತಲಾ ಇಬ್ಬರು, ಹಾಸನ ಹಾಗೂ ರಾಮನಗರದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 3.55 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,054ಕ್ಕೆ ಏರಿಕೆಯಾಗಿದೆ.

ನ. 30ರವರೆಗೆ ನಿಯಂತ್ರಣ ಕ್ರಮ ಮುಂದುವರಿಕೆ

ನವದೆಹಲಿ (ಪಿಟಿಐ): ಕೆಲವು ರಾಜ್ಯಗಳಲ್ಲಿ ಸ್ಥಳೀಯವಾಗಿ ಕೋವಿಡ್ ಪ್ರಕರಣಗಳು ವರದಿಯಾಗುತ್ತಿರುವುದರಿಂದ ನ. 30ರವರೆಗೆ ರಾಷ್ಟ್ರವ್ಯಾಪಿ ಕೋವಿಡ್ ನಿಯಂತ್ರಣ ಕ್ರಮಗಳನ್ನು ಮುಂದುವರಿಸಲು ಕೇಂದ್ರ ಸರ್ಕಾರವು ಗುರುವಾರ ನಿರ್ಧರಿಸಿದೆ.

'ಕೋವಿಡ್–19 ಹರಡುವುದನ್ನು ತಡೆಯಲು ಸದ್ಯ ಜಾರಿಯಲ್ಲಿರುವ ಮಾರ್ಗಸೂಚಿಗಳು ನವೆಂಬರ್ 30ರವರೆಗೆ ಮುಂದುವರಿಯುತ್ತವೆ' ಎಂದು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಅವರು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ದೇಶದಲ್ಲಿ ದೈನಂದಿನ ಪ್ರಕರಣಗಳು ಮತ್ತು ಒಟ್ಟಾರೆ ರೋಗಿಗಳ ಸಂಖ್ಯೆ ಸ್ಥಿರವಾಗಿ ಕ್ಷೀಣಿಸುತ್ತಿದೆ. ಆದರೆ ಕೆಲವು ರಾಜ್ಯಗಳಲ್ಲಿ ಸ್ಥಳೀಯವಾಗಿ ಸೋಂಕು ಹರಡುತ್ತಿದೆ ಎಂದೂ ಅವರು ಹೇಳಿದ್ದಾರೆ.

'ಕೋವಿಡ್ ಪ್ರಕರಣಗಳು ಉಲ್ಬಣಗೊಳ್ಳುವ ಸಾಧ್ಯತೆಯನ್ನು ತಡೆಗಟ್ಟಲು ಹಬ್ಬದ ಋತುವಿನಲ್ಲಿ ಕಾರ್ಯತಂತ್ರ ರೂಪಿಸಲಾಗಿದೆ. ಪರೀಕ್ಷೆ, ಪತ್ತೆ, ಚಿಕಿತ್ಸೆ, ಲಸಿಕೆ ಮತ್ತು ಕೋವಿಡ್ ನಿಯಮ ಅನುಸರಣೆ ಎನ್ನುವ ಐದು ಕಾರ್ಯತಂತ್ರಗಳಿಗೆ ಆದ್ಯತೆ ನೀಡಬೇಕಾಗಿದೆ. ಅರ್ಹರಿಗೆ ತಪ್ಪದೇ ಎರಡನೇ ಡೋಸ್ ಲಸಿಕೆ ನೀಡಬೇಕು' ಎಂದು ಅವರು ಸೂಚಿಸಿದ್ದಾರೆ.

'ಕೋವಿಡ್ ಎ.ವೈ 4.2 ಮಾರಣಾಂತಿಕವಲ್ಲ'

ಬೆಂಗಳೂರು: ಕೊರೊನಾ ವೈರಾಣುವಿನ ಡೆಲ್ಟಾ ರೂಪಾಂತರದ ಹೊಸ ತಳಿ ಎ.ವೈ 4.2 ಬಗ್ಗೆ ಅಧ್ಯಯನಗಳು ನಡೆಯುತ್ತಿದ್ದು, ಇದು ಮಾರಣಾಂತಿಕವಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಕರ್ನಾಟಕ ಸೇರಿದಂತೆ ದೇಶದ ವಿವಿಧೆಡೆ ಹೊಸ ತಳಿಯ ವೈರಾಣು ಪತ್ತೆಯಾಗಿದೆ. ಬ್ರಿಟನ್‌ನಲ್ಲಿ ಈ ತಳಿಯ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗಿವೆ.

ಡೆಲ್ಟಾ ರೂಪಾಂತರಿಯಿಂದ ದೇಶದಲ್ಲಿ ಎರಡನೇ ಅಲೆಯ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗಿದ್ದವು. ಈಗ ಅದರ ರೂಪಾಂತರ ತಳಿ ಕಾಣಿಸಿಕೊಂಡಿದ್ದು, ಪ್ರಕರಣಗಳ ಪತ್ತೆಗೆ ಶಂಕಿತ ಮಾದರಿಗಳನ್ನು ವೈರಾಣು ಅನುಕ್ರಮಣಿಕೆ ಪರೀಕ್ಷೆ (ಜೀನೋಮ್ ಸೀಕ್ವೆನ್ಸಿಂಗ್) ನಡೆಸಲಾಗುತ್ತಿದೆ. ಇದು ಹೆಚ್ಚಿನ ಪ್ರಸರಣ ಹೊಂದುವ ಸಾಧ್ಯತೆಯಿದ್ದರೂ ಮಾರಣಾಂತಿಕವಲ್ಲ ಎಂದು ಇಲಾಖೆ ಹೇಳಿದೆ.

ರೂಪಾಂತರಿ ತಳಿಯ ಬಗ್ಗೆ ಹೆಚ್ಚಿನ ಅಧ್ಯಯನಗಳನ್ನು ನಡೆಸಲಾಗುತ್ತಿದೆ. ಇದರ ಬಗ್ಗೆ ಅನಗತ್ಯವಾಗಿ ಭಯಕ್ಕೆ ಒಳಗಾಗಬೇಕಿಲ್ಲ. ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುವ ಮೂಲಕ ಮುನ್ನೆಚ್ಚರಿಕೆ ವಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

'ನೀಟ್' ಫಲಿತಾಂಶ ಪ್ರಕಟಿಸಲು ಅನುಮತಿ ನೀಡಿದ ಸುಪ್ರೀಂ

ನವದೆಹಲಿ (ಪಿಟಿಐ): ದೇಶದಾದ್ಯಂತ ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದಿದ್ದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯ (ನೀಟ್) ಫಲಿತಾಂಶವನ್ನು ಪ್ರಕಟಿಸಲು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ (ಎನ್‌ಟಿಎ) ಸುಪ್ರೀಂ ಕೋರ್ಟ್ ಗುರುವಾರ ಅನುಮತಿ ನೀಡಿದೆ.

'ನೀಟ್' ಫಲಿತಾಂಶ ಘೋಷಿಸದಂತೆ ಮತ್ತು ಇಬ್ಬರು ಪರೀಕ್ಷಾರ್ಥಿಗಳಿಗೆ ಮರು ಪರೀಕ್ಷೆ ನಡೆಸುವಂತೆ ಬಾಂಬೆ ಹೈಕೋರ್ಟ್ ಇತ್ತೀಚೆಗೆ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್, ಸಂಜೀವ್ ಖನ್ನಾ ಮತ್ತು ಬಿ.ಆರ್.ಗವಾಯಿ ಅವರನ್ನೊಳಗೊಂಡ ಪೀಠವು ತಡೆಯಾಜ್ಞೆ ನೀಡಿತು.

ಇಬ್ಬರು ಪರೀಕ್ಷಾರ್ಥಿಗಳಾದ ವೈಶಾನವಿ ಭೋಪಾಲಿ ಮತ್ತು ಅಭಿಷೇಕ್ ಶಿವಾಜಿ ಅವರ ಪ್ರಶ್ನೆ ಪತ್ರಿಕೆಗಳು ಮತ್ತು ಒಎಂಆರ್ ಪ್ರತಿಗಳು ಪರೀಕ್ಷೆಗೂ ಮುನ್ನಾ ಪರೀಕ್ಷಾ ಕೇಂದ್ರದಲ್ಲಿ ಬೆರೆತು ಹೋಗಿದ್ದವು. ಹೀಗಾಗಿ ಅವರಿಗೆ ಮತ್ತೊಮ್ಮೆ ಅವಕಾಶ ಕೊಡಬೇಕು. ಈ ಇಬ್ಬರ ಪರೀಕ್ಷಾ ಫಲಿತಾಂಶವನ್ನು ಸೆಪ್ಟೆಂಬರ್ 12ರಂದು ನಡೆಸಿದ ಪರೀಕ್ಷೆಯ ಫಲಿತಾಂಶದ ಜತೆಗೇ ಪ್ರಕಟಿಸಬೇಕು ಎಂದು ಹೈಕೋರ್ಟ್ ಆದೇಶಿಸಿತ್ತು.

'ದೀಪಾವಳಿ ರಜೆಯ ನಂತರ ಈ ಇಬ್ಬರು ವಿದ್ಯಾರ್ಥಿಗಳ ಬಗ್ಗೆ ತೀರ್ಮಾನಿಸುತ್ತೇವೆ. ಅಷ್ಟರಲ್ಲಿ ಈ ಕುರಿತು ಸಂಬಂಧಿಸಿದವರಿಗೆ ಪ್ರತಿಕ್ರಿಯಿಸಲು ನೋಟಿಸ್ ಜಾರಿ ಮಾಡುತ್ತೇವೆ' ಎಂದ ಪೀಠವು, 'ನಾವು 16 ಲಕ್ಷ ವಿದ್ಯಾರ್ಥಿಗಳ ಫಲಿತಾಂಶವನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ' ಎಂದು ತಿಳಿಸಿತು.

ಸೆಪ್ಟೆಂಬರ್ 12ರಂದು ದೇಶದ 202 ನಗರಗಳ 3,682 ಪರೀಕ್ಷಾ ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ನಡೆದಿತ್ತು. 16,14,777 ಪರೀಕ್ಷಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದರು.

ಸಂಜಯ್ ನಿರುಪಮ್ ಕ್ಷಮೆಯಾಚಿಸಿದ ಮಾಜಿ ಸಿಎಜಿ ರಾಯ್



ವಿನೋದ್ ರಾಯ್

ನವದೆಹಲಿ (ಪಿಟಿಐ): ಮಾಜಿ ಸಿಎಜಿ ವಿನೋದ್ ರಾಯ್ ಕಾಂಗ್ರೆಸ್ ನಾಯಕ ಸಂಜಯ್ ನಿರುಪಮ್ ಅವರಿಗೆ ಬೇಷರತ್ ಕ್ಷಮೆಯಾಚಿಸಿದ್ದಾರೆ.

2ಜಿ ತರಂಗಾಂತರ ಹಂಚಿಕೆ ಕುರಿತ ಸಿಎಜಿ ವರದಿಯಲ್ಲಿ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಹೆಸರು ಉಲ್ಲೇಖಿಸದಂತೆ ಸಂಸದರೊಬ್ಬರು ಒತ್ತಡ ಹೇರಿದ್ದರು ಎಂಬ ವಿವರಿಸುವಾಗ ಸಂಜಯ್ ನಿರುಪಮ್ ಅವರ ಹೆಸರನ್ನು ತಪ್ಪಾಗಿ ಉಲ್ಲೇಖಿಸಿದ್ದೆ ಎಂದು ವಿನೋದ್ ರಾಯ್ ಹೇಳಿದ್ದಾರೆ.

ಮಾಜಿ ಸಿಎಜಿ ವಿನೋದ್ ಅವರು 2014ರಲ್ಲಿ ನೀಡಿದ ವರದಿಯಲ್ಲಿ ನಿರುಪಮ್ ವಿರುದ್ಧ ಆರೋಪ ಮಾಡಿ ಅದನ್ನು ಸಂದರ್ಶನದಲ್ಲೂ ಪುನರಾವರ್ತಿಸಿದ್ದರು. ಅದಕ್ಕಾಗಿ ನಿರುಪಮ್ ಅವರು ವಿನೋದ್ ರಾಯ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದರು.

ಪ್ರವಾಹ: ಮೃತರ ಕುಟುಂಬಕ್ಕೆ ₹ 5 ಲಕ್ಷ ಪರಿಹಾರ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಈಚೆಗೆ ಸಂಭವಿಸಿದ ಪ್ರವಾಹ, ಭೂಕುಸಿತಗಳಲ್ಲಿ ಮೃತಪಟ್ಟವರ ಸಂಬಂಧಿಕರಿಗೆ ₹5 ಲಕ್ಷ ಹಾಗೂ ಮನೆ ಕಳೆದುಕೊಂಡವರಿಗೆ ₹10 ಲಕ್ಷ ಪರಿಹಾರ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

'ಪಟಾಕಿ ನಿಷೇಧ ಯಾವುದೇ ಸಮುದಾಯಕ್ಕೆ ವಿರುದ್ಧವಲ್ಲ'

ಒಂದನೇ ಪುಟದಿಂದ

'ಎಲ್ಲಾ ಸ್ವರೂಪದ ಪಟಾಕಿಗಳನ್ನು ನಾವು ನಿಷೇಧಿಸಿಲ್ಲ. ಪ್ರತಿವರ್ಷ ಪಟಾಕಿಗಳ ಕಾರಣದಿಂದ ದೆಹಲಿಯ ಜನರು ಏನೆಲ್ಲಾ ಅನುಭವಿಸುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಂಡಿದ್ದೇವೆ' ಎಂದು ಪೀಠವು ಹೇಳಿದೆ.

'ಪಟಾಕಿಗೆ ನಿಷೇಧ ಹೇರಿದ್ದರೂ, ಇಂದಿಗೂ ಪಟಾಕಿಗಳು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿವೆ. ಆದರೆ ನಿಷೇಧ ಆದೇಶದ ಪ್ರಕಾರ ಕೇವಲ ಹಸಿರು ಪಟಾಕಿಗಳಷ್ಟೇ ಮಾರಾಟವಾಗಬೇಕು. ಅದೂ ಪರವಾನಗಿ ಪಡೆದ ಮಾರಾಟಗಾರರ ಮೂಲಕ ಮಾತ್ರ. ಆನ್‌ಲೈನ್ ಮೂಲಕವೂ ಪಟಾಕಿ ಮಾರಾಟವನ್ನು ನಿಷೇಧಿಸಲಾಗಿದೆ. ನಿಷೇಧವನ್ನು ಜಾರಿಗೆ ತರಬೇಕಾದ ಪ್ರಾಧಿಕಾರಗಳು ಆದೇಶವನ್ನು ಯಥಾವತ್ತಾಗಿ ಮತ್ತು ಪೂರ್ಣಪ್ರಮಾಣದಲ್ಲಿ ಜಾರಿಗೆ ತರಬೇಕು' ಎಂದು ಪೀಠವು ಹೇಳಿದೆ.

ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್

ಜೈವಿಕ ರಕ್ಷಣೆ ವ್ಯವಸ್ಥೆ ನಿರ್ಮಿಸುವ ಅಗತ್ಯವಿದೆ

ಪುಣೆ (ಪಿಟಿಐ): 'ಅಪಾಯಕಾರಿ ರೋಗಕಾರಕಗಳ ಉದ್ದೇಶಪೂರ್ವಕ ಸಶಸ್ತ್ರೀಕರಣ ಗಂಭೀರವಾಗಿ ಗಮನಿಸಬೇಕಾದ ವಿಷಯ. ಜೈವಿಕ ರಕ್ಷಣೆ, ಜೈವಿಕ ಸುರಕ್ಷತೆ ಮತ್ತು ಜೈವಿಕ ಭದ್ರತೆಯಲ್ಲಿ ರಾಷ್ಟ್ರವನ್ನು ಸಮರ್ಥವಾಗಿ ನಿರ್ಮಿಸುವ ಅಗತ್ಯವನ್ನು ಹೆಚ್ಚಿಸಿದೆ' ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಗುರುವಾರ ಇಲ್ಲಿ ಹೇಳಿದರು.

ಪುಣೆ ಇಂಟರ್‌ನ್ಯಾಷನಲ್ ಸೆಂಟರ್ ಇಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಭದ್ರತೆ (ಪಿಡಿಎನ್‌ಎಸ್) 2021ರ ಪುಣೆ ಸಂವಾದದಲ್ಲಿ 'ವಿಪತ್ತುಗಳು ಮತ್ತು ಸಾಂಕ್ರಾಮಿಕ ಯುಗದಲ್ಲಿ ರಾಷ್ಟ್ರೀಯ ಭದ್ರತಾ ಸನ್ನದ್ಧತೆ' ಕುರಿತು ಅವರು ಮಾತನಾಡಿದರು.

ಕೋವಿಡ್ –19 ಸಾಂಕ್ರಾಮಿಕ ಮತ್ತು ಹವಾಮಾನ ಬದಲಾವಣೆ ನಿರಂತರ ಎಚ್ಚರಿಕೆಯ ಸಂದೇಶವಾಗಿದೆ. ಎಲ್ಲರ ಯೋಗಕ್ಷೇಮ ಮಾತ್ರ ಎಲ್ಲರ ಉಳಿವನ್ನು ಖಾತ್ರಿಪಡಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಹವಾಮಾನ ಬದಲಾವಣೆಯ ವಿಷಯದ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ವಿಪತ್ತುಗಳು ಮತ್ತು ಸಾಂಕ್ರಾಮಿಕ ರೋಗಗಳು ಗಡಿಯಿಲ್ಲದ ಬೆದರಿಕೆಗಳಾಗಿವೆ. ಇವುಗಳನ್ನು ಪ್ರತ್ಯೇಕವಾಗಿ ಎದುರಿಸಲು ಸಾಧ್ಯವಿಲ್ಲ. ನಮ್ಮ ಲಾಭಗಳನ್ನು ಹೆಚ್ಚಿಸಲು ಮತ್ತು ನಷ್ಟವನ್ನು ಕಡಿಮೆ ಮಾಡಲು ತಂತ್ರಗಳನ್ನು ಅಭಿವೃದ್ಧಿಪಡಿಸುವ ಅವಶ್ಯಕತೆಯಿದೆ ಎಂದು ಹೇಳಿದರು.

ಸಾಂಕ್ರಾಮಿಕವು ಬೆದರಿಕೆಗಳನ್ನು ಅಂದಾಜಿಸುವ ಅಗತ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಜೈವಿಕ ಸಂಶೋಧನೆಯು ಕಾನೂನುಬದ್ಧ ವೈಜ್ಞಾನಿಕ ಉದ್ದೇಶಗಳನ್ನು ಹೊಂದಿದ್ದರೂ, ಅದರ ದ್ವಿಬಳಕೆಯ ಅಪ್ಲಿಕೇಶನ್ ಅನ್ನು ದುರುಪಯೋಗಪಡಿಸಿಕೊಳ್ಳಬಹುದು ಎಂದು ಅವರು ಹೇಳಿದರು.

ಹವಾಮಾನ ಬದಲಾವಣೆಯೂ ಅನಿರೀಕ್ಷಿತ ಪರಿಣಾಮಗಳನ್ನು ತಂದೊಡ್ಡುವ ಮತ್ತೊಂದು 'ಬೆದರಿಕೆ'ಯಾಗಿದೆ. ಇದು ಸಂಪನ್ಮೂಲಗಳ ಲಭ್ಯತೆಯ ಮೇಲೆ ಪರಿಣಾಮ ಬೀರುತ್ತದೆ, ಜತೆಗೆ ಸ್ಪರ್ಧೆಗಿಂತ ಸಂಘರ್ಷದ ಮೂಲವೂ ಆಗಬಹುದು ಎಂದರು.

ಹವಾಮಾನ ಬದಲಾವಣೆಯು ಅಸ್ಥಿರತೆಯನ್ನು ವೇಗಗೊಳಿಸುತ್ತದೆ. ಬೃಹತ್ ಜನಸಂಖ್ಯೆಯ ಸ್ಥಳಾಂತರಕ್ಕೂ ಕಾರಣವಾಗಲಿದೆ. 2030ರ ವೇಳೆಗೆ ಭಾರತದಲ್ಲಿ 60 ಕೋಟಿ ಜನರು ನಗರ ಪ್ರದೇಶಗಳಲ್ಲಿ ವಾಸಿಸುವ ನಿರೀಕ್ಷೆಯಿದೆ. ಹವಾಮಾನ ಬದಲಾವಣೆಯಿಂದಾಗಿ ದಕ್ಷಿಣ ಏಷ್ಯಾದ ತಗ್ಗು ಪ್ರದೇಶದ ಕರಾವಳಿ ಪ್ರದೇಶಗಳಿಂದ ವಲಸೆಗಳು ಈಗಾಗಲೇ ಒತ್ತುವರಿಯಾಗಿರುವ ನಗರಗಳಲ್ಲಿ ಮೂಲಸೌಕರ್ಯದ ಕೊರತೆಗಳನ್ನು ಹೆಚ್ಚಿಸಬಹುದು. ಇವೆಲ್ಲವೂ ಆಂತರಿಕ ಭದ್ರತಾ ನಿರ್ವಹಣೆ, ಆರ್ಥಿಕ ಭದ್ರತೆ, ನೀರು ಮತ್ತು ಆಹಾರ ಭದ್ರತೆಯ ಸಮಸ್ಯೆಗಳನ್ನು ಉಂಟುಮಾಡುತ್ತವೆ ಎಂದು ಅವರು ಹೇಳಿದರು.

ಲಯಕ್ಕೆ ಮರಳಿದ ಡೇವಿಡ್ ವಾರ್ನರ್; ಆ್ಯರನ್ ಫಿಂಚ್ ಉತ್ತಮ ಬ್ಯಾಟಿಂಗ್; ಮಿಂಚಿದ ಜಂಪಾ

ಆಸ್ಟ್ರೇಲಿಯಾಗೆ ಮಣಿದ ಲಂಕಾ

ದುಬೈ(ಪಿಟಿಐ): ಎಡಗೈ ಬ್ಯಾಟರ್ ಡೇವಿಡ್ ವಾರ್ನರ್ ಕೊನೆಗೂ ಲಯಕ್ಕೆ ಮರಳಿದರು. ಅವರೊಂದಿಗೆ ನಾಯಕ ಆ್ಯರನ್ ಫಿಂಚ್ ಮತ್ತು ಸ್ಟೀವ್ ಸ್ಮಿತ್ ಕೂಡ ಮಿಂಚಿದರು. ಇದರ ಪರಿಣಾಮ ಆಸ್ಟ್ರೇಲಿಯಾ ತಂಡ ಸೂಪರ್ 12 ರ ಹಂತದ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ಏಳು ವಿಕೆಟ್‌ಗಳಿಂದ ಶ್ರೀಲಂಕಾವನ್ನು ಮಣಿಸಿತು.

155 ರನ್‌ಗಳ ಸಾಧಾರಣ ಗುರಿಯನ್ನು ಬೆನ್ನತ್ತಿದ ಫಿಂಚ್ ಬಳಗ ಇನ್ನೂ 18 ಎಸೆತಗಳು ಉಳಿದಿರುವಾಗ ದಡ ಸೇರಿತು.

ಅರ್ಧಶತಕ ಗಳಿಸಿದ ಡೇವಿಡ್ ವಾರ್ನರ್ ಸಂಭ್ರಮ –ಪಿಟಿಐ ಚಿತ್ರ

ಆಸ್ಟ್ರೇಲಿಯಾ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು.

ಕುಶಾಲ ಪೆರೆರಾ ಮತ್ತು ಬಾನುಕಾ ರಾಜಪಕ್ಷೆ ಅವರ ಚುರುಕಿನ ಬ್ಯಾಟಿಂಗ್‌ನಿಂದಾಗಿ ಶ್ರೀಲಂಕಾ ತಂಡ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 154 ರನ್ ಗಳಿಸಿತ್ತು.

ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ (27ಕ್ಕೆ2), ಪ್ಯಾಟ್ ಕಮಿನ್ಸ್ (34ಕ್ಕೆ2) ಮತ್ತು ಸ್ಪಿನ್ನರ್ ಆ್ಯಡಂ ಜಂಪಾ (12ಕ್ಕೆ2) ಶ್ರೀಲಂಕಾ ದೊಡ್ಡ ಮೊತ್ತ ಕಲೆಹಾಕದಂತೆ ತಡೆಯೊಡ್ಡಿದರು.

ಲಂಕಾ ಇನಿಂಗ್ಸ್‌ನ ಆರಂಭ ಉತ್ತಮವಾಗಿರಲಿಲ್ಲ. ಮೂರನೇ ಓವರ್ ನಲ್ಲಿಯೇ ಪ್ಯಾಟ್ ಕಮಿನ್ಸ್ ಎಸೆತದಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಪಥುಮ್ ನಿಸಾಂಕ (7ರನ್) ಔಟಾದರು.

ಕ್ರೀಸ್‌ನಲ್ಲಿದ್ದ ಕುಶಾಲ ಪರೆರಾ (35; 25ಎ) ಅವರೊಂದಿಗೆ ಸೇರಿಕೊಂಡ ಅಸಲಂಕಾ (35; 27ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 63 ರನ್ ಸೇರಿಸಿದರು. ಇದರಿಂದಾಗಿ ರನ್‌ರೇಟ್ ಕೂಡ ಚೆನ್ನಾಗಿತ್ತು.

ಆದರೆ, ಸ್ಪಿನ್ನರ್ ಆ್ಯಡಂ ಜಂಪಾ 10ನೇ ಓವರ್‌ನಲ್ಲಿ ಅಸಲಂಕಾ ವಿಕೆಟ್ ಗಳಿಸಿ, ಜೊತೆಯಾಟ ಮುರಿದರು. ನಂತರದ ಓವರ್‌ನಲ್ಲಿ ಮಿಚೆಲ್ ಸ್ಟಾರ್ಕ್ ಎಸೆತದಲ್ಲಿ ಕುಶಾಲ ಪರೆರಾ ಔಟಾದರು. ಜಂಪಾ ಹಾಕಿದ 12ನೇ ಓವರ್‌ನಲ್ಲಿ ಅವಿಷ್ಕಾ ಫರ್ನಾಂಡೊ ಔಟಾದರು. ಇದರಿಂದಾಗಿ ರನ್ ಗಳಿಕೆಯ ವೇಗ ಕುಸಿಯಿತು.

ಆದರೆ, ರಾಜಪಕ್ಸ (ಔಟಾಗದೆ 33; 26ಎ, 4 ಬೌಂಡರಿ, 1ಸಿಕ್ಸರ್) ಅವರ ಬಿರುಸಿನ ಬ್ಯಾಟಿಂಗ್‌ನಿಂದಾಗಿ ತಂಡದ ಮೊತ್ತವು ಹೆಚ್ಚಾಯಿತು.

ಒಂದು ಕಡೆ ವಿಕೆಟ್‌ಗಳು ಉರುಳುತ್ತಿದ್ದರೂ ಇನ್ನೊಂದೆಡೆ ರಾಜಪಕ್ಸ ಅವರ ಆತ್ಮವಿಶ್ವಾಸದ ಆಟ ಗಮನ ಸೆಳೆಯಿತು.

ಆಸ್ಟ್ರೇಲಿಯಾ ತಂಡದ ಗ್ಲೆನ್ ಮ್ಯಾಕ್ಸ್‌ವೆಲ್ ಒಂದು ಓವರ್ ಬೌಲಿಂಗ್ ಮಾಡಿ 16 ರನ್ ಬಿಟ್ಟುಕೊಟ್ಟು ದುಬಾರಿಯಾದರು.

ಆಸ್ಟ್ರೇಲಿಯಾ ನಾಯಕ ಆ್ಯರನ್ ಫಿಂಚ್ ಬ್ಯಾಟಿಂಗ್ ಶೈಲಿ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಶ್ರೀಲಂಕಾ 6ಕ್ಕೆ 154 (20 ಓವರ್)
ಪಥುನ್ ಸಿ ವಾರ್ನರ್ ಬಿ ಕಮಿನ್ಸ್ 7 (9 ಎ, 4x1), ಕುಶಾಲ್ ಬಿ ಸ್ಟಾರ್ಕ್ 35 (25 ಎ, 4x4, 6x1), ಚರಿತ್ ಸಿ ಸ್ಮಿತ್ ಬಿ ಜಂಪಾ 35 (27 ಎ, 4x4, 6x1), ಆವಿಷ್ಕ ಸಿ ಸ್ಮಿತ್ ಬಿ ಜಂಪಾ 4 (7 ಎ), ಭನುಕ ಔಟಾಗದೆ 33 (26 ಎ, 4x4, 6x1), ವಾನಿಂದು ಸಿ ವೇಡ್ ಬಿ ಸ್ಟಾರ್ಕ್ 4 (2 ಎ, 4x1), ದಸುನ್ ಸಿ ವೇಡ್ ಬಿ ಕಮಿನ್ಸ್ 12 (19 ಎ, 4x1), ಚಮಿಕ ಔಟಾಗದೆ 9 (6 ಎ, 4x1)
ಇತರೆ (ಲೆಗ್ ಬೈ 4, ನೋಬಾಲ್ 1, ವೈಡ್ 10) 15
ವಿಕೆಟ್ ಪತನ: 1-15 (ಪಥುಮ್ ನಿಸಾಂಕ, 2.3), 2-78 (ಚರಿತ್ ಅಸಲಂಕ, 9.4), 3-86 (ಕುಶಾಲ್ ಪೆರೇರ, 10.3), 4-90 (ಆವಿಷ್ಕ ಫೆರ್ನಾಂಡೊ, 11.5), 5-94 (ವನಿಂದು ಹಸರಂಗ, 12.2), 6-134 (ದಸುನ್ ಶನಕ, 17.4)
ಬೌಲಿಂಗ್: ಮಿಷೆಲ್ ಸ್ಟಾರ್ಕ್ 4–0–27–2, ಜೋಶ್ ಹ್ಯಾಜಲ್‌ವುಡ್ 4–0–26–0, ಪ್ಯಾಟ್ ಕಮಿನ್ಸ್ 4–0–34–2, ಗ್ಲೆನ್ ಮ್ಯಾಕ್ಸ್‌ವೆಲ್ 1–0–16–0, ಮಾರ್ಕಸ್ ಸ್ಟೋಯಿನಿಸ್ 3–0–35–0, ಆ್ಯಡಂ ಜಂಪಾ 4–0–12–2

ಆಸ್ಟ್ರೇಲಿಯಾ 3ಕ್ಕೆ 155 (17 ಓವರ್)
ವಾರ್ನರ್ ಸಿ ರಾಜಪಕ್ಷೆ ಬಿ 65 (42 ಎ, 4x10, 6x1), ಫಿಂಚ್ ಬಿ ಡಿಸಿಲ್ವಾ 37 (23 ಎ, 4x5, 6x2), ಮ್ಯಾಕ್ಸ್‌ವೆಲ್ ಸಿ ಫೆರ್ನಾಂಡೊ ಬಿ ಡಿಸಿಲ್ವಾ 5 (6 ಎ, 4x1), ಸ್ಮಿತ್ ಔಟಾಗದೆ 28 (26 ಎ, 4x1), ಸ್ಟೋಯಿನಿಸ್ ಔಟಾಗದೆ 16 (7 ಎ, 4x2, 6x1)
ಇತರೆ (ನೋಬಾಲ್ 2, ವೈಡ್ 2) 4
ವಿಕೆಟ್ ಪತನ: 1-70 (ಆ್ಯರನ್ ಫಿಂಚ್, 6.5), 2-80 (ಗ್ಲೆನ್ ಮ್ಯಾಕ್ಸ್‌ವೆಲ್, 8.3), 3-130 (ಡೇವಿಡ್ ವಾರ್ನರ್, 14.6)
ಬೌಲಿಂಗ್: ಚಮಿಕ ಕರುಣರತ್ನೆ 2–0–19–0, ಮಹೀಶ್ ತೀಕ್ಷಣ 4–0–27–0, ದುಷ್ಮಂತ ಚಮೀರ 3–0–33–0, ಲಾಹಿರು ಕುಮಾರ 3–0–48–0, ವಾನಿಂದು ಹಸರಂಗ ಡಿಸಿಲ್ವಾ 4–0–22–2, ದಸುನ್ ಶನಕ 1–0–6–1

ಫಲಿತಾಂಶ: ಆಸ್ಟ್ರೇಲಿಯಾಗೆ 7 ವಿಕೆಟ್‌ಗಳ ಜಯ

ಕ್ಷಮೆ ಕೋರಿದ ಕ್ವಿಂಟನ್

ದುಬೈ (ಎಎಫ್‌ಪಿ): ವರ್ಣ ತಾರತಮ್ಯದ ವಿರುದ್ಧ ಮೊಣಕಾಲೂರಿ ಪ್ರತಿಭಟನೆ ವ್ಯಕ್ತಪಡಿಸಲು ಮುಂದಾಗದ ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿ'ಕಾಕ್ ಕ್ಷಮೆ ಕೋರಿದ್ದು ಮುಂದಿನ ಪಂದ್ಯದಲ್ಲಿ ಕಪ್ಪು ವರ್ಣೀಯರಿಗೆ ಬೆಂಬಲ ಸೂಚಿಸುವುದಾಗಿ ತಿಳಿಸಿದ್ದಾರೆ.

'ವರ್ಣ ತಾರತಮ್ಯದ ವಿರುದ್ಧ ನಡೆಯಬೇಕಾಗಿರುವ ಹೋರಾಟದ ಮಹತ್ವ ನನಗೆ ಚೆನ್ನಾಗಿ ತಿಳಿದಿದೆ. ಈ ವಿಷಯದಲ್ಲಿ ಕ್ರೀಡಾಪಟುಗಳು ಮಾದರಿಯಾಗಬೇಕು ಎಂಬುದೂ ನನಗೆ ತಿಳಿದಿದೆ. ಇದು ವಿವಾದ ಆಗಬೇಕು ಎಂದು ಬಯಸುವುದಿಲ್ಲ. ತಂಡದ ಸಹ ಆಟಗಾರರು ಮತ್ತು ದೇಶದ ಕ್ರಿಕೆಟ್ ಅಭಿಮಾನಿಗಳಲ್ಲಿ ಕ್ಷಮೆ ಕೋರುತ್ತಿದ್ದೇನೆ' ಎಂದು ಡಿ'ಕಾಕ್ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಕ್ವಿಂಟನ್ ಡಿ'ಕಾಕ್ ಎಎಫ್‌ಪಿ ಚಿತ್ರ

'ನನ್ನ ಕುಟುಂಬದಲ್ಲಿ ಎರಡೂ ಬಣ್ಣದವರು ಇದ್ದಾರೆ. ತಂಗಿಯಂದಿರು ಬಿಳಿಯರಾಗಿದ್ದು ತಾಯಿ ಕಪ್ಪು ವರ್ಣದವರು. ಸಣ್ಣಂದಿನಿಂದಲೇ ಕಪ್ಪುವರ್ಣೀಯರ ಬಗ್ಗೆ ವಿಶೇಷ ಕಾಳಜಿ ಇತ್ತು' ಎಂದು ಅವರು ವಿವರಿಸಿದ್ದಾರೆ.

ಮಂಗಳವಾರ ವೆಸ್ಟ್ ಇಂಡೀಸ್ ಎದುರು ನಡೆದ ಪಂದ್ಯದ ಸಂದರ್ಭದಲ್ಲಿ 'ಬ್ಲ್ಯಾಕ್ ಲಿವ್ಸ್ ಮ್ಯಾಟರ್' ಆಂದೋಲನದ ಪರವಾಗಿ ಮೊಣಕಾಲೂರಲು ಡಿ'ಕಾಕ್ ನಿರಾಕರಿಸಿದ್ದರು. ಅವರ ಈ ವರ್ತನೆಗೆ ಜಗತ್ತಿನ ನಾನಾ ಕಡೆಗಳಿಂದ ಟೀಕೆ ವ್ಯಕ್ತವಾಗಿತ್ತು.



ಕೀರನ್ ಪೊಲಾರ್ಡ್ –ಎಎಫ್‌ಪಿ ಚಿತ್ರ

ತಂಡಕ್ಕೆ ಹೋಲ್ಡರ್

ದುಬೈ (ಪಿಟಿಐ): ಗಾಯಗೊಂಡಿರುವ ವೇಗದ ಬೌಲರ್ ಒಬೆದ್ ಮೆಕಾಯ್ ಬದಲಿಗೆ ಆಲ್‌ರೌಂಡರ್ ಜೇಸನ್ ಹೋಲ್ಡರ್ ಅವರನ್ನು ವೆಸ್ಟ್ ಇಂಡೀಸ್ ತಂಡಕ್ಕೆ ಸೇರ್ಪಡೆಗೊಳಿಸಲಾಗಿದೆ. ವಿಶ್ವಕಪ್ ಟೂರ್ನಿಯ ತಾಂತ್ರಿಕ ಸಮಿತಿ ಈ ಬದಲಾವಣೆಗೆ ಒಪ್ಪಿಗೆ ನೀಡಿದೆ. ಇದನ್ನು ಐಸಿಸಿ ಖಚಿತಪಡಿಸಿದೆ.

ಕೋವಿಡ್-19ರ ಹಿನ್ನೆಲೆಯಲ್ಲಿ ತಂಡಗಳು ಕರೆದುಕೊಂಡು ಹೋಗುವ ಹೆಚ್ಚುವರಿ ಆಟಗಾರರ ಸಂಖ್ಯೆಯ ಮೇಲೆ ನಿರ್ಬಂಧವಿದೆ. ಹೀಗಾಗಿ ಹೋಲ್ಡರ್ ಕಾಯ್ದಿರಿಸಿದ ಆಟಗಾರರ ಪಟ್ಟಿಯಲ್ಲಿದ್ದರು.

ಟ್ವೆಂಟಿ-20 ರ‍್ಯಾಂಕಿಂಗ್

ಬಾಂಗ್ಲಾದೇಶ	ವೆಸ್ಟ್ ಇಂಡೀಸ್
8	10

ಆರಂಭ ಸಂಜೆ 3.30 (ಭಾರತೀಯ ಕಾಲಮಾನ)

ಲೈವ್: ಸ್ಟಾರ್ ಸ್ಪೋರ್ಟ್ಸ್

ಸತತ ವೈಫಲ್ಯ ಕಂಡಿರುವ ತಂಡಗಳ ಮುಖಾಮುಖಿ

ವಿಂಡೀಸ್‌ಗೆ ಬಾಂಗ್ಲಾ ಸವಾಲು

ಶಾರ್ಜಾ (ಪಿಟಿಐ): ಸತತ ಎರಡು ಪಂದ್ಯ ಸೋತಿರುವ ಬಾಂಗ್ಲಾದೇಶ ಮತ್ತು ಹಾಲಿ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡಗಳು ಒಂದನೇ ಗುಂಪಿನ ಸೂಪರ್ 12 ಹಂತದ ಮಹತ್ವದ ಪಂದ್ಯದಲ್ಲಿ ಶುಕ್ರವಾರ ಸೆಣಸಲಿವೆ.

ಸೆಮಿಫೈನಲ್ ಹಂತಕ್ಕೆ ಸಾಗುವ ಕನಸು ಜೀವಂತವಾಗಿ ಉಳಿಸಬೇಕಾದರೆ ಈ ಪಂದ್ಯದಲ್ಲಿ ಎರಡೂ ತಂಡಗಳಿಗೆ ಗೆಲುವು ಅನಿವಾರ್ಯವಾಗಿದೆ.

ವೆಸ್ಟ್ ಇಂಡೀಸ್ ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿದೆ. ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ಎದುರು 55 ರನ್‌ಗಳಿಗೆ ಆಲೌಟಾಗಿದ್ದ ತಂಡ ಎರಡನೇ ಪಂದ್ಯದಲ್ಲಿ ನೂರರ ಗಡಿ ದಾಟಿತ್ತಾದರೂ ಎವಿನ್ ಲೂಯಿಸ್ ಅವರನ್ನು ಹೊರತುಪಡಿಸಿದರೆ ತಂಡದ ಇತರ ಬ್ಯಾಟರ್‌ಗಳು ನಿರೀಕ್ಷೆಗೆ ತಕ್ಕಂತೆ ಆಡಿರಲಿಲ್ಲ.

ಆ ಪಂದ್ಯದಲ್ಲಿ ಲೆಂಡ್ಲ್ ಸಿಮನ್ಸ್ ಅವರಿಗೆ ಇನಿಂಗ್ಸ್ ಆರಂಭಿಸುವ ಜವಾಬ್ದಾರಿ ನೀಡಲಾಗಿತ್ತು.

ಆದರೆ ಅವರು 35 ಎಸೆತಗಳಲ್ಲಿ 16 ರನ್ ಗಳಿಸಿ ನಿರಾಸೆ ಮೂಡಿಸಿದ್ದರು. ಕೊನೆಯ ಒಂಬತ್ತು ಓವರ್‌ಗಳಲ್ಲಿ 64 ರನ್‌ಗಳಿಗೆ ಎಂಟು ವಿಕೆಟ್ ಕಳೆದುಕೊಂಡಿತ್ತು. ಶುಕ್ರವಾರದ ಪಂದ್ಯದಲ್ಲಿ ಸಿಮನ್ಸ್ ಬದಲಿಗೆ ರಾಸ್ಟನ್ ಚೇಸ್ ಅವರಿಗೆ ಅವಕಾಶ ನೀಡುವ ಸಾಧ್ಯತೆ ಇದೆ.

ತಂಡದ ಬೌಲರ್‌ಗಳು ಕೂಡ ಪರಿಣಾಮ ಬೀರುತ್ತಿಲ್ಲ. ಎಡಗೈ ಸ್ಪಿನ್ನರ್ ಅಕೀಲ್ ಹೊಸೇನ್ ಅವರನ್ನು ಬಿಟ್ಟರೆ ಉಳಿದ ಯಾರಿಗೂ ಎದುರಾಳಿ ಬ್ಯಾಟರ್‌ಗಳನ್ನು ನಿಯಂತ್ರಿಸಲು ಆಗುತ್ತಿಲ್ಲ.

ಬಾಂಗ್ಲಾದೇಶ ಕೂಡ ಸಂಕಷ್ಟದಲ್ಲಿದೆ. ಉಪಖಂಡದ ಪಿಚ್‌ನಲ್ಲಿ ಆ ತಂಡ ಪ್ರಭಾವ ಬೀರಬೇಕಾಗಿತ್ತು.

ಆದರೆ ತೀವ್ರ ಪೈಪೋಟಿ ಒಡ್ಡಿದರೂ ಜಯ ಮರೀಚಿಕೆ ಆಗುತ್ತಿದೆ. ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾದಂಥ ಬಲಿಷ್ಠ ತಂಡಗಳನ ವಿರುದ್ಧ ಜಯ ಗಳಿಸಿ ಟೂರ್ನಿಗೆ ಬಂದಿದ್ದ ತಂಡ ಇಲ್ಲಿ ಪರಿಣಾಮ ಬೀರಲು ವಿಫಲವಾಗಿದೆ. ಮೊಹಮ್ಮದ್ ನಯೀಮ್, ಲಿಟನ್ ದಾಸ್, ಶಕೀಬ್ ಅಲ್ ಹಸನ್, ಮೊಹಮ್ಮದುಲ್ಲ, ಮುಷ್ಫಿಕುರ್ ರಹೀಂ ಮುಂತಾದವರು ಪ್ರತಿಭಾವಂತ ಬ್ಯಾಟರ್‌ಗಳು. ಆದರೆ ಅವರ ಬ್ಯಾಟ್‌ನಿಂದ ನಿರೀಕ್ಷಿತ ಮಟ್ಟದಲ್ಲಿ ರನ್‌ಗಳು ಬರುತ್ತಿಲ್ಲ.

ವಿಶ್ವಕಪ್‌ನಲ್ಲಿ ಬಲಾಬಲ

ತಂಡ	ಪಂದ್ಯ	ಜಯ	ಸೋಲು	ಟೈ	ಫಲಿತಾಂಶವಿಲ್ಲ
ವೆಸ್ಟ್ ಇಂಡೀಸ್	33	17	14	1	1
ಬಾಂಗ್ಲಾದೇಶ	30	7	22	-	1

ಸ್ಪಿನ್ನರ್ ರಶೀದ್ ಖಾನ್, ಮುಜೀಬ್ ಉರ್ ರೆಹಮಾನ್ ಮೇಲೆ ನಿರೀಕ್ಷೆ

ಪಾಕ್ ಓಟಕ್ಕೆ ತಡೆಯೊಡ್ಡುವುದೇ ಅಫ್ಗನ್?

ಶಾರ್ಜಾ(ಪಿಟಿಐ): ಸತತ ಎರಡು ಪಂದ್ಯಗಳಲ್ಲಿ ಗೆದ್ದು ಆತ್ಮವಿಶ್ವಾಸದ ಆಗಸದಲ್ಲಿ ವಿಹರಿಸುತ್ತಿರುವ ಪಾಕಿಸ್ತಾನ ತಂಡಕ್ಕೆ ಶುಕ್ರವಾರ ಅಫ್ಘಾನಿಸ್ತಾನ ಬಳಗವು ಸವಾಲೊಡ್ಡಲಿದೆ.

ಉತ್ತಮ ಬೌಲಿಂಗ್ ಪಡೆ ಇರುವ ಅಫ್ಗನ್ ತಂಡವು ಪಾಕ್ ಬ್ಯಾಟಿಂಗ್‌ಗೆ ಕಠಿಣ ಸವಾಲೊಡ್ಡುವಲ್ಲಿ ಯಶಸ್ವಿಯಾಗುವುದೇ ಎಂಬ ಕುತೂಹಲ ಗರಿಗೆದರಿಸಿದೆ. ಸ್ಕಾಟ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಅಫ್ಗನ್ ತಂಡದ ಗೆಲುವಿನಲ್ಲಿ ನಜೀಬ್ ಉರ್ ರೆಹಮಾನ್ (5 ವಿಕೆಟ್) ಮತ್ತು ಸ್ಪಿನ್ನರ್ ರಶೀದ್ ಖಾನ್ (4 ವಿಕೆಟ್) ಅವರು ಮಿಂಚಿದ್ದರು. ಐಪಿಎಲ್‌ನಲ್ಲಿ ತಮ್ಮ ಸ್ಪಿನ್ ಮೋಡಿಯಿಂದ ಗಮನ ಸೆಳೆದಿರುವ ಅನುಭವಿ ರಶೀದ್ ಪಾಕ್ ತಂಡ ಬ್ಯಾಟಿಂಗ್ ಬಲಕ್ಕೆ ತಡೆಯೊಡ್ಡಬಲ್ಲ ಪ್ರತಿಭಾವಂತ.

ಆದರೆ ಭಾರತ ಮತ್ತು ನ್ಯೂಜಿಲೆಂಡ್‌ನಂತಹ ಬಲಶಾಲಿ ತಂಡಗಳನ್ನೇ ಮಣಿಸಿರುವ ಪಾಕ್ ಸೆಮಿಫೈನಲ್ ಸನಿಹಕ್ಕೆ ಬಂದು ನಿಂತಿದೆ. ನಾಯಕ ಬಾಬರ್ ಆಜಂ ಮತ್ತು ಮೊಹಮ್ಮದ್ ರಿಜ್ವಾನ್ ಅವರು ಉತ್ತಮ ಆರಂಭ ನೀಡುತ್ತಿದ್ದಾರೆ. ಶೋಯಬ್ ಮಲಿಕ್, ಮೊಹಮ್ಮದ್ ಹಫೀಜ್ , ಇಮಾದ್ ವಸೀಂ, ಜಮಾನ್ ಅವರು ಮಧ್ಯಮ ಕ್ರಮಾಂಕದಲ್ಲಿ ಸ್ಥಿರತೆ ಒದಗಿಸುವ ಸಮರ್ಥರಾಗಿದ್ದಾರೆ. ಶಾಯಿನ್ ಶಾ ಆಫ್ರಿದಿ, ಹ್ಯಾರಿಸ್ ರವೂಫ್ ಅವರು ಉತ್ತಮ ಲಯದಲ್ಲಿರುವುದು ನಾಯಕ ಬಾಬರ್ ವಿಶ್ವಾಸ ಹೆಚ್ಚಲು ಕಾರಣವಾಗಿದೆ.

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಉಭಯ ತಂಡಗಳು ಈ ಹಿಂದೆ ಒಂದು ಬಾರಿ ಮುಖಾಮುಖಿಯಾದಾಗ ಪಾಕಿಸ್ತಾನ ಮೇಲುಗೈ ಸಾಧಿಸಿತ್ತು.

ರಶೀದ್ ಖಾನ್

ಬಾಬರ್ ಆಜಂ

ತಂಡಗಳು

ಪಾಕಿಸ್ತಾನ: ಬಾಬರ್ ಅಜಂ (ನಾಯಕ), ಮೊಹಮ್ಮದ್ ರಿಜ್ವಾನ, ಫಕರ್ ಜಮಾನ್, ಮೊಹಮ್ಮದ್ ಹಫೀಜ್, ಶೋಯಬ್ ಮಲಿಕ್, ಹಸನ್ ಅಲಿ, ಹ್ಯಾರಿಸ್ ರವೂಫ್, ಶಾಯಿನ್ ಶಾ ಆಫ್ರಿದಿ, ಇಮಾದ್ ವಸೀಂ, ಶಾದಾಬ್ ಖಾನ್, ಮೊಹಮ್ಮದ್ ನವಾಜ್, ಆಸಿಫ್ ಅಲಿ, ಹೈದರ್ ಅಲಿ, ಸರ್ಫರಾಜ್ ಅಹಮದ್, ಮೊಹಮ್ಮದ್ ವಸೀಂ, ಶೋಯಬ್ ಮಕ್ಸೂದ್.
ಅಫ್ಘಾನಿಸ್ತಾನ: ಮೊಹಮ್ಮದ್ ನಬಿ (ನಾಯಕ), ರಶೀದ್ ಖಾನ್, ರೆಹಮತ್ ಉಲ್ಲಾ ಗುರ್ಬಾಜ್, ಉಸ್ಮಾನ್ ಗಣಿ, ಅಸ್ಗರ್ ಅಫ್ಗನ್, ನಜೀಬುಲ್ ಜದ್ರಾನ್, ಹಸ್ಮತ್ ಉಲ್ಲಾ ಶಾಹಿದಿ, ಮೊಹಮ್ಮದ್ ಶೆಹಜಾದ್, ಮುಜೀಬ್ ಉರ್ ರೆಹಮಾನ್, ಕರೀಂ ಜನತ್, ಗುಲ್ಬದೀನ್ ನೈಬ್, ನವೀನ್ ಉಲ್ ಹಕ್, ಹಮೀದ್ ಹಸನ್, ಫರೀದ್ ಅಹಮದ್
ಪಂದ್ಯ ಆರಂಭ: ರಾತ್ರಿ 7.30

ಬಾಕ್ಸಿಂಗ್: ಪ್ರಿ ಕ್ವಾರ್ಟರ್‌ಗೆ ನರೇಂದ್ರ

ಬೆಲ್‌ಗ್ರೇಡ್ (ಪಿಟಿಐ): ಭಾರತದ ನರೇಂದ್ರ ಬೆರ್ವಾಲ್ ಮತ್ತು ರೋಹಿತ್ ಮೋರೆ ಅವರು ಎಐಬಿಎ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ 92+ ಕೆಜಿ ವಿಭಾಗದಲ್ಲಿ ನರೇಂದ್ರ ಅವರು ಸಿರಿಯಾದ ಲಿಯಾನಿ ಮೊಹಮ್ಮದ್ ಕೆಂಡೆ ವಿರುದ್ಧ ಜಯ ಗಳಿಸಿದರೆ 57 ಕೆಜಿ ವಿಭಾಗದಲ್ಲಿ ರೋಹಿತ್, ಬೋಸ್ನಿಯಾದ ಅಲೆನ್ ರಹಿಮಿಕ್ ಎದುರು ಗೆದ್ದರು.

ಬುಧವಾರ ತಡರಾತ್ರಿ ನಡೆಯಬೇಕಾಗಿದ್ದ ಬೌಟ್‌ನಲ್ಲಿ ಭಾರತದ ವರಿಂದರ್ ಸಿಂಗ್ ಎದುರಾಳಿಗೆ ವಾಕ್ ಓವರ್ ನೀಡಿದರು.

60 ಕೆಜಿ ವಿಭಾಗದಲ್ಲಿ ಅರ್ಮೇನಿಯಾದ ಕರೆನ್ ಟೊನಕನ್ಯನ್ ವಿರುದ್ಧ ಕಣಕ್ಕೆ ಇಳಿಯಬೇಕಾಗಿದ್ದ ವರಿಂದರ್ ತೀವ್ರ ಜ್ವರದಿಂದ ಬಳಲುತ್ತಿದ್ದಾರೆ.

86 ಕೆಜಿ ವಿಭಾಗದಲ್ಲಿ ಲಕ್ಷ್ಯ ಚಾಹರ್ ಕೊರಿಯಾದ ಕಿಮ್ ಹೆಂಗ್‌ಕ್ಯೂ ವಿರುದ್ಧ ಸೋಲುಂಡಿದ್ದರು. ಫಲಿತಾಂಶದಲ್ಲಿ ಅಸಮಾಧಾನಗೊಂಡಿದ್ದ ಭಾರತ ಪ್ರತಿಭಟನೆ ವ್ಯಕ್ತಪಡಿಸಿತು. ಆದರೆ ಇದನ್ನು ನಿರ್ಣಾಯಕರು ತಳ್ಳಿ ಹಾಕಿದರು.

ಮೂರನೇ ಸುತ್ತಿಗೆ ಲಕ್ಷ್ಯ ಸೇನ್

ಪ್ಯಾರಿಸ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಮೂರನೇ ಸುತ್ತಿಗೆ ಪ್ರವೇಶಿಸಿದ್ದಾರೆ.

ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಲಕ್ಷ್ಯ 21–17, 21–13 ರಿಂದ ಸಿಂಗಪುರದ ಲೊಹ್ ಕೀನ್ ಯೆವ್ ವಿರುದ್ಧ ಗೆದ್ದರು. 40 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ ಲಕ್ಷ್ಯ ಮೇಲುಗೈ ಸಾಧಿಸಿದರು.

ಆದರೆ, ಮಿಶ್ರ ಡಬಲ್ಸ್‌ನಲ್ಲಿ ಭಾರತಕ್ಕೆ ನಿರಾಶೆಯ ದಿನವಾಯಿತು. ಅಶ್ವಿನಿ ಪೊನ್ನಪ್ಪ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಜೋಡಿಯು ಸೋತಿತು. 16 ಘಟ್ಟದಲ್ಲಿ ಇಂಡೋನೇಷ್ಯಾದ ಪ್ರವೀಣ್ ಜೊರ್ಡಾನ್ ಮತ್ತು ಮೆಲಾಟಿ ಡೇವಾ ಓಕ್ಟಾವಿಯಾಂಟಿ 15–21, 21–17, 21–19 ರಿಂದ ಭಾರತದ ಜೋಡಿಯನ್ನು ಸೋಲಿಸಿದರು.

ಪಂದ್ಯದ ಮೊದಲ ಗೇಮ್‌ನಲ್ಲಿ ಅಶ್ವಿನಿ–ಸಾತ್ವಿಕ್ ಜೋಡಿಯು ಉತ್ತಮವಾಗಿ ಆಡಿ ಗೆದ್ದಿತು. ಆದರೆ ನಂತರದ ಎರಡು ಗೇಮ್‌ಗಳಲ್ಲಿ ಮೇಲುಗೈ ಸಾಧಿಸುವಲ್ಲಿ ವಿಫಲವಾಯಿತು.

ಪುರುಷರ ಸಿಂಗಲ್ಸ್‌ನ ಇನ್ನೊಂದು ಪಂದ್ಯದಲ್ಲಿ ಭಾರತದ ಸಮೀರ್ ವರ್ಮಾ ಗಾಯಗೊಂಡು ನಿವೃತ್ತರಾದರು. ಇಂಡೋನೇಷ್ಯಾದ ಶೇಸರ್ ಹಿರೇನ್ ರುಸ್ತಾವಿಟೊ ವಿರುದ್ಧ ನಡೆದ ಪಂದ್ಯದಲ್ಲಿ 16–21, 21–12ರಲ್ಲಿದ್ದಾಗ ಸಮೀರ್ ಗಾಯದಿಂದ ಬಳಲಿ ಹೊರನಡೆದರು.

ರಾಷ್ಟ್ರೀಯ ಎಂಟಿಬಿ ಇಂದಿನಿಂದ

ಪುಣೆ (ಪಿಟಿಐ): ಶುಕ್ರವಾರ ಆರಂಭವಾಗಲಿರುವ 18ನೇ ಮೌಂಟೇನ್ ಬೈಕ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ 443 ಸ್ಪರ್ಧಿಗಳು ಕಣಕ್ಕಿಳಿಯಲಿದ್ದಾರೆ. ಸ್ಪರ್ಧೆಯ ಇತಿಹಾಸದಲ್ಲಿಯೇ ಇದು ಗರಿಷ್ಠ ಸಂಖ್ಯೆ. ಅಳಂಡಿ–ಪುಣೆಯಲ್ಲಿ ಸ್ಪರ್ಧೆ ನಡೆಯಲಿದೆ. ಮಹಾರಾಷ್ಟ್ರ ಸೈಕ್ಲಿಂಗ್ ಸಂಸ್ಥೆ ಮತ್ತು ರಾಷ್ಟ್ರೀಯ ಸೈಕ್ಲಿಂಗ್ ಫೆಡರೇಷನ್ ಆಯೋಜಿಸಿರುವ ಈ ಚಾಂಪಿಯನ್‌ಷಿಪ್‌ನಲ್ಲಿ 19 ಸ್ಪರ್ಧೆಗಳು ನಡೆಯಲಿವೆ. ಪುರುಷ, ಮಹಿಳಾ, ಜೂನಿಯರ್ ಪುರುಷ, ಮಹಿಳೆಯರು, ಸಬ್ ಜೂನಿಯರ್ ಬಾಲಕ, ಬಾಲಕಿಯರು ಮತ್ತು ಯೂತ್ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

ಮೋಹನ್ ಬಾಗನ್ ತೊರೆಯಲಿರುವ ಗಂಗೂಲಿ

ನವದೆಹಲಿ (ಪಿಟಿಐ): ಹಿತಾಸಕ್ತಿ ಸಂಘರ್ಷ ನಿಯಮ ಉಲ್ಲಂಘನೆಯನ್ನು ತಪ್ಪಿಸುವ ನಿಟ್ಟಿನಲ್ಲಿ ಇಂಡಿಯನ್ ಸೂಪರ್ ಲೀಗ್‌ನಲ್ಲಿ(ಐಎಸ್‌ಎಲ್) ಆಡುವ ಎಟಿಕೆ ಮೋಹನ್ ಬಾಗನ್ ಫುಟ್‌ಬಾಲ್ ಫ್ರಾಂಚೈಸಿಯ ನಿರ್ದೇಶಕ ಹುದ್ದೆಯನ್ನು ತೊರೆಯಲು ಸೌರವ್ ಗಂಗೂಲಿ ನಿರ್ಧರಿಸಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ಹೊಸದಾಗಿ ಸೇರ್ಪಡೆಯಾಗಲಿರುವ ಲಖನೌ ಫ್ರ್ಯಾಂಚೈಸಿಯನ್ನು ಈಚೆಗೆ ಖರೀದಿಸಿರುವ ಕೋಲ್ಕತ್ತ ಉದ್ಯಮಿ ಆರ್.ಪಿ. ಸಂಜೀವ್ ಗೋಯೆಂಕಾ ಒಡೆತನದ ಆರ್‌ಪಿಎಸ್‌ಜಿ ಕಂಪನಿಯು ₹7,090 ಕೋಟಿಗೆ ಖರೀದಿಸಿತ್ತು.

ಎಟಿಕೆ ಮೋಹನ್ ಬಾಗನ್ ಫ್ರ್ಯಾಂಚೈಸಿಯಲ್ಲಿಯೂ ಪಾಲುದಾರಿಕೆ ಹೊಂದಿರುವ ಗೋಯೆಂಕಾ, ಈಗ ಐಪಿಎಲ್ ತಂಡವನ್ನು ಖರೀದಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಗಂಗೂಲಿ ಹಿತಾಸಕ್ತಿ ಸಂಘರ್ಷ ನಿಯಮ ಉಲ್ಲಂಘನೆಯನ್ನು ಎದುರಿಸುತ್ತಿದ್ದಾರೆ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷರಾಗಿರುವ ಸೌರವ್ ಗಂಗೂಲಿ, ಎಟಿಕೆ ಮೋಹನ್ ಬಾಗನ್ ಫ್ರಾಂಚೈಸಿಯ ನಿರ್ದೇಶಕರೂ ಆಗಿದ್ದರು.

ಸೌರವ್ ಗಂಗೂಲಿ

ಈ ಕುರಿತು 'ಸಿಎನ್‌ಬಿಸಿ-ಟಿವಿ 18' ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿರುವ ಸಂಜೀವ್ ಗೋಯೆಂಕಾ, 'ಮೋಹನ್ ಬಾಗನ್ ಹುದ್ದೆಯಿಂದ ಸೌರವ್ ಗಂಗೂಲಿ ಕೆಳಗಿಳಿಯುತ್ತಾರೆ ಎಂದು ನಾನು ಭಾವಿಸುತ್ತೇನೆ. ಗಂಗೂಲಿ ಈ ಕುರಿತು ಘೋಷಣೆ ಮಾಡಬೇಕಿದೆ. ಕ್ಷಮಿಸಿ, ನಾನು ಮೊದಲೇ ಹೇಳಿದ್ದೇನೆ' ಎಂದಿದ್ದಾರೆ.

ಗಂಗೂಲಿ ಈಗಾಗಲೇ ತಮ್ಮ ಹುದ್ದೆ ತೊರೆಯುವ ಪ್ರಕ್ರಿಯೆಯನ್ನು ಆರಂಭಿಸಿದ್ದಾರೆ ಎಂದು ವರದಿಯಾಗಿದೆ.

2019ರಲ್ಲೂ ಸೌರವ್ ಗಂಗೂಲಿ ಹಿತಾಸಕ್ತಿ ಸಂಘರ್ಷ ನಿಯಮ ಉಲ್ಲಂಘನೆಯ ಆರೋಪವನ್ನು ಎದುರಿಸಿದ್ದರು. ಬಂಗಾಳ ಕ್ರಿಕೆಟ್ ಸಂಸ್ಥೆಯಲ್ಲಿ ಅಧ್ಯಕ್ಷ ಹುದ್ದೆಯ ಜೊತೆಗೆ ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸಲಹೆಗಾರರಾಗಿ ಕೆಲಸ ನಿರ್ವಹಿಸಿದ್ದರು.

ಮುಂಬೈ ತಂಡದಿಂದ ಪಾಂಡ್ಯ ಹೊರಗೆ?

ನವದೆಹಲಿ (ಪಿಟಿಐ): ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರನ್ನು ಮುಂಬೈ ಇಂಡಿಯನ್ಸ್ ತಂಡವು ಈ ಬಾರಿ ಕೈಬಿಡುವ ಸಾಧ್ಯತೆ ಇದೆ.

ಇದರಿಂದಾಗಿ ಪಾಂಡ್ಯ, 2022ರ ಟೂರ್ನಿಗಾಗಿ ನಡೆಯುವ ಹರಾಜಿನಲ್ಲಿ ಸ್ಪರ್ಧಿಸಬೇಕಾಗಬಹುದು.

ಮುಂಬರುವ ಐಪಿಎಲ್‌ನಲ್ಲಿ ಒಟ್ಟು ಹತ್ತು ತಂಡಗಳು ಕಣಕ್ಕಿಳಿಯುವುದು ಖಚಿತವಾಗಿದೆ. ಈಚೆಗೆ ಲಖನೌ ಮತ್ತು ಅಹಮದಾಬಾದ್ ಫ್ರ್ಯಾಂಚೈಸಿಗಳು ಸೇರ್ಪಡೆಯಾಗಿವೆ.

'ಬಿಸಿಸಿಐ ಒಂದೊಮ್ಮೆ ಮೂವರು ಆಟಗಾರರನ್ನು ಉಳಿಸಿಕೊಳ್ಳುವ ನಿಯಮ ತಂದರೆ ರೋಹಿತ್ ಶರ್ಮಾ ಮತ್ತು ಜಸ್‌ಪ್ರೀತ್ ಬೂಮ್ರಾ ಅವರನ್ನು ಉಳಿಸಿಕೊಳ್ಳುವುದು ಖಚಿತ. ಮೂರನೇಯವರಾಗಿ ಕೀರನ್ ಪೊಲಾರ್ಡ್ ಉಳಿಯುವರು.

'ಸದ್ಯದ ಪರಿಸ್ಥಿತಿಯಲ್ಲಿ ಹಾರ್ದಿಕ್ ಅವರನ್ನು ಉಳಿಸಿಕೊಳ್ಳುವ ಸಾಧ್ಯತೆ ಶೇ 10ರಷ್ಟು ಮಾತ್ರ ಇದೆ. ಒಂದೊಮ್ಮೆ ನಾಲ್ವರನ್ನು ಉಳಿಸಿಕೊಳ್ಳುವ ನಿಯಮ ಬಂದರೆ ಸೂರ್ಯಕುಮಾರ್ ಯಾದವ್ ಅಥವಾ ಇಶಾನ್ ಕಿಶನ್ ಅವರಲ್ಲಿ ಒಬ್ಬರಿಗೆ ಅವಕಾಶ ಸಿಗಲಿದೆ' ಎಂದು ತಿಳಿಸಿದ್ದಾರೆ.

ಎರಡು ವರ್ಷಗಳ ಹಿಂದೆ ಹಾರ್ದಿಕ್ ಪಾಂಡ್ಯ ಪರಿಣಾಮಕಾರಿ ಆಲ್‌ರೌಂಡರ್ ಆಗಿದ್ದರು. ಮಧ್ಯಮವೇಗಿಯಾಗಿರುವ ಅವರು ಕೆಲಕಾಲದಿಂದ ಬೌಲಿಂಗ್ ಕೂಡ ಮಾಡುತ್ತಿಲ್ಲ. ಬ್ಯಾಟಿಂಗ್‌ನಲ್ಲಿಯೂ ಲಯ ಕಂಡುಕೊಂಡಿಲ್ಲ. ಆದ್ದರಿಂದ ಅವರನ್ನು ಕೈಬಿಡುವ ಯೋಚನೆಯಲ್ಲಿ ಮುಂಬೈ ತಂಡವಿದೆ ಎಂದು ಹೇಳಲಾಗಿದೆ.

ಹಾರ್ದಿಕ್ ಅಭ್ಯಾಸ: ಯುಎಇಯಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಹಾರ್ದಿಕ್ ಅವಕಾಶ ಪಡೆಯುವ ಸಾಧ್ಯತೆ ಇದೆ. ಅದಕ್ಕಾಗಿ ಬೌಲಿಂಗ್ ಅಭ್ಯಾಸ ಆರಂಭಿಸಿದ್ದಾರೆ.

ಗುರುವಾರ ಅವರು ನೆಟ್ಸ್‌ನಲ್ಲಿ ಬೌಲಿಂಗ್ ಮಾಡಿದ ಚಿತ್ರಗಳನ್ನು ಬಿಸಿಸಿಐ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿದೆ.

50 ಓವರ್; 518 ರನ್

ಬೆಂಗಳೂರು: ವಿಜಯಾ ಕ್ರಿಕೆಟ್ ಕ್ಲಬ್ ತಂಡವು ಗುರುವಾರ ರನ್‌ಗಳ ಮಹಾಪೂರವನ್ನೇ ಹರಿಸಿತು. 50 ಓವರ್‌ಗಳಲ್ಲಿ 518 ರನ್ ಗಳಿಸಿತು.

ಕೆಎಸ್‌ಸಿಎ ಮೊದಲ ಗುಂಪಿನ 1, 2 ಮತ್ತು 3ನೇ ಡಿವಿಷನ್‌ನ 16 ವರ್ಷದೊಳಗಿನವರ ಅಂತರ ಕ್ಲಬ್ ಕ್ರಿಕೆಟ್ ಟೂರ್ನಿಯಲ್ಲಿ ವಿಜಯಾ ಸಿಸಿ ಕ್ಯಾವಲಿಯರ್ಸ್ ಸಿಸಿ ಎದುರು 311 ರನ್‌ಗಳಿಂದ ಗೆದ್ದಿತು. ಮೊದಲು ಬ್ಯಾಟಿಂಗ್ ಮಾಡಿದ ವಿಜಯಾ ಸಿಸಿ ತಂಡದ ಯಶ್ ಜಾಧವ್ (219; 129ಎಸೆತ, 38ಬೌಂಡರಿ, 2 ಸಿಕ್ಸರ್) ಅಕ್ಷತ್ ಪ್ರಭಾಕರ್ (ಅಜೇಯ 100, 56ಎಸೆತ, 14 ಬೌಂಡರಿ) ಮತ್ತು ಆಕಾಶ್ ನಿತೀಶ್ ಶೆಟ್ಟಿ (116; 89ಎಸೆತ, 17ಬೌಂಡರಿ) ಅವರು ಭರ್ಜರಿ ಬ್ಯಾಟಿಂಗ್ ಮಾಡಿದರು. ಅದರ ಫಲವಾಗಿ ತಂಡವು 50 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 518 ರನ್ ಗಳಿಸಿತು. ಅದಕ್ಕುತ್ತರವಾಗಿ ಕ್ಯಾವೆಲರ್ಸ್ ತಂಡವು 50 ಓವರ್‌ಗಳಲ್ಲಿ 207 ರನ್ ಗಳಿಸಿ ಆಲೌಟ್ ಆಯಿತು.

ಸಮಿತ್ ದ್ರಾವಿಡ್ ಶತಕ: ಸಮಿತ್ ದ್ರಾವಿಡ್ (ಔಟಾಗದೆ 112) ಶತಕದ ಬಲದಿಂದ ವಲ್ಚರ್ಸ್ ಕ್ರಿಕೆಟ್ ಕ್ಲಬ್ ತಂಡವು 8 ವಿಕೆಟ್‌ಗಳಿಗೆ ಫ್ರೆಂಡ್ಸ್ ಯೂನಿಯನ್ ಕ್ಲಬ್ ವಿರುದ್ಧ ಜಯಿಸಿತು.

ಸಂಕ್ಷಿಪ್ತ ಸ್ಕೋರು: ವಿಜಯಾ ಕ್ರಿಕೆಟ್ ಕ್ಲಬ್: 50 ಓವರ್‌ಗಳಲ್ಲಿ 3ಕ್ಕೆ518 (ಆಕಾಶ್ ನಿತೀಶ್ ಶೆಟ್ಟಿ 116, ಯಶ್ ಜಾಧವ್ 219, ಅಕ್ಷತ್ ಪ್ರಭಾಕರ್ ಅಜೇಯ 100), **ಕ್ಯಾವೆಲರ್ಸ್ ಸಿಸಿ:** 50 ಓವರ್‌ಗಳಲ್ಲಿ 207 (ಅಭಿನವ್ ಝಾ 58; ಎಸ್. ವೈಭವ್ 21ಕ್ಕೆ3, ರೋನಕ್ ಯಲವಾಲ್ 44ಕ್ಕೆ2) ಫಲಿತಾಂಶ: ವಿಜಯಾ ಸಿಸಿಗೆ 311ರನ್‌ಗಳ ಜಯ. **ಯಂಗ್ ಲಯನ್ಸ್ ಕ್ಲಬ್:** 36 ಓವರ್‌ಗಳಲ್ಲಿ 133 (ಶ್ರೀನಿವಾಸ್ ಭಾರ್ಗವ್ 46, ಎ. ಸಿದ್ಧಾರ್ಥ್ 26ಕ್ಕೆ4, ಆರ್. ಶಿಶಿರ್ 30ಕ್ಕೆ4) **ಬೆಂಗಳೂರು ಒಕೆಷನಲ್ಸ್:** 20.3 ಓವರ್‌ಗಳಲ್ಲಿ 1 ವಿಕೆಟ್‌ಗೆ 139 (ಎ. ಸಿದ್ಧಾರ್ಥ 74). ಬೆಂಗಳೂರು ಒಕೆಷನಲ್ಸ್‌ಗೆ ಜಯ. **ಕೋಲ್ಸ್ ಸಿಸಿ:** 50 ಓವರ್‌ಗಳಲ್ಲಿ 7 ಕ್ಕೆ 258 (ಸಿದ್ಧಾಂತ್ ಪಾಠಕ್ ಔಟಾಗದೆ 94; ಪ್ರಭವ್ ಶರ್ಮಾ 40ಕ್ಕ2, ಪಿ. ತೇಜಸ್ 34ಕ್ಕೆ2), **ಸೌಥ್ ಎಂಡ್ ಸ್ಪೋರ್ಟ್ಸ್ ಕ್ಲಬ್:** 34.4 ಓವರ್‌ಗಳಲ್ಲಿ 107 (ಬಿ. ವಿಶ್ವೇಷ 12ಕ್ಕೆ3, ಅಭಿನವ್ ಶಾ 22ಕ್ಕೆ2, ನಿಹಾಲ್ ಮುಖೇಶ್ ಮಕ್ವಾನಾ 23ಕ್ಕೆ3). **ಮೌಂಟ್ ಜಾಯ್ ಸಿಸಿ:** 50 ಓವರ್‌ಗಳಲ್ಲಿ 7ಕ್ಕೆ258 (ಅಮೋಘ್ ಆರ್. ಶೆಟ್ಟಿ 109, ಎ. ಸಿದ್ಧಾರ್ಥ 47; ಜೀತ್ ಪಾರ್ಲಾ 38ಕ್ಕೆ2, ಸುಖ್ವಿಂದರ್ ಸಿಂಗ್ 16ಕ್ಕೆ2), **ಫ್ರೆಂಡ್ಸ್ ಇಲೆವನ್ ಸಿಸಿ, ದೊಡ್ಡಬಳ್ಳಾಪುರ:** 31.5 ಓವರ್‌ಗಳಲ್ಲಿ 135 (ವಿಠಲ್ ಮುಕುಂದ 32ಕ್ಕೆ3, ಸಿದ್ಧಾರ್ಥ 21ಕ್ಕೆ2).

ಹೆರಾನ್ಸ್ ಸಿಸಿ: 50 ಓವರ್‌ಗಳಲ್ಲಿ 6ಕ್ಕೆ228 (ರಾಮ್ ವೆಂಕಟೇಶನ್ 72, ಅಭಿರತ್ 6;ಯಶಮಿತ್ ಗೌಡ 44ಕ್ಕೆ3,), **ಹಮ್ಮಂಡ್ಸ್ ಸಿಸಿ:** 47.1 ಓವರ್‌ಗಳಲ್ಲಿ 182 (ಸುಶೀಲ್ ಉಡುಪಿ 51). **ಸೋಷಿಯಲ್ ಕ್ರಿಕೆಟರ್ಸ್:** 20 ಓವರ್‌ಗಳಲ್ಲಿ 7ಕ್ಕೆ79; **ಕೆಂಬ್ರಿಜ್ ಸಿಸಿ:** 9.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 83 (ಮೊಹಮ್ಮದ್ ವಾಹೀದ್ ಖುರೇಷಿ ಔಟಾಗದೆ 37, ನಮನ್ ಚೌಧರಿ35)– ಮಳೆಯಿಂದಾಗಿ 20–20 ಓವರ್‌ಗಳಿಗೆ ಪಂದ್ಯವನ್ನು ನಿಗದಿ ಮಾಡಲಾಯಿತು.

ದ ಬೆಂಗಳೂರು ಕ್ರಿಕೆಟರ್ಸ್: 30.3 ಓವರ್‌ಗಳಲ್ಲಿ 119 (ಎಚ್. ಅಮೋಘ 9ಕ್ಕೆ4), **ಜವಾಹರ್ ಸ್ಪೋರ್ಟ್ಸ್ ಕ್ಲಬ್:** 17.2 ಓವರ್‌ಗಳಲ್ಲಿ 2ಕ್ಕೆ 120 (ಜಿ. ಧನುಷ್ 42). ಫ್ರೆಂಡ್ಸ್ ಯೂನಿಯನ್ ಸಿಸಿ: 45.1 ಓವರ್‌ಗಳಲ್ಲಿ 192 (ಪವನ್ 77; ಕೆ.ಪಿ. ಕಾರ್ತಿಕೇಯ 37ಕ್ಕೆ4), **ವಲ್ಚರ್ಸ್ ಸಿಸಿ:** 36.4 ಓವರ್‌ಗಳಲ್ಲಿ 2ಕ್ಕೆ 193 (ಅಥರ್ವ ಮಾಳವಿಯಾ 62, ಸಮಿತ್ ದ್ರಾವಿಡ್ ಔಟಾಗದೆ 112).

ಆರ್.ವಿ. ಎಂಜಿನಿಯರಿಂಗ್ ಕಾಲೇಜು: 40 ಓವರ್‌ಗಳಲ್ಲಿ 5ಕ್ಕೆ 198 (ಎಂ. ಅಭಯ್ 37, ಸಮಿಯಮ್ ವಿನಯ್ 72, ರಿಷಭ್ ಅಡಿಗಾ 29ಕ್ಕೆ3), ಹನುಮಂತನಗರ ಸಿಸಿ: 28.5 ಓವರ್‌ಗಳಲ್ಲಿ 77 (ಎಂ.ಜೆ. ಅಭಯ್ 16ಕ್ಕೆ2, ಕುಶಾಲ್ 7ಕ್ಕೆ2). ಮಳೆಯಿಂದಾಗಿ 40 ಓವರ್‌ಗಳಿಗೆ ಪರಿಷ್ಕರಣೆ.

ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್: ಚಿನ್ನ ಗೆದ್ದ ಕರ್ನಾಟಕದ ಶ್ರೀಹರಿ ನಟರಾಜ್, ರಿಧಿಮಾ

ಮತ್ತೆ ದಾಖಲೆ ಬರೆದ ಕುಶಾಗ್ರ

ಪ್ರಜಾವಾಣಿ ವಾರ್ತೆ

ಪೊಲೀಸ್ ತಂಡದ ಎದುರಿನ ವಾಟರ್ ಪೋಲೊ ಪಂದ್ಯದಲ್ಲಿ ಕರ್ನಾಟಕದ ವಿಶಾಖ (ಎಡ) ಅವರಿಂದ ಚೆಂಡನ್ನು ಕಸಿದುಕೊಳ್ಳಲು ಎದುರಾಳಿ ತಂಡದ ಟೀನಾ ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ/ಎಸ್‌.ಕೆ.ದಿನೇಶ್

ಬೆಂಗಳೂರು: ದೆಹಲಿಯ ಕುಶಾಗ್ರ ರಾವತ್ ಅವರು ರಾಜ್ಯ ಈಜು ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ಮೂರನೇ ದಿನವೂ ದಾಖಲೆ ನಿರ್ಮಿಸಿದರು. ಮೊದಲ ಎರಡು ದಿನ ದಾಖಲೆಗಳನ್ನು ನಿರ್ಮಿಸಿದ್ದ ಕರ್ನಾಟಕದ ಶ್ರೀಹರಿ ನಟರಾಜ್ ಗುರುವಾರ ಮತ್ತೊಂದು ಚಿನ್ನ ಗಳಿಸಿದರು. ರಾಜ್ಯದ ರಿಧಿಮಾ ಕೂಡ ಚಿನ್ನದ ಪದಕ ಗೆದ್ದುಕೊಂಡರು.

ಮೊದಲ ದಿನ 400 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಮತ್ತು ಬುಧವಾರ 800 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಕುಶಾಗ್ರ ಪಾರಮ್ಯ ಮೆರೆದಿದ್ದರು. ಗುರುವಾರ 1500 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಚಿನ್ನ ಗೆದ್ದು ತಮ್ಮದೇ ಹೆಸರಿನಲ್ಲಿದ್ದ ದಾಖಲೆ ಮುರಿದರು.

ಮೂರನೇ ದಿನದ ಫಲಿತಾಂಶಗಳು: ಪುರುಷರ 1500 ಮೀಟರ್ಸ್ ಫ್ರೀಸ್ಟೈಲ್: ಕುಶಾಗ್ರ ರಾವತ್ (ದೆಹಲಿ)–1. ಕಾಲ: 15:38.13 (ಕೂಟ ದಾಖಲೆ. ಹಿಂದಿನ ದಾಖಲೆ–ಕುಶಾಗ್ರ ರಾವತ್ 2019, ಭೋಪಾಲ್. ಕಾಲ: 15:41.45), ಅನೀಶ್ ಎಸ್. ಗೌಡ (ಕರ್ನಾಟಕ)–2, ವೇದಾಂತ್ ಮಾಧವನ್ (ಮಹಾರಾಷ್ಟ್ರ)–3; 200 ಮೀ ಬಟರ್‌ಫ್ಲೈ: ಸಜನ್ ಪ್ರಕಾಶ್ (ಪೊಲೀಸ್)–1. ಕಾಲ: 1:58.74, ಆರ್ಯನ್ ಪಾಂಚಾಲ್ (ಗುಜರಾತ್)–2, ಬಿಕ್ರಂ ಚಂಗ್ಮೈ (ಅಸ್ಸಾಂ)–3; 50 ಮೀ ಫ್ರೀಸ್ಟೈಲ್: ಸಂಭವ್ ಆರ್ (ಕರ್ನಾಟಕ)–1. ಕಾಲ: 23.65, ಮಿಹಿರ್ ಆಮ್ರೆ (ಮಹಾರಾಷ್ಟ್ರ)–2, ಹೀರ್ ಶಾ (ಮಹಾರಾಷ್ಟ್ರ)–3; 50 ಮೀ ಬ್ಯಾಕ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಕರ್ನಾಟಕ)–1. ಕಾಲ: 25.77, ವಿನಾಯಕ ವಿಜಯ್ (ತೆಲಂಗಾಣ)–2, ಕ್ಷೇವಿಯರ್ ಮೈಕೆಲ್ ಡಿ'ಸೋಜಾ (ಗೋವಾ)–3.

ಮಹಿಳೆಯರ 800 ಮೀಟರ್ಸ್ ಫ್ರೀಸ್ಟೈಲ್: ಪ್ರಾಚಿ ಟೋಕಾಸ್ (ದೆಹಲಿ)–1. ಕಾಲ: 9:20.16, ಅನನ್ಯಾ ವಾಲ (ಮಹಾರಾಷ್ಟ್ರ)–2, ವೃತ್ತಿ ಅಗರವಾಲ್ (ತೆಲಂಗಾಣ)–3; 200 ಮೀ ಬಟರ್‌ಫ್ಲೈ: ಆಸ್ತಾ ಚೌಧರಿ (ಅಸ್ಸಾಂ)–1. ಕಾಲ: 2:20.47, ಅಪೇಕ್ಷಾ ಫರ್ನಾಂಡಿಸ್ (ಮಹಾರಾಷ್ಟ್ರ)–2, ಶಕ್ತಿ ಬಾಲಕೃಷ್ಣನ್ (ತಮಿಳುನಾಡು)–3; 50 ಮೀ ಫ್ರೀಸ್ಟೈಲ್: ಅವಂತಿಕಾ ಚವಾಣ್ (ಆರ್‌ಎಸ್‌ಪಿಬಿ)–1. ಕಾಲ: 27.18, ರುಜುತಾ ಖಾಡೆ (ಮಹಾರಾಷ್ಟ್ರ)–2, ಶಿವಾಂಗಿ ಸಮಾ (ಅಸ್ಸಾಂ)–3; 50 ಮೀ ಬ್ರೆಸ್ಟ್‌ಸ್ಟ್ರೋಕ್: ರಿಧಿಮಾ ವೀರೇಂದ್ರ ಕುಮಾರ್ (ಕರ್ನಾಟಕ)–1. ಕಾಲ: 29.94, ಮಾನಾ ಪಟೇಲ್ (ಗುಜರಾತ್)–2, ನೀನಾ ವೆಂಕಟೇಶ್ (ಕರ್ನಾಟಕ)–3. 4x100 ಮೀ ಮೆಡ್ಲೆ: ಮಹಾರಾಷ್ಟ್ರ–1. ಕಾಲ: 4:31.50, ಕರ್ನಾಟಕ (ರಿಧಿಮಾ, ಸಾನ್ವಿ ಎಸ್. ರಾವ್, ರಿಶಿಕಾ ಮಾಂಗ್ಲೆ, ನೀನಾ ವೆಂಕಟೇಶ್)–2, ಪಶ್ಚಿಮ ಬಂಗಾಳ–3.

ಭಾರತಕ್ಕೆ ಕಠಿಣ ಸವಾಲು

ಎಎಫ್‌ಸಿ ಏಷ್ಯಾ ಕಪ್ ಮಹಿಳೆಯರ ಫುಟ್‌ಬಾಲ್ ಟೂರ್ನಿ

ಅಭ್ಯಾಸದಲ್ಲಿ ತೊಡಗಿರುವ ಭಾರತ ತಂಡದ ಆಟಗಾರ್ತಿಯರು –ಟ್ವಿಟರ್ ಚಿತ್ರ

ಕ್ವಾಲಾಲಂಪುರ (ಪಿಟಿಐ): ಆತಿಥೇಯ ಭಾರತ ತಂಡಕ್ಕೆ ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) ಏಷ್ಯಾ ಕಪ್ ಮಹಿಳೆಯರ ಫುಟ್‌ಬಾಲ್ ಟೂರ್ನಿಯಲ್ಲಿ ಕಠಿಣ ಸವಾಲು ಎದುರಾಗಲಿದೆ.

ಟೂರ್ನಿಯ ಡ್ರಾವನ್ನು ಗುರುವಾರ ಪ್ರಕಟಿಸಿದ್ದು ಭಾರತ ಎಂಟು ಬಾರಿಯ ಚಾಂಪಿಯನ್ ಚೀನಾ, ಎರಡು ಬಾರಿ ಪ್ರಶಸ್ತಿ ಗೆದ್ದಿರುವ ಚೀನಾ ತೈಪೆ ಮತ್ತು ಇರಾನ್ ವಿರುದ್ಧ ಗುಂಪು ಹಂತದ ಪಂದ್ಯಗಳನ್ನು ಆಡಬೇಕಾಗಿದೆ.

ಫಿಫಾ ರ‍್ಯಾಂಕಿಂಗ್‌ನಲ್ಲಿ 57ನೇ ಸ್ಥಾನದಲ್ಲಿರುವ ಭಾರತ ತಂಡ ಗುಂಪಿನಲ್ಲಿ ಮೂರನೇ ಗರಿಷ್ಠ ರ‍್ಯಾಂಕಿಂಗ್ ಹೊಂದಿರುವ ತಂಡವಾಗಿದೆ.

ಚೀನಾ 17ನೇ ಸ್ಥಾನದಲ್ಲಿದ್ದು ಚೀನಾ ತೈಪೆ 40 ಮತ್ತು ಇರಾನ್ 72ನೇ ಸ್ಥಾನದಲ್ಲಿದೆ.

ಮುಂದಿನ ವರ್ಷದ ಜನವರಿ 20ರಿಂದ ಫೆಬ್ರುವರಿ ಆರರ ವರೆಗೆ ಪಂದ್ಯಗಳು ನಡೆಯಲಿದ್ದು ಮುಂಬೈ, ನವಿ ಮುಂಬೈ ಮತ್ತು ಪುಣೆ ಕ್ರೀಡಾಂಗಣಗಳು ಟೂರ್ನಿಗೆ ಆತಿಥ್ಯ ವಹಿಸಲಿವೆ. ಎಎಫ್‌ಸಿ ಕೇಂದ್ರ ಕಚೇರಿ ಹೊಂದಿರುವ ಕ್ವಾಲಾಲಂಪುರದಲ್ಲಿ ಡ್ರಾ ನಡೆಯಿತು.

ಭಾರತ ತಂಡ ಇರುವ ಗುಂಪು ಕುತೂಹಲ ಕೆರಳಿಸಿದೆ. ಇದರಲ್ಲಿರುವ ಎಲ್ಲ ತಂಡಗಳು ಕೂಡ ಬಲಿಷ್ಠವಾಗಿವೆ. ನಮ್ಮ ಮಹಿಳೆಯರು ಯಾವುದೇ ತಂಡವನ್ನು ಎದುರಿಸಲು ಸಜ್ಜಾಗಿದೆ ಎಂದು ಮುಖ್ಯ ಕೋಚ್ ಥಾಮಸ್ ಡೆನರ್ಬಿ ಅಭಿಪ್ರಾಯಪಟ್ಟರು.

ಜಾರ್ಖಂಡ್ ಸರ್ಕಾರದ ಸಹಕಾರದೊಂದಿಗೆ ಭಾರತ ತಂಡ ಜೆಮ್ಶೆಡ್‌ಪುರದಲ್ಲಿ ಸೆಪ್ಟೆಂಬರ್‌ನಿಂದ ಅಭ್ಯಾಸದಲ್ಲಿ ತೊಡಗಿದೆ. ಈಚೆಗೆ ಯುಎಇ, ಬಹರೇನ್ ಮತ್ತು ಸ್ವೀಡನ್ ಪ್ರವಾಸ ಕೈಗೊಂಡಿದ್ದ ತಂಡ ಪ್ರಮುಖ ತಂಡಗಳ ಎದುರು ಸೆಣಸಿದೆ.

ಜನವರಿ 20ರಂದು ಉದ್ಘಾಟನಾ ಪಂದ್ಯದಲ್ಲಿ ಭಾರತ ಮಹಿಳೆಯರು ಇರಾನ್ ವಿರುದ್ಧ ಕಣಕ್ಕೆ ಇಳಿಯಲಿದ್ದಾರೆ.

ವಾಟರ್ ಪೋಲೊ: ಕೇರಳ ತಂಡಕ್ಕೆ ಮಿಶ್ರಫಲ

ನೆಟ್ಟಕಲ್ಲಪ್ಪ ಈಜುಕೇಂದ್ರದಲ್ಲಿ ನಡೆಯುತ್ತಿರುವ ವಾಟರ್ ಪೋಲೊ ಪಂದ್ಯಗಳ ಮಹಿಳೆಯರ ವಿಭಾಗದಲ್ಲಿ ಕೇರಳ ಮಿಶ್ರ ಫಲ ಕಂಡಿತು. ದಿನದ ಮೊದಲ ಪಂದ್ಯದಲ್ಲಿ ಮಹಾರಾಷ್ಟ್ರವನ್ನು 15–7ರಲ್ಲಿ ಮಣಿಸಿದ ಕೇರಳ ನಂತರ ಎರಡು ಪಂದ್ಯಗಳಲ್ಲಿ ಸೋತಿತು.

ಆರ್‌ಎಸ್‌ಪಿಬಿ ಎದುರಿನ ಪಂದ್ಯದಲ್ಲಿ 6–26ರಲ್ಲಿ ಸೋತ ತಂಡ ಎಸ್‌ಎಸ್‌ಸಿಬಿಗೆ 0–15ರಲ್ಲಿ ಮಣಿಯಿತು. ಕರ್ನಾಟಕ ತಂಡ ಪೊಲೀಸ್ ಎದುರಿನ ಹಣಾಹಣಿಯಲ್ಲಿ 8–18ರಲ್ಲಿ ಪರಾಭವಗೊಂಡಿತು.

ಅವಳಿ ಗಂಡುಮಕ್ಕಳೊಂದಿಗೆ ದಿನೇಶ್ ಕಾರ್ತಿಕ್–ದೀಪಿಕಾ ಪಳ್ಳಿಕಲ್ –ಟ್ವಿಟರ್ ಚಿತ್ರ

ದಿನೇಶ್–ದೀಪಿಕಾಗೆ ಅವಳಿ ಗಂಡುಮಕ್ಕಳು

ಬೆಂಗಳೂರು: ಕ್ರಿಕೆಟಿಗ ದಿನೇಶ್ ಕಾರ್ತಿಕ್ ಮತ್ತು ವರ ಪತ್ನಿ, ಸ್ಕ್ವಾಷ್ ತಾರೆ ದೀಪಿಕಾ ಪಳ್ಳಿಕಲ್ ದಂಪತಿ ಈಗ ಅವಳಿ ಗಂಡು ಮಕ್ಕಳ ತಂದೆ ತಾಯಿಯಾಗಿದ್ದಾರೆ.

ಮಕ್ಕಳೊಂದಿಗೆ ಇರುವ ಚಿತ್ರವನ್ನು ದಿನೇಶ್ ಟ್ವೀಟ್ ಮಾಡಿದ್ದಾರೆ.

ಇದರಲ್ಲಿ ಮಕ್ಕಳ ಹೆಸರುಗಳನ್ನೂ ಉಲ್ಲೇಖಿಸಿದ್ದಾರೆ.

'ದೀಪಿಕಾ ಮತ್ತು ನಾನು ಇಬ್ಬರು ಮುದ್ದಾದ ಗಂಡುಮಕ್ಕಳನ್ನು ಪಡೆದಿದ್ದೇವೆ. ಕಬೀರ್ ಪಳ್ಳಿಕಲ್ ಕಾರ್ತಿಕ್ ಮತ್ತು ಝಿಯಾನ್ ಪಳ್ಳಿಕಲ್ ಕಾರ್ತಿಕ್' ಎಂದು ಕಾರ್ತಿಕ್ ಸಾಮಾಜಿಕ ಜಾಲತಾಣಗಳಲ್ಲಿ ಬರೆದಿದ್ದಾರೆ.

ತಮಿಳುನಾಡಿನ ವಿಕೆಟ್‌ಕೀಪರ್–ಬ್ಯಾಟ್ಸ್‌ಮನ್ ದಿನೇಶ್ ಐಪಿಎಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಆಡಿದ್ದಾರೆ. ಈಚೆಗೆ ಮುಗಿದ ಟೂರ್ನಿಯಲ್ಲಿ ಕೋಲ್ಕತ್ತ ರನ್ನರ್ಸ್ ಅಪ್ ಆಗಿತ್ತು.

ಜನವರಿಯಲ್ಲಿ ಒಡಿಶಾ ಓಪನ್ ಬ್ಯಾಡ್ಮಿಂಟನ್

ನವದೆಹಲಿ (ಪಿಟಿಐ): ಮುಂದಿನ ಜನವರಿಯಲ್ಲಿ ನಡೆಯಲಿರುವ ಒಡಿಶಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯನ್ನು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ತನ್ನ ವೇಳಾಪಟ್ಟಿಯಲ್ಲಿ ಸೇರ್ಪಡೆ ಮಾಡಿದೆ.

ಇದರಿಂದಾಗಿ ಮುಂದಿನ ವರ್ಷ ಭಾರತವು ಮೂರು ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಗಳನ್ನು ನಡೆಸಲಿದೆ.

ಇಂಡಿಯಾ ಓಪನ್ ಸೂಪರ್ 500 ಟೂರ್ನಿ (ಜ 11–16) ಮತ್ತು ಸೈಯದ್ ಮೋದಿ ಇಂಟರ್‌ನ್ಯಾಷನಲ್ ಸೂಪರ್ –300 ಟೂರ್ನಿ (ಜ 18–23) ನಡೆಯಲಿದೆ. ಜ. 25 ರಿಂದ 30ರವರೆಗೆ ಒಡಿಶಾ ಓಪನ್ ಸೂಪರ್ 100 ಟೂರ್ನಿ ಆಯೋಜನೆಗೊಳ್ಳಲಿದೆ.

ಇಂಡಿಯಾ ಓಪನ್ ಮತ್ತು ಸೈಯದ್ ಮೋದಿ ಟೂರ್ನಿಗಳನ್ನು 2020ರಲ್ಲಿ ಕೊರೊನಾ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ಮುಂದೂಡಲಾಗಿತ್ತು. ಆಗ ರದ್ದಾಗಿದ್ದ ಹೈದರಾಬಾದ್ ಓಪನ್ ಸೂಪರ್ 100 ಟೂರ್ನಿಯನ್ನು 2022ರ ವೇಳಾಪಟ್ಟಿಯಲ್ಲಿ ಸೇರ್ಪಡೆ ಮಾಡಿಲ್ಲ.

'ಆಟಗಾರರ ಸುರಕ್ಷತೆಗೆ ಮೊದಲ ಆದ್ಯತೆ. ಜನವರಿ 2021ರಲ್ಲಿ ಏಷ್ಯನ್ ಲೆಗ್ ಯಶಸ್ವಿಯಾದ ನಂತರ ಥಾಯ್ಲೆಂಡ್ ದೇಶವು ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಗಳಿಗೆ ಪ್ರಮುಖ ಸ್ಥಳವಾಗಿದೆ. ಅಂತರರಾಷ್ಟ್ರೀಯ ಪ್ರಯಾಣದ ಇತಿಮಿತಿಗಳಿಗೆ ಅನುಗುಣವಾಗಿ ಮುಂದಿನ ವರ್ಷದ ಟೂರ್ನಿಗಳನ್ನು ಯೋಜಿಸಲಾಗಿದೆ. ಕ್ಲಸ್ಟರ್ ಮಟ್ಟದಲ್ಲಿ ಟೂರ್ನಿಗಳನ್ನು ಸಂಯೋಜಿಸಿ ವೇಳಾಪಟ್ಟಿ ಮಾಡಲಾಗಿದೆ' ಎಂದು ಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಥಾಮಸ್ ಲುಂಡ್ ತಿಳಿಸಿದ್ದಾರೆ.

ಮಹಾರಾಷ್ಟ್ರಕ್ಕೆ ಋತುರಾಜ್ ಸಾರಥ್ಯ

ಮುಂಬೈ (ಪಿಟಿಐ): ಯುವ ಬ್ಯಾಟರ್ ಋತುರಾಜ್ ಗಾಯಕವಾಡ್ ಅವರು ಸಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮಹಾರಾಷ್ಟ್ರ ತಂಡವನ್ನು ಮುನ್ನಡೆಸಲಿದ್ದಾರೆ.

ಐಪಿಎಲ್ ಟೂರ್ನಿಯಲ್ಲಿ ಋತುರಾಜ್ ತಮ್ಮ ಭರ್ಜರಿ ಬ್ಯಾಟಿಂಗ್ ಮಾಡಿದ್ದರು. ಮುಷ್ತಾಕ್ ಅಲಿ ಟ್ರೋಫಿ ಟೂರ್ನಿ ನವೆಂಬರ್ 4ರಿಂದ ನಡೆಯಲಿದೆ.

ಮಹಾರಾಷ್ಟ್ರ ಎಲೀಟ್ 'ಎ' ಗುಂಪಿನಲ್ಲಿ ಸ್ಥಾನ ಗಳಿಸಿದ್ದು, ಲೀಗ್ ಹಂತದ ಪಂದ್ಯಗಳನ್ನು ಲಖನೌನಲ್ಲಿ ಆಡಲಿದೆ. ಮೊದಲ ಪಂದ್ಯದಲ್ಲಿ ಆ ತಂಡಕ್ಕೆ ತಮಿಳುನಾಡು ಎದುರಾಳಿಯಾಗಿದೆ.

ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ ಚಾಂಪಿಯನ್ ಆಗುವಲ್ಲಿ 24ರ ಹರೆಯದ ಗಾಯಕವಾಡ್ ಪಾತ್ರ ಪ್ರಮುಖವಾಗಿತ್ತು. ಟೂರ್ನಿಯಲ್ಲಿ ಅವರು ಗರಿಷ್ಠ ರನ್ (635) ಗಳಿಸಿದ ಆಟಗಾರನಾಗಿದ್ದರು. ತಂಡ ಇಂತಿದೆ: ಋತುರಾಜ್ ಗಾಯಕವಾಡ್ (ನಾಯಕ), ನೌಶಾದ್ ಶೇಖ್ (ಉಪನಾಯಕ), ಕೇದಾರ್ ಜಾಧವ್, ಯಶ್ ನಾಯರ್, ಅಜೀಂ ಖಾಜಿ, ರಂಜೀತ್ ನಿಕಂ, ಸತ್ಯಜೀತ್ ಬಚಾವ್, ತರಣ್ ಜೀತ್ ಸಿಂಗ್ ಧಿಲ್ಲೋನ್, ಮುಖೇಶ್ ಚೌಧರಿ, ಆಶಯ್ ಪಾಲ್ಕರ್, ಮನೋಜ್ ಇಂಗಳೆ, ಪ್ರದೀಪ್ ದಾಧೆ, ಶಮ್ಶುಜಾಮ ಖಾಜಿ, ಸ್ವಪ್ನಿಲ್ ಫುಲ್ಪಗರ್, ದಿವ್ಯಾಂಗ್ ಹಿಂಗನೇಕರ್, ಸುನಿಲ್ ಯಾದವ್, ಧನರಾಜ್ ಸಿಂಗ್ ಪರ್ದೇಶಿ, ಸ್ವಪ್ನಿಲ್ ಗುಗಾಲೆ, ಪವನ್ ಶಾ ಮತ್ತು ಜಗದೀಶ್ ಜೋಪೆ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ರಾಹುಲ್ ದ್ರಾವಿಡ್ ಭಾರತ ಕ್ರಿಕೆಟ್ ತಂಡದ ಮುಖ್ಯ ತರಬೇತುದಾರರಾಗಿ ನೇಮಕಗೊಂಡರೆ ತಂಡದ ಸಾಧನೆ ಇನ್ನಷ್ಟು ಉತ್ತಮಗೊಳ್ಳುವುದೆ?

ಜನಾಭಿಪ್ರಾಯ:

ಹೌದು	ಇಲ್ಲ
95%	5%